ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ

ಬುಧವಾರ, 17 ಜೂನ್ 2026

ಸಂಪುಟ 16, ಸಂಚಿಕೆ 84, ಪುಟಗಳು 12

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/2011/64413

hosadigantha.com

epaper.hosadigantha.com

Hosadigantha Digital



13 ರಾಜ್ಯಗಳಿಗೆ ಹೆಚ್ಚುವರಿ ಆದಾಯ | 02

ವೈದ್ಯರ ಚೀಟಿ ಇಲ್ಲದೆ ಸಿಗಲ್ಲ ಸಿರಪ್ | 02

ಭಾರತದ ಶಾಶ್ವತ ಸದಸ್ಯತ್ವಕ್ಕೆ ಬೆಂಬಲ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪುನರ್ವಸು

ದಿನದ ಮಾತು

ಸೋಲುವೆನೆಂಬ ಭಯವನ್ನು ಜಯಿಸುವುದೇ ನಿಜವಾದ ಗೆಲುವು.

▲ ನಾಣ್ನುಡಿ

ಕಿರುಸುದ್ದಿ

ತ.ನಾಡು ರೈತರ 75 ಸಾವಿರ ರೂ. ಬೆಳೆ ಸಾಲ ಮನ್ನಾ

ಚೆನ್ನೈ: ಸಹಕಾರಿ ಬ್ಯಾಂಕುಗಳ ಮೂಲಕ ರೈತರು ಪಡೆದ 75,000 ರೂ. ವರೆಗಿನ ಬೆಳೆ ಸಾಲವನ್ನು ತಮಿಳುನಾಡು ಸರ್ಕಾರ ಮನ್ನಾ ಮಾಡಿದೆ. ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಮಂಗಳವಾರ ಸಂಪೂರ್ಣ ಸಾಲ ಮನ್ನಾ ಘೋಷಣೆ ಮಾಡಿದ್ದಾರೆ. ಈ ಕ್ರಮದಿಂದ ರಾಜ್ಯದ 14.43 ಲಕ್ಷ ರೈತರಿಗೆ ಅನುಕೂಲವಾಗಲಿದೆ. ರಾಜ್ಯ ಸರ್ಕಾರಕ್ಕೆ 5,932 ಕೋಟಿ ರೂ.ಗಳ ಹೆಚ್ಚುವರಿ ವೆಚ್ಚವಾಗಲಿದೆ. ರೈತರಿಗೆ ದೊಡ್ಡ ಪರಿಹಾರವನ್ನು ಖಾತ್ರಿಪಡಿಸುತ್ತದೆ ಎಂದು ಸರ್ಕಾರ ಹೇಳಿದೆ. ಸಚಿವರು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಪರಿಶೀಲನಾ ಸಭೆ ನಂತರ, 75,000 ರೂ.ಗಿಂತ ಹೆಚ್ಚು ಸಾಲ ಪಡೆದ ರೈತರ 35,000 ರೂ.ಗಳಷ್ಟೇ ಮನ್ನಾ ಆಗಲಿದೆ ಎಂದು ವಿಜಯ್ ತಿಳಿಸಿದ್ದಾರೆ.

ಪಾಕಿಸ್ತಾನ ಬೆಂಬಲಿತ ಏಳು ಉಗ್ರರ ಬಂಧನ

• ಪುಟ 2

ಛತ್ತೀಸ್‌ಗಢ ಶಾಲೆಗಳಲ್ಲಿ ಗಾಯತ್ರಿ ಮಂತ್ರ ಕಡ್ಡಾಯ

• ಪುಟ 2

ಪ್ರಿಯಾಂಕ್ ಖರ್ಗೆಗೆ ವಿಜಯೇಂದ್ರ ತಿರುಗೇಟು

• ಪುಟ 3

ನೆರವು ನೀಡುವ-ಪಡೆಯುವ ಪದ್ಧತಿ ಅಂತ್ಯಕ್ಕೆ ಮೋದಿ ಸಲಹೆ

ಸಮಾನತೆ ಪಾಲುದಾರಿಕೆ



ಎವಿಯನ್-ಲೆಸ್-ಬೈನ್ಸ್ (ಫ್ರಾನ್ಸ್): ಜಾಗತಿಕ ಸಮುದಾಯವು ಇನ್ನು ಮುಂದೆ ನೆರವು ನೀಡುವ ಮತ್ತು ಪಡೆಯುವ (ದಾನಿ-ಸ್ವೀಕೃತದಾರ) ಸಾಂಪ್ರದಾಯಿಕ ಮನಸ್ಥಿತಿಯಿಂದ ಹೊರಬರಬೇಕು. ಅದರ ಬದಲಾಗಿ ಒಗ್ಗಟ್ಟು ಮತ್ತು ಸಮಾನತೆಯ ಆಧಾರದ ಮೇಲೆ ಹೊಸ ಪಾಲುದಾರಿಕೆಯನ್ನು ಸ್ಥಾಪಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಜಿ-7 ನಾಯಕರಿಗೆ ಕರೆ ನೀಡಿದ್ದಾರೆ.

ಫ್ರಾನ್ಸ್‌ನ ಎವಿಯನ್-ಲೆಸ್-ಬೈನ್ಸ್‌ನಲ್ಲಿ ನಡೆಯುತ್ತಿರುವ ಜಿ-7 ಶೃಂಗಸಭೆಯ ಔಟ್ರೀಚ್ ಅಧಿವೇಶನದಲ್ಲಿ ಅವರು ಮಾತನಾಡಿದರು.

ಪರಸ್ಪರ ವಿಶ್ವಾಸವೇ ಮುಖ್ಯ: ಹೊಸ ಪಾಲುದಾರಿಕೆಗಳ ರಚನೆ ಮತ್ತು ಅಂತಾರಾಷ್ಟ್ರೀಯ ಒಗ್ಗಟ್ಟಿನ ಮರುನಿರ್ಮಾಣ ಎಂಬ ವಿಷಯದ ಕುರಿತಾದ ಅಧಿವೇಶನದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಇಂದಿನ ಪರಸ್ಪರ ಸಂಪರ್ಕಿತ ಜಗತ್ತಿನಲ್ಲಿ ಅಂತಾರಾಷ್ಟ್ರೀಯ ಪಾಲುದಾರಿಕೆಯನ್ನು ವೃದ್ಧಿಸಲು ವಿಶ್ವಾಸ ಅತ್ಯಂತ ಪ್ರಮುಖ ಕಾರ್ಯತಂತ್ರದ ಆಸ್ತಿಯಾಗಿದೆ ಎಂದರು. ಭಾರತದ ಅಂತಾರಾಷ್ಟ್ರೀಯ ದೃಷ್ಟಿಕೋನವು ವಸುಧೈವ ಕುಟುಂಬಕಂ(ಜಗತ್ತೇ ಒಂದು ಕುಟುಂಬ) ಎಂಬ ಕಾಲಾತೀತ ತತ್ತ್ವದಲ್ಲಿ ಬೇರೂರಿದೆ ಎಂದು ಅವರು ಪುನರುಚ್ಚರಿಸಿದರು.

ಅಂತಾರಾಷ್ಟ್ರೀಯ ಸೌರ ಒಕ್ಕೂಟ (ಐಎಸ್‌ಎ), ಜಾಗತಿಕ ಜೈವಿಕ ಇಂಧನ ಒಕ್ಕೂಟ ಮತ್ತು ಏಕ್ ಪೇಡ್ ಮಾ ಕೆ ನಾಮ್‌ನಂತಹ ಭಾರತದ ಉಪಕ್ರಮಗಳು ಮಾನವೀಯತೆಗೆ ಮೊದಲ ಆದ್ಯತೆ ನೀಡುವ ಧೋರಣೆಯನ್ನು ಬಿಂಬಿಸುತ್ತವೆ ಎಂದು ತಿಳಿಸಿದರು.

➔ ಪುಟ 4

16 ತಿಂಗಳ ಬಳಿಕ ಮೋದಿ-ಟ್ರಂಪ್ ಭೇಟಿ

ಇದೇ ವೇಳೆ ಜಿ7 ನಾಯಕರ ಸಭೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಸಂಕ್ಷಿಪ್ತ ಮಾತುಕತೆ ನಡೆಸಿದರು. ಕಳೆದ 16 ತಿಂಗಳಲ್ಲಿ ಇಬ್ಬರು ನಾಯಕರು ಮುಖಾಮುಖಿಯಾಗಿ ಭೇಟಿಯಾಗಿರುವುದು ಇದೇ ಮೊದಲು. ಉಭಯ ನಾಯಕರು ಆತ್ಮೀಯವಾಗಿ ಹಸ್ತಲಾಘವ ನಡೆಸಿದ ದೃಶ್ಯ ಗಮನ ಸೆಳೆಯಿತು. ಬುಧವಾರ ನಡೆಯಲಿರುವ ಅಧಿಕೃತ ದ್ವಿಪಕ್ಷೀಯ ಸಭೆಗೆ ಈ ಭೇಟಿ ಮುನ್ನುಡಿಯಾಗಿ ಪರಿಗಣಿಸಲಾಗಿದೆ.



ಭಾರತ-ಅಮೆರಿಕ ಸಂಬಂಧಗಳಿಗೆ ಹೊಸ ಚೈತನ್ಯ: ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕ ವಿಧಿಸಿದ್ದ ಸುಂಕಗಳು, ಭಾರತ-ಪಾಕಿಸ್ತಾನ ಉದ್ವಿಗ್ನತೆ ಕುರಿತು ಟ್ರಂಪ್ ಮಾಡಿದ್ದ ವಿವಾದಾತ್ಮಕ ಹೇಳಿಕೆಗಳು ಹಾಗೂ ವೀಸಾ ನೀತಿ ಬದಲಾವಣೆಗಳಿಂದ ಉಭಯ ರಾಷ್ಟ್ರಗಳ ಸಂಬಂಧಗಳಲ್ಲಿ ಕೆಲವು ಬಿಕ್ಕಟ್ಟುಗಳು ಕಂಡುಬಂದಿದ್ದವು.

➔ ಪುಟ 4

ಮೋದಿ ಇದ್ದಲ್ಲಿಗೇ ಬಂದು ಅಪ್ಪಿಕೊಂಡ ಬ್ರಿಟನ್ ಪಿಎಂ

ಜಿ7 ಜಾಗತಿಕ ನಾಯಕರು ಫೋಟೋಗೆ ಪೋಸ್ ನೀಡುವ ಮುನ್ನ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಪ್ರಧಾನಿ ಮೋದಿ ಇದ್ದಲ್ಲಿಗೇ ಬಂದು ಅಪ್ಪುಗೆ ನೀಡಿದ್ದು ವಿಶೇಷವಾಗಿತ್ತು. ತಕ್ಷಣ ಜಿ7 ಸಮ್ಮೇಳನದ ಸ್ವಯಂಸೇವಕಿ ಬ್ರಿಟನ್ ಪ್ರಧಾನಿಗೆ ತಮ್ಮ ಜಾಗದಲ್ಲಿ ನಿಲ್ಲುವಂತೆ ಮನವಿ ಮಾಡಿದರು.

➔ ಪುಟ 4

ಉಕ್ರೇನ್‌ಗೆ ಪ್ರಾಮುಖ್ಯತೆ ನೀಡಲು ನಿರ್ಧಾರ

ಮಧ್ಯಪ್ರಾಚ್ಯ ಸಂಘರ್ಷದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಪ್ರವೇಶ ಬಳಿಕ ಉಕ್ರೇನ್ ಮೇಲಿನ ರಷ್ಯಾ ಆಕ್ರಮಣವು ಪ್ರಾಮುಖ್ಯತೆ ಕಳೆದುಕೊಂಡಿದ್ದು, ಉಕ್ರೇನ್ ಯುದ್ಧಕ್ಕೆ ಟ್ರಂಪ್ ತಮ್ಮ ಅಜೆಂಡಾದಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದು ಜಿ7 ಸದಸ್ಯ ರಾಷ್ಟ್ರಗಳು ಒತ್ತಾಯಿಸಿವೆ.

➔ ಪುಟ 4

ಐಎಎಫ್ ಅಧಿಕಾರಿ ಪತ್ನಿ ಮೇಲೆ ಅತ್ಯಾಚಾರ

ಬಲವಂತದ ಮತಾಂತರ ಇಬ್ಬರು ಮುಸ್ಲಿಮರ ಸೆರೆ

ನಾಗಪುರ: ಭಾರತೀಯ ವಾಯುಪಡೆಯ(ಐಎಎಫ್) ಅಧಿಕಾರಿಯೊಬ್ಬರ 24 ವರ್ಷದ ಪತ್ನಿಗೆ ಮತ್ತು ಬರಿಸುವ ಔಷಧ ನೀಡಿ ಅತ್ಯಾಚಾರ ಎಸಗಿ, ಬೆದರಿಕೆ ಹಾಕಿ ಬಲವಂತದಿಂದ ಮತಾಂತರಗೊಳಿಸಿರುವ ಘಟನೆ ಮಹಾರಾಷ್ಟ್ರದ ನಾಗಪುರದಲ್ಲಿ ಬೆಳಕಿಗೆ ಬಂದಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಅಯಾಜ್ ತಾಜ್ ಮದಾರೆ ಮತ್ತು ಅಮೀನ್ ಶೇಖ್ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ಮೂರನೇ ಆರೋಪಿಗಾಗಿ ತೀವ್ರ ಹುಡುಕಾಟ ನಡೆಸಿದ್ದಾರೆ.



ವಿಡಿಯೋ ವೈರಲ್: ಈ ದಾರುಣ ಘಟನೆಗೆ ಸಂಬಂಧಿಸಿದ ವಿಡಿಯೋವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು, ತನಿಖೆಗೆ ಪ್ರಮುಖ ಆಧಾರವಾಗಿದೆ. ವೈರಲ್ ವಿಡಿಯೋದಲ್ಲಿ ಸಂತ್ರಸ್ತ ಮಹಿಳೆ ಅತ್ಯಂತ ಸಂಕಷ್ಟದ ಸ್ಥಿತಿಯಲ್ಲಿದ್ದು, ನನ್ನನ್ನು ಬಿಟ್ಟುಬಿಡಿ(ಛೋಡೋ ಮುಝೆ) ಎಂದು ಕೈಮುಗಿದು ಬೇಡಿಕೊಳ್ಳುತ್ತಿರುವುದು ಕಂಡುಬಂದಿದೆ. ಆದರೆ, ಮುಖ್ಯ ಆರೋಪಿ ಅಯಾಜ್ ತಾಜ್ ಮದಾರೆ ಎಂಬಾತ ಆಕೆಯ ಕೈಯನ್ನು ಬಲವಂತವಾಗಿ ಹಿಡಿದು, ಧಾರ್ಮಿಕ ಶ್ಲೋಕಗಳನ್ನು ಪಠಿಸುತ್ತಿರುವುದು ವಿಡಿಯೋದಲ್ಲಿದೆ. ಸದ್ಯ ಪೊಲೀಸರು ಈ ಡಿಜಿಟಲ್ ಪುರಾವೆಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

ಮಾಟ ಮಂತ್ರದ ಆರೋಪ: ಸಂತ್ರಸ್ತ ಮಹಿಳೆ ನಾಗಪುರದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದು, ಮುಖ್ಯ ಆರೋಪಿ ಅಯಾಜ್ ಆಕೆಯ ಶಾಲಾ ದಿನಗಳ ಸ್ನೇಹಿತನಾಗಿದ್ದ.

➔ ಪುಟ 4

ಆರೋಪಿಗಳಿಗೆ 5 ದಿನ ಕಸ್ಟಡಿ

ಆರೋಪಿಗಳ ವಿರುದ್ಧ ಅತ್ಯಾಚಾರ, ಸುಲಿಗೆ, ಕ್ರಿಮಿನಲ್ ಬೆದರಿಕೆ ಹಾಗೂ ಮಹಾರಾಷ್ಟ್ರದ ಮಾಟಮಂತ್ರ ವಿರೋಧಿ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಬಂಧಿತರನ್ನು 5 ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದ್ದು, ವಿಧಿವಿಜ್ಞಾನ ಮತ್ತು ಆರ್ಥಿಕ ವಹಿವಾಟುಗಳ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ ಎಂದು ವಲಯ ಉಪ ಪೊಲೀಸ್ ಆಯುಕ್ತ ರಿಷಿಕೇಶ್ ರೆಡ್ಡಿ ತಿಳಿಸಿದ್ದಾರೆ.



ಬಲವಂತದ ನಿಖಾ, ಮತಾಂತರ

ಮೇ 31ರಂದು ಆರೋಪಿಗಳಾದ ಅಯಾಜ್ ಮತ್ತು ಅಮೀನ್ ಶೇಖ್ ಸೇರಿ ಮಹಿಳೆಯನ್ನು ಕಲ್ಮೇಶ್ವರಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ಮಧ್ಯಪ್ರದೇಶದ ಹಜರತ್ ಮೌಲಾನಾ ಎಂಬಾತನ ಪರಿಚಯ ಮಾಡಿಸಿ, ಆಕೆಯ ಇಚ್ಛೆಗೆ ವಿರುದ್ಧವಾಗಿ ಧಾರ್ಮಿಕ ಆಚರಣೆಗಳನ್ನು ಮಾಡಿಸಲಾಗಿದೆ. ಅಲ್ಲಿ ಮಹಿಳೆಯಿಂದ ಬಲವಂತವಾಗಿ ಖುಬೂಲ್ ಹೈ ಎಂದು ಹೇಳಿಸಿ, ಆಕೆಯನ್ನು ಇಸ್ಲಾಂ ಮತಕ್ಕೆ ಮತಾಂತರ ಮಾಡಿ ಅಯಾಜ್ ಜತೆ ಮದುವೆ ಮಾಡಿಸಲಾಗಿದೆ ಎಂದು ಘೋಷಿಸಲಾಗಿದೆ. ಅಲ್ಲದೆ ಬಲವಂತವಾಗಿ ಮಾಂಸವನ್ನು ತಿನ್ನಿಸಲಾಗಿದೆ ಎಂದು ಮಹಿಳೆ ದೂರಿದ್ದಾರೆ.

ಮತ್ತೊಬ್ಬ ಆರೋಪಿಗಾಗಿ ಪೊಲೀಸರಿಂದ ಶೋಧ

• ಪುಟ 4

ಜೂ.22ರವರೆಗೆ ಆ್ಯಪ್‌ಗೆ ಕೇಂದ್ರ ತಡೆ

ನೀಟ್ ಅಕ್ರಮ ತಡೆಗೆ ಟೆಲಿಗ್ರಾಂಗೆ ನಿರ್ಬಂಧ

ಹೊಸದಿಲ್ಲಿ: ನೀಟ್-ಯುಜಿ 2026 ಪ್ರಶ್ನೆಪತ್ರಿಕೆ ಸೋರಿಕೆ ತಡೆಗಟ್ಟಲು ಕೇಂದ್ರ ಸರ್ಕಾರ ಹೊಸ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಇದೀಗ ಮರುಪರೀಕ್ಷೆ ವೇಳೆ ದೇಶದಲ್ಲಿ ಟೆಲಿಗ್ರಾಂ ಆ್ಯಪ್‌ನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿದೆ. ಟೆಲಿಗ್ರಾಂನಿಂದಲೇ ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ವದಂತಿ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.



ಇದರ ಅನ್ವಯ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ 2 ಪ್ರತ್ಯೇಕ ನಿರ್ದೇಶನಗಳನ್ನು ನೀಡಿದ್ದು, ಜೂ.22ರವರೆಗೆ ದೇಶದಲ್ಲಿ ಟೆಲಿಗ್ರಾಂ ನಿರ್ಬಂಧಿಸಲಾಗಿದೆ. ಅದೇ ರೀತಿ ಜೂ.30ರವರೆಗೆ ಈಗಾಗಲೇ ಪೋಸ್ಟ್ ಮಾಡಲಾದಸಂದೇಶಗಳನ್ನು ಎಡಿಟ್ ಮಾಡಲಾಗದಂತೆ ಟೆಲಿಗ್ರಾಂ ನಿಷ್ಕ್ರಿಯಗೊಳಿಸಬೇಕೆಂದು ಸೂಚಿಸಿದೆ. ಅಂದರೆ ಜೂ.30ರವರೆಗೆ ಈಗಾಗಲೇ ಕಳುಹಿಸಲಾದ ಯಾವುದೇ ಸಂದೇಶಗಳನ್ನು ಎಡಿಟ್ ಮಾಡಲು ಅವಕಾಶವಿರುವುದಿಲ್ಲ. ಪ್ರಶ್ನೆಪತ್ರಿಕೆ ಸೋರಿಕೆ ಮಾಡುವ ಜಾಲಗಳು ಟೆಲಿಗ್ರಾಂನಂತಹ ಆ್ಯಪ್ ಬಳಸಿ ಪರೀಕ್ಷಾ ಅಭ್ಯರ್ಥಿಗಳೊಂದಿಗೆ ಸಂಹವನ ನಡೆಸಿದೆ ಎಂದು ತಿಳಿದುಬಂದಿದೆ.

➔ ಪುಟ 4

ಖಾಸಗಿ ರೆಸಾರ್ಟ್‌ನಲ್ಲಿ ಸಿಎಲ್‌ಪಿ ಸಭೆ

ಐದನೇ ಅಭ್ಯರ್ಥಿಯ ಗೆಲುವಿಗೆ ರಣತಂತ್ರ

ಬೆಂಗಳೂರು: ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ಗುರುವಾರ (ಜೂ.18) ಮತದಾನ ನಡೆಯಲಿರುವ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ಬಿಡದಿಯ ಖಾಸಗಿ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಪಕ್ಷದ ಶಾಸಕಾಂಗ ಸಭೆ ನಡೆಯಿತು.



ನಾಳೆ ವಿಧಾನ ಪರಿಷತ್ ಚುನಾವಣೆ

ಕಾಂಗ್ರೆಸ್ 5ನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರುವುದರಿಂದ ಚುನಾವಣೆ ತೀವ್ರ ಪೈಪೋಟಿಯಿಂದ ಕೂಡಿದ್ದು, 5ನೇ ಅಭ್ಯರ್ಥಿಯ ಗೆಲುವಿಗೆ ಅಲ್ಪ ಮತಗಳ ಕೊರತೆ ಇರುವುದರಿಂದ ಗೆಲುವಿನ ತಂತ್ರದ ರೂಪರೇಷಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಮತದಾನದ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಾವಳಿಗಳ ಬಗ್ಗೆ ಶಾಸಕರಿಗೆ ತಿಳಿಸಲಾಯಿತು.

➔ ಪುಟ 4

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ನಾಳೆ

ಧಾರವಾಡ: ಲಕ್ಷ್ಮನ್ನನಲ್ಲಿ 110 ಕೆವ್ಹಿ ವಿದ್ಯುತ್ ವಿತರಣಾ ಕೇಂದ್ರದ 11ಕೆವ್ಹಿ ವೆಂಕಟೇಶ್ವರ ಫೀಡರ್ ಮಾರ್ಗದ ಮೇಲೆ ತುರ್ತುಪಾಲನಾ ಕಾಮಗಾರಿಯನ್ನು ಕೈಗೊಳ್ಳುವುದರಿಂದ ಜೂ.18ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಶಾಹಾಬಿರಿ ನಗರ, ಗುರುದೇವ ನಗರ, ಸಾರಸ್ವತಪುರ, ಮಾಸಾಲರ ಓಣಿ, ರಾಜತಾರಿ ವಾಟರ್ ಟ್ಯಾಂಕ್, ಕೆಲಘಟಗಿ ರಸ್ತೆ, ಟೋಲ-ನಾಕಾ, ಮಾಳಮಡ್ಡಿ, ಸಪ್ತಪಿ ಮಾರ್ಗ, ಲಕ್ಷ್ಮೀಸಿಂಗನಕೇರಿ, ನಗರದ ಕಾಲೋನಿ, ಮಣಿಕಿ ರಸ್ತೆ, ರಾಯಾಪೂರ ಲೇಔಟ್, ಶಾಂತಿನಗರ, ಜಿಲ್ಲಾ ಕಚೇರಿ, ತಹಶೀಲ್ದಾರ್ ಕಚೇರಿ, ರೈಲ್ವೇಸ್ಟೇಷನ್ ರಸ್ತೆ, ಗೌಳಿ ಗಲ್ಲಿ, ರಾಯರ ಮಠ, ಕಟ್ಟೂರ ರಸ್ತೆ, ಗೋಪಾಲಪುರ, ಯಮ್ಮಿಕೇರಿ, ಜನ್ನತ ನಗರ, ಲಕ್ಷ್ಮೀಸಿಂಗನಕೇರಿ, ಶಿವಾನಂದ ನಗರ, ಡಿ.ಕೆ.ನಾಯ್ಕರ, ಮಿಷನ್ ಕಂಪೌಂಡ ವ್ಯಾಪ್ತಿಯಲ್ಲಿ ಹಾಗೂ ಎಲ್ಲಾ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಹೆಸ್ಕಾಂ ಪ್ರಕಟಣೆ ತಿಳಿಸಿದೆ.



ಹುಬ್ಬಳ್ಳಿ: ನಗರದಲ್ಲಿ ಸಿದ್ಧಾರೂಢ ಸ್ವಾಮೀಜಿ ಹಾಗೂ ಗುರುನಾಥರೂಢ ಸ್ವಾಮೀಜಿಗಳ ಮಠದ ಆವರಣದಲ್ಲಿ ಪುಷ್ಕರಣಿಯಲ್ಲಿ ಆರೂಢ ಆರತಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು. ನ್ಯಾಯಾಧೀಶರಾದ ಕೆ.ಜಿ. ಶಾಂತಿ, ಟ್ರಸ್ಟ್ ಕಮಿಟಿ ಚೇರಮನ್ ಬಾಲು ಮಗಜಿಕೊಂಡಿ, ಧರ್ಮದರ್ಶಿ ಉದಯಕುಮಾರ, ವಿನಾಯಕ ಘೋಡಕೆ, ಗೋವಿಂದ ಮಣ್ಣೂರ, ಚನ್ನವೀರ ಮುಂಗುರವಾಡಿ, ಮಂಜುಳಾನ ಮುನವಳ್ಳಿ ಇದ್ದರು.

ಹೊಸ ಯುಎಲ್‌ಎಂಎಸ್ ತಂತ್ರಾಂಶ ಕಡ್ಡಾಯ ಸಲ್ಲ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ಪರವಾನಗಿ ವಿಭಾಗದ ಎಲ್‌ಬಿಪಿಎಎಸ್ (ನಿರ್ಮಾಣ-2) ತಂತ್ರಾಂಶವನ್ನು ಏಕಾಏಕಿ ಸ್ಥಗಿತಗೊಳಿಸಿ, ಜೂನ್ 15ರಿಂದ ಹೊಸ ಯುಎಲ್‌ಎಂಎಸ್ ತಂತ್ರಾಂಶವನ್ನು ಕಡ್ಡಾಯಗೊಳಿಸಿರುವ ಪಾಲಿಕೆಯ ಆದೇಶಕ್ಕೆ ಸ್ಥಳೀಯ ಎಂಜಿನಿಯರ್‌ಗಳು ಮತ್ತು ಸಾರ್ವಜನಿಕ ವಲಯದಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ... ತಂತ್ರಾಂಶ ವ್ಯವಸ್ಥೆಯನ್ನು ಕನಿಷ್ಠ 3 ರಿಂದ 6 ತಿಂಗಳುಗಳ ಕಾಲ ಮುಂದುವರಿಸಬೇಕು ಎಂದು ಎಂಜಿನಿಯರ್‌ಗಳ ಒಕ್ಕೂಟದ ಪದಾಧಿಕಾರಿಗಳು ಮಹಾನಗರ ಪಾಲಿಕೆಯ ಆಯುಕ್ತರಿಗೆ ಅಧಿಕೃತ ಮನವಿ ಸಲ್ಲಿಸಿದ್ದಾರೆ.



ಹುಬ್ಬಳ್ಳಿ: ರೋಟರಿ ಡಿಸ್ಟ್ರಿಕ್ಟ್ 2028-29ನೇ ಸಾಲಿಗೆ ನೂತನ ಗವರ್ನರ್ ಆಗಿ ವಾಸುಕಿ ಸಂಜಿ ಅವರು ಆಯ್ಕೆಯಾಗಿದ್ದಾರೆ. ಗೋವಾದ ಅಜಯ ಮೆನನ್ ವಿರುದ್ಧ ಜಯಗಳಿಸಿದ್ದಾರೆ. ಭಾನುವಾರ ನಡೆದ ಚುನಾವಣೆಯಲ್ಲಿ ಚುನಾವಣಾ ಅಧಿಕಾರಿ ಡಿಸ್ಟ್ರಿಕ್ಟ್ ಪಿಡಿಜಿ ಹರೀಶ ಮೊಟವಾನಿ ಅವರು ನೂತನ ಗವರ್ನರ ಅವರ ಹೆಸರು ಘೋಷಿಸಿದರು. ಮಾಜಿ ಜಿಲ್ಲಾ ಗವರ್ನರ್ ಗುರುದತ್ತ ಭಕ್ತ, ಬಬನ್ ದೇಶಪಾಂಡೆ, ಲೇನಿ ಡಿಕೋಸ್ಟಾ, ಡಿಜಿ ನಾಮಿನಿ, ಅರುಣ ಭಂಡಾರಿ ಭಾಗವಹಿಸಿದ್ದರು.

ಮತದಾನ ಹಕ್ಕು ರಕ್ಷಿಸಿ



ಹುಬ್ಬಳ್ಳಿ: ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಸರಿಯಾಗಿ ಮಾಡಬೇಕು. ದಾಖಲೆಗಳ ನೆಪ ಹೇಳಿ ಯಾವ ಮತದಾರರನ್ನು ಪಟ್ಟಿಯಿಂದ ಕೈಬಿಡಬಾರದು ಎಂದು ಆಗ್ರಹಿಸಿ ಜನಪರ ಸಂಘಟನೆಗಳ ವೇದಿಕೆ, ಸಿಪಿಐ(ಎಂ), ಸಿಪಿಐ ಧಾರವಾಡ ಜಿಲ್ಲಾ ಸಮಿತಿಗಳ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು. ಮಂಗಳವಾರ ನಗರದ ಮಿನಿವಿಧಾನ ಸೌಧ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು, ಪ್ರತಿಯೊಬ್ಬ ನಾಗರಿಕನ ಮತದಾನ ಹಕ್ಕು ರಕ್ಷಿಸಬೇಕು, ದಾಖಲೆ ಕೊರತೆಯಿಂದ ಯಾರ ಹೆಸರನ್ನೂ ಮತದಾರರ ಪಟ್ಟಿಯಿಂದ ತೆಗೆಯದಂತೆ ಕ್ರಮ ವಹಿಸಬೇಕು, ಚುನಾವಣಾ ಆಯೋಗ ನಿಗದಿ ಪಡಿಸಿದ ದಾಖಲೆಗಳನ್ನು ಯಾರಿಗೆ ಒದಗಿಸಲು ಸಾಧ್ಯವಿಲ್ಲವೋ ಅವರಿಗೆ ರಾಜ್ಯ ಸರ್ಕಾರ ನಿಯಮಗಳ ಸರಳಗೊಳಿಸಿ, ಸುಲಭವಾಗಿ ಹಾಗೂ ತಕ್ಷಣ ದಾಖಲೆಗಳನ್ನು ಒದಗಿಸಬೇಕು, ಮತದಾರರ ಪಟ್ಟಿ ಕಂಪ್ಯೂಟರ್ ಓದಬಲ್ಲ ಮಾದರಿಯಲ್ಲಿ ಪ್ರಕಟಿಸುವಂತೆ ಚುನಾವಣಾ ಆಯೋಗಕ್ಕೆ ಒತ್ತಾಯಿಸಬೇಕು, ಅಗತ್ಯ ಸಂಖ್ಯೆಯ ಮತದಾರರ ಸೇವಾ ಕೇಂದ್ರಗಳನ್ನು ತೆರೆದು ಜನರಿಗೆ ಅಗತ್ಯ ನೆರವು ನೀಡಬೇಕು ಎಂದು ಆಗ್ರಹಿಸಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಹೇಶ ಪತ್ತಾರ, ಜಿಲ್ಲಾ ಮುಖಂಡ ಬಸೀರ ಮುಧೋಳ, ಸಿದ್ದು ತೇಜಿ ಸೇರಿದಂತೆ ಅನೇಕರಿದ್ದರು.



ಹುಬ್ಬಳ್ಳಿ: ಪಂಚಾಯತ್ ರಾಜ್ ಇಲಾಖೆಯಲ್ಲಿ 28 ವರ್ಷಗಳು ಸೇವೆ ಸಲ್ಲಿಸಿ ನಿವೃತ್ತರಾದ ಉಮೇಶಗೌಡ ತುಪ್ಪದಗೌಡರ ಅವರಿಗೆ ಗ್ರಾಮಸ್ಥರು ಸನ್ಮಾನಿಸಿದರು.

ಪೋಕ್ಸೋ ಕಾಯ್ದೆ ಅರಿವು ಅಗತ್ಯ



ಧಾರವಾಡ: ರಾಜ್ಯ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಗರದ ವಿದ್ಯಾ ಹಂಚಿಮನಿ ಪದವಿಪೂರ್ವ ವಿಜ್ಞಾನ ಕಾಲೇಜಿನಲ್ಲಿ ಪೋಕ್ಸೋ ಕಾಯ್ದೆ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕಾನೂನು ಅರಿವು ಕಾರ್ಯಾಗಾರ ಜರುಗಿತು.

ಉದ್ಘಾಟಿಸಿದ ಕಾನೂನು ಸೇವಾ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎನ್.ವಿ.ವಿಜಯ ಮಾತನಾಡಿ, ಇಂದಿನ ಯುವಜನಾಂಗ ದುಶ್ಚಟಕ್ಕೆ ಬಲಿಯಾಗಿ ಅಮೂಲ್ಯ ಜೀವನ ಹಾಳು ಮಾಡಿಕೊಳ್ಳುತ್ತಿದ್ದು, ಅವರಿಗೆ ಮಾದಕ ವಸ್ತುಗಳ ದುಷ್ಪರಿಣಾಮದ ಕುರಿತು ಅರಿವು ಮೂಡಿಸುವುದು ಅಗತ್ಯವಿದೆ ಎಂದರು. ಪೋಕ್ಸೋ ಕಾಯ್ದೆ ಕುರಿತು ಭಾಷಣ, ಪ್ರಬಂಧ ಸ್ಪರ್ಧೆ ಏರ್ಪಡಿಸುವ ಮೂಲಕ ವಿದ್ಯಾರ್ಥಿನಿಯರಲ್ಲಿ ಅರಿವು ಮೂಡಿಸಬೇಕು. ಗುಡ್ ಟಚ್, ಬ್ಯಾಡ್ ಟಚ್ ಬಗ್ಗೆ ತಿಳುವಳಿಕೆ ನೀಡಬೇಕು. ದೌರ್ಜನ್ಯಕ್ಕೆ ಒಳಗಾದ ವೇಳೆ ಯಾವುದೇ ಹಿಂಜರಿಕೆ ಇಲ್ಲದೆ, ದೂರು ನೀಡುವಂತೆ ಸಲಹೆ ನೀಡಿದರು. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅಲ್ಲಪ್ಪ ಬಡಿಗೇರ, ಎಚ್.ಶಶಿಧರ ಶೆಟ್ಟಿ, ಡಿಡಿಪಿಐ ಉಮೇಶ ಬೊಮ್ಮಕ್ಕನವರ, ಪ್ರಾಚಾರ್ಯ ರಾಜು ಕಡೇಮನಿ, ಪಿಆರ್‌ಓ ಬಾಲಸುಬ್ರಹ್ಮಣ್ಯ ಇದ್ದರು.

ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಕ್ಕೆ ಆಗ್ರಹ

ಖಾಲಿ ಹುದ್ದೆಗಳ ಭರ್ತಿಯಾಗಲಿ



ಧಾರವಾಡ: ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಪ್ರಾರಂಭಿಸಿದ ಎಲ್‌ಕೆಜಿ, ಯುಕೆಜಿ ರದ್ದುಪಡಿಸಿ, ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ಪ್ರಾರಂಭಿಸುವಂತೆ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಆಗ್ರಹ ಮಾಡಿದೆ.

ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ನೂರಾರು ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರು ಮಂಗಳವಾರ ಬೆಳಗ್ಗೆಯಿಂದಸಂಜೆವರೆಗೂಧರಣಿಕೈಗೊಂಡು, ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ಜಿಲ್ಲಾಧ್ಯಕ್ಷೆ ರತ್ನಾ ಶಿರೂರ, ಪ್ರಧಾನ ಕಾರ್ಯದರ್ಶಿ ಚನ್ನಕ್ಕ ಅಂಗಡಿ, ಕಲಾವತಿ ಪಿರಗಣ್ಣವರ, ಕಸ್ತೂರಿ ಬೇಂದ್ರೆ, ಶಿವಲೀಲಾ ನಡೂರಮಠ, ಬಸಮ್ಮ ಕಳಸದ, ಭಾರತಿ ಹಳೇಮನಿ, ವಿಜಯಲಕ್ಷ್ಮೀ ಹಿರೇಮಠ ಸೇರಿದಂತೆ ಅನೇಕರಿದ್ದರು.

ಕನಿಷ್ಠ ವೇತನ ಜಾರಿಗೆ ಆಗ್ರಹ

ಜಿಲ್ಲೆಯಲ್ಲಿ 2018ರಿಂದ ಅಂಗನವಾಡಿ ಸಹಾಯಕಿಯರು ಹುದ್ದೆಗಳು ಭರ್ತಿ ಮಾಡಿಲ್ಲ, ಕಾರ್ಯಕರ್ತೆಯರಿಗೆ ಚುನಾವಣಾ ಕರ್ತವ್ಯ ನಿಯೋಜನೆ ಮಾಡುವುದರಿಂದ ಅಂಗನವಾಡಿ ಕೆಲಸ ಕಾರ್ಯಗಳು ವಿಳಂಬವಾಗಲಿದೆ. ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕರಿಗೆ ಕನಿಷ್ಠ ವೇತನ ಜಾರಿಗೆ ತರಬೇಕು. ಪ್ರತಿ ತಿಂಗಳ 1ನೇ ತಾರೀಖಿಗೆ ವೇತನ ಪಾವತಿಸಬೇಕು. ಮಕ್ಕಳು, ಗರ್ಭಿಣಿ-ಬಾಣಂತಿಯರಿಗೆ ಉತ್ತಮ ಗುಣಮಟ್ಟದ ಆಹಾರ ಪೂರೈಸಲು ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಒತ್ತಾಯಿಸಿದೆ.

- ಸರ್ಕಾರವು ಪ್ರಾಥಮಿಕ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ಪ್ರಾರಂಭಿಸಿದೆ. ಆದರೆ 4 ವರ್ಷ ಮೇಲ್ಪಟ್ಟ ಮಕ್ಕಳನ್ನು ಶಾಲೆಗೆ ಸೇರಿಸಲು ಸ್ಪಷ್ಟ ಆದೇಶವಿದ್ದರೂ ಸಹ ಕಡಿಮೆ ವಯೋಮಿತಿ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳುವುದಕ್ಕೆ ತೀವ್ರ ಖಂಡನೆ
- ಮಾತೃವಂದನ ಯೋಜನೆ ಪ್ರಾರಂಭವಾದಾಗಿಂದ ಕೇವಲ ಎರಡು ಬಾರಿ ಮಾತ್ರವೇ ಪ್ರೋತ್ಸಾಹಧನ ಬಿಡುಗಡೆ
- ಉಳಿದ ಹಣವೂ ಕೂಡ ಶೀಘ್ರ ಬಿಡುಗಡೆ ಮಾಡಬೇಕು ಎಂದು ಸಂಘಟನೆ ಒತ್ತಾಯ
- ಕನಿಷ್ಠ ಗೌರವ ಧನ, ಕಟ್ಟಡ ಬಾಡಿಗೆ ಹಣ, ಮೊಟ್ಟೆ ಹಣ, ಖಾಲಿ ಹುದ್ದೆಗಳ ಭರ್ತಿ, ಅನಾರೋಗ್ಯದ ಕಾರ್ಯಕರ್ತೆಯರನ್ನು ಬಿಎಲ್‌ಒ ಕೆಲಸದಿಂದ ಕೈಬಿಡುವುದು ಸೇರಿ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ

ಕೇವಲ ಎರಡು ಸಿಲಿಂಡರ್ ಸರಬರಾಜು

ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ಪ್ರಾರಂಭದಿಂದ ಅಂಗನವಾಡಿಗಳಲ್ಲಿ ಮಕ್ಕಳ ದಾಖಲಾತಿ ಕ್ಷೀಣಿಸುತ್ತಿದೆ. ಹೀಗಾಗಿ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ-ಯುಕೆಜಿ ಪ್ರಾರಂಭಿಸಿ, ಸರ್ಕಾರಿ ಶಾಲೆಗಳಲ್ಲಿ ರದ್ದುಗೊಳಿಸಬೇಕು. ಜಿಲ್ಲೆಯಲ್ಲಿ ಸಿಲಿಂಡರ್ ಬಿಲ್ ಬಜೆಟ್ ಬಂದಾಗ ಮಾಡುತ್ತಾರೆ. ಪ್ರತಿವರ್ಷವೂ 6ರಿಂದ 8 ಸಿಲಿಂಡರ್ ಸರಬರಾಜು ಮಾಡಬೇಕು. ಆದರೆ ಒಂದು ಕೇಂದ್ರಕ್ಕೆ ಕೇವಲ ಎರಡು ಸಿಲಿಂಡರ್ ಸರಬರಾಜು ಮಾಡುತ್ತಾರೆ ಎಂದು ಸಂಘಟನೆಯವರು ಆರೋಪಿಸಿದರು.

ಅರ್ಜಿ ಸಲ್ಲಿಕೆ ವಿರೋಧಿಸಿ ಕೋನರಡ್ಡಿಗೆ ಮನವಿ

ನವಲಗುಂದ: ಟಾಟಾ ಪವರ್ ಕಂಪನಿ ಲಿಮಿಟೆಡ್ ಖಾಸಗಿ ಕಂಪನಿಗೆ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ವಿತರಣಾ ಚಟುವಟಿಕೆಯ ಅರ್ಜಿಗೆ ವಿರೋಧಿಸಿ ನವಲಗುಂದ ಹೆಸ್ಕಾಂ ನೌಕರರ ಸಂಘದ ವತಿಯಿಂದ ಶಾಸಕ ಎನ್. ಎಚ್. ಕೋನರಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಮುಂಬೈನ ಟಾಟಾ ಪವರ್ ಕಂಪೆನಿ ಲಿಮಿಟೆಡ್‌ಎಂಬ ಖಾಸಗಿ ಸಂಸ್ಥೆಯೊಂದು ಕರ್ನಾಟಕ ಸರ್ಕಾರದ ಸೌಮ್ಯತೆಗೊಳಪಡುವ ಎಲ್ಲಾ ವಿದ್ಯುತ್ ವಿತರಣಾ ಕಂಪೆನಿಗಳ ಆಯಾ ಪ್ರದೇಶಗಳಲ್ಲಿ ಸಮಾನಾಂತರವಾಗಿ ವಿತರಣಾ ಕಾರ್ಯಕ್ಕೆ ಪರವಾನಗಿಯನ್ನು ಕೋರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿ ಆಕ್ಷೇಪಣೆಯನ್ನು ಆಹ್ವಾನಿಸಿದೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು 1942-43ರಲ್ಲಿಯೇ ಜನಸೇವಾ ಚಟುವಟಿಕೆಗಳ ಸಂಸ್ಥೆಯಾದ ವಿದ್ಯುಚ್ಛಕ್ತಿ, ನೀರು ಹಾಗೂ ಲೋಕೋಪಯೋಗಿ ಮೊದಲಾದ ಸಂಸ್ಥೆಗಳು ಸರ್ಕಾರದ ಹಿಡಿತದಲ್ಲಿಯೇ ಕಾರ್ಯ ನಿರ್ವಹಿಸಬೇಕಲ್ಲದೆ ಯಾವ ಕಾರಣಕ್ಕೂ ಲಾಭಗಳಿಕೆ ದೃಷ್ಟಿಯ ಖಾಸಗಿ ಸಂಸ್ಥೆಗಳಿಗೆ ನೀಡುವುದು ಸಲ್ಲ ಎಂದಿದ್ದರು. ಅದು ಸದಾ ಸರ್ಕಾರದ ಕೈಯಲ್ಲಿಯೇ ಇರುವಂತೆ ಮಾಡಲು ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ ಹಾಗೂ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಗಳ ಸ್ಥಾಪನೆಗೆ ಬುನಾದಿ ಹಾಕಿ ತನ್ಮೂಲಕ ಸರ್ಕಾರವು ಜನತೆಗೆ ಅನೇಕ ಜನಪರ ಯೋಜನೆಗಳನ್ನು ನೀಡಲು ಅನುಕೂಲ ಮಾಡಿದ್ದಾರೆ. ಇಂತಹ ಅಪೂರ್ವವಾದ ಜನಪರ ಸೇವೆಯನ್ನು ಖಾಸಗಿ ಸಂಸ್ಥೆಗೆ ನೀಡುವುದು ಜನಪರ ಧೋರಣೆ ಕ್ರಮವಾಗಿರದೆ ಜನವಿರೋಧಿ ನೀತಿಯಾಗಿರುವುದರಿಂದ ಟಾಟಾ ಪವರ್ ಕಂಪನಿ ಲಿಮಿಟೆಡ್ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸದೆ ರಾಜ್ಯದ ಗ್ರಾಹಕ ವರ್ಗದ ಹಿತದೃಷ್ಟಿಯಿಂದ ಹಾಗೂ ನವಲಗುಂದ ನೌಕರರ ಹಿತದೃಷ್ಟಿಯಿಂದ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ ಅವರ ಗಮನಕ್ಕೆ ಈ ವಿಷಯ ಪ್ರಸ್ತಾಪಿಸಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಎಂಬ ಖಾಸಗಿ ಸಂಸ್ಥೆಯೊಂದು ಕರ್ನಾಟಕ ಸರ್ಕಾರದ ಸೌಮ್ಯತೆಗೊಳಪಡುವ ಎಲ್ಲಾ ವಿದ್ಯುತ್ ವಿತರಣಾ ಕಂಪೆನಿಗಳ ಆಯಾ ಪ್ರದೇಶಗಳಲ್ಲಿ ಸಮಾನಾಂತರವಾಗಿ ವಿತರಣಾ ಕಾರ್ಯಕ್ಕೆ ಪರವಾನಗಿಯನ್ನು ಕೋರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿರುವುದನ್ನು ತಿರಸ್ಕರಿಸಬೇಕಾಗಿ ಕೋರಿ ಎಲ್ಲ ಹೆಸ್ಕಾಂ ನೌಕರರ ಪರವಾಗಿ ಈ ಮನವಿ ಪತ್ರ ತಮಗೆ ಸಲ್ಲಿಸುತ್ತವೆಂದರು.

ಅಧ್ಯಕ್ಷ ಎನ್.ಎನ್. ಮುಗದ, ಕಾರ್ಯದರ್ಶಿ ಸಿ.ವೈ.ಭಾವಿಕಟ್ಟಿ, ಪದಾಧಿಕಾರಿಗಳಾದ ಎಸ್. ಆರ್. ಡೊಳ್ಳಿನ, ಆರ್. ಕೆ. ಪಾಟೀಲ, ಜಿ. ಎನ್. ನಾಯ್ಕರ, ವಿ. ಎಸ್. ಬಂಗಾರಿಮಠ, ಮಂಜುನಾಥ ನಿಂಬನಾಯ್ಕರ, ಸಹಾಯಕ ಎಂಜಿನಿಯರ್ ಹನಮರಡ್ಡಿ ರೂಗಿ ಹಾಗೂ ಹೆಸ್ಕಾಂ ಸಿಬ್ಬಂದಿ ಸೇರಿದಂತೆ ಅನೇಕರಿದ್ದರು.



ಸಚಿವ ಸ್ಥಾನ ನೀಡಲು ಬೃಹತ್ ಪ್ರತಿಭಟನೆ ನಾಳೆ

ಹುಬ್ಬಳ್ಳಿ: ಶಾಸಕ ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಹಿರಿಯರು, ಮಾರ್ಗದರ್ಶಕರು ಹಾಗೂ ಅಭಿಮಾನಿಗಳ ಆಶ್ರಯದಲ್ಲಿ ಜೂ.18 ರಂದು ನಗರದಲ್ಲಿ ಬೆಳಗ್ಗೆ 11 ಗಂಟೆಗೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ಕಾಂಗ್ರೆಸ್ ಮುಖಂಡ ಗುರುನಾಥ ಉಳ್ಳಿಕಾಶಿ, ಅಂದು ನಗರದ ಡಾ. ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನಾಕಾರರು ಸಮಾವೇಶಗೊಂಡು ಮೆರವಣಿಗೆ ಮೂಲಕ ಮಿನಿ ವಿಧಾನಸೌಧಕ್ಕೆ ಭೇಟಿ ನೀಡಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದರು.

ಮಾಜಿ ವಿಧಾನ ಪರಿಷತ್ ಸದಸ್ಯ ಮೋಹನ ಲಿಂಬಿಕಾಯಿ ಮಾತನಾಡಿ, ಶಾಸಕ ಪ್ರಸಾದ ಅಬ್ಬಯ್ಯ ಪ್ರಶ್ನಾತೀತ ನಾಯಕರಾಗಿದ್ದಾರೆ. ಮನೆಗೆ ಕಷ್ಟ ಎಂದು ಬರುವ ಜನರಿಗೆ ಸ್ಪಂದಿಸಿ ಸಮಸ್ಯೆ ಪರಿಹರಿಸುತ್ತಾರೆ. ಇವರಿಗೆ ಮಂತ್ರಿ ಸ್ಥಾನ ನೀಡಿದರೆ ಹುಬ್ಬಳ್ಳಿ ನಗರ ಸಾಕಷ್ಟು ಅಭಿವೃದ್ಧಿಯಾಗಲಿದೆ ಎಂದು ತಿಳಿಸಿದರು. ಶಾಸಕ ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಹೈಕಮಾಂಡ್ ಭೇಟಿ ನೀಡಿ ಮನವಿ ಸಲ್ಲಿಸಲಾಗುವುದು. ಜೂ. 21 ರಂದು ಬೆಂಗಳೂರಿನಲ್ಲಿ ನಡೆಯುವ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ಅವರ ಪದಗ್ರಹಣ ಸಮಾರಂಭಕ್ಕೆ ಬರುವ ರಾಷ್ಟ್ರೀಯ ನಾಯಕ ಭೇಟಿ ಮಾಡಿ ಒತ್ತಡ ಹಾಕಲಾಗುವುದು ಎಂದರು.

ಕಾಂಗ್ರೆಸ್ ಮುಖಂಡ ರಾಜಾ ದೇಸಾಯಿ ಅವರು ಮೂರು ಬಾರಿ ಈ ಕ್ಷೇತ್ರದಲ್ಲಿ ಗೆಲವು ಸಾಧಿಸಿದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು. ಹಿರಿತನವನ್ನು ಗಮನಿಸಿ ನೀಡಬೇಕು ಎಂದರು.


ರಾಜ್ಯ ಎರಡನೇ ದೊಡ್ಡ ಮಹಾನಗರ ಪಾಲಿಕೆ ಇರುವ ಹುಬ್ಬಳ್ಳಿಗೆ ಮಂತ್ರಿ ಸ್ಥಾನ ನೀಡುತ್ತಿಲ್ಲ, ಉತ್ತರ ಕರ್ನಾಟಕ ಭಾಗದ ದಲಿತ ನಾಯಕರಿಗೂ ಮಂತ್ರಿಸ್ಥಾನ ನೀಡಿಲ್ಲ. ಆದ್ದರಿಂದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು. ಮುಖಂಡ ಮಹಮ್ಮದ ಯೂಸೂಫ ಸವಣೂರ ಮಾತನಾಡಿ, ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂಬುವುದು ಅಂಜುಮನ್ ಸಂಸ್ಥೆ ಬೇಡಿಕೆಯಾಗಿದೆ ಎಂದರು. ಮುಖಂಡರಾದ ಪ್ರಫೂಲ ಚಂದ್ರ ರಾಯನಗೌಡ, ವಸಂತ ಲದ್ವಾ, ತಾರಾದೇವಿ ವಾಲಿ, ಅನ್ವರ ಮುಧೋಳ, ಮಹೇಂದ್ರ ಸಿಂಘಿ, ಎಂ.ಡಿ. ಗರಗ, ಗಣೇಶ ಟಗರಗುಂಟೆ, ರಾಜಶೇಖರ ಮೆಣಸಿನಕಾಯಿ ಇದ್ದರು.



ಘಟಿಕೋತ್ಸವದಲ್ಲಿ 4 ಚಿನ್ನ ಪದಕ, 7 ರ್‍ಯಾಂಕ್



ಹುಬ್ಬಳ್ಳಿ: ಬೆಂಗಳೂರಿನ ಜಿ.ವಿ.ಕೆ ಕ್ಯಾಂಪಸ್‌ನಲ್ಲಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವತಿಯಿಂದ ನಡೆದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ಹುಬ್ಬಳ್ಳಿಯ ಕೆ.ಎಲ್.ಇ ಸಂಸ್ಥೆಯ ಶುಶ್ರುತಾ ವಿಜ್ಞಾನ ಮಹಾವಿದ್ಯಾಲಯ ವಿದ್ಯಾರ್ಥಿಗಳು 4 ಚಿನ್ನ ಪದಕ ಹಾಗೂ 7 ರ್‍ಯಾಂಕ್ ಪಡೆದಿದ್ದಾರೆ. ಪಿಬಿಬಿಎಸ್‌ಸಿ ನರ್ಸಿಂಗ್‌ನಲ್ಲಿ ಸರಸ್ವತಿ ಮರಿಯಾಯಿ ಚಿನ್ನದ ಪದಕ ಹಾಗೂ 1 ನೇ ರ್‍ಯಾಂಕ್, ಝಾನ್ಸಿ ಜೋನಲ್ಲಾಗಡ್ಡ ಎಂಎಸ್‌ಸಿ ನರ್ಸಿಂಗ್ ನಲ್ಲಿ 1 ನೇ ರ್‍ಯಾಂಕ್ ಹಾಗೂ ಮೆಡಿಕಲ್ ಸರ್ಜಿಕಲ್ ನರ್ಸಿಂಗ್ ವಿಭಾಗದಲ್ಲಿ ಚಿನ್ನದ ಪದಕ, ಚೈತ್ರಾ ಕೊಟಗಿ ಎಂಎಸ್‌ಸಿ ನರ್ಸಿಂಗ್‌ನಲ್ಲಿ 2 ನೇ ರ್‍ಯಾಂಕ್ ಹಾಗೂ ಪ್ರಸೂತಿ, ಸ್ತ್ರೀರೋಗ ಶಾಸ್ತ್ರದ(ಒಬಿಜಿ) ನರ್ಸಿಂಗ್ ವಿಭಾಗದಲ್ಲಿ ಚಿನ್ನ, ದೀಪಶ್ರೀ ಕುಲಕರ್ಣಿ ಎಂಎಸ್‌ಸಿ ನರ್ಸಿಂಗ್ ನಲ್ಲಿ 4 ನೇ ರ್‍ಯಾಂಕ್, ಪೀಡಿಯಾಟ್ರಿಕ್ ನರ್ಸಿಂಗ್ ವಿಭಾಗದಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ರಾಜ್ಯಪಾಲ ಥಾವರ್‌ಚಂದ ಗೆಹಲೋಟ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ವೈದ್ಯಕೀಯ ಸಚಿವ ಶರಣಪ್ರಕಾಶ ಪಾಟೀಲ, ಉಪಕುಲಪತಿ ಡಾ. ಭಗವಾನ್ ಬಿ.ಸಿ ಪದಕ ಪ್ರದಾನ ಮಾಡಿದರು.



ಧಾರವಾಡ: ಸುಭಾಷ ರಸ್ತೆಯ ಬಿಜೆಪಿ ಕಚೇರಿಯಲ್ಲಿ ಹುಬ್ಬಳ್ಳಿ-ಧಾರವಾಡ ಪಶ್ಚಿಮ-74 ವಿಧಾನಸಭಾ ಕ್ಷೇತ್ರದ ಕಾರ್ಯಕಾರಣಿ ಸಭೆ ಮಂಡಳದ ಅಧ್ಯಕ್ಷ ಮಂಜುನಾಥ ಮಲ್ಲಿಗವಾಡ ಅಧ್ಯಕ್ಷತೆಯಲ್ಲಿ ಮಂಗಳವಾರ ಜರುಗಿತು. ಶಾಸಕ ಅರವಿಂದ ಬೆಲ್ಲದ, ಬಿಜೆಪಿ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಗರಗ, ಮೇಯರ್ ಜ್ಯೋತಿ ಪಾಟೀಲ, ಶಿವಣ್ಣ ಬಡವಣ್ಣವರ, ಶಿವು ಹಿರೇಮಠ, ರಾಮಣ್ಣ ಬಡಿಗೇರ, ವಿಷ್ಣು ಕೋರ್ಲಹಳ್ಳಿ, ಆನಂದ ಯಾವಗಲ್ಲ, ಮಂಜುನಾಥ ಭಟ್ಟಣವರ ಇತರರಿದ್ದರು.

ಬಿಜೆಪಿ ಬಲವರ್ಧನೆಗೆ ಶ್ರಮಿಸಿ: ಬೆಲ್ಲದ

ಧಾರವಾಡ: ನಗರದ ಸುಭಾಷ ರಸ್ತೆಯ ಭಾರತೀಯ ಜನತಾ ಪಕ್ಷದ(ಬಿಜೆಪಿ) ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ಹುಬ್ಬಳ್ಳಿ-ಧಾರವಾಡ ಪಶ್ಚಿಮ-74 ವಿಧಾನ ಸಭಾ ಮತಕ್ಷೇತ್ರದ ಮಂಡಳದ ವತಿಯಿಂದ ಮಹತ್ವದ ಕಾರ್ಯಕಾರಣಿ ಸಭೆ ಜರುಗಿತು.



> ನಮ್ಮ ಸಿದ್ಧಾಂತ ಮತ್ತು ಅಭಿವೃದ್ಧಿ ರಾಜಕಾರಣ ನಮಗೆ ಶ್ರೀರಕ್ಷೆ. ಜನರ ವಿಶ್ವಾಸ ಉಳಿಸಿಕೊಂಡು, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಾವೆಲ್ಲರೂ ಕಟಿಬದ್ಧರಾಗಿ ಕೆಲಸ ಮಾಡೋಣ.
> ■ ಅರವಿಂದ ಬೆಲ್ಲದ, ಶಾಸಕ

ಮಂಡಳದ ಅಧ್ಯಕ್ಷ ಮಂಜುನಾಥ ಮಲ್ಲಿಗವಾಡ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಪಕ್ಷದ ಸಂಘಟನೆ, ಮುಂಬರುವ ರಾಜಕೀಯ ಕಾರ್ಯತಂತ್ರಗಳು ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಅಧ್ಯಕ್ಷತೆ ವಹಿಸಿ ಮಾತನಾಡಿದ ಮಂಡಳದ ಅಧ್ಯಕ್ಷ ಮಂಜುನಾಥ ಮಲ್ಲಿಗವಾಡ, ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರದಲ್ಲಿ ಬಿಜೆಪಿ ಭದ್ರವಾದ ನೆಲೆಯನ್ನು ಹೊಂದಿದೆ. ಕಾರ್ಯಕರ್ತರೇ ಪಕ್ಷದ ನಿಜವಾದ ಶಕ್ತಿ. ಬೂತ್ ಮಟ್ಟದಿಂದ ಪಕ್ಷ ಸಂಘಟಿಸಲು ಹೇಳಿದರು.

ಸಭೆಯಲ್ಲಿ ದಿಕ್ಸೂಚಿ ಭಾಷಣ ಮಾಡಿದ ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ, ಕ್ಷೇತ್ರದಲ್ಲಿ ನಡೆದಿರುವ ಮತ್ತು ಪ್ರಗತಿಯ ವಿವಿಧ ಮೂಲಸೌಕರ್ಯ ಹಾಗೂ ಜನಪರ ಅಭಿವೃದ್ಧಿ ಕಾಮಗಾರಿಗಳ ಶಾಸಕರು ಮಾಹಿತಿ ನೀಡಿದರು.

ಪಕ್ಷದ ಪ್ರತಿಯೊಂದು ಯಶಸ್ಸಿನ ಹಿಂದೆ ಕಾರ್ಯಕರ್ತರ ನಿಸ್ವಾರ್ಥ ಸೇವೆ ಇದೆ. ಮುಂಬರುವ ದಿನಗಳಲ್ಲಿಯೂ ಇದೇ ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ ಎಂದರು. ಪ್ರಸ್ತುತ ಸರ್ಕಾರದ ವೈಫಲ್ಯಗಳು ಹಾಗೂ ಜನವಿರೋಧಿ ನೀತಿಗಳ ವಿರುದ್ಧ ಹೋರಾಡಲು ಮತ್ತು ಜನರಿಗೆ ಸತ್ಯವನ್ನು ಮನವರಿಕೆ ಮಾಡಿಕೊಡಲು ಕಾರ್ಯಕರ್ತರು ಸದಾ ಸನ್ನದ್ಧರಾಗಿರಬೇಕು. ತಂತ್ರಜ್ಞಾನದ ಯುಗದಲ್ಲಿ ಸಾಮಾಜಿಕ ಜಾಲತಾಣ ಮೂಲಕ ಪಕ್ಷದ ಸಾಧನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವತ್ತ ಗಮನ ಹರಿಸಬೇಕು ಎಂದರು.

ಸಭೆಯಲ್ಲಿ ಮೇಯರ್ ಜ್ಯೋತಿ ಪಾಟೀಲ, ಬಿಜೆಪಿ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಗರಗ, ಶಿವು ಹಿರೇಮಠ, ರಾಮಣ್ಣ ಬಡಿಗೇರ, ವಿಷ್ಣು ಕೋರ್ಲಹಳ್ಳಿ, ಆನಂದಯಾವಗಲ್ಲ, ಮಂಜುನಾಥ, ಅನೇಕರು ಪಾಲ್ಗೊಂಡಿದ್ದರು.

ಎಸ್ಡಿಎಂಗೆ ಮೈಕ್ರೋ ಬ್ಯಾಡ್ಮಿಂಟನ್ ಕಪ್



ಧಾರವಾಡ: ಹುಬ್ಬಳ್ಳಿಯ ಬ್ಯಾಡ್ಮಿಂಟನ್ ಅಕ್ಯಾಡೆಮಿ ಮತ್ತು ಹುಬ್ಬಳ್ಳಿಯ ಮೈಕ್ರೋ ವೆಲ್ನೆಸ್ ಸಹಯೋಗದಲ್ಲಿ ಹುಬ್ಬಳ್ಳಿಯ ಎಕ್ಸಲೆಂಟ್ ಸ್ಪೋರ್ಟ್ಸ್ ಅಕ್ಯಾಡೆಮಿಯಲ್ಲಿ ನಡೆದ ಮೈಕ್ರೋ ಬ್ಯಾಡ್ಮಿಂಟ್ ಕಪ್ ಪಂದ್ಯಾವಳಿಯಲ್ಲಿ ಎಸ್ಡಿಎಂ ಚಾಂಪಿಯನ್ ಆಗಿದೆ.

ಎಸ್ಡಿಎಂ ಆಸ್ಪತ್ರೆಯ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಪ್ರದೀಪಕುಮಾರ್ ಜೈನ್ ಮತ್ತು ನೇತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥೆ ಡಾ. ಮೃದುಲಾ ಪ್ರಭು ಸೇರಿ ಅನೇಕರು ಪಾಲ್ಗೊಂಡು ಟ್ರೋಫಿ ಗೆದ್ದಿದ್ದಾರೆ. 45 ವರ್ಷಕ್ಕಿಂತ ಕಡಿಮೆ ವಯೋಮಾನದ ಸ್ಪರ್ಧೆಯಲ್ಲಿ ಡಾ.ಪ್ರದೀಪಕುಮಾರ್ ಜೈನ್ ಹಾಗೂ ಡಾ.ನಿಶ್ಚಿತ್ ಗೌಳಿ ಪ್ರಥಮ, ಡಾ.ಸಿದ್ಧಾಂತ ಜೈನ್ ಮತ್ತು ಸಂದೇಶ ದ್ವಿತೀಯ, ಡಾ.ನಂದನ್ ಹೆಡ್ಡಾ ಮತ್ತು ಅದ್ವೈತ್ ಸಿ.ಎ ತೃತೀಯ ಸ್ಥಾನ ಪಡೆದಿದ್ದಾರೆ. 45 ವರ್ಷ ಮೇಲ್ಪಟ್ಟ ಪುರುಷರ ಪಂದ್ಯಾವಳಿಯಲ್ಲಿ ಡಾ.ಪ್ರದೀಪಕುಮಾರ್ ಜೈನ್, ಡಾ.ಕಿರಣ ಎಸ್.ಎಂ. ತೃತೀಯ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಡಾ.ಪ್ರದೀಪಕುಮಾರ, ಡಾ. ಮೃದುಲಾ ಪ್ರಭು ದ್ವಿತೀಯ, ಡಾ.ನಿಶ್ಚಿತ್ ಗೌಳಿ, ಡಾ.ಗೌರಿ ತೃತೀಯ ಸ್ಥಾನ ಗಳಿಸಿದ್ದಾರೆ. ಸಾಧನೆಗೈದ ವೈದ್ಯರಿಗೆ ಎಸ್ಡಿಎಂ ವಿವಿ ಉಪಕುಲಪತಿ ಡಾನಿರಂಜನಕುಮಾರ್, ಕಾರ್ಯನಿರ್ವಾಹಕಿ ಪದ್ಮಲತಾ ನಿರಂಜನ್ ಅಭಿನಂದಿಸುವ ಮೂಲಕ ಎಸ್ಡಿಎಂ ವಿವಿಯ ಕ್ರೀಡಾ ಸೌಲಭ್ಯಗಳನ್ನು ಶೀಘ್ರವೇ ನವೀಕರಿಸುವುದಾಗಿಯೂ ವಾಗ್ದಾನ ಮಾಡಿದರು.

ಮಾರುತಿ ದೇಗುಲದಲ್ಲಿ ವಿಶೇಷ ಪೂಜೆ

ಕುಂದಗೋಳ: ಅಧಿಕ ಮಾಸದ ಅಂಗವಾಗಿ ಪಟ್ಟಣದ ಮುರ ಅಂಗಡಿ ಕೂಟದ ಸಮೀಪದ ಮಾರುತಿ ದೇಗುಲದಲ್ಲಿ ಆಂಜನೇಯನಿಗೆ ರುದ್ರಾಭಿಷೇಕ ಸತ್ಯನಾರಾಯಣ ಪೂಜೆ, ಪಂಚಮುಖಿ ಆಂಜನೇಯ ಬುತ್ತಿ ಪೂಜೆ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ಜರುಗಿದವು.

ಅಧಿಕ ಮಾಸದ ಪ್ರಯುಕ್ತ ದೇವಾಲಯದಲ್ಲಿ ವಿಶೇಷ ಅಲಂಕಾರ ಮಾಡಲಾಗಿದ್ದು, ಭಕ್ತರು ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದು ಆಶೀರ್ವಾದ ಪಡೆದರು. ದೇವಸ್ಥಾನದಲ್ಲಿ ಪೂಜೆ, ಆರತಿ ಹಾಗೂ ಪ್ರಸಾದ ವಿತರಣೆಯ ವ್ಯವಸ್ಥೆ ಮಾಡಲಾಗಿತ್ತು. ದೇವಸ್ಥಾನದ ಅರ್ಚಕ ಶ್ರೀಧರ ಜೋಶಿ, ಎಚ್. ಎನ್. ಪಾಟೀಲ, ಮಾಲತೇಶ ಹೊರ್ತಿ ಪೂಜಾಕಾರ್ಯ ನಿರ್ವಹಿಸಿದರು. ಬುತ್ತಿಪೂಜೆಯನ್ನು ಲಿಂಗರಾಜ ಕುಡವಕ್ಕಲ ಮಾಡಿಸಿದರು. ದೇವಸ್ಥಾನದ ಕಮಿಟಿ ಸದಸ್ಯರು ಹಾಗೂ ಭಕ್ತರು ಇದ್ದರು.



ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಣೆ



ಹುಬ್ಬಳ್ಳಿ: ಹಿಮವತ್ ಕೇದಾರ್ ವೈರಾಗ್ಯ ಸಿಂಹಾದಿಸಾದಿಶ್ವರ 1008 ಜಗದ್ಗುರು ರಾವತ್ ಪದವಿ ಭೂಷಿತ ಭೀಮಶಂಕರ್ ಲಿಂಗ ಶಿವಾಚಾರ್ಯ ಭಗವತ್ಪಾದರ ಜೂನ್ 1 ಜನುಮದಿನದ ಪ್ರಯುಕ್ತ ವೀರಭದ್ರೇಶ್ವರ ಕಲ್ಯಾಣ ಮಂಟಪ ಹಳೆ ಹುಬ್ಬಳ್ಳಿ ವೀರಶೈವ ಜಂಗಮ ಕ್ಷೇಮಾಭಿವೃದ್ಧಿ ಸಮಿತಿ ಹಳೆ ಹುಬ್ಬಳ್ಳಿ ವತಿಯಿಂದ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ನೋಟ್ ಬುಕ್ ,ಪೆನ್ನು ,ಪೆನ್ಸಿಲ್ ,ರಬ್ಬರ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಹಿರಿಯರು, ತಾಯಂದಿರು, ನಿರ್ಮಲ ಹದ್ದಿಮಠ ಸಮಾಜದ ಜೊತೆಕೈಜೋಡಿಸಿ ನೋಟ್ ಬುಕ್ ಪೆನ್ ವಿತರಣೆ ಮಾಡಿದರು. ಹಿರಿಯರಾದ ಎಸ್.ಎಂ. ರುದ್ರಯ್ಯ, ರಾಚಯ್ಯ, ಬಸವರಾಜ್ ಚಿಕ್ ಮಠ್, ಚಂದ್ರಶೇಖರ್ ಕಳ್ಳಿಮಠ, ಬಸಯ್ಯ ಹಡಗಲಿಮಠ್, ಮಲ್ಲಿಕಾರ್ಜುನಯ್ಯ ಸಾಲಿಮಠ, ಬಸವಣ್ಣಯ್ಯ ಚಿಕ್ಕ ಮಠ, ಶಿವಕುಮಾರ್, ಪ್ರಶಾಂತ್, ನರೇಂದ್ರ ಮಠ ಚರಂತಿಮಠ , ಗುರುಗಳಾದ ಶಿವಾನಂದ್ ಜಂಬಗಿ ಮಠ, ಮಲ್ಲಯ್ಯ ಮುರಗಂಡ ಮಠ, ಗಂಗಯ್ಯ ಗಂಟಿಮಠ, ಮಹೇಶ್ ಚಿಕ್ಕವೀರ ಮಠ, ವಿರಯ ಸ್ವಾಮಿ ಸಾಲಿಮಠ, ಚನ್ನಬಸಯ್ಯ ಹಿರೇಮಠ್, ಮಹೇಶ್ ಹಿರೇಮಠ್, ಬಸಯ್ಯ ಹಿರೇಮಠ, ಪ್ರಕಾಶ್ ಗದಿಗೆಪ್ಪನವರ, ಕಲ್ಲಯ್ಯ ಕುರುಡಗಿರಿ, ನಿರ್ಮಲ ಹದ್ದಿಮಠ, ಪದ್ಮಾ , ನಿರ್ಮಲ ಹಿರೇಮಠ ಇದ್ದರು.

ಆಟೋ ರಿಕ್ಷಾ ಚಾಲಕರಿಂದ ಪ್ರತಿಭಟನೆ

ಹುಬ್ಬಳ್ಳಿ: ನಗರದಲ್ಲಿ ಪರವಾನಗಿ ಇಲ್ಲದೆ ಓಲಾ, ಉಬರ್, ರ್‍ಯಾಪಿಡೋ ಹಾಗೂ ಖಾಸಗಿ ಕಂಪನಿ ಅವರ ವಾಹನಗಳು ಓಡಾಡುತ್ತಿದ್ದು ಇಂತಹ ವಾಹನಗಳ ಮೇಲೆ ಸಾರಿಗೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಉತ್ತರ ಕರ್ನಾಟಕ ಆಟೋ ರಿಕ್ಷಾ ಚಾಲಕರ ಸಂಘದ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಮಂಗಳವಾರ ನಗರದ ಚನ್ನಮ್ಮ ವೃತ್ತದಿಂದ ಮಿನಿ ವಿಧಾನಸೌಧದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪರವನಿಗೆ ಪಡೆಯದೆ ಓಡಾಡುವ ಖಾಸಗಿ ಕಂಪನಿಗಳ ತಡೆಯಬೇಕು. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಶಕ್ತಿ ಯೋಜನೆ, ಅಗತ್ಯ ವಸ್ತುಗಳು, ಬಿಡಿ ಭಾಗಗಳು, ಪೆಟ್ರೋಲ್ ಡೀಸೆಲ್ ಹಾಗೂ ಎಲ್‌ಪಿಜಿ, ಸಿಎನ್‌ಜಿ ಬೆಲೆ ಏರಿಕೆಯಿಂದ ಕುಟುಂಬ ನಿರ್ವಹಣೆ ಕಷ್ಟವಾಗಿದೆ. ಸಾಲ ಪಡೆದು ಆಟೋ ರಿಕ್ಷಾ ಓಡಿಸುವ ಕೆಲಸ ಮಾಡುತ್ತಿದ್ದು, ಕಂತು ತುಂಬಲಾಗದೆ ಸಾಕಷ್ಟು ತೊಂದರೆಯಾಗಿದೆ. ಇಂತಹ ಸಮಯದಲ್ಲಿ ಖಾಸಗಿ ಕಂಪನಿಗಳು ಪರವನಗಿ ಇಲ್ಲದೇ ಓಡಾಟ ಮಾಡುತ್ತಿದ್ದು, ಆಟೋ ಚಾಲಕರಿಗೆ ಮತಷ್ಟು ಸಂಕಷ್ಟ ಎದುರಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಸಂಘದ ರಾಜ್ಯಾಧ್ಯಕ್ಷ ಶೇಖರಯ್ಯ ಮಠಪತಿ, ಪ್ರಧಾನ ಕಾರ್ಯದರ್ಶಿ ಜೀವನ ಉತ್ಕುರಿ, ದಾವಲಸಾಬ ಕುರಹಟ್ಟಿ, ಮುರಳಿ ಇಂಗಳಹಳ್ಳಿ, ಲೋಕೇಶ ಚಿಕ್ಕಮಗಳೂರ ಸೇರಿದಂತೆ ಅನೇಕರಿದ್ದರು.



ಮೇಯರ್ ಸ್ಥಾನ ಎಸ್ಸಿ ಮಹಿಳೆಗೆ | ಉಪಮೇಯರ್ ಸಾಮಾನ್ಯ ಮಹಿಳೆಗೆ

ಪ್ರಥಮ ಪ್ರಜೆಯ ಮೀಸಲಾತಿ ಫಿಕ್ಸ್

▸ ಮಹಾಂತೇಶ ಕಣವಿ

◆ **ಧಾರವಾಡ:** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ 24ನೇ ಅವಧಿ ಮೇಯರ್ ಹಾಗೂ ಉಪಮೇಯರ್ ಅವಧಿ ಮುಗಿಯಲು 15 ದಿನಗಳ ಬಾಕಿ ಇದ್ದಾಗಲೇ, ಮುಂದಿನ ಗದ್ದುಗೆ ಅಲಂಕರಿಸುವ ಪ್ರಥಮ ಪ್ರಜೆ ಯಾರೆಂಬ? ಕುತೂಹಲಕ್ಕೆ ತೆರೆ ಬಿದ್ದಿದೆ.

ರಾಜ್ಯ ಸರ್ಕಾರ ಕರ್ನಾಟಕ ಮುನ್ಸಿಫಲ್ ಕಾರ್ಪೋರೇಷನ್ ಕಾಯ್ದೆಗಳು ಮತ್ತು ನಿಯಮಗಳ ಅಡಿಯಲ್ಲಿ ಬಹುನಿರೀಕ್ಷಿತ 25ನೇ ಅವಧಿಯ ಮೇಯರ್ ಮತ್ತು ಉಪಮೇಯರ್ ಸ್ಥಾನದ ಮೀಸಲಾತಿಯನ್ನು ಈಗಾಗಲೇ ಅಧಿಕೃತವಾಗಿ ಘೋಷಿಸಿದೆ.

ಈ ಬಾರಿ ಅವಳಿನಗರದ ಚುಕ್ಕಾಣಿ ಸಂಪೂರ್ಣ ಮಹಿಳಾ ಮಣಿಗಳ ಪಾಲಾಗಲಿದ್ದು, ಮೇಯರ್ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಹಾಗೂ ಉಪಮೇಯರ್ ಸ್ಥಾನವನ್ನು ಸಾಮಾನ್ಯ ಮಹಿಳೆಗೆ ಮೀಸಲಾಗಿಟ್ಟು ಸರ್ಕಾರ ಅಧಿಕೃತವಾಗಿ ಆದೇಶ ಹೊರಡಿಸಿದೆ.

ಒಟ್ಟು 82 ವಾರ್ಡ್ ಒಳಗೊಂಡ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಧಾರವಾಡ 26 ಹಾಗೂ ಹುಬ್ಬಳ್ಳಿಯ 56 ವಾರ್ಡ್ ಸೇರಿವೆ. ಕಳೆದ ಅವಧಿಯ ಆಡಳಿತ ಮುಕ್ತಾಯದ ಹಂತದಲ್ಲಿ ಮುಂದಿನ ಪಟ್ಟದ ರಾಜಕೀಯ ಲೆಕ್ಕಾಚಾರಗಳು ಜೋರಾಗಿದ್ದವು.



ಸದಸ್ಯರ ಮಧ್ಯೆ ಪೈಪೋಟಿ

ಮೇಯರ್ ಸ್ಥಾನಕ್ಕೆ ಹುಬ್ಬಳ್ಳಿಯ ಚಂದ್ರಿಕಾ ಮೇಸ್ತ್ರಿ ಹಾಗೂ ದುರ್ಗಮ್ಮ ಬಿಜವಾಡ ಅವರ ಮಧ್ಯೆ ಪೈಪೋಟಿ ಇದೆ. ಆದರೆ, ಈ ಹಿಂದೆಯೇ ದುರ್ಗಮ್ಮ ಬಿಜವಾಡ ಅವರಿಗೆ ಉಪಮೇಯರ್ ಸ್ಥಾನ ನೀಡಿದ ಹಿನ್ನೆಲೆ ಚಂದ್ರಿಕಾ ಮೇಸ್ತ್ರಿಗೆ ಮೇಯರ್ ಪಟ್ಟ ಖಚಿತ ಎಂಬ ಗುಮಾನಿ ಕೇಳಿಬರುತ್ತಿದೆ. ಇನ್ನೂ ಉಪಮೇಯರ್ ಸ್ಥಾನಕ್ಕೆ ಧಾರವಾಡದ ಚಂದ್ರಕಲಾ ಕೊಟಬಾಗಿ, ಸುನಿತಾ ಮಾಳೋದಕರ, ರತ್ನಬಾಯಿ ನಾಝರೆ ಮಧ್ಯೆ ತೀವ್ರ ಪೈಪೋಟಿ ಏರ್ಪಡುವುದು ಕೂಡ ಅಷ್ಟೇ ಖಚಿತವಾಗಿದೆ.

ಸದ್ಯ ಸರ್ಕಾರ ಪ್ರಕಟಿಸಿರುವ ಮೀಸಲಾತಿ ಪಾಲಿಕೆಯ ರಾಜಕೀಯ ವಲಯದಲ್ಲಿ ಹೊಸ ಸಂಚಲನ ಮೂಡಿಸಿದೆ. ಈ ಬಾರಿ ಮೇಯರ್ ಪೀಠವು ಎಸ್ಸಿ ಮಹಿಳೆ ಪಾಲಾಗಿ, ಗೆದ್ದಿರುವ ಎಸ್‌ಸಿ ಮಹಿಳಾ ಕಾರ್ಪೊರೇಟರ್‌ಗಳಲ್ಲಿ ಹೊಸ ಆಶಾವಾದ ಚಿಗುರೊಡೆದಿದೆ.

ದಿಗಂತ ವಿಶೇಷ

ಅದೇ ರೀತಿ ಉಪಮೇಯರ್ ಸ್ಥಾನವು ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದು, ಯಾವುದೇ ವರ್ಗದ ಮಹಿಳಾ ಅಭ್ಯರ್ಥಿಗೂ ಈ ಸ್ಥಾನಕ್ಕೇರಲು ಮುಕ್ತ ಅವಕಾಶ ಸಿಕ್ಕಂತಾಗಿದೆ. ಪ್ರಸ್ತುತ ಈ ಮೀಸಲಾತಿಯು ಆಕಾಂಕ್ಷಿಗಳಲ್ಲಿ ಜಿದ್ದಾಜಿದ್ದಿಗೂ ಸಹ ಕಾರಣವಾಗಿದೆ.

ಮೀಸಲಾತಿ ಪ್ರಕಟಣೆಯಿಂದ ಅವಳಿನಗರದ ರಾಜಕೀಯ ಪಕ್ಷಗಳಲ್ಲಿ ಗರಂ ಹವೆ ಶುರುವಾಗಿದೆ. ಮೇಯರ್ ರೇಸ್‌ನಲ್ಲಿರುವ ಪಾಲಿಕೆ ಎಸ್ಸಿ ಮಹಿಳಾ ಹಾಗೂ ಉಪಮೇಯರ್ ಪಟ್ಟದ ಸಾಮಾನ್ಯ ಮಹಿಳೆಯರು ಸಹ ಪಕ್ಷದ ನಾಯಕರ ಭೇಟಿಗೆ ತಂತ್ರ ರೂಪಿಸಿದ್ದಾರೆ.

ಈ 25ನೇ ಅವಧಿಯು ಅತ್ಯಂತ ಪ್ರಮುಖವಾಗಿದ್ದು, ಹೊಸದಾಗಿ ಆಯ್ಕೆಯಾದ ಮಹಿಳಾ ಸಾರಥಿಗಳು ಹುಬ್ಬಳ್ಳಿ-ಧಾರವಾಡದ ಮೂಲಸೌಕರ್ಯ, ಕುಡಿಯುವ ನೀರು-ರಸ್ತೆಗಳ ಸುಧಾರಣೆಗೆ ಹೇಗೆ ಕೆಲಸ ಮಾಡಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ.

ರೈತರಿಗೆ ಕೃಷ್ಣಮೃಗಗಳ ಸವಾಲ್

▸ ಕಿರಣ ಮಾಸಣಗಿ

◆ **ಹಾವೇರಿ:** ಒಕ್ಕಲಿಗ ಒಕ್ಕದಿರೆ, ಬಿಕ್ಕುವುದು ಜಗವೆಲ್ಲ ಎಂಬ ನಾಣ್ಣುಡಿ ಒಂದೆಡೆಯಾದರೆ, ಇದೀಗ ಅನ್ನದಾತರ ಸಂಕಷ್ಟಗಳ ಸಾಲು ಮುಗಿಯುವುದೇ ಇಲ್ಲವೇನೋ ಎಂಬ ಆತಂಕ ನಿತ್ಯ ನಿರಂತರ ಎಂಬಂತಾಗಿದೆ.

ಮಳೆ ಬಂದರೆ, ಬಿತ್ತನೆ ಬೀಜ ಗೊಬ್ಬರಕ್ಕೆ ಹೋರಾಟ, ಮಳೆ ಕೊರತೆಯಾದರೆ ದೇವರಲ್ಲಿ ಭಜನೆ, ಪ್ರಕೃತಿ ಮೇಲೆ ಮುನಿಸು. ಆದರೆ, ಇದೀಗ ಮುಂಗಾರು ಪೂರ್ವ ಮಳೆ ತಕ್ಕಮಟ್ಟಿಗೆ ಸುರಿದಿದ್ದು, ಜಿಲ್ಲೆಯಾದ್ಯಂತ ಅಲ್ಲಲ್ಲಿ ರೈತರು ಮೆಕ್ಕೆಜೋಳ, ದ್ವಿದಳ ಧಾನ್ಯಗಳಾದ ಹೆಸರು, ಅಲಸಂದೆ, ಸೋಯಾಬಿನ್ ಹಾಗೂ ಕೆಲವೆಡೆ ತರಕಾರಿ ಸೇರಿದಂತೆ ತೋಟಗಾರಿಕೆ ಬೆಳೆಗಳನ್ನು ಬಿತ್ತನೆ ಮಾಡಿ ಪಾಲನೆ ಪೋಷಣೆಯಲ್ಲಿ ತೊಡಗಿದ್ದಾರೆ.

ಆದರೆ, 25-40 ದಿನಗಳ ಈ ಬೆಳೆಗೆ ಇದೀಗ ಜಿಲ್ಲೆಯಾದ್ಯಂತ ಕೃಷ್ಣಮೃಗಗಳ ಉಪಟಳ ಹೆಚ್ಚಿದೆ. ಇದರಿಂದಾಗಿ ಬಿತ್ತನೆ ಮಾಡಿದ ಬೆಳೆ ಉತ್ತಮವಾಗಿ ಚಿಗಿತು ಏಳ್ಗೆಯಾಗಬೇಕೆನ್ನುವ ಹೊತ್ತಿನಲ್ಲೇ ಕೃಷ್ಣಮೃಗಗಳು ತಿನ್ನುವಿಕೆ, ಕಚ್ಚುವಿಕೆ ಮತ್ತು ಓಡಾಟದಿಂದ ಹಾಳಾಗುವ ಭೀತಿ ಎದುರಾಗಿದೆ.

ಅಲ್ಲದೇ, ಈ ಬೆಳೆಗಳಲ್ಲಿ ತುದಿ ಚಿಗುರನ್ನು ಕೃಷ್ಣಮೃಗಗಳು ಕಚ್ಚಿದಲ್ಲಿ ಆ ಸಸ್ಯ ಸಂಪೂರ್ಣವಾಗಿ ಒಣಗಿಹೋಗುತ್ತದೆ. ಹೀಗಾದಲ್ಲಿ ರೈತರ ನಿರೀಕ್ಷೆಯ ಫಸಲಿನ ಕನಸು ಕನಸಾಗಿಯೇ ಉಳಿಯಲಿದೆ.



> ಕಾಡು ಪ್ರಾಣಿಗಳಿಂದ ಬೆಳೆ ಹಾನಿ ಸಂಭವಿಸಿದಲ್ಲಿ ಅರಣ್ಯ ಇಲಾಖೆಯಿಂದ ಪರಿಹಾರ ನೀಡಲು ಅವಕಾಶವಿದೆ. ಸಂಬಂಧಿಸಿದ ಫಾರೆಸ್ಟರ್ ಕಚೇರಿಗೆ ಉತಾರ ಸಹಿತ ಅರ್ಜಿ ಸಲ್ಲಿಸಿದಲ್ಲಿ ಪರಿಹಾರ ನೀಡಲಾಗುವುದು.
> ■ ಸಿದ್ದಮ್ಮ ಕರಿಗಾರ, ಆರ್‌ಎಫ್‌ಒ

> ಪ್ರತಿ ವರ್ಷ ಬೆಳಿ ಚಿಗರೋ ಹೊತ್ತಿನ್ಯಾಗ ಈ ಜಿಂಕಿ, ಕೃಷ್ಣಮೃಗಗಳು ಕಾಡತಾವ್ರಿ. ಹೊಡಿಯಾಂಗಿಲ್ಲ, ಬಿಡಾಂಗಿಲ್ಲ, ಸುಮ್ನ ತಿಂದ್ ಹೋದ್ರ ಚಿಂತಿಲ್ಲ, ಬೆಳಿನ ಹಾಳ ಮಾಡತಾವ್, ಇನ್ ಕೆಲವೊಮ್ಮೆ ಅವು ಗುದ್ದಾಟಕ್ಕೆ ಇಳಿದು ಇಡೀ ಹೊಲದಾನ ಬೆಳಿ ಹಾಳ ಮಾಡತಾವ್. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನೋರ ಅರಣ್ಯದ ಗಡಿಗೆ ಬೇಲಿ ಹಾಕಿದ್ರ, ನಮ್ ಬೆಳಿ ಉಳಿತಾದ.
> ■ ಸಿದ್ದಲಿಂಗಪ್ಪ ಮರಿರೇವಣ್ಣನವರ, ನಾಗನೂರ ರೈತ

ಅಲ್ಲದೇ ಈ ಕೃಷ್ಣಮೃಗಗಳು ನಿರ್ವಹಣೆ ಸವಾಲಿನದ್ದಾಗಿದ್ದು, ಇದೀಗ ದಿನಂಪ್ರತಿ ತಮ್ಮ ಜಮೀನುಗಳಲ್ಲಿನ ಬೆಳೆಗಳನ್ನು ಉಳಿಸಿಕೊಳ್ಳಲು ಬೆಳೆಗಳನ್ನು ಕಾಯುವುದು ಅನಿವಾರ್ಯವಾಗಿದೆ. ಅಲ್ಲದೇ ಕೃಷ್ಣಮೃಗಗಳಿಗೆ ತೊಂದರೆ ನೀಡುವಂತೆಯೂ ಇಲ್ಲ. ಇನ್ನು ಜಿಲ್ಲೆಯಾದ್ಯಂತ ಕೃಷ್ಣಮೃಗಗಳು ಇದ್ದು, ಹಾವೇರಿ, ಶಿಗ್ಗಾಂವ, ಸವಣೂರ, ರಾಣೇಬೆನ್ನೂರ, ರಟ್ಟೀಹಳ್ಳಿ, ಹಿರೇಕೆರೂರ, ಬ್ಯಾಡಗಿ ಮತ್ತು ಹಾನಗಲ್ಲ ತಾಲೂಕುಗಳಲ್ಲಿ ಮಳೆಗಾಲದ ಆರಂಭದಲ್ಲಿ ಮತ್ತು ಹಿಂಗಾರು ಆರಂಭದಲ್ಲಿ ಬೆಳೆಗಳ ಚಿಗುರುವ ಹಂತದಲ್ಲಿದ್ದಾಗ ಇವುಗಳನ್ನು ಕಾಯುವುದು ಅನಿವಾರ್ಯವಾಗಿದೆ. ಇದೀಗ, ಕೃಷ್ಣಮೃಗಗಳಿಂದ ತಮ್ಮ ಬೆಳೆಗಳನ್ನು ಉಳಿಸಿಕೊಡುವಂತೆ ರೈತರು ಅರಣ್ಯ ಇಲಾಖೆ ಸಿಬ್ಬಂದಿಗೆ ಒತ್ತಡ ಹೇರುತ್ತಿದ್ದು, ರೈತರೊಟ್ಟಿಗೆ ಅರಣ್ಯ ಸಿಬ್ಬಂದಿಗೂ ಸಂದಿಗ್ಧತೆ ಎದುರಿಸುವಂತಾಗಿದೆ.

ಗುಲ್ಬರ್ಗಾ ಮಿಸ್ಟಿಕ್ಸ್ ನೂತನ ಜರ್ಸಿ ಅನಾವರಣ

ಜೂ.20ರಿಂದ ಟಿ-20 ಕ್ರಿಕೆಟ್ ಮಹಾಸಮರ

◆ **ಕಲಬುರಗಿ:** ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಯೋಜಿಸುತ್ತಿರುವ ಪ್ರತಿಷ್ಠಿತ ಮಹಾರಾಜ ಟ್ರೋಫಿ ಟಿ-20 ಟೂರ್ನಿಯ 5ನೇ ಆವೃತ್ತಿ ಇದೇ ಜೂನ್ 20ರಿಂದ ಜುಲೈ 12ರ ವರೆಗೆ ಮೈಸೂರು, ಹುಬ್ಬಳ್ಳಿ ಹಾಗೂ ಬೆಂಗಳೂರು ನಗರಗಳಲ್ಲಿ ನಡೆಯಲಿದ್ದು, ರಾಜ್ಯದ ಯುವ ಕ್ರಿಕೆಟಿಗರಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಉತ್ತಮ ವೇದಿಕೆಯಾಗಲಿದೆ ಎಂದು ಕೆಎಸ್‌ಸಿಎ ಉಪಾಧ್ಯಕ್ಷ ಸುಜಿತ್ ಸೋಮಸುಂದರ್ ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಕೆಎಸ್‌ಸಿಎ ಹಾಗೂ ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ವತಿಯಿಂದ ಆಯೋಜಿಸಿದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಂಡದ ನೂತನ ಜರ್ಸಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಈ ಬಾರಿ ಭಾರತ ತಂಡದ ಅನುಭವಿ ಆಟಗಾರ ಹಾಗೂ ಎರಡು ಬಾರಿ ಐಪಿಎಲ್ ಚಾಂಪಿಯನ್ ಆಗಿರುವ ಮನೀಷ್ ಪಾಂಡೆ 12.75 ಲಕ್ಷ ರೂ. ಮೊತ್ತಕ್ಕೆ ತಂಡದ ಪ್ರಮುಖ ಆಟಗಾರರಾಗಿ ಸೇರ್ಪಡೆಯಾಗಿದ್ದಾರೆ. ಅವರೊಂದಿಗೆ ಕರ್ನಾಟಕದ ಆಲ್ ರೌಂಡರ್ ಮ್ಯಾಕ್‌ನೀಲ್ ನೊರೊನ್ಹಾ, ಅನುಭವಿ ವಿಕೆಟ್ ಕೀಪರ್-ಬ್ಯಾಟರ್ ಬಿ.ಆರ್. ಶರತ್, ಪ್ರಥಮ ದರ್ಜೆ ಕ್ರಿಕೆಟಿಗರಾದ ರೋನಿತ್ ಗಜಾನನ್ ಮೋರೆ ಹಾಗೂ ಮೇಲು ಕ್ರಾಂತಿ ಕುಮಾರ್ ತಂಡದ ಬಲ ಹೆಚ್ಚಿಸಲಿದ್ದಾರೆ ಎಂದು ಹೇಳಿದರು.

ಮಹಾರಾಜ ಟ್ರೋಫಿ ರಾಜ್ಯದ ಯುವ ಪ್ರತಿಭೆಗಳಿಗೆ ಹಿರಿಯ ಆಟಗಾರರೊಂದಿಗೆ ಆಡಲು ಅವಕಾಶ ಕಲ್ಪಿಸುವ ಮೂಲಕ ಅವರ ಕೌಶಲ್ಯ ವೃದ್ಧಿಗೆ ನೆರವಾಗಲಿದೆ. ರಾಜ್ಯದ ಕ್ರಿಕೆಟ್ ಪರಿಸರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕೆಎಸ್‌ಸಿಎ ಹಾಗೂ ಎಲ್ಲಾ ಫ್ರಾಂಚೈಸಿಗಳು ಶ್ರಮಿಸುತ್ತಿವೆ ಎಂದು ತಿಳಿಸಿದರು.

ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ಸಹಮಾಲೀಕರಾದ ಸಯ್ಯದ್ ಮುಸ್ತಫಾ ಅಲ್ ಹುಸೇನಿ, ನಿಲ್ ಮೈಕಲ್ ಜೋಸೆಫ್, ಮಹೇಶ್ ಹರಿಹರನ್, ನಿರ್ದೇಶಕ ಮೀರ್ ರಾವುಫುದ್ದಿನ್ ಅಲಿ ಖಾನ್, ತಂಡದ ನಾಯಕ ಮನೀಷ್ ಪಾಂಡೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.



> ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕ್ರಿಕೆಟ್ ಅಭಿವೃದ್ಧಿಪಡಿಸುವ ಉದ್ದೇಶ ಕೆಎಸ್‌ಸಿಎಗಿದೆ. ಕಲಬುರಗಿಯ ಕ್ರೀಡಾಂಗಣದ ಸೌಲಭ್ಯಗಳು ಹಾಗೂ ಆಟಗಾರರ ಭದ್ರತೆಯನ್ನು ಪರಿಶೀಲಿಸಿ ಭವಿಷ್ಯದಲ್ಲಿ ಇಲ್ಲಿ ಪ್ರಮುಖ ಪಂದ್ಯಗಳ ಆಯೋಜನೆ ಕುರಿತು ಸೂಕ್ತ ಚಿಂತನೆ ನಡೆಸುತ್ತೇವೆ.
> ■ ಸುಜಿತ್ ಸೋಮಸುಂದರ್, ಉಪಾಧ್ಯಕ್ಷ, ಕೆಎಸ್‌ಸಿಎ

> ಬೆಂಗಳೂರಿಗೆ ಮಾತ್ರ ಸೀಮಿತವಾಗಿರುವ ದೊಡ್ಡ ಪಂದ್ಯಗಳು ಕಲಬುರಗಿಗೂ ಬರಬೇಕು. ಮಹಾರಾಜ ಟ್ರೋಫಿ ಹಾಗೂ ರಣಜಿ ಪಂದ್ಯಗಳು ಇಲ್ಲಿ ನಡೆದರೆ ಸಾವಿರಾರು ಯುವಕರಲ್ಲಿ ಹೊಸ ಕನಸು ಮೂಡುತ್ತದೆ. ಇದು ಕೇವಲ ಕ್ರೀಡಾಂಗಣದ ಬೇಡಿಕೆಯಲ್ಲ, ಈ ಭಾಗದ ಅಭಿವೃದ್ಧಿಯ ಪ್ರಶ್ನೆಯಾಗಿದೆ.
> ■ ಡಾ.ಸೈಯದ್ ಮಹಮ್ಮದ್ ಅಲಿ ಅಲ್ ಹುಸೇನಿ, ಮಾಲೀಕ, ಗುಲ್ಬರ್ಗಾ ಮಿಸ್ಟಿಕ್ಸ್

ಸಿಯುಕೆನಲ್ಲಿ ಪಿಜಿ ಪ್ರವೇಶಕ್ಕೆ


'ಮೆರಿಟ್ ಲಿಸ್ಟ್ ಜನರೇಷನ್ ವೆಬ್ ಪೋರ್ಟಲ್'ಗೆ ಚಾಲನೆ

◆ **ಕಲಬುರಗಿ:** ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ (ಸಿಯುಕೆ) 2026?27ನೇ ಶೈಕ್ಷಣಿಕ ವರ್ಷದ ಸ್ನಾತಕೋತ್ತರ (ಪಿಜಿ) ಪ್ರವೇಶ ಪ್ರಕ್ರಿಯೆಯನ್ನು ಮತ್ತಷ್ಟು ಪಾರದರ್ಶಕ, ನಿಖರ ಹಾಗೂ ತಂತ್ರಜ್ಞಾನ ಆಧಾರಿತಗೊಳಿಸುವ ಉದ್ದೇಶದಿಂದ 'ಮೆರಿಟ್ ಲಿಸ್ಟ್ ಜನರೇಷನ್ ವೆಬ್ ಪೋರ್ಟಲ್'ಗೆ ಚಾಲನೆ ನೀಡಲಾಯಿತು.

ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಪೋರ್ಟಲ್ ಉದ್ಘಾಟಿಸಿ ಮಾತನಾಡಿ, ಹೊಸ ವ್ಯವಸ್ಥೆಯಿಂದ ಪ್ರವೇಶ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ದಕ್ಷತೆ ಹಾಗೂ ನಿಖರತೆ ಹೆಚ್ಚಲಿದ್ದು, ವಿದ್ಯಾರ್ಥಿಗಳಿಗೆ ವೇಗವಾದ ಮತ್ತು ದೋಷರಹಿತ ಪ್ರವೇಶ ವ್ಯವಸ್ಥೆ ದೊರೆಯಲಿದೆ ಎಂದು ತಿಳಿಸಿದರು. ಜೊತೆಗೆ ಅಧ್ಯಾಪಕರು ಹಾಗೂ ಪ್ರವೇಶ ಸಂಯೋಜಕರ ಕಾರ್ಯಭಾರ ಮತ್ತು ಸಮಯದ ಒತ್ತಡವೂ ಕಡಿಮೆಯಾಗಲಿದೆ ಎಂದು ಹೇಳಿದರು.

ನೂತನ ವೆಬ್ ಆಧಾರಿತ ಅಪ್ಲಿಕೇಶನ್‌ನಲ್ಲಿ ವಿಭಾಗವಾರು ಹಾಗೂ ಕಾರ್ಯಕ್ರಮವಾರು ಸೀಟುಗಳ ಹಂಚಿಕೆ, ಪ್ರವೇಶ ಸುತ್ತುಗಳು, ವರ್ಗ ಮತ್ತು ಜಾತಿವಾರು ಮೀಸಲಾತಿ ಮಾಹಿತಿ ಸೇರಿದಂತೆ ಮೆರಿಟ್ ಆಧಾರಿತ ಮಾಹಿತಿಯನ್ನು ಸ್ವಯಂಚಾಲಿತವಾಗಿ ಸಂಸ್ಕರಿಸಿ ಅಂತಿಮ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವ ವ್ಯವಸ್ಥೆ ಅಳವಡಿಸಲಾಗಿದೆ.

ಇದರಿಂದ ಮಾನವೀಯ ಹಸ್ತಕ್ಷೇಪ ಕಡಿಮೆಯಾಗುವ ಜೊತೆಗೆ ಪ್ರವೇಶಾತಿ ಪ್ರಕ್ರಿಯೆಯಲ್ಲಿನ ದೋಷಗಳನ್ನೂ ತಗ್ಗಿಸಲು ಸಾಧ್ಯವಾಗಲಿದೆ ಎಂದರು.



ಕಾರ್ಯಕ್ರಮದ ಅಂಗವಾಗಿ ಅಧ್ಯಾಪಕರು ಹಾಗೂ ಪ್ರವೇಶ ಸಂಯೋಜಕರಿಗೆ ಪೋರ್ಟಲ್ ಬಳಕೆ ಕುರಿತು ತರಬೇತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಕುಲಸಚಿವ ಪ್ರೊ.ಆರ್.ಆರ್. ಬಿರಾದಾರ್, ಪರೀಕ್ಷಾ ನಿಯಂತ್ರಕ ಪ್ರೊ.ಭರತ್ ಕುಮಾರ್, ಸ್ನಾತಕೋತ್ತರ ಪ್ರವೇಶ ಸಂಯೋಜಕ ಪ್ರೊ.ಜಿ.ಆರ್.ಅಂಗಡಿ, ಪದವಿ ಪ್ರವೇಶ ಸಂಯೋಜಕ ಡಾ.ಪರಶುರಾಮ ಎಂ.ಕಾಂಬಳೆ, ಪ್ರವೇಶಾತಿ ವಿಭಾಗದ ಅಧ್ಯಕ್ಷ ಪ್ರೊ.ಕೆ.ಹನುಮೇಗೌಡ, ಸಮಾಜ ಕಾರ್ಯ ವಿಭಾಗದ ಹಿರಿಯ ಅಧ್ಯಾಪಕ ಪ್ರೊ.ಚನ್ನವೀರ, ಸಮರ್ಥ್ ಪೋರ್ಟಲ್ ತಾಂತ್ರಿಕ ಸಿಬ್ಬಂದಿಗಳಾದ ಶ್ರವಣಕುಮಾರ್ ಹಾಗೂ ಸುರಜಿತ್ ಸೇರಿದಂತೆ ವಿವಿಧ ವಿಭಾಗಗಳ ಡೀನ್‌ಗಳು, ಮುಖ್ಯಸ್ಥರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ತಂಪೆರೆದ ಮಳೆ: ರೈತರ ಮೊಗದಲ್ಲಿ ಮಂದಹಾಸ

◆ **ಹಾವೇರಿ:** ಕಳೆದ ಒಂದು ವಾರದಿಂದ ಜಿಲ್ಲೆಯಾದ್ಯಂತ ಕಣ್ಮರೆಯಾಗಿದ್ದ ಮಳೆ ಮಂಗಳವಾರ ಸಂಜೆ ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

ಮಳೆ ಕೊರತೆಯಿಂದ ಕಂಗಾಲಾಗಿದ್ದ ರೈತರ ಮೊಗದಲ್ಲಿ ಹರ್ಷ ಮೂಡಿಸಿದ್ದು, ಬೆಳೆಗಳಿಗೆ ಜೀವಕಳೆ ಬಂದಂತಾಗಿದೆ. ಜೂನ್ ಮೊದಲ ವಾರದಲ್ಲಿ ಸುರಿದಿದ್ದ ಮಳೆಯಿಂದಾಗಿ

ಜಿಲ್ಲೆಯಲ್ಲಿ ಈಗಾಗಲೇ ಶೇ.65ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿದೆ. ರೈತರು ಮೆಕ್ಕೆಜೋಳ, ಸೋಯಾಬಿನ್, ಬತ್ತ, ಹತ್ತಿ, ಮೆಣಸಿನಕಾಯಿ ಸೇರಿದಂತೆ ವಿವಿಧ ಬೆಳೆಗಳ ಬಿತ್ತನೆ ಮಾಡಿದ್ದರು. ಆದರೆ ಕಳೆದ ಕೆಲ ದಿನಗಳಿಂದ ಮಳೆ ಸಂಪೂರ್ಣ ಕೈಕೊಟ್ಟಿದ್ದರಿಂದ ಬಿತ್ತಿದ ಬೀಜಗಳು ಮೊಳಕೆಯೊಡೆಯುವ ಬಗ್ಗೆ ಆತಂಕ ಎದುರಾಗಿತ್ತು.

ಮಳೆಯ ನಿರೀಕ್ಷೆಯಲ್ಲಿ ರೈತರು ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ ಉತ್ತಮ ಮಳೆಯಾಗಲಿ ಎಂದು ಪ್ರಾರ್ಥಿಸುತ್ತಿದ್ದರು. ಈ ನಡುವೆ ಮಂಗಳವಾರ ಸುರಿದ ಉತ್ತಮ ಮಳೆಯಿಂದ ಮೊಳಕೆಯೊಡೆದ ಬೆಳೆಗಳಿಗೆ ಅಗತ್ಯ ತೇವಾಂಶ ದೊರೆತಿದ್ದು, ಹೊಲಗಳಲ್ಲಿ ಮತ್ತೆ ಕೃಷಿ ಚಟುವಟಿಕೆಗಳು ಗರಿಗೆದರಲಿವೆ.

ಮಳೆ ಕೊರತೆಯಿಂದ ಕೃಷಿ ಕೆಲಸಗಳು ಕುಂಠಿತಗೊಂಡಿದ್ದರೆ, ಈಗ ಸುರಿದ ಮಳೆಯಿಂದ ರೈತರು ಗೊಬ್ಬರ ಹಾಕುವುದು, ಕಳೆ ತೆಗೆಯುವುದು ಸೇರಿದಂತೆ ಮುಂದಿನ ಹಂತದ ಕೃಷಿ ಕಾರ್ಯಗಳಿಗೆ ಸಜ್ಜಾಗಿದ್ದಾರೆ. ಮಳೆ ಇದೇ ರೀತಿ ಮುಂದುವರಿದರೆ ಈ ಬಾರಿಯ ಮುಂಗಾರು ಹಂಗಾಮಿನಲ್ಲಿ ಉತ್ತಮ ಇಳುವರಿ ಪಡೆಯುವ ನಿರೀಕ್ಷೆ ವ್ಯಕ್ತವಾಗುತ್ತಿದೆ. ಮಳೆಗಾಗಿ ಕಾದು ಕುಳಿತಿದ್ದ ರೈತರಿಗೆ ಮಂಗಳವಾರ ಸುರಿದ ಮಳೆ ನೆಮ್ಮದಿ ತಂದಿದೆ.

ವಿಪಕ್ಷ ಉಪನಾಯಕ ಅರವಿಂದ ಬೆಲ್ಲದ ಸಲಹೆ

ಪ್ರಿಯಾಂಕ್ ಕೀಳು ಮಟ್ಟದ ರಾಜಕಾರಣ ಬಿಡಲಿ

◆ **ಧಾರವಾಡ:** ಪ್ರಿಯಾಂಕ್ ಖರ್ಗೆ ಅವರಿಗೆ ಗೃಹ ಇಲಾಖೆಯಲ್ಲಿ ಮಾಡಬೇಕಾದ ಸಾಕಷ್ಟು ಕೆಲಸಗಳಿವೆ. ಹೀಗಿದ್ದಾಗ ರಾಷ್ಟ್ರಮಟ್ಟದ ಖ್ಯಾತಿ ಗಳಿಸಲು ಸಣ್ಣಮಟ್ಟದ ಸ್ಟಂಟ್ ಮಾಡುತ್ತಿರುವುದಾಗಿ ವಿಧಾನಸಭೆ ವಿಪಕ್ಷದ ಉಪನಾಯಕ ಅರವಿಂದ ಬೆಲ್ಲದ ವ್ಯಂಗ್ಯವಾಡಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಹುದ್ದೆ ಅಲಂಕರಿಸಿದ ಪ್ರಿಯಾಂಕ್ ಖರ್ಗೆ, ತಮ್ಮ ಇಲಾಖೆ ಸುಧಾರಣೆಗೆ ಕ್ರಮ ಕೈಗೊಳ್ಳುವುದು ಬಿಟ್ಟು, ಬಿಟ್ಟಿ ಪ್ರಚಾರಕ್ಕೆ ಬೇಕಾಬಿಟ್ಟಿ ಹೇಳಿಕೆ ನೀಡುವುದು ಬಿಡುವಂತೆ ಸಲಹೆ ನೀಡಿದರು.

ರಾಜ್ಯದಲ್ಲಿ ಬೆಟ್ಟಿಂಗ್, ಇಸ್ಪೀಟ್, ಜೂಜಾಟ, ಡ್ರಗ್ಸ್ ಮಾಫಿಯಾ ಹೀಗೆ ಅಕ್ರಮ ಚಟುವಟಿಕೆಗಳು ಹಾವಳಿ ಎಲ್ಲೆ ಮೀರಿದೆ. ಇಂತಹ ಅಕ್ರಮಗಳಿಂದ ಅದೆಷ್ಟೋ ಕುಟುಂಬಗಳು ಬೀದಿಗೆ ಬಂದಿವೆ. ಇನ್ನಷ್ಟು ಕುಟುಂಬ ಬೀದಿಗೆ ಬೀಳುವ ಮುನ್ನ ಎಚ್ಚೆತ್ತುಕೊಳ್ಳಬೇಕು ಎಂದರು.

ರೈತರ ಭೂಮಿಗೆ ಕನ್ನ

ಬೆಂಗಳೂರಿನ ಸುತ್ತಮುತ್ತ ಅಲ್ಲಿಯೇ ಕೆಲಸ ಮಾಡುವ ಮತ್ತು ವಸತಿ ಟೌನ್‌ಶಿಪ್ ಮಾಡುವ ಅವಶ್ಯಕತೆ ಇದೆ. ಆದರೆ, ಕಾಂಗ್ರೆಸ್‌ನವರು ದುಡ್ಡು ಮಾಡಿಕೊಳ್ಳುವ ಉದ್ದೇಶದಿಂದ ತಮ್ಮ ಜಮೀನಿನ ಅಕ್ಕಪಕ್ಕದಲ್ಲಿ ರೈತರ ಫಲವತ್ತಾದ ಭೂಮಿಗೂ ಕನ್ನಡ ಹಾಕಿ, ಟೌನ್‌ಶಿಪ್ ಮಾಡುವ ಅವಶ್ಯಕತೆ ಏನಿದೆ? ಎಂದು ಅರವಿಂದ ಬೆಲ್ಲದ ಪ್ರಶ್ನಿಸಿದರು.



ಸಿದ್ಧರಾಮಯ್ಯ ಸರ್ಕಾರದ ಬೊಕ್ಕಸ ಖಾಲಿ ಮಾಡಿ, ಡಿ.ಕೆ.ಶಿವಕುಮಾರ್ ಅವರಿಗೆ ಹಸ್ತಾಂತರಿಸಿದ್ದಾರೆ. ಹೀಗಾಗಿ ಹಣ ಉಳಿಸಲು ಗೃಹಲಕ್ಷ್ಮಿ, ಇತ್ಯಾದಿ ಯೋಜನೆ ಫಲಾನುಭವಿಗಳ ಹೆಸರು ಕೈಬಿಟ್ಟು, ಜನರ ಮೂಗಿಗೆ ತುಪ್ಪ ಸವರುತ್ತಿದ್ದಾರೆ ಎಂದು ಕಟುವಾಗಿಯೇ ಟೀಕಿಸಿದರು.

ಎಸ್ಸಿ ಪಟ್ಟಿಯಿಂದ ಮತಾಂತರಿಗಳನ್ನು ಕೈಬಿಡಲು ಶಾಂತಾರಾಮ ಸಿದ್ದಿ ಒತ್ತಾಯ


• **ಬೆಂಗಳೂರು:** ಮತಾಂತರಗೊಂಡ ಬುಡಕಟ್ಟು ಸಮುದಾಯದವರಿಂದ ನಿಜವಾದ ಮೂಲ ಬುಡಕಟ್ಟಿನವರಿಗೆ ಅನ್ಯಾಯವಾಗುತ್ತಿದ್ದು, ಮತಾಂತರ ಹೊಂದಿದವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಿಂದ ಕೈಬಿಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಒತ್ತಾಯಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ದೇಶದಲ್ಲಿ 12 ಕೋಟಿ ಬುಡಕಟ್ಟು ಸಮುದಾಯದ ಜನರಿದ್ದಾರೆ, ಅವರಲ್ಲಿ 1-2 ಕೋಟಿ ಜನ ಮತಾಂತರ ಗೊಂಡಿದ್ದಾರೆ. ಗಿರಿಜನರಿಗೆ ಸಿಗಬೇಕಾದ ಸೌಲಭ್ಯಗಳನ್ನು ಮತಾಂತರಿ ಬುಡಕಟ್ಟಿನವರೇ ಹೆಚ್ಚಾಗಿ ಪಡೆದು ಕೊಳ್ಳುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಇವರು ಇತ್ತ ಬುಡಕಟ್ಟು ಹಾಗೂ ಅತ್ತ ಮತಾಂತರಗೊಂಡ ಧರ್ಮದ ಎರಡೂ ಕಡೆಯ ಸೌಲಭ್ಯಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಕೇಂದ್ರಕ್ಕೆ ಮನವಿ ಸಲ್ಲಿಕೆ: ಈ ಅನ್ಯಾಯದ ಹಿನ್ನೆಲೆಯಲ್ಲಿ ಇತ್ತೀಚೆಗೆ ದೆಹಲಿಯಲ್ಲಿ ರಾಷ್ಟ್ರಮಟ್ಟದ ಜನಜಾತಿ ಸುರಕ್ಷಾ ವೇದಿಕೆ ವತಿಯಿಂದ ಬೃಹತ್ ಸಮ್ಮೇಳನ ಆಯೋಜಿಸಲಾಗಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾಗವಹಿಸಿದ್ದ ಈ ಸಮ್ಮೇಳನದ ಬಳಿಕ, ರಾಷ್ಟ್ರಪತಿಗಳನ್ನೂ ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ. ನಾವು ಯಾವುದೇ ಧರ್ಮ ಅಥವಾ ಮತವನ್ನು ವಿರೋಧಿಸುವುದಿಲ್ಲ. ಆದರೆ, ಬೇರೆ ಧರ್ಮಕ್ಕೆ ಮತಾಂತರ ಹೊಂದಿದವರು ಇಲ್ಲಿನ ಮೂಲ ಬುಡಕಟ್ಟು ಜನರಿಗೆ ಸಿಗುವ ಸರ್ಕಾರಿ ಸೌಲಭ್ಯಗಳನ್ನು ಪಡೆಯಬಾರದು ಎನ್ನುವುದು ನಮ್ಮ ಸ್ಪಷ್ಟ ನಿಲುವು ಎಂದು ಅವರು ಪ್ರತಿಪಾದಿಸಿದರು.

ಆರ್‌ಎಸ್‌ಎಸ್ ಬಗ್ಗೆ ಪ್ರಿಯಾಂಕ್ ಖರ್ಗೆಗೇನು ಗೊತ್ತು? ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕುರಿತಾಗಿ ಸಚಿವ ಪ್ರಿಯಾಂಕ್ ಖರ್ಗೆ ಬರೆದಿರುವ ಪತ್ರದ ವಿಚಾರವಾಗಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ರಾಮ ಬಾಣ



ಪೌರ ಕಾರ್ಮಿಕರ ಬೇಡಿಕೆಗೆ ಕ್ರಮ: ಸಚಿವ ಯತೀಂದ್ರ

• **ಬೆಂಗಳೂರು:** ಪೌರ ಕಾರ್ಮಿಕರ ನೇರ ನೇಮಕಾತಿ, ಪೌರ ಕಾರ್ಮಿಕರ ಖಾಯಂ ಗೊಳಿಸುವಿಕೆ, ಕಸ ಗುಡಿಸುವವರು, ಸಾಗಾಟ ಮಾಡುವವರು, ಕಸದ ವಾಹನಗಳ ಚಾಲಕರನ್ನು ಪೌರ ಕಾರ್ಮಿಕರನ್ನಾಗಿ ಪರಿಗಣಿಸುವುದು ಸೇರಿದಂತೆ ಪೌರ ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಪೂರಕವಾದ ಕ್ರಮಗಳನ್ನು ಅತ್ಯಂತ ವೇಗವಾಗಿ ಕೈಗೊಳ್ಳಲಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮಂಗಳವಾರ ತಮ್ಮ ಗೃಹ ಕಚೇರಿಯಲ್ಲಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ಪದಾಧಿಕಾರಿಗಳ ಸಭೆ ನಡೆಸಿದ ಸಚಿವರು, ಪೌರ ಕಾರ್ಮಿಕರ ಬೇಡಿಕೆಗಳ ಸಂಬಂಧ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷರಾದ ನಾರಾಯಣ್ ಅವರು, ಸರ್ಕಾರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 29,000 ಜನ ನೇರ ವೇತನ ಪೌರಕಾರ್ಮಿಕರನ್ನು ಖಾಯಂ ಮಾಡಿರುವ ಸರ್ಕಾರದ ಕ್ರಮವನ್ನು ಸ್ವಾಗತಿಸುತ್ತೇವೆ. ಅದೇ ರೀತಿ ಇನ್ನೂ ಬಾಕಿ ಉಳಿದಿರುವ ಸುಮಾರು 6,800 ಜನ ಪೌರಕಾರ್ಮಿಕರನ್ನು ಸಹ ಶೀಘ್ರವಾಗಿ ಖಾಯಂಗೊಳಿಸಬೇಕು ಎಂದು ಮನವಿ ಮಾಡಿದರು.

ಎಲ್ಲಾ ಮನವಿಗಳನ್ನು ಆಲಿಸಿದ ನಂತರ ಪ್ರತಿಕ್ರಿಸಿದ ಸಚಿವರು, ನಿಮ್ಮ ಎಲ್ಲಾ ಬೇಡಿಕೆಗಳನ್ನು ಸರ್ಕಾರ ಸಹಾನುಭೂತಿಯಿಂದ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಸಚಿವರು ಭರವಸೆ ನೀಡಿದರು. ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಬಿ.ಬಿ. ಕಾವೇರಿ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ರವೀಂದ್ರ, ಪೌರ ಕಾರ್ಮಿಕರ ಸಂಘದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಎಲ್ಲಾ ಮತಗಳಲ್ಲಿ ಒಳ್ಳೆಯವರು ಇದ್ದಾರೆ ಎಂಬುದು ಸತ್ಯ. ಆದರೆ ಒಳ್ಳೆಯವನನ್ನು ಮುಂದೆ ತೋರಿಸಿ ಇರುವವರೆಲ್ಲರೂ ಒಳ್ಳೆಯವರು ಎಂಬ ಭಾವ ಮೂಡಿಸಿ ಹಿಂದಿನಿಂದ ತಮ್ಮ ಕೆಟ್ಟ ಕೆಲಸಗಳನ್ನು ಮಾಡಿಕೊಳ್ಳುವ ಮಂದಿ ಹಲವರಿದ್ದಾರೆ
– ವಿಧುಶೇಖರ ಶ್ರೀಗಳು

– ಬೀದಿ ಬದಿಯಲ್ಲಿ ಟೊಮೇಟೊ ರಾಶಿ ಹಾಕಿ ಮಾರಾಟ ಮಾಡುವವರಲ್ಲಿ ಕೆಲವರು ರಾಶಿಯ ಕೆಳಗಡೆ ಕೊಳೆತ ಹಣ್ಣುಗಳನ್ನು ಹಾಕಿ ಮೇಲ್ಗಡೆ ಸ್ವಲ್ಪ ಉತ್ತಮವಾದುದನ್ನು ಹಾಕಿ ಭರ್ಜರಿ ವ್ಯಾಪಾರ ಮಾಡುತ್ತಾರೆ!

ದಿನ ಭವಿಷ್ಯ

ಮೇಷ ಕೆರಿಯರ್‌ಗೆ ಸಂಬಂಧಿಸಿ ಶುಭ ಬೆಳವಣಿಗೆ. ಇಚ್ಛಿತ ಉದ್ಯೋಗ ಸಿಕ್ಕೀತು. ಮನೆಯಲ್ಲಿ ಸಾಮರಸ್ಯ ಕಾಯಲು ಗಮನ ಕೊಡಿ.

ವೃಷಭ ಕೆರಿಯರ್‌ಗೆ ಆದ್ಯತೆ ನೀಡಿ ಪ್ರೀತಿಪಾತ್ರರನ್ನು ಕಡೆಗಣಿಸಿದ್ದೀರಿ. ಆ ಕಡೆಯೂ ಗಮನ ಕೊಡಿ. ಸಣ್ಣ ಆರೋಗ್ಯ ಸಮಸ್ಯೆ ಕಿರಿಕಿರಿ ಸೃಷ್ಟಿಸಬಹುದು.

ಮಿಥುನ ಕೆಲಸದಲ್ಲಿ ಸದಾ ನಿರತ. ಅಧಿಕ ಒತ್ತಡ. ಇದರಿಂದ ಅಸಹನೆ ಹೆಚ್ಚು. ಹೊಸ ಸಂಬಂಧ ಹರ್ಷ ತುಂಬಬಹುದು. ಆರ್ಥಿಕ ಸ್ಥಿತಿ ಸಾಧಾರಣ.

ಕಟಕ ಶಾಂತಚಿತ್ತತೆ ಕಾಯ್ದುಕೊಳ್ಳಿ. ಏಕೆಂದರೆ ಪ್ರತಿಕೂಲ ಬೆಳವಣಿಗೆ ಕಾಣುವಿರಿ. ಆರ್ಥಿಕ ಪರಿಸ್ಥಿತಿಯತ್ತ ಹೆಚ್ಚು ಗಮನ ಕೊಡಿ. ಧನವ್ಯಯ.

ಸಿಂಹ ಹೊಸತನದ ಹುರುಪು. ವೃತ್ತಿ ಮತ್ತು ಮನೆಯಲ್ಲಿ ಪೂರಕ ಬೆಳವಣಿಗೆ. ಮುಖ್ಯ ವಿಷಯದಲ್ಲಿ ಹಿರಿಯರ ಮಾರ್ಗದರ್ಶನ ಕೋರಿ.

ಕನ್ಯಾ ನಿಮ್ಮ ವರ್ತನೆ ಬದಲಿಸಬೇಕಾದ ಅಗತ್ಯ ಇದೆ. ಸಂಘರ್ಷದ ಧೋರಣೆ ಬಿಡಿ. ವೃತ್ತಿ ಒತ್ತಡ ಹೆಚ್ಚಲಿದೆ. ಅಸಹಕಾರ ಎದುರಿಸುವಿರಿ.

ತುಲಾ ಸಿಟ್ಟಿಗೇಳುವ ಪ್ರಸಂಗ ಉಂಟಾದೀತು. ತಾಳ್ಮೆ ಕಾಯ್ದುಕೊಳ್ಳಿ. ಅಧಿಕ ಖರ್ಚು ಚಿಂತೆಗೆ ಕಾರಣ. ಬಂಧು ಕಲಹ. ಧಾರ್ಮಿಕ ವಿಚಾರದಲ್ಲಿ ಆಸಕ್ತಿ.

ವೃಶ್ಚಿಕ ನಿಮ್ಮ ಕಲ್ಪನೆ ಸಾಕಾರವಾಗುವ ಸಾಧ್ಯತೆ ಕಾಣುತ್ತಿದೆ. ಸಮಸ್ಯೆ ಇತ್ಯರ್ಥ. ಸಣ್ಣ ಆರೋಗ್ಯ ಸಮಸ್ಯೆ. ಚಾಲನೆಯಲ್ಲಿ ಎಚ್ಚರ ವಹಿಸಿರಿ.

ಧನು ಫಲದಾಯಕ ದಿನ. ನಿಮ್ಮ ನಿರ್ವಹಣೆ ಮೆಚ್ಚುಗೆಗೆ ಪಾತ್ರ. ವಿಶೇಷ ವ್ಯಕ್ತಿಯ ಭೇಟಿಯಿಂದ ಉತ್ಸಾಹ. ಕೌಟುಂಬಿಕ ಸಮ್ಮಿಲನ ಸಂಭವ.

ಮಕರ ಆರ್ಥಿಕ ಯೋಜನೆ ಕಾರ್ಯಗತ ಮಾಡಲು ಸಕಾಲ. ಶುಭ ಸುದ್ದಿ ಕೇಳುವಿರಿ. ಆರೋಗ್ಯದ ವಿಚಾರದಲ್ಲಿ ಹೆಚ್ಚು ಕಾಳಜಿ ವಹಿಸಿರಿ. ಧನಾಗಮ.

ಕುಂಭ ನಿಮ್ಮ ಕೆಲಸ ದಿಕ್ಕು ತಪ್ಪದಂತೆ ಎಚ್ಚರ ವಹಿಸಿ. ಕೆಲವರು ಅಡ್ಡಗಾಲು ಹಾಕಿಯಾರು. ಆರೋಗ್ಯಪೂರ್ಣ ಆಹಾರ ಮಾತ್ರ ಸೇವಿಸಿರಿ.

ಮೀನ ವ್ಯರ್ಥವೆಂದು ಭಾವಿಸಿದ ಕೆಲಸ ಒಮ್ಮೆಗೆ ಫಲ ನೀಡಬಹುದು. ಆರ್ಥಿಕವಾಗಿ ಪೂರಕ ಬೆಳವಣಿಗೆ. ಆಪ್ತರ ಜತೆಗೆ ಆತ್ಮೀಯ ಕಾಲಕ್ಷೇಪ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 0,7,2,5

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ 28ನೇ ಘಟಿಕೋತ್ಸವ

ನಿಸ್ವಾರ್ಥ ಸೇವೆ ನೀಡಿ: ಸಿಎಂ

• **ಬೆಂಗಳೂರು:** ವೈದ್ಯರು ಕಣ್ಣಿಗೆ ಕಾಣುವ ದೇವರು. ಜನ ಎಷ್ಟೇ ಕಷ್ಟ ಇದ್ದರೂ ನಂಬಿಕೆ ಹಾಗೂ ವಿಶ್ವಾಸದಿಂದ ವೈದ್ಯರ ಬಳಿ ಹೋಗುತ್ತಾರೆ. ನೀವು ಅವರ ನಂಬಿಕೆ ಉಳಿಸಿಕೊಂಡು ಸೇವೆ ಮಾಡಬೇಕು ಎಂದು ವೈದ್ಯ ಪದವೀಧರರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಿವಿಮಾತು ಹೇಳಿದರು.

ಜಿಕೆವಿಕೆ ಡಾ.ಬಾಬು ರಾಜೇಂದ್ರಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದರು. ಈ ವೃತ್ತಿಯಲ್ಲಿ ನಿಮಗೆ ನಿತ್ಯ ಸವಾಲು ಎದುರಾಗುತ್ತದೆ. ನಿಮ್ಮ ಮುಂದೆ ದೊಡ್ಡ ಸ್ಪರ್ಧೆ ಇದೆ. ನಾನು ಬೇರೆ ದೇಶಗಳಲ್ಲಿ ಪ್ರವಾಸ ಮಾಡಿದ್ದೇನೆ. ಅಲ್ಲಿನ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಭಾರತೀಯರು ಅದರಲ್ಲೂ ಕರ್ನಾಟಕದ ವೈದ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಇಲ್ಲಿರುವ ಗುಣಮಟ್ಟ ಭಾರತ ಮಾತ್ರವಲ್ಲ, ವಿಶ್ವದಲ್ಲೇ ಎಲ್ಲೂ ಇಲ್ಲ. ಇಲ್ಲಿ ತಯಾರಾದ ವೈದ್ಯರ ಪ್ರತಿಭೆ, ಗುಣಮಟ್ಟ ಸೇವೆ ಹಾಗೂ ಬದ್ಧತೆಗೆ ಸರಿಸಾಟಿ ಯಾರೂ ಇಲ್ಲ ಎಂದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮಾತನಾಡಿ, ವೈದ್ಯಕೀಯ ವೃತ್ತಿಯು ಕೇವಲ ಉದ್ಯೋಗವಲ್ಲ, ಅದು ಸೇವೆ ಮತ್ತು ಕರುಣೆಯ ಕ್ಷೇತ್ರವಾಗಿದೆ. ಆದರಿಂದ ವೈದ್ಯರು ಸದಾ ನೈತಿಕತೆ, ಪ್ರಾಮಾಣಿಕತೆ ಹಾಗೂ ಮಾನವೀಯ ಮೌಲ್ಯಗಳಿಗೆ ಬದ್ಧರಾಗಿರಬೇಕು ಎಂದು ಹೇಳಿದರು. ಈ ವೇಳೆ ಪ್ರೊ.ಡಾ.ನೈಲಾಡಿ ಶ್ರೀಧರ ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ ಹಾಗೂ ಡಾ.ಎ.ಸಿ.ಷಣ್ಮುಗಂ ಅವರಿಗೆ ಗೌರವ ಡಾಕ್ಟರೇಟ್ ಡಾಕ್ಟರ್ ಆಫ್ ಸೈನ್ಸ್ ಪದವಿ ಪ್ರದಾನ ಮಾಡಲಾಯಿತು. 72,741 ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಯಿತು. ಇವುಗಳ ಪೈಕಿ ಒಟ್ಟು 103 ವಿದ್ಯಾರ್ಥಿಗಳಿಗೆ 115 ಚಿನ್ನದ ಪದಕ ನೀಡಲಾಯಿತು. ಈ ವೇಳೆ ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ. ಉಪಸ್ಥಿತರಿದ್ದರು.



ಪದವೀಧರರ ಶಿಕ್ಷಣಕ್ಕೆ ಪ್ರೋತ್ಸಾಹ, ಧೈರ್ಯ ಹಾಗೂ ಸ್ಫೂರ್ತಿಯನ್ನು ನೀಡಿದ ಪೋಷಕರು ಹಾಗೂ ಜ್ಞಾನ ನೀಡಿದ ಗುರುಗಳನ್ನು ಎಂದಿಗೂ ಮರೆಯಬಾರದು. ಎಲ್ಲಾ ಜಿಲ್ಲೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆಯನ್ನು ನಿರ್ಮಿಸಲಾಗುವುದು. ಆ ಮೂಲಕ ಜನ ಸಾಮಾನ್ಯರು ಕೈಗೆಟಕುವ ದರದಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ.
■ **ಡಾ.ಶರಣಪ್ರಕಾಶ ಆರ್.ಪಾಟೀಲ್,** ವೈದ್ಯಕೀಯ ಶಿಕ್ಷಣ ಸಚಿವ

ರಾಜ್ಯದಲ್ಲಿ ಪ್ರತಿ ವರ್ಷ 13,940 ವೈದ್ಯರ ತಯಾರಿ

ನಮ್ಮ ರಾಜ್ಯದಲ್ಲೇ 72 ವೈದ್ಯಕೀಯ ಕಾಲೇಜುಗಳಿದ್ದು, ದೇಶದ ಬೇರೆ ಯಾವುದೇ ರಾಜ್ಯಗಳಲ್ಲಿ ಇಷ್ಟೊಂದು ವೈದ್ಯಕೀಯ ಕಾಲೇಜುಗಳಿಲ್ಲ. ಪ್ರತಿ ವರ್ಷ 72 ಸಾವಿರ ಪದವೀಧರರನ್ನು ತಯಾರಿಸುತ್ತಿದೆ. ವರ್ಷಕ್ಕೆ 13,940 ವೈದ್ಯರನ್ನು ಕೊಡುಗೆಯಾಗಿ ನೀಡುತ್ತಿದ್ದು, ಇಲ್ಲಿ ತಯಾರಾದ ವೈದ್ಯರು, ನರ್ಸ್‌ಗಳು ವಿಶ್ವಾದ್ಯಂತ ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಗುಣಮಟ್ಟದ ಶಿಕ್ಷಕರೇ ವಿವಿಯ ಹೆಗ್ಗುರುತು

ಯಾವುದೇ ಒಂದು ವಿವಿಯ ಶಕ್ತಿ ಎಂದರೆ ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯಲ್ಲ, ಪದವಿಗಳ ಸಂಖ್ಯೆಯೂ ಅಲ್ಲ. ಅಲ್ಲಿರುವ ಗುಣಮಟ್ಟದ ಶಿಕ್ಷಕರು. ಶಿಕ್ಷಕರು ವಿದ್ಯಾರ್ಥಿಗಳ ಮಾರ್ಗದರ್ಶಕರಾಗಬೇಕು, ಸಂಶೋಧನೆಗೆ ಪೂರಕವಾಗಿ ವಿದ್ಯಾರ್ಥಿಗಳಿಗೆ ರೋಲ್ ಮಾಡೆಲ್ ಗಳಾಗಿರಬೇಕು. ಎಲ್ಲರೂ ಜತೆಯಾಗಿ ಕೆಲಸ ಮಾಡೋಣ. ಮುಂದೆ ನಾವು ನೀವೆಲ್ಲರೂ ರಾಮನಗರದ ಕ್ಯಾಂಪಸ್ ನಲ್ಲಿ ಸಿಗೋಣ. ಕರ್ನಾಟಕ ಸರ್ಕಾರ ಈ ವಿವಿಗೆ ಅಗತ್ಯವಿರುವ ಎಲ್ಲಾ ಸಹಕಾರವನ್ನು ನೀಡಲು ಬದ್ಧವಾಗಿದೆ ಎಂದು ತಿಳಿಸಿದರು. 1044 ಅಫಿಲಿಯೇಟೆಡ್ ಕಾಲೇಜುಗಳಿವೆ. ಲಕ್ಷಾಂತರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪವನ ವಿದ್ಯುತ್ ಉತ್ಪಾದನೆ: ಕರ್ನಾಟಕಕ್ಕೆ ರಾಷ್ಟ್ರ ಪ್ರಶಸ್ತಿ

• **ಪಣಜಿ/ಬೆಂಗಳೂರು:** ಅನುಷ್ಠಾನದ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನು ಕರ್ನಾಟಕ ತನ್ನದಾಗಿಸಿಕೊಂಡಿದೆ.

ಗೋವಾದಲ್ಲಿ ನಡೆದ 2026ನೇ ಸಾಲಿನ ವಿಶ್ವ ಪವನ ದಿನಾಚರಣೆಯಲ್ಲಿ ಕರ್ನಾಟಕಕ್ಕೆ ಪ್ರತಿಷ್ಠಿತ ಹೈಯೆಸ್ಟ್ ವಿಂಡ್ ಕ್ಯಾಪಾಸಿಟಿ ಪೈಪ್‌ಲೈನ್ ಪ್ರಶಸ್ತಿ ದೊರೆತಿದೆ. ಕೇಂದ್ರ ಸಚಿವ ಜೋಶಿ ಅವರಿಂದ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಪ್ರಶಸ್ತಿ ಸ್ವೀಕರಿಸಿದರು.

ಪವನ ವಿದ್ಯುತ್ ವಲಯದಲ್ಲಿ ಕರ್ನಾಟಕದ ಸಾಧನೆಗೆ ಸಂದಿರುವ ಪ್ರಶಸ್ತಿ ಬಗ್ಗೆ ಹರ್ಷ ವ್ಯಕ್ತಪಡಿಸಿರುವ ಇಂಧನ ಸಚಿವ ಕೆ.ಜೆ.ಜಾರ್ಜ್, ಕಳೆದ ಬಾರಿಯೂ ಕರ್ನಾಟಕ ಈ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತ್ತು. ಅನುಷ್ಠಾನ ಹಂತದಲ್ಲಿರುವ ಪವನ ವಿದ್ಯುತ್ ಸಾಮರ್ಥ್ಯದಲ್ಲಿ ಕರ್ನಾಟಕವು ದೇಶದಲ್ಲೇ ಅಗ್ರಮಾನ್ಯ ಸ್ಥಾನದಲ್ಲಿರುವುದನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು ಹೆಮ್ಮೆಯ ವಿಷಯ. ಈ ಪ್ರಶಸ್ತಿಯು ನವೀಕರಿಸಬಹುದಾದ ಇಂಧನ ಉತ್ಪಾದನೆ, ಸುಸ್ಥಿರ ಅಭಿವೃದ್ಧಿಯ ಬಗ್ಗೆ ನಮ್ಮ ಸರ್ಕಾರಕ್ಕೆ ಇರುವ ಅಚಲ ಬದ್ಧತೆಗೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಅನುಷ್ಠಾನ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ಕರ್ನಾಟಕಕ್ಕೆ ದೊರೆತಿರುವ ಈ ಪ್ರಶಸ್ತಿಯು ರಾಜ್ಯದ ಪ್ರಗತಿಪರ ನೀತಿ, ಹೂಡಿಕೆ-ಸ್ನೇಹಿ ವ್ಯವಸ್ಥೆ ಮತ್ತು ನವೀಕರಿಸಬಹುದಾದ ಇಂಧನ ಅಭಿವೃದ್ಧಿಗೆ ಇರುವ ಸಾಂಸ್ಥಿಕ ಬೆಂಬಲಕ್ಕೆ ಸಾಕ್ಷಿಯಾಗಿದೆ.
■ **ಗೌರವ್ ಗುಪ್ತ,** ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ



ಕ್ರೆಡಲ್ ಹಾಗೂ ಉದ್ಯಮದ ಪಾಲುದಾರರ ಉತ್ತಮ ಸಹಯೋಗದಿಂದ ಪ್ರಶಸ್ತಿ ಸಂದಿದೆ. ಈ ವಲಯದಲ್ಲಿ ಹೂಡಿಕೆ ಹಾಗೂ ಯೋಜನೆಯ ಅನುಷ್ಠಾನವನ್ನು ಸುಗಮಗೊಳಿಸಲು ಮತ್ತು ರಾಜ್ಯ ಮತ್ತು ರಾಷ್ಟ್ರಕ್ಕೆ ನವೀಕರಿಸಬಹುದಾದ ಇಂಧನದ ಮೂಲಕ ಸುರಕ್ಷಿತ ಇಂಧನ ಭವಿಷ್ಯ ರೂಪಿಸುವ ಪ್ರಯತ್ನಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಲು ಬದ್ಧರಾಗಿದ್ದೇವೆ.
■ **ಕೆ.ಪಿ. ರುದ್ರಪ್ಪಯ್ಯ,** ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ

ಐದನೇ ಅಭ್ಯರ್ಥಿಯ ಗೆಲುವಿಗೆ ರಣತಂತ್ರ

ಪುಟ ೧➜ ಶಾಸಕಾಂಗ ಸಭೆಗೂ ಮುನ್ನ ಸಿಎಂ ಡಿ.ಕೆ. ಶಿವಕುಮಾರ್ ಅವರು ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರದ ಮೊದಲ ಶಾಸಕಾಂಗ ಸಭೆ ಇದಾಗಿದ್ದು, ಎಲ್ಲಾ ಶಾಸಕರು, ಸಚಿವರನ್ನು ವಿಶ್ವಾಸಕ್ಕೆ ಪಡೆಯುವ ಮೂಲಕ ಯಾವಾಗಲೂ ನಿಮ್ಮ ಸಹಕಾರ ಬೇಕೆಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಪಕ್ಷದ ಅನೇಕ ವಿಚಾರಗಳ ಬಗ್ಗೆ ಚರ್ಚೆ ನಡೆಸಲಾಯಿತು. ಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಪ್ರಮುಖರು ಇದ್ದರು.

ಸಂಪುಟ ಚರ್ಚೆ: ಶಾಸಕಾಂಗ ಸಭೆಯಲ್ಲಿ ಸಂಪುಟ ವಿಸ್ತರಣೆ ಬಗ್ಗೆಯೂ ಚರ್ಚೆಯಾಗಿದ್ದು, ಮೊದಲ ಸುತ್ತಿನ ಅವಕಾಶ ವಂಚಿತ ಸಚಿವಾಕಾಂಕ್ಷಿಗಳು, 2ನೇ ಸುತ್ತಿನಲ್ಲಾದರೂ ತಮಗೆ ಅವಕಾಶ ಸಿಗಬೇಕೆಂದು ಸುರ್ಜೆವಾಲಾ ಬಳಿ ಪ್ರಸ್ತಾಪಿಸಿದರು. ಹಿರಿಯ ಶಾಸಕರು ಶಾಸಕಾಂಗ ಸಭೆಯ ವೇದಿಕೆಯಲ್ಲೇ ತಮ್ಮ ಬೇಡಿಕೆಗಳನ್ನು ತಿಳಿಸಿದರು ಎನ್ನಲಾಗಿದೆ.

ಸಮಾನತೆ ಪಾಲುದಾರಿಕೆ

ಪುಟ ೧➜ ಜಿ7 ಶೃಂಗಸಭೆಯಲ್ಲಿ ಭಾರತದ ಸಕ್ರಿಯ ಪಾಲ್ಗೊಳ್ಳುವಿಕೆ, ಜಾಗತಿಕ ವೇದಿಕೆಯಲ್ಲಿ ದೇಶದ ಹೆಚ್ಚುತ್ತಿರುವ ಪ್ರಭಾವ ಮತ್ತು ನಾಯಕತ್ವದ ಮತ್ತೊಂದು ಪ್ರತೀಕವಾಗಿ ಕಾಣಲಾಗುತ್ತಿದೆ. ಈ ಅಧಿವೇಶನದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಸೇರಿದಂತೆ ಹಲವು ಜಾಗತಿಕ ನಾಯಕರು ಉಪಸ್ಥಿತರಿದ್ದರು.

16 ತಿಂಗಳ ಬಳಿಕ ಮೋದಿ-ಟ್ರಂಪ್ ಭೇಟಿ

ಪುಟ ೧➜ ಆದರೆ, ಕಳೆದ ಕೆಲವು ತಿಂಗಳುಗಳಿಂದ ಸಂಬಂಧ ಸುಧಾರಣೆಗೆ ಎರಡೂ ದೇಶಗಳು ಪ್ರಯತ್ನಿಸುತ್ತಿವೆ. ಮೋದಿ-ಟ್ರಂಪ್ ಮಾತುಕತೆಯಲ್ಲಿ ವ್ಯಾಪಾರ ಒಪ್ಪಂದ, ರಕ್ಷಣಾ ಸಹಕಾರ, ಇಂಡೋ-ಪೆಸಿಫಿಕ್ ಪ್ರದೇಶದ ಭದ್ರತೆ, ಪಶ್ಚಿಮ ಏಷ್ಯಾ ಬಿಕ್ಕಟ್ಟು ಹಾಗೂ ರಷ್ಯಾ-ಉಕ್ರೇನ್ ಸಂಘರ್ಷ ಸೇರಿದಂತೆ ಹಲವು ಪ್ರಮುಖ ವಿಷಯಗಳು ಚರ್ಚೆಯಾಗುವ ನಿರೀಕ್ಷೆಯಿದೆ.

ಮೋದಿ ಇದ್ದಲ್ಲಿಗೇ ಬಂದು ಅಪ್ಪಿಕೊಂಡ ಬ್ರಿಟನ್ ಪಿಎಂ

ಪುಟ ೧➜ **ಮೆಲೋಡಿ ಕ್ಷಣ!:** ಇದಲ್ಲದೆ, ಪ್ರಧಾನಿ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಡುವಿನ ಮೆಲೋಡಿ ಕ್ಷಣ ಗಮನಸೆಳೆಯಿತು. ಇಬ್ಬರು ಹಸ್ತಲಾಘವದೊಂದಿಗೆ ಕುಶಲೋಪರಿ ನಡೆಸಿದರು.

ಉಕ್ರೇನ್‌ಗೆ ಪ್ರಾಮುಖ್ಯತೆ ನೀಡಲು ನಿರ್ಧಾರ

ಪುಟ ೧➜ ಕಳೆದ 4 ವರ್ಷಗಳಿಂದ ರಷ್ಯಾ ಪೂರ್ಣ ಮಟ್ಟದ ಅತಿಕ್ರಮಣ ನಡೆಸುವ ಗುರಿಯೊಂದಿಗೆ ಉಕ್ರೇನ್ ಮೇಲೆ ದಾಳಿ ನಡೆಸುತ್ತ ಬಂದಿದೆ. ಇದೀಗ ಇರಾನ್-ಅಮೆರಿಕ ಶಾಂತಿ ಒಪ್ಪಂದ ಮಾಡಿಕೊಂಡಿದ್ದು, ಯುದ್ಧ ಕೊನೆಗೊಂಡಿದೆ. ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ನಾಯಕರ ಜತೆ ಸೇರಿಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ: ಹಲ್ಲೆ

• **ಚಿಕ್ಕೋಡಿ:** 10ನೇ ತರಗತಿ ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಹಿನ್ನೆಲೆಯಲ್ಲಿ ಶಿಕ್ಷಕನೊಬ್ಬನಿಗೆ ಪೋಷಕರು ಥಳಿಸಿದ ಘಟನೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ.

ಚಿಕ್ಕೋಡಿಯ ಉರ್ದು ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಶೈಲ್ ಕುಂಬಾರ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದಿವೆ. ಕನ್ನಡ ವಿಷಯದಲ್ಲಿ ಉತ್ತೀರ್ಣಗೊಳಿಸುವುದಾಗಿ ಆಮಿಷವೊಡ್ಡಿ, ಕೆಲ ವಿದ್ಯಾರ್ಥಿಗಳನ್ನು ಶಾಲೆಯ ಕೊಠಡಿ ಹಾಗೂ ಶೌಚಾಲಯಕ್ಕೆ ಕರೆದುಕೊಂಡು ಹೋಗಿ ಲೈಂಗಿಕ ಕಿರುಕುಳ ನೀಡುತ್ತಿದ್ದಾನೆ ಎಂದು ಆರೋಪಿಸಲಾಗಿದೆ.

ಐದಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಇದೇ ರೀತಿಯ ಕಿರುಕುಳ ನೀಡಿರುವ ಮಾಹಿತಿ ಹೊರಬಿದ್ದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಪೋಷಕರು ಶಾಲೆಗೆ ಆಗಮಿಸಿ ಶಿಕ್ಷಕನನ್ನು ತರಾಟೆಗೆ ತೆಗೆದುಕೊಂಡು ಥಳಿಸಿದ್ದಾರೆ. ಈ ವೇಳೆ ಶಾಲಾ ಆವರಣದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಶಿಕ್ಷಕ ಶ್ರೀಶೈಲ್ ಕುಂಬಾರನನ್ನು ವಶಕ್ಕೆ ಪಡೆದಿದ್ದಾರೆ. ಬಳಿಕ ಪೋಷಕರು ಹಾಗೂ ಶಾಲಾ ಸಿಬ್ಬಂದಿಯಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗುತ್ತಿದ್ದು, ಆರೋಪಗಳ ಕುರಿತು ಸಮಗ್ರ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿವಸೇನೆಯಲ್ಲಿ ಮತ್ತೆ ಬಂಡಾಯ? ವಿಭಜನೆಯ ಚರ್ಚೆ

• **ಮುಂಬೈ:** ಮಹಾರಾಷ್ಟ್ರ ರಾಜಕೀಯದಲ್ಲಿ ಮತ್ತೊಮ್ಮೆ ಶಿವಸೇನೆ ವಿಭಜನೆಯ ಚರ್ಚೆ ಜೋರಾಗಿದೆ. ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ(ಯುಬಿ) ಪಕ್ಷದ 14ರಿಂದ 16 ಶಾಸಕರು ಹಾಗೂ 6 ಸಂಸದರು ಮುಂದಿನ ವಾರದಲ್ಲೇ ಏಕನಾಥ ಶಿಂಧೆ ಬಣದತ್ತ ಮುಖ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಶಿಂಧೆ ಬಣದ ನಾಯಕರಿಂದ ನಡೆಯುತ್ತಿದೆ ಎನ್ನಲಾದ ಆಪರೇಷನ್ ಟೈಗರ್ ಅಂತಿಮ ಹಂತ ತಲುಪಿದ್ದು, ಉದ್ಧವ್ ಬಣದ ಹಲವು ಜನಪ್ರತಿನಿಧಿಗಳೊಂದಿಗೆ ಮಾತುಕತೆ ನಡೆದಿದೆ ಎಂದು ಹೇಳಲಾಗಿದೆ. ಈ ಬೆಳವಣಿಗೆ ಯಶಸ್ವಿಯಾದರೆ 2022ರ ಬಂಡಾಯದ ಬಳಿಕ ಶಿವಸೇನೆಯಲ್ಲಿ ಮತ್ತೊಂದು ರಾಜಕೀಯ ಭೂಕಂಪ ಸಂಭವಿಸುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಇದರ ಮಧ್ಯೆ, ಪಕ್ಷದಲ್ಲಿ ಅಸಮಾಧಾನ ಹೆಚ್ಚುತ್ತಿದೆ ಎಂಬ ಸುದ್ದಿಗಳಿಗೆ ತೆರೆ ಎಳೆಯಲು ಉದ್ಧವ್ ಠಾಕ್ರೆ ಮುಂದಾಗಿದ್ದು, ಜೂನ್ 22ರಂದು ಪಕ್ಷದ ಎಲ್ಲ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರ ಸಭೆಯನ್ನು ಕರೆದಿದ್ದಾರೆ. ಮುಂಗಾರು ಅಧಿವೇಶನ ಆರಂಭವಾಗುವ ದಿನವೇ ಈ ಸಭೆ ನಡೆಯಲಿದ್ದು, ಪಕ್ಷದ ಏಕತೆಯನ್ನು ಪ್ರದರ್ಶಿಸುವ ಪ್ರಯತ್ನವೆಂದು ವಿಶ್ಲೇಷಿಸಲಾಗಿದೆ.

ನೀಟ್ ಅಕ್ರಮ ತಡೆಗೆ ಟೆಲಿಗ್ರಾಂಗೆ ನಿರ್ಬಂಧ


ಪುಟ ೧➜ ಅಲ್ಲದೇ ಮೇ ತಿಂಗಳಲ್ಲಿ ಸೋರಿಕೆಯಾದ ನೀಟ್ ಪ್ರಶ್ನೆಪತ್ರಿಕೆಯನ್ನು ಟೆಲಿಗ್ರಾಂ ಮೂಲಕವೇ ಕಳುಹಿಸಲಾಗಿತ್ತು. ಇಂತಹ ದುಷ್ಕೃತ್ಯ ತಡೆಯುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಹೇಳಿದೆ. ಹಲವು ಟೆಲಿಗ್ರಾಂ ಚಾನೆಲ್‌ಗಳು ಪೇಪರ್ ಲೀಕ್ಡ್ ನೀಟ್, ರೀ- ನೀಟ್ 2026, ಖಾಸಗಿ ಮಾಫಿಯಾ ಮತ್ತು ರೀ ನೀಟ್ ಮಾಫಿಯಾ ಮುಂತಾದ ಹೆಸರುಗಳನ್ನು ಬಳಸಿಕೊಂಡು ಪರೀಕ್ಷಾ ಪತ್ರಿಕೆಗಳಿಗೆ ಪ್ರವೇಶವನ್ನು ಬಹಿರಂಗವಾಗಿ ಜಾಹೀರಾತು ಮಾಡಿವೆ ಎಂದು ಎನ್‌ಟಿಎ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ. ಜೂ.21ರಂದು ದೇಶಾದ್ಯಂತ ಬಿಗಿಯಾದ ಭದ್ರತೆಯೊಂದಿಗೆ ನೀಟ್ ಮರು ಪರೀಕ್ಷೆ ನಡೆಯಲಿದ್ದು, ಪರೀಕ್ಷೆಗೆ ಸಂಬಂಧಿಸಿದ ಯಾವುದೇ ಮಾಹಿತಿ ಅಥವಾ ಪ್ರಶ್ನೆಪತ್ರಿಕೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಸೋರಿಕೆಯಾಗದಂತೆ ತಡೆಯಲು ಈ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ.

ಪ್ಲೇ ಸ್ಟೋರ್‌ನಲ್ಲಿ ಸಿಕ್ತಿಲ್ಲ ಟೆಲಿಗ್ರಾಂ: ಈ ಬೆನ್ನಲ್ಲೇ ಕೇಂದ್ರ ಸರ್ಕಾರ ಪ್ಲೇ ಸ್ಟೋರ್‌ನಿಂದ ಟೆಲಿಗ್ರಾಂ ಅಪ್ಲಿಕೇಶನ್‌ನ್ನು ತಾತ್ಕಾಲಿಕವಾಗಿ ತೆಗೆದುಹಾಕುವಂತೆ ಸರ್ಕಾರವು ಗೂಗಲ್ ಮತ್ತು ಆ್ಯಪಲ್‌ಗೆ ಆದೇಶಿಸಿದೆ. ಸದ್ಯ ಗೂಗಲ್ ತನ್ನ ಪ್ಲೇ ಸ್ಟೋರ್‌ನಿಂದ ಟೆಲಿಗ್ರಾಂ ತೆಗೆದು ಹಾಕಿದೆ. ಶೀಘ್ರವೇ ಆ್ಯಪಲ್ ಕೂಡ ಕೇಂದ್ರದ ಆದೇಶವನ್ನು ಪಾಲಿಸಲಿದೆ ಎಂದು ಮೂಲಗಳು ತಿಳಿಸಿವೆ.

ಆನೆ-ಮಾನವ ಸಂಘರ್ಷ ಬಗೆಹರಿಸಿ

• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆನೆ-ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸುವುದು ಹಾಗೂ ಮೈಸೂರಿನ ತಿಪ್ಪಯ್ಯನ ಕೆರೆಯಲ್ಲಿ ನಗರ ವನ (ನಗರ್ ವನ್) ಯೋಜನೆ ಜಾರಿಗೊಳಿಸುವ ಸಂಬಂಧ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಈ ಸಂದರ್ಭ ಮಾತನಾಡಿದ ಯದುವೀರ್ ಒಡೆಯರ್ ಅವರು, ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಆನೆಗಳು ಕೃಷಿ ಭೂಮಿ ಮತ್ತು ಜನ ವಸತಿ ಪ್ರದೇಶಗಳಿಗೆ ನುಗ್ಗುತ್ತಿರುವ ಘಟನೆಗಳು ನಿರಂತರವಾಗಿ ಹೆಚ್ಚುತ್ತಿದ್ದು, ಇದು ಜಿಲ್ಲೆಯ ಜನರ ಪ್ರಮುಖ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಸಚಿವರ ಗಮನಕ್ಕೆ ತಂದರು. ವಿಶೇಷವಾಗಿ ಅರಣ್ಯ ದಂಚಿನ ಗ್ರಾಮಗಳಲ್ಲಿ ವಾಸಿಸುವ ರೈತರು, ತೋಟಗಾರರು ಮತ್ತು ಕಾರ್ಮಿಕರು ಈ



ಸಮಸ್ಯೆಯಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಯದುವೀರ್ ಗಮನಸೆಳೆದರು.

ವನ್ಯಜೀವಿ ಸಂರಕ್ಷಣೆ ಅತ್ಯಂತ ಮುಖ್ಯವಾದರೂ, ಅರಣ್ಯದಂಚಿನ ಪ್ರದೇಶಗಳಲ್ಲಿ ವಾಸಿಸುವ ಜನರ ಜೀವ ಮತ್ತು ಜೀವನೋಪಾಯದ ರಕ್ಷಣೆಯೂ ಅಷ್ಟೇ ಮಹತ್ವದ್ದಾಗಿದೆ ಎಂದು ಯದುವೀರ್ ಹೇಳಿದರು. ಮೈಸೂರಿನ ಹೊರವರ್ತುಲ ರಸ್ತೆಯ ಸಮೀಪ, ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದ ಬಳಿ ಇರುವ ತಿಪ್ಪಯ್ಯನ ಕೆರೆಯನ್ನು ನಗರ ವನ ಯೋಜನೆಯಡಿ ಅಭಿವೃದ್ಧಿಪಡಿಸುವಂತೆ ಪ್ರತ್ಯೇಕ ಮನವಿಯನ್ನೂ ಸಂಸದರು ಸಲ್ಲಿಸಿದರು.

ಬಲವಂತದ ಮತಾಂತರ: ಇಬ್ಬರು ಮುಸ್ಲಿಮರ ಸೆರೆ

ಪುಟ ೧➜ ಜಮೀನು ಖರೀದಿಸುವ ನೆಪದಲ್ಲಿ ಫೆ.8, 2025ರಂದು ಆಕೆಯನ್ನು ವರ್ಧಾ ರಸ್ತೆಯ ಹೋಟೆಲ್‌ಗೆ ಕರೆಸಿದ್ದ. ಅಲ್ಲಿ ಆಕೆಗೆ ನಶೆಯುಕ್ತ ಪಾನೀಯ ನೀಡಲಾಗಿತ್ತು. ಮಹಿಳೆ ಪ್ರಜ್ಞೆ ತಪ್ಪಿದಾಗ ಆಕೆಯ ಆಕ್ಷೇಪಾರ್ಹ ಚಿತ್ರಗಳು ಮತ್ತು ವಿಡಿಯೋಗಳನ್ನು ಚಿತ್ರೀಕರಿಸಲಾಗಿತ್ತು. ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದಾಗಿ ಮತ್ತು ಗಂಡನಿಗೆ ಕಳುಹಿಸುವುದಾಗಿ ಬೆದರಿಸಿ ಆರೋಪಿಗಳು ಸುಮಾರು 4 ಲಕ್ಷ ರೂ. ಹಣವನ್ನು ಸುಲಿಗೆ ಮಾಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಅಷ್ಟೇ ಅಲ್ಲ, ಆರೋಪಿಯು ಬಾಟಲಿಯಲ್ಲಿದ್ದ ಯಾವುದೋ ದ್ರವವನ್ನು ಬಲವಂತವಾಗಿ ಕುಡಿಸಿ, ಉರ್ದು ಶ್ಲೋಕಗಳನ್ನು ಪಠಿಸಿ ಮುಖಕ್ಕೆ ಊದುತ್ತಿದ್ದ. ಇದು ಸಮ್ಮೋಹನ ಮತ್ತು ಮಾಟಮಂತ್ರ ಎಂದು ಹೇಳಿ ಆಕೆಯ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ.

ಮತ್ತೊಬ್ಬ ಆರೋಪಿಗಾಗಿ ಶೋಧ

ಇತ್ತೀಚೆಗೆ ಮಹಿಳೆಯ ಪತಿ ನಾಗಪುರಕ್ಕೆ ಮರಳಿದಾಗ, ಸಂತ್ರಸ್ತೆ ತನಗಾದ ಅನ್ಯಾಯವನ್ನು ವಿವರಿಸಿದ್ದಾರೆ. ತಕ್ಷಣವೇ ದಂಪತಿ ಸೋನೆಗಾಂವ್ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ಪೊಲೀಸರು ಮುಖ್ಯ ಆರೋಪಿ ಅಯಾಜ್ ತಾಜ್ ಮದಾರೆ (26), ಅಮೀನ್ ಶೇಖ್ (30)ನನ್ನು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಹಜರತ್ ಮೌಲಾನಾಗಾಗಿ ಶೋಧ ಮುಂದುವರಿದಿದೆ.

ಕುಮಾರಸ್ವಾಮಿ ಮಾತು ಅಪ್ಪಟ ಸುಳ್ಳು: ಎಂ.ಲಕ್ಷ್ಮಣ್

• **ಬೆಂಗಳೂರು:** ಬಿಡದಿ ಟೌನ್‌ಶಿಪ್‌ಗೆ ಶೇ.80ರಷ್ಟು ರೈತರು ಭೂಮಿ ನೀಡಲು ಒಪ್ಪಿಗೆ ನೀಡಿಲ್ಲ ಎಂಬ ಕುಮಾರಸ್ವಾಮಿ ಅವರ ಮಾತು ಅಪ್ಪಟ ಸುಳ್ಳು, 663 ರೈತರು ಮಾತ್ರ ಯಾವುದೇ ಕಾರಣಕ್ಕೆ ಜಮೀನು ಬಿಟ್ಟುಕೊಡುವುದಿಲ್ಲ ಎಂದು ಹೇಳಿದ್ದಾರೆ. ಇವರ ಒಟ್ಟು ಜಾಗ 1,348 ಎಕರೆ. ಅಂದರೆ ಶೇ.11 ರಷ್ಟು ರೈತರು ಮಾತ್ರ ಭೂಮಿ ಕೊಡಲ್ಲ ಎಂದು ಹೇಳುತ್ತಿದ್ದಾರೆ ಎಂದು ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ್ ತಿಳಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆಯಲ್ಲಿ ಜಮೀನು ಪಡೆದು ನಿವೇಶನ ಮಾಡಿ ಅದನ್ನು ಬೇರೆಯವರಿಗೆ ಹಂಚುವ ಉದ್ದೇಶವಿಲ್ಲ. ಕೈಗಾರಿಕಾ ಕಾರಿಡಾರ್ ಮಾಡುವ 7,481 ಎಕರೆ ಜತೆಗೆ ರೆಸಿಡೆನ್ಷಿಯಲ್ ಕಾರಿಡಾರ್ ನಿರ್ಮಿಸಲಾಗುತ್ತಿದೆ. ಭೂಮಿಯನ್ನು ವಶಪಡಿಸಿಕೊಂಡು ನೀಡುವುದಷ್ಟೇ ನಮ್ಮ ಕೆಲಸ. ಉಳಿದ ಟೌನ್‌ಶಿಪ್ ಅನ್ನು ಅವರೇ ನಿರ್ಮಾಣ ಮಾಡಿಕೊಳ್ಳುತ್ತಾರೆ ಎಂದರು. ನಮ್ಮ ಕಾಂಗ್ರೆಸ್ ಸರ್ಕಾರ 50:50 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ಭೂಮಿ ನೀಡಲು ತೀರ್ಮಾನಿಸಲಾಗಿದೆ. ಮೂಲ ಸೌಕರ್ಯ ಬಳಕೆ ನಂತರ ಉಳಿಯುವ ಜಾಗದಲ್ಲಿ ರೈತರಿಗೆ 9,600 ಚ.ಅಡಿಯಷ್ಟು ಭೂಮಿಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

12 ಕಡೆ ಲೋಕಾಯುಕ್ತ ದಾಳಿ

ದಾವಣಗೆರೆ: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪದ ಮೇರೆಗೆ ಬೇರೆ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೂವರು ಅಧಿಕಾರಿಗಳ ಕಚೇರಿ ಜತೆಗೆ ದಾವಣಗೆರೆ ನಿವಾಸಗಳು ಸೇರಿದಂತೆ ಒಟ್ಟು 12 ಕಡೆ ಮಂಗಳವಾರ ಬೆಳ್ಳಂಬೆಳಿಗ್ಗೆಯೇ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿ, ಅಪಾರ ಸಂಪತ್ತು, ಆಸ್ತಿಪತ್ರಗಳನ್ನು ಪತ್ತೆ ಮಾಡಿದೆ.

ಚಿತ್ರದುರ್ಗದ ಬಯಲು ಸೀಮೆ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿ ಕೃಷ್ಣಾ ನಾಯ್ಕ, ಹುಬ್ಬಳ್ಳಿಯ ನೈರುತ್ಯ ಕೆಎಸ್ಆರ್‌ಟಿಸಿ ಮುಖ್ಯ ಯಾಂತ್ರಿಕ(ಮೆಕ್ಯಾನಿಕಲ್) ವಿಭಾಗದ ಇಂಜಿನಿಯರ್ ಸಿದ್ದೇಶ್ವರ ಹೆಬ್ಬಾಳ್ ಹಾಗೂ ಕೆಆರ್‌ಐಡಿಎಲ್ ಅಧೀಕ್ಷಕ ಅಭಿಯಂತರ ಸಣ್ಣಕೆಂಚಪ್ಪ ನಿವಾಸಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿವೆ.

ನಗರದ ಸಿದ್ದವೀರಪ್ಪ ಬಡಾವಣೆಯಲ್ಲಿರುವ ಕೃಷ್ಣಾನಾಯ್ಕರ 2 ಮನೆ, ಆಂಜನೇಯ ಬಡಾವಣೆಯಲ್ಲಿರುವ ಸಿದ್ದೇಶ್ವರ ಹೆಬ್ಬಾಳ್ ನಿವಾಸ ಹಾಗೂ ಇತರೆಡೆ, ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಸಣ್ಣಕೆಂಚಪ್ಪ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ, ದಾಖಲೆ ಆಸ್ತಿಪತ್ರ, ನಗದು, ಚಿನ್ನ, ಬೆಳ್ಳಿ ಪರಿಶೀಲನೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ತೊಡಗಿದ್ದಾರೆ. ಸಣ್ಣಕೆಂಚಪ್ಪನವರ ಹರಪನಹಳ್ಳಿಯಲ್ಲಿರುವ ಮನೆ ಸೇರಿದಂತೆ ವಿವಿಧ ಸ್ಥಳಗಳ ಮೇಲೂ ದಾಳಿ ಮಾಡಿ ಪರಿಶೀಲನೆ ನಡೆಸಲಾಗಿದೆ. ಮೂವರೂ ಅಧಿಕಾರಿಗಳ ಕಚೇರಿ, ಮನೆ, ಇತರೆ ಸ್ಥಳಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಪ್ರತ್ಯೇಕ ತಂಡಗಳಲ್ಲಿ ಏಕಕಾಲಕ್ಕೆ ದಾಳಿ ಮಾಡಿದ್ದು, ಅಕ್ರಮ ಆಸ್ತಿ ಸಂಪಾದನೆಗೆ ಸಂಬಂಧಿಸಿದ ದಾಖಲೆ ಕಲೆ ಹಾಕುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ದಾಳಿ ವೇಳೆ ಅಧಿಕಾರಿಗಳ ಮನೆಗಳಲ್ಲಿ ಅಪಾರ ಪ್ರಮಾಣದ ನಗದು, ಚಿನ್ನಾಭರಣ, ಚರ ಮತ್ತು ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳೂ ಪತ್ತೆಯಾಗಿವೆ. ಸಿದ್ದೇಶ್ವರ ಹೆಬ್ಬಾಳ್ ನಿವಾಸದಲ್ಲಿ ಸುಮಾರು 40 ಲಕ್ಷ ರೂ. ನಗದು ಪತ್ತೆಯಾಗಿದೆ. ಮೂವರೂ ಅಧಿಕಾರಿಗಳ ಮನೆ, ಕಚೇರಿ ಇತರೆಡೆ ಮಂಗಳವಾರ ಸಂಜೆಯೂ ಪರಿಶೀಲನೆ ಕಾರ್ಯ ಮುಂದುವರೆದಿತ್ತು. ದಾಳಿಯಲ್ಲಿ ಪತ್ತೆಯಾದ ದಾಖಲೆ, ನಗದು, ಸ್ಥಿರ ಮತ್ತು ಚರಾಸ್ತಿಗಳ ದಾಖಲೆಗಳ ಮೌಲ್ಯ ಮಾಪನ ಪ್ರಕ್ರಿಯೆ ನಡೆಯುತ್ತಿದ್ದು, ದಾವಣಗೆರೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್.ಕೌಲಾಪುರೆ ಪ್ರತಿಕ್ರಿಯಿಸಿದ್ದಾರೆ.

ಸಿಎಂ ಭೇಟಿ



ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಸೇರಿದಂತೆ ಇನ್ನಿತರೆ ಉದ್ಯಮಿಗಳು ಮತ್ತು ವಿವಿಧ ದೇಶಗಳ ಗೌರವಾನ್ವಿತ ರಾಯಭಾರಿಗಳ ನಿಯೋಗವು ವಿಧಾನಸೌಧದಲ್ಲಿ ಮಂಗಳವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿತು.

59 ಜೀವಂತ ಗುಂಡು ಪತ್ತೆ: ತನಿಖೆ

ಬೆಳಗಾವಿ: ನಗರದ ಪ್ರಮುಖ ಕೈಗಾರಿಕಾ ಪ್ರದೇಶವಾದ ಉದ್ಯಮಬಾಗದಲ್ಲಿ ಕಸದ ರಾಶಿಯಿಂದ ಬರೋಬ್ಬರಿ 59 ಜೀವಂತ ಗುಂಡುಗಳು ಪತ್ತೆಯಾಗಿರುವ ಘಟನೆ ಸಾರ್ವಜನಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ. ಕೈಗಾರಿಕಾ ವಲಯದಲ್ಲಿ ನಡೆದ ಈ ಅಚ್ಚರಿ ಬೆಳವಣಿಗೆ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದ್ದು, ಪೊಲೀಸರು ತನಿಖೆ ತೀವ್ರಗೊಳಿಸಿದ್ದಾರೆ.

ಬೆಳಗ್ಗೆ ಪಾಲಿಕೆ ಪೌರಕಾರ್ಮಿಕರು ಎಂದಿನಂತೆ ಉದ್ಯಮ ಬಾಗದ ರಸ್ತೆಯ ಬದಿಯಲ್ಲಿ ಸಂಗ್ರಹವಾಗಿದ್ದ ಕಸವನ್ನು ವಿಂಗಡಿಸುವ ಕಾರ್ಯದಲ್ಲಿ ತೊಡಗಿದ್ದರು. ಈ ವೇಳೆ ಕಸದ ರಾಶಿಯೊಳಗೆ ಅನುಮಾನಾಸ್ಪದ ವಸ್ತುಗಳು ಕಂಡುಬಂದಿದ್ದು, ಪರಿಶೀಲಿಸಿದಾಗ ಅವು ಜೀವಂತ ಗುಂಡುಗಳಾಗಿರುವುದು ಬೆಳಕಿಗೆ ಬಂದಿದೆ. ತಕ್ಷಣವೇ ಎಚ್ಚೆತ್ತ ಕಾರ್ಮಿಕರು ಯಾವುದೇ ಅಪಾಯ ಸಂಭವಿಸದಂತೆ ಸ್ಥಳವನ್ನು ಸುರಕ್ಷಿತಗೊಳಿಸಿ ಉದ್ಯಮಬಾಗ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ, ಕಸದ ರಾಶಿಯಿಂದ ಒಟ್ಟು 59 ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೆಸ್ಸೆಸ್ ದೇಣಿಗೆ ಪಡೆದಿಲ್ಲ: ಭಾಂಡಗೆ

ಬಾಗಲಕೋಟೆ: ಆರ್‌ಎಸ್‌ಎಸ್‌ಗೆ ಸರ್ಕಾರದಿಂದ ದುಡ್ಡು ಬಂದಿಲ್ಲ, ಅನುದಾನ ಕೂಡ ಕೊಟ್ಟಿಲ್ಲ. ಸಾರ್ವಜನಿಕರಿಂದ ಹಣವನ್ನು ದೇಣಿಗೆ ಪಡೆದಿಲ್ಲ. ಯಾವ ಲೆಕ್ಕ ಕೊಡಬೇಕು ಎಂದು ಖರ್ಗೆ ಹೇಳಿಕೆಗೆ ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ ತಿರುಗೇಟು ನೀಡಿದರು.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಗೃಹ ಸಚಿವರಿಗೆ ಆರ್‌ಎಸ್‌ಎಸ್ ಬಗ್ಗೆ ಮಾತನಾಡಿದರೆ ದೊಡ್ಡವನಾಗಿ ಬಿಡುತ್ತೇನೆ ಎಂದು ಆರ್‌ಎಸ್‌ಎಸ್. ಬಗ್ಗೆ ಅನವಶ್ಯಕ ಹೇಳಿಕೆಯನ್ನು ನೀಡುತ್ತಿದ್ದಾರೆ. ಸಮರ್ಥ ಭಾರತ, ಶಕ್ತಿಶಾಲಿ, ವಿಕಸಿತ ಭಾರತವನ್ನು ಜಗತ್ತಿನಲ್ಲಿ ಗುರುವಿನ ಸ್ಥಾನಕ್ಕೆ ಮೋದಿಯವರು ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದರು. ಸಂಸದ ಪಿ.ಸಿ.ಗದ್ದಿಗೌಡರ, ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಯ್ಯ ಮೂಗನೂರಮಠ, ಬೆಳಗಾವಿ ಸಹ ಪ್ರಭಾರಿ ಬಸವರಾಜ ಯಂಕಂಚಿ, ಹೂವಪ್ಪ ರಾಠೋಡ ಪತ್ರಿಕಾಗೋಷ್ಠಿಯಲ್ಲಿದ್ದರು.

ಕಿರುಸುದ್ದಿ

ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಸಿದ್ದಶ್ರೀ ಪ್ರಶಸ್ತಿ

ಕೊರಟಗೆರೆ: ಸಸ್ಯಸಂಜೀವಿನಿ ಕ್ಷೇತ್ರ ಸಿದ್ದರಬೆಟ್ಟ ಶ್ರೀಮಠದಲ್ಲಿ ಜೂ.21ರ ಭಾನುವಾರ ನಡೆಯುವ 20ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಶ್ರೀಮಠದ ಸಿದ್ದಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಬಾಳೆಹೊನ್ನೂರು ಖಾಸಾ ಶಾಖಾ ಶ್ರೀಮಠದ ಶ್ರೀವೀರಭದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.



ಕೊರಟಗೆರೆ ಪಟ್ಟಣದ ಬಸವೇಶ್ವರ ದೇವಾಲಯದಲ್ಲಿ ಸಿದ್ದರಬೆಟ್ಟ ಶ್ರೀಮಠ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಮಂಗಳವಾರ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಸಿದ್ದರಬೆಟ್ಟ ಶ್ರೀಮಠದಿಂದ ನಡೆಯಲಿರುವ 20ನೇ ವಾರ್ಷಿಕೋತ್ಸವ ಮತ್ತು ಧರ್ಮಜಾಗೃತಿ ಕಾರ್ಯಕ್ರಮಕ್ಕೆ ಈಗಾಗಲೇ 15ಜೋಡಿಗಳು ನೋಂದಣಿ ಆಗಿದೆ. ಜೂ.20ರ ತನಕ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಶ್ರೀಗಳು ಮಾಹಿತಿ ನೀಡಿದರು.

ಎಸ್‌ಐಟಿ ತಂಡದ ಕಾರು ಪಲ್ಟಿ

ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದ ಬುರುಡೆ ಪ್ರಕರಣದ ಎಸ್‌ಐಟಿ ತಂಡದ ಎಸ್ಪಿ ಮತ್ತು ಇತರ ಅಧಿಕಾರಿಗಳು ಪ್ರಯಾಣಿಸುತ್ತಿದ್ದ ಇನೋವಾ ಕಾರು ಚಾರ್ಮಾಡಿ ಘಾಟಿ ಬಳಿ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಬೆಳ್ತಂಗಡಿ ಎಸ್‌ಐಟಿ ಕಚೇರಿಯಿಂದ ಎಸ್ಪಿ ಸಿ.ಎ. ಸೈಮನ್, ಇನ್ಸ್‌ಪೆಕ್ಟರ್ ಕುಸುಮಾಧರ್, ಸಿಬ್ಬಂದಿ ಮಂಜುನಾಥ್ ಸೇರಿ ಚಿಕ್ಕಮಗಳೂರು ಜಿಲ್ಲಾ ಎಸ್ಪಿ ಹಾಗೂ ಎಸ್‌ಐಟಿ ತನಿಖಾಧಿಕಾರಿಯಾಗಿರುವ ಜಿತೇಂದ್ರಕುಮಾರ್ ದಯಾಮ ಅವರನ್ನು ಭೇಟಿ ಮಾಡಿ ಬುರುಡೆ ಪ್ರಕರಣದ ಚಿನ್ನಯ್ಯ ಹೈಕೋರ್ಟ್ ರಿಟ್ ಪಿಟಿಷನ್ ಹಾಕಿರುವ ಬಗ್ಗೆ ಮಾತುಕತೆ ನಡೆಸಲು ತೆರಳುತ್ತಿದ್ದಾಗ ಜೂ.16 ರಂದು ಮಧ್ಯಾಹ್ನ ಚಾರ್ಮಾಡಿಯಲ್ಲಿ ನಿಯಂತ್ರಣ ತಪ್ಪಿ ಪೊಲೀಸ್ ಇಲಾಖೆ ಇನೋವಾ ಕಾರು ಪಲ್ಟಿಯಾಗಿದೆ. ಇನೋವಾ ಕಾರಿನಲ್ಲಿ ಚಾಲಕ ಸೇರಿ ಒಟ್ಟು ನಾಲ್ಕು ಜನ ಪ್ರಯಾಣಿಸುತ್ತಿದ್ದರು. ಘಟನೆಯಲ್ಲಿ ಯಾರಿಗೂ ಯಾವುದೇ ಗಾಯವಾಗಿಲ್ಲ, ಇನೋವಾ ಕಾರು ಪಲ್ಟಿ ರಭಸಕ್ಕೆ ಹಾನಿಯಾಗಿದ್ದು. ಈ ಬಗ್ಗೆ ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಕಾರಿನಲ್ಲಿದ್ದ 4 ಜನ ಆಗಮಿಸಿದ್ದಾರೆ.

ಬಸ್-ಕ್ಯಾಂಟರ್ ಅಪಘಾತ: ಮೂವರ ಸಾವು

ಚಡಚಣ: ಚಡಚಣ ತಾಲೂಕಿನಲ್ಲಿ ಒಂದೇ ದಿನದ ಅಂತರದಲ್ಲಿ ಮತ್ತೊಂದು ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಕೆಎಸ್ಆರ್‌ಟಿಸಿ ಬಸ್ ಹಾಗೂ ಸಿಮೆಂಟ್ ಸಾಗಿಸುತ್ತಿದ್ದ ಕ್ಯಾಂಟರ್ ನಡುವೆ ನಡೆದ ಮುಖಾಮುಖಿ ಡಿಕ್ಕಿಯಲ್ಲಿ ಮೂವರು ಮೃತಪಟ್ಟಿದ್ದು, 27ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ರಾಜ್ಯ ಹೆದ್ದಾರಿ 41ರ ಬರಡೋಲ ಗ್ರಾಮ ಹಾಗೂ ಲೋಣಿ ಕ್ರಾಸ್ ನಡುವೆ ಚಡಚಣ ಪೊಲೀಸ್ ಸರಹದ್ದಿನಲ್ಲಿ ಮಂಗಳವಾರ ಬೆಳಗ್ಗೆ ಈ ದುರ್ಘಟನೆ ನಡೆದಿದೆ. ಅಪಘಾತದ ತೀವ್ರತೆಗೆ ಬಸ್ ಚಾಲಕ ಹಣಮಂತ ಚಲವಾದಿ(38) ನಿಡಗುಂದಿ, ಕ್ಯಾಂಟರ್ ಚಾಲಕ ಅಶೋಕ ಮಹಾದೇವ ಉಟಗಿ (32) ಹಾಗೂ ಅವರ ಪತ್ನಿ ರಾಧಾಬಾಯಿ ಅಶೋಕ ಉಟಗಿ (28), ಹಾವಿನಾಳ ಗ್ರಾಮದ ನಿವಾಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ಮಾಹಿತಿ ತಿಳಿಯುತ್ತಿದ್ದಂತೆ ಚಡಚಣ ಪೊಲೀಸ್ ಠಾಣೆಯ ಪಿಎಸ್ಐ ಸೋಮೇಶ ಗೆಜ್ಜಿ, ವೃತ್ತ ನಿರೀಕ್ಷಕ ಪರಶುರಾಮ ಮನಗೂಳಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸರಸಂಘಚಾಲಕರಿಗೆ ಪತ್ರ | ಪ್ರಿಯಾಂಕ್ ಖರ್ಗೆಗೆ ವಿಜಯೇಂದ್ರ ತಿರುಗೇಟು

ಪಾರದರ್ಶಕ ಚಟುವಟಿಕೆ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಪಾರದರ್ಶಕ ಬದ್ಧತೆಯನ್ನು ಪಸರಿಸುವಲ್ಲಿ ತೋರಿದ ಸಮರ್ಪಣೆ ಹಾಗೂ ತ್ಯಾಗದ ಪ್ರತೀಕವಾಗಿ ಇಂದು ವಿಶ್ವದ ಅತ್ಯಂತ ದೊಡ್ಡ ಸಂಸ್ಥೆಯಾಗಿ ಬೆಳೆದು ನಿಂತಿದೆ. ಆರ್‌ಎಸ್‌ಎಸ್ ಚಟುವಟಿಕೆಗಳೆಲ್ಲವೂ ನೇರ-ದಿಟ್ಟ- ಪಾರದರ್ಶಕ. ಪ್ರತೀ ಚಟುವಟಿಕೆಗಳೂ ಬಹಿರಂಗದಲ್ಲಿ ಅನಾವರಣ. ಅದು ಮದರಸಾಗಳಂತೆ ಗುಪ್ತವಾಗಿ ಕಾರ್ಯ ನಿರ್ವಹಿಸುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸರಸಂಘ ಚಾಲಕರಿಗೆ ಪತ್ರ ಬರೆದಿರುವುದಕ್ಕೆ ಸಾಮಾಜಿಕ ಜಾಲತಾಣದಲ್ಲಿ ವಿಜಯೇಂದ್ರ ಪ್ರತಿಕ್ರಿಯಿಸಿದ್ದಾರೆ.

ಸ್ವಾತಂತ್ರ್ಯ ಯೋಧರು ಉದಾತ್ತ ಉದ್ದೇಶಕ್ಕಾಗಿ ತಮ್ಮ ಬೆವರ ಹನಿಯ ಹಣವನ್ನು ತೊಡಗಿಸಿ ಕಟ್ಟಿದ ಸುಮಾರು 5000 ಕೋಟಿ ರೂ. ಆಸ್ತಿ ಹೊಂದಿದ್ದ ಹೆರಾಲ್ಡ್ ಸಂಸ್ಥೆಯನ್ನು ಯಂಗ್ ಇಂಡಿಯನ್ ಹೆಸರಲ್ಲಿ ನುಂಗಿ ನೀರು ಕುಡಿದ ನೆಹರು ಕುಟುಂಬದ ಮಹಾನ್ ಫಲಾನುಭವಿಗಳಾಗಿರುವ ಖರ್ಗೆ ಕುಟುಂಬದ ಪ್ರಿಯಾಂಕ್ ಖರ್ಗೆ ಅವರೇ, ರಾಷ್ಟ್ರ ವಿಧ್ವಂಸಕ ಚಟುವಟಿಕೆಯ ಅನೇಕ ಅಲ್ಪಸಂಖ್ಯಾತ ಹೆಸರಿನ ಮತೀಯವಾದಿ ಸಂಘಟನೆಗಳು ಈ ದೇಶದಲ್ಲಿ ತಲೆಯೆತ್ತಿರುವುದು, ಅಕ್ರಮ ವಿದೇಶಿ ದೇಣಿಗೆ ಪಡೆದು ರಾಷ್ಟ್ರದ್ರೋಹಿ ಚಟುವಟಿಕೆಗಳಲ್ಲಿ ತೊಡಗಿಸುತ್ತಿರುವ ಮಾಹಿತಿ ಗೃಹ ಇಲಾಖೆ ನಡೆಸುತ್ತಿರುವ ನಿಮ್ಮ ಬಳಿಯೇ ಇದೆ. ಈ ಬಗ್ಗೆ ಪತ್ರ ಬರೆದು ಆ ಸಂಸ್ಥೆಗಳಿಂದ ವಿವರ ಏಕೆ ನೀವು ಕೇಳುವುದಿಲ್ಲ? ಎಂದು ಪ್ರಶ್ನಿಸಿದ್ದಾರೆ.



> ಆರ್‌ಎಸ್‌ಎಸ್ ಅನ್ನು ಬಾಲಿಶವಾಗಿ ಟೀಕಿಸುವುದು, ಆ ಮೂಲಕ ನೆಹರು ಕುಟುಂಬದ ಕುಡಿಗಳನ್ನು ಸಂತೃಪ್ತಿಪಡಿಸುವುದು. ಇದರಲ್ಲಿ ನಿಮಗೆ ವಿಕೃತ ಖುಷಿ ಸಿಗುವುದಾದರೆ ಬೈದುಕೊಳ್ಳಿ, ನಿಮ್ಮ ಬಗ್ಗೆ ಮರುಕ ಉಂಟಾಗುತ್ತದೆ. ಏಕೆಂದರೆ, ನೀವು ಆಕಾಶಕ್ಕೆ ಉಗುಳುತ್ತಿದ್ದೀರಿ ಎಂಬ ಸತ್ಯ ನಿಮಗರಿವಿದೆಯೋ ಇಲ್ಲವೋ ಆದರೆ ಈ ಕಾಯಕದಲ್ಲಿ ನಿಮಗೆ ಸಂತೃಪ್ತಿ ಸಿಗುವುದಾದರೆ ಇದನ್ನು ಮುಂದುವರಿಸಿ.
>
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಕಾಂಗ್ರೆಸ್ ಹೆಸರು ಬದಲಿಸಲು ಸಲಹೆ ನೀಡಿ: ಛಲವಾದಿ

ಮಹಾತ್ಮ ಗಾಂಧಿಯವರು 1948ರಲ್ಲಿ ಕಾಂಗ್ರೆಸ್ ವಿಸರ್ಜನೆ ಮಾಡಲು ಹೇಳಿದ್ದರು. ಕಾಂಗ್ರೆಸ್ ಹೆಸರು ಬದಲಿಸಿ ಲೋಕ ಸೇವಕ ಸಂಘ ಎಂಬ ಹೆಸರಿಡಲು, ಮಹಿಳೆಯರು, ಹರಿಜನರು, ಗೋವುಗಳ ರಕ್ಷಣೆಗೆ ನಿಲ್ಲಲು ಹೇಳಿದ್ದರಲ್ಲವೇ? ಈಗ ನಿಮ್ಮ ತಂದೆಯವರೇ ಎಐಸಿಸಿ ಅಧ್ಯಕ್ಷರಿದ್ದಾರೆ. ಮಹಾತ್ಮ ಗಾಂಧಿಯವರ ಆಶಯಕ್ಕೆ ಅನುಗುಣವಾಗಿ ಕಾಂಗ್ರೆಸ್ಸನ್ನು ವಿಸರ್ಜಿಸುವುದು ಯಾವಾಗ ಎಂದು ಯಾಕೆ ಇನ್ನೂ ನೀವು ಪತ್ರ ಬರೆದಿಲ್ಲ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

ಹೈಕಮಾಂಡ್ ಓಲೈಕೆಗಾಗಿ ಕಾಂಗ್ರೆಸ್ ಹಪಾಹಪಿ

ನೂರು ವರ್ಷಗಳಿಂದ ಯಾವುದೇ ಅಪೇಕ್ಷೆಯಿಲ್ಲದೆ, ನಿಸ್ವಾರ್ಥವಾಗಿ ಭಾರತಾಂಬೆಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ರಾಷ್ಟ್ರಭಕ್ತ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾನೂನು ಬದ್ಧತೆ ಹಾಗೂ ದೇಶನಿಷ್ಠೆಯನ್ನು ಪ್ರಶ್ನೆ ಮಾಡುತ್ತಿರುವುದು ಹಾಸ್ಯಾಸ್ಪದ ಮಾತ್ರವಲ್ಲ, ನಾಚಿಕೆಗೇಡಿತನದ ಪರಮಾವಧಿ. ಪಾಕಿಸ್ತಾನ್ ಜಿಂದಾಬಾದ್ ಎಂದು ಅಟ್ಟಹಾಸದಿಂದ ಘೋಷಣೆ ಕೂಗಿದರು. ಕಣ್ಣು, ಕಿವಿ ಮುಚ್ಚಿ ಕುಳಿತಿದ್ದು ಯಾಕೆ? ಹೈಕಮಾಂಡ್ ಓಲೈಕೆಯ ಹಪಾಹಪಿಗಾಗಿ ಅಲ್ಲವೇ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಪ್ರಶ್ನಿಸಿದ್ದಾರೆ.

ಮದರಸಾಗಳಂತೆ ಆರ್‌ಎಸ್‌ಎಸ್ ಗುಪ್ತವಾಗಿ ಕಾರ್ಯ ನಿರ್ವಹಿಸುವುದಿಲ್ಲ. ಕೇವಲ ಮತಾಂಧತೆಯನ್ನು ಬಿತ್ತಿ ರಾಷ್ಟ್ರೀಯತೆ ವಿರೋಧಿಸಲು ಪ್ರಚೋದನೆ ನೀಡುವ ಮದರಸದಂಥಾ ಸಂಸ್ಥೆಗಳ ಚಟುವಟಿಕೆಗಳು ನಿಮ್ಮ ಕಣ್ಣಿಗೆ ಬೀಳುವುದಿಲ್ಲ, ಕಿವಿಗೂ ಕೇಳಿಸುವುದಿಲ್ಲ, ಏಕೆಂದರೆ ಅದರ ಮೂಲದಿಂದ ಉತ್ಪತ್ತಿಯಾಗುತಿರುವ ಮತಬ್ಯಾಂಕ್ ಆಧರಿಸಿ ಅಧಿಕಾರ ಅನುಭವಿಸುತ್ತಿರುವ ನಿಮಗೆ ರಾಷ್ಟ್ರ ವಿಧ್ವಂಸಕ ಚಟುವಟಿಕೆ ಬಗ್ಗೆ ತಲೆಕೆಡಿಸಿಕೊಳ್ಳುವ ಬದ್ಧತೆ-ನೈತಿಕತೆ ಇರಲು ಹೇಗೆ ಸಾಧ್ಯ? ಎಂದು ಕೇಳಿದ್ದಾರೆ.

ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು: ಡಿಕೆಶಿ



ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು ಮಾಡಬೇಕೆಂದು ತೀರ್ಮಾನಿಸಲಾಗಿದ್ದು, ಈ ಸಂಬಂಧ ಈಗಾಗಲೇ ಸಿದ್ಧತೆ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಮಂಗಳವಾರ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆಗೆ ಪೂರ್ವಭಾವಿ ಸಭೆಯ ಬಳಿಕ ಮಾತನಾಡಿ, ಪ್ರತಿ ವರ್ಷದಂತೆ ಜೂನ್ 27 ರಂದು ಕೆಂಪೇಗೌಡ ಜಯಂತಿ ಆಚರಣೆ ಮಾಡುತ್ತೇವೆ. ಅದರಂತೆ ಪೂರ್ವಭಾವಿ ಸಭೆ ಕರೆಯೋದು ವಾಡಿಕೆ. ಯಾವ ರೀತಿ ಕಾರ್ಯಕ್ರಮ ಮಾಡಬೇಕು ಎಂಬುದರ ಬಗ್ಗೆ ಸಲಹೆ ತೆಗೆದುಕೊಳ್ಳಲು ಎಲ್ಲ ಸಂಘಟನೆಗಳನ್ನ ಕರೆಸಿ ಚರ್ಚೆ ಮಾಡಿದ್ದೇವೆ. ಅನೇಕರು ಕಾರ್ಯಕ್ರಮದ ಬಗ್ಗೆ ಅನೇಕ ಸಲಹೆ ಕೊಟ್ಟಿದ್ದಾರೆ ಎಂದರು.

ಈ ವರ್ಷ ಜೂ.27ರಂದು ನಾಡಪ್ರಭು ಕೆಂಪೇಗೌಡ ನೂತನ ಬಡಾವಣೆಯಲ್ಲಿ ಮಾಡಬೇಕು ಎಂದು ತೀರ್ಮಾನಿಸಲಾಗಿದೆ. ಅಲ್ಲದೇ, ಬಿಡಿಎ ವತಿಯಿಂದ ಶಾಸಕ ಎನ್.ಎ.ಹ್ಯಾರಿಸ್ ಮತ್ತು ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಅಂದೇ 15 ಲಕ್ಷ ಸಸಿಗಳನ್ನು ಬಡಾವಣೆಯಲ್ಲಿಯೇ ನೆಡಲು ತೀರ್ಮಾನಿಸಲಾಗಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಒಂದು ಲಕ್ಷ ಅನುದಾನ: ಪ್ರತಿ ವಾರ್ಡ್ ಹಾಗೂ ವಿಧಾನಸಭಾ ಕ್ಷೇತ್ರಗಳಿಗೆ ಕೆಂಪೇಗೌಡ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲು ತಲಾ ಒಂದು ಲಕ್ಷ ರೂ. ನೀಡಲಾಗುತ್ತದೆ ಎಂದರು.

ಥೀಮ್ ಪಾರ್ಕ್ ಉದ್ಘಾಟನೆ

ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಥೀಮ್ ಪಾರ್ಕ್ ಉದ್ಘಾಟನೆಗೆ ಸಿದ್ಧವಾಗಿದೆ. ಸಚಿವ ಕೃಷ್ಣ ಬೈರೇಗೌಡ ಅವರು ಅದರ ಜವಾಬ್ದಾರಿ ತೆಗೆದುಕೊಂಡು ಕಾರ್ಯಕ್ರಮ ರೂಪಿಸಿದ್ದಾರೆ. ಯಾವ ಸ್ವಾಮಿಗಳು ಹಾಗೂ ಯಾವ ನಾಯಕರನ್ನ ಆಹ್ವಾನಿಸಬೇಕು ಎಂಬ ಜವಾಬ್ದಾರಿ ಕೃಷ್ಣ ಬೈರೇಗೌಡರು ತೆಗೆದುಕೊಂಡಿದ್ದಾರೆ. ಸಂಘಟನೆಗಳ ಜೊತೆ ಅವರೇ ಸಂಪರ್ಕ ಮಾಡುತ್ತಾರೆ. ಒಕ್ಕಲಿಗರ ಸಂಘದವರ ತಂಡದ ಜವಾಬ್ದಾರಿಯನ್ನು ಸಚಿವರೇ ತೆಗೆದುಕೊಂಡಿದ್ದಾರೆ.

ಜಲಮೂಲ ಗುರುತಿಸಿ, ನೀರು ಪರೀಕ್ಷಿಸಿ: ಸಚಿವ ಈಶ್ವರ ಖಂಡ್ರೆ

ಬೆಂಗಳೂರು: ರಾಜ್ಯದಲ್ಲಿ ಮಳೆ ಕೊರತೆ ಮುನ್ಸೂಚನೆ ಹಿನ್ನೆಲೆಯಲ್ಲಿ ಪರ್ಯಾಯ ಜಲಮೂಲಗಳನ್ನು ಗುರುತಿಸಿ, ನೀರಿನ ಪರೀಕ್ಷೆ ಮಾಡಿ ಸನ್ನದ್ಧ ಸ್ಥಿತಿಯಲ್ಲಿರುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾರ್ಯದರ್ಶಿಗಳಿಗೆ ಸಚಿವರು ಈ ಸಂಬಂಧ ಲಿಖಿತ ಸೂಚನೆ ನೀಡಿದ್ದಾರೆ. ಜೂನ್ ಮಧ್ಯಭಾಗದ ಹೊತ್ತಿಗೆ ರಾಜ್ಯದಲ್ಲಿ ವಾಡಿಕೆಯಂತೆ ಆಗಬೇಕಿದ್ದ ಮಳೆ ಆಗಿಲ್ಲ, ಎಲ್ ನಿನೋ ಪ್ರಭಾವದಿಂದಾಗಿ ಮುಂಗಾರು ಮಳೆ ಕೊರತೆ ಉಂಟಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಮುಂಜಾಗರೂಕತಾ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ. ಈ ಸಂಬಂಧ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಖಾಸಗಿ ತೆರೆದ ಬಾವಿ, ಕೊಳವೆಬಾವಿಗಳನ್ನು ಗುರುತಿಸಬೇಕು. ತರುವಾಯ ಆ ಬಾವಿಗಳ ನೀರಿನ ಪ್ರಮಾಣ, ಲಭ್ಯತೆ ಖಚಿತಪಡಿಸಿಕೊಂಡು ನೀರು ಕುಡಿಯಲು ಯೋಗ್ಯವಾಗಿದೆಯೇ ಇಲ್ಲವೇ ಎಂಬ ಬಗ್ಗೆ ಪರೀಕ್ಷೆ ನಡೆಸಬೇಕು. ಅಂತಹ ಖಾಸಗಿ ಜಲಮೂಲಗಳ ಮಾಲೀಕರೊಂದಿಗೆ ಮಾತನಾಡಿ, ಅಗತ್ಯ ಬಿದ್ದಲ್ಲಿ ನೀರು ಬಳಕೆ ಮಾಡುವ ಬಗ್ಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಂಡು ಸನ್ನದ್ಧ ಸ್ಥಿತಿಯಲ್ಲಿರುವಂತೆ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಟೌನ್‌ಶಿಪ್ ವಿಚಾರದಲ್ಲಿ ಜೆಡಿಎಸ್ ರಾಜಕಾರಣ: ಟೀಕೆ

ಮೈಸೂರು: ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಜೆಡಿಎಸ್ ರಾಜಕಾರಣ ಮಾಡುತ್ತಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದರು. ಮಂಗಳವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಡದಿ ಟೌನ್‌ಶಿಪ್ ಮಾಡುವ ಅವಶ್ಯಕವಿದೆ. ಶೇ.80ರಷ್ಟು ರೈತರು ಜಮೀನು ಕೊಡಲು ಒಪ್ಪಿದ್ದಾರೆ. ಕೆಲವರು ಹೆಚ್ಚಿನ ಪರಿಹಾರಕ್ಕೆ ಒಪ್ಪಿದ್ದಾರೆ. ಆದರೆ ಕೆಲವರು ಮಾತ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಅಂತವರ ಮಾತನ್ನು ಕೇಳಿ ಯೋಜನೆ ಕೈ ಬಿಡಲು ಆಗುವುದಿಲ್ಲ ಎಂದರು. ಬೆಂಗಳೂರಿನಲ್ಲಿ ಜನಸಂದಣಿ ಹೆಚ್ಚಾಗಿದೆ. ಎಷ್ಟೋ ಜನರಿಗೆ ನಿವೇಶನದ ಅಗತ್ಯ ಇದೆ. ಬೆಂಗಳೂರು ಜನಸಂಖ್ಯೆ ಚದುರಿಸುವ ಅಗತ್ಯವಿದೆ. ಬೆಂಗಳೂರು ವಿಸ್ತರಿಸುವ ಅವಶ್ಯಕತೆ ಇದೆ ಎಂದರು.

ಆರೆಸ್ಸೆಸ್ ಆರ್ಥಿಕ ಪಾರದರ್ಶಕತೆ ಬಹಿರಂಗಪಡಿಸಲಿ: ಖರ್ಗೆ

ಹೊಸದಿಲ್ಲಿ/ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ತಮ್ಮ ಆಕ್ಷೇಪವನ್ನು ಮುಂದುವರಿಸಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು, ಆರ್‌ಎಸ್‌ಎಸ್ ಸಂಸ್ಥೆಯು ತನ್ನ ನೋಂದಣಿ ಹಾಗೂ ಆರ್ಥಿಕ ಪಾರದರ್ಶಕತೆಯನ್ನು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ದಿಲ್ಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಅವರು, ದೇಶದ ಪ್ರಮುಖ ಸಂಘಟನೆಯಾದ ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಅಸ್ತಿತ್ವದ ಶತಮಾನೋತ್ಸವದ (100 ವರ್ಷ) ಸಂದರ್ಭದಲ್ಲಾದರೂ ತನ್ನ ಕಾನೂನುಬದ್ಧ ಸ್ಥಾನಮಾನವನ್ನು ಸ್ಪಷ್ಟಪಡಿಸಬೇಕು ಎಂದಿದ್ದಾರೆ.




ಕರ್ನಾಟಕವೊಂದರಲ್ಲೇ 4,127 ದೈನಂದಿನ ಶಾಖೆಗಳು, 1,389 ವಾರಾಂತರ ಸಭೆಗಳು, 60 ಮಾಸಿಕ ಮಂಡಳಿಗಳು ನಡೆಯುತ್ತಿವೆ. ಜೊತೆಗೆ 500ಕ್ಕೂ ಹೆಚ್ಚು ಪಥಸಂಚಲನ ಹಾಗೂ ಲಕ್ಷಾಂತರ ಜನರು ಭಾಗವಹಿಸುವ ಸಮಾಜೋತ್ಸವಗಳು ನಿರಂತರವಾಗಿ ಜರುಗುತ್ತಿವೆ. ಇಷ್ಟು ದೊಡ್ಡ ಮಟ್ಟದ ಸಾರ್ವಜನಿಕ ಸಜ್ಜುಗೊಳಿಸುವಿಕೆ ಹಾಗೂ ಗಣವೇಶಧಾರಿ ಪಥ ಸಂಚಲನಗಳನ್ನು ಖಾಸಗಿ ಅಥವಾ ಅನೌಪಚಾರಿಕ ವ್ಯವಸ್ಥೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಇದಕ್ಕೆ ಸಂಬಂಧಿಸಿದ ಆಡಳಿತಾತ್ಮಕ ಅನುಮತಿಗಳ ವಿವರಗಳನ್ನು ಒದಗಿಸಬೇಕು ಎಂದು ಹೇಳಿದರು.

ಆರ್‌ಎಸ್‌ಎಸ್ ಕೇವಲ ಸಂಭ್ರಮಾಚರಣೆಗೆ ಸೀಮಿತವಾಗದೆ, ಭಾರತೀಯ ಸಂವಿಧಾನಕ್ಕೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. 100ನೇ ವರ್ಷದಲ್ಲಿ ಸಂಘಟನೆಯು ಕಾನೂನುಬದ್ಧವಾಗಿ ನೋಂದಾಯಿಸಿಕೊಂಡು, ಪಾರದರ್ಶಕತೆಯಿಂದ ಕಾರ್ಯ ನಿರ್ವಹಿಸುವುದೇ ದೇಶಕ್ಕೆ ನೀಡುವ ಅತ್ಯುತ್ತಮ ಕೊಡುಗೆಯಾಗಿದೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರೂ ಕಾನೂನಿಗಿಂತ ಮಿಗಿಲಲ್ಲ ಎಂದು ಸಚಿವರು ಪುನರುಚ್ಚರಿಸಿದ್ದಾರೆ.

ಸರ್ಕಾರ ರಚನೆ ವಿರುದ್ಧ ಕೋರ್ಟ್ ಮೆಟ್ಟಿಲೇರಿದ ವ್ಯಕ್ತಿಗೆ ದಂಡ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ನೇತೃತ್ವದ 14 ಮಂದಿ ಸಚಿವರ ಪ್ರಮಾಣ ವಚನ ಸ್ವೀಕಾರ ಹಾಗೂ ಮಂತ್ರಿಮಂಡಲದ ರಚನೆ ಸಂವಿಧಾನ ಬಾಹಿರ ಎಂದು ಘೋಷಿಸುವಂತೆ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದ ವ್ಯಕ್ತಿಗೆ ಕರ್ನಾಟಕ ಹೈಕೋರ್ಟ್ ಬರೋಬ್ಬರಿ 50 ಸಾವಿರ ರೂ.ದಂಡ ವಿಧಿಸಿದೆ.



ಈ ವಿಚಾರವಾಗಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ 13 ಮಂದಿ ನೂತನ ಸಚಿವರನ್ನು ಪ್ರತಿವಾದಿಗಳನ್ನಾಗಿ ಮಾಡಿ ಹುಬ್ಬಳ್ಳಿಯ ನಿವಾಸಿ ಮಂಗಳಪ್ಪ ಹುಲಿಕೇರಿ ಎಂಬುವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರ ವಿಭಾಗೀಯ ಪೀಠ ವಜಾ ಗೊಳಿಸಿದೆ.

ಕೆಲ ಕಾಲ ವಾದ ಆಲಿಸಿದ ಪೀಠವು ಇದೊಂದು ಊಹೆ ಮತ್ತು ಗ್ರಹಿಕೆಗಳ ಆಧಾರದಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳಲು ಸಲ್ಲಿಸಲಾಗಿರುವ ಕ್ಷುಲ್ಲಕ ಅರ್ಜಿಯಾಗಿದೆ.

ಇಂತಹ ಅರ್ಜಿ ಸಲ್ಲಿಸುವ ಮೂಲಕ ನ್ಯಾಯಾಲಯದ ಸಮಯ ಹಾಳು ಮಾಡಲಾಗಿದೆ ಎಂದು ಹೇಳಿ ಅರ್ಜಿದಾರರಿಗೆ 50 ಸಾವಿರ ರೂಪಾಯಿ ದಂಡ ವಿಧಿಸಿ ಅರ್ಜಿ ವಜಾಗೊಳಿಸಿ ಆದೇಶಿಸಿತು.

ವೀರಶೈವ ಪ್ರಧಾನ ಕಾರ್ಯದರ್ಶಿ ನೇಮಕ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭೆಯ ಮಹಾಪ್ರಧಾನ ಕಾರ್ಯದರ್ಶಿಯಾಗಿ ದಿ.ಶಾಮನೂರು ಶಿವಶಂಕರಪ್ಪ ಪುತ್ರ ಎಸ್.ಎಸ್ ಗಣೇಶ್ ಅವರು ನೇಮಕಗೊಂಡಿದ್ದಾರೆ. ಎಸ್.ಎಸ್ ಗಣೇಶ್ ಅವರನ್ನು ಮಹಾಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಿರುವ ಮಹಾಸಭಾದ ಅಧ್ಯಕ್ಷ ಈಶ್ವರ ಖಂಡ್ರೆ ಅವರು, ಮಹಾಸಭಾ ಸಂವಿಧಾನ ನಿಯಮ 26ರಂತೆ ಕರ್ತವ್ಯ ನಿರ್ವಹಿಸುವುದರ ಜತೆಗೆ ಮಹಾಸಭೆಯ ಗುರಿ ಮತ್ತು ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸಲು ತತ್‌ಕ್ಷಣದಿಂದ ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದ್ದಾರೆ.

12 ರಾಜ್ಯಗಳ ಮೇಲೆ ಎಲ್ ನಿನೋ ಪ್ರಭಾವ | ರಾಜ್ಯದ ಹಲವು ಜಿಲ್ಲೆಗಳ ಮೇಲೆ ತೀವ್ರ ಪರಿಣಾಮ ಸಾಧ್ಯ

ಕರ್ನಾಟಕದಲ್ಲಿ ಬರಗಾಲದ ಎಚ್ಚರಿಕೆ

ಹೊಸದಿಲ್ಲಿ: ಈ ವರ್ಷದ ಮುಂಗಾರು ಹಂಗಾಮಿನಲ್ಲಿ ಎಲ್ ನಿನೋ ಹವಾಮಾನ ವಿದ್ಯಮಾನವು ಕರ್ನಾಟಕ ಸೇರಿದಂತೆ 12 ರಾಜ್ಯಗಳ ಮೇಲೆ ತೀವ್ರ ಪರಿಣಾಮ ಬೀರಬಹುದೆಂದು ಕೇಂದ್ರ ಕೃಷಿ ಸಚಿವಾಲಯ ಎಚ್ಚರಿಕೆ ನೀಡಿದೆ. ರಾಜ್ಯದಲ್ಲಿ ಮಳೆ ಕೊರತೆ, ಬೆಳೆ ನಷ್ಟ ಹಾಗೂ ನೀರಿನ ಅಭಾವದ ಸಾಧ್ಯತೆಗಳಿರುವ ಹಿನ್ನೆಲೆಯಲ್ಲಿ ಜಿಲ್ಲಾಮಟ್ಟದಲ್ಲೇ ಮುಂಗಡ ತುರ್ತು ಕಾರ್ಯಯೋಜನೆ ರೂಪಿಸಲು ಕೇಂದ್ರ ಸರ್ಕಾರ ಸೂಚಿಸಿದೆ.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಖಾರೀಫ್-2026 ಸಿದ್ಧತಾ ಪರಿಶೀಲನಾ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಸಲಾಗಿದೆ. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಉತ್ತರ ಪ್ರದೇಶ, ರಾಜಸ್ಥಾನ ಸೇರಿದಂತೆ 12 ರಾಜ್ಯಗಳು ಎಲ್ ನಿನೋದಿಂದ ಹೆಚ್ಚು ಬಾಧಿತವಾಗುವ ಸಾಧ್ಯತೆಯಿರುವ ರಾಜ್ಯಗಳೆಂದು ಗುರುತಿಸಲಾಗಿದೆ.

ಕೇಂದ್ರದ ಮಾಹಿತಿ ಪ್ರಕಾರ, ಈ ರಾಜ್ಯಗಳ 326 ಜಿಲ್ಲೆಗಳಿಗೆ ವಿಶೇಷ ಮುನ್ನೆಚ್ಚರಿಕಾ ಯೋಜನೆ ಸಿದ್ಧಪಡಿಸಲಾಗುತ್ತಿದೆ. ಕರ್ನಾಟಕದಲ್ಲಿಯೂ ಮಳೆ ಕೊರತೆಯ ಅಪಾಯ ಎದುರಾಗಬಹುದಾದ ಜಿಲ್ಲೆಗಳನ್ನು ಗುರುತಿಸಿ, ಬೆಳೆವಾರು ಪರ್ಯಾಯ ಯೋಜನೆಗಳನ್ನು ರೂಪಿಸುವಂತೆ ಸೂಚಿಸಲಾಗಿದೆ.

ಕರ್ನಾಟಕಕ್ಕೆ ಏಕೆ ಹೆಚ್ಚು ಆತಂಕ?

- ಎಲ್ ನಿನೋದಿಂದ ಮುಂಗಾರು ಮಳೆ ಕುಂಠಿತವಾಗುವ ಸಾಧ್ಯತೆ
- ಮಳೆ ಆಧಾರಿತ ಕೃಷಿ ಪ್ರದೇಶಗಳಲ್ಲಿ ಬೆಳೆ ನಷ್ಟದ ಅಪಾಯ
- ಜಲಾಶಯಗಳ ನೀರಿನ ಸಂಗ್ರಹದ ಮೇಲೆ ಪರಿಣಾಮ ಸಾಧ್ಯ
- ರಾಗಿ, ತೊಗರಿ, ಜೋಳ ಸೇರಿ ಮಳೆ ಅವಲಂಬಿತ ಬೆಳೆಗಳಿಗೆ ಹೊಡೆತ ಬೀಳುವ ಆತಂಕ
- ಜಿಲ್ಲಾವಾರು ಪರ್ಯಾಯ ಬೆಳೆ ಹಾಗೂ ನೀರು ಸಂರಕ್ಷಣಾ ಯೋಜನೆ ರೂಪಿಸಲು ಸೂಚನೆ

ಚವ್ಹಾಣ್ ಅವರು ಜಿಲ್ಲಾಧಿಕಾರಿಗಳು, ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರಗಳು (ಕೆವಿಕೆ) ಹಾಗೂ ವಿಸ್ತರಣಾ ವ್ಯವಸ್ಥೆಗಳೊಂದಿಗೆ ಸಮನ್ವಯ ಸಭೆಗಳನ್ನು ನಡೆಸಿ ರೈತರಿಗೆ ಮುಂಗಡ ಮಾರ್ಗದರ್ಶನ ನೀಡುವಂತೆ ಸೂಚಿಸಿದ್ದಾರೆ.

ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಪ್ರಕಾರ, ಸಮಭಾಜಕ ಪೆಸಿಫಿಕ್ ಮಹಾಸಾಗರ ಪ್ರದೇಶದಲ್ಲಿ ಈಗಾಗಲೇ ಎಲ್ ನಿನೋ ಪರಿಸ್ಥಿತಿ ನಿರ್ಮಾಣವಾಗಿದ್ದು, ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನಡೆಯುವ ನೈಋತ್ಯ ಮುಂಗಾರು ಅವಧಿಯಲ್ಲಿ ಅದು ಮತ್ತಷ್ಟು ಬಲಗೊಳ್ಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ದೇಶದಲ್ಲಿ ಸಾಮಾನ್ಯ ಪ್ರಮಾಣಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆ ವ್ಯಕ್ತವಾಗಿದೆ.

ಕೇಂದ್ರ ಸರ್ಕಾರವು ಮಳೆ ಕೊರತೆಯ ಜಿಲ್ಲೆಗಳಲ್ಲಿ ನೀರು ಸಂರಕ್ಷಣೆ, ತೇವಾಂಶ ನಿರ್ವಹಣೆ, ಮಿಶ್ರ ಬೆಳೆ ಪದ್ಧತಿ ಹಾಗೂ ಪರ್ಯಾಯ ಬೆಳೆ ಮಾದರಿಗಳ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡುವಂತೆ ಸೂಚಿಸಿದೆ. ರೈತರಿಗೆ ವೈಜ್ಞಾನಿಕ ಮಾಹಿತಿ ಆಧಾರಿತ ಸಲಹೆಗಳನ್ನು ನೀಡಬೇಕು, ಆತಂಕ ಸೃಷ್ಟಿಸುವ ಸಂದೇಶಗಳನ್ನು ತಪ್ಪಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ದೂರಿನ ಹಿನ್ನೆಲೆ ರಾಜ್ಯ ಪೊಲೀಸ್ ಇಲಾಖೆಗೆ ಸರ್ಕಾರ ಸೂಚನೆ

ಖಾಸಗಿತನಕ್ಕೆ ಪ್ರಾಮುಖ್ಯತೆ ನೀಡಿ

ಬೆಂಗಳೂರು: ಅನುಮತಿಯಿಲ್ಲದೇ ಯಾವುದೇ ವ್ಯಕ್ತಿಯ ಖಾಸಗಿ ವಿಡಿಯೋ ಮತ್ತು ಫೋಟೋ ಪ್ರಕಟಿಸುವುದು ಅಥವಾ ಪ್ರಸಾರ ಮಾಡುವ ಪ್ರಕರಣಗಳಲ್ಲಿ ಪೊಲೀಸರು ಅನುಸರಿಸಬೇಕಾದ ಕ್ರಮಗಳ ಕುರಿತು ಸ್ಪಷ್ಟ ಮಾರ್ಗಸೂಚಿಗಳನ್ನು ಪಾಲಿಸುವಂತೆ ರಾಜ್ಯ ಪೊಲೀಸ್ ಇಲಾಖೆಯು ಮಂಗಳವಾರ ಆದೇಶ ಹೊರಡಿಸಿದೆ.

ಇತ್ತೀಚೆಗೆ ಈ ಮೇಲಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ದಾಖಲಿಸುವಲ್ಲಿ ವಿಳಂಬ ಅಥವಾ ಕೆಲವೆಡೆ ನಿರಾಕರಣೆ ಮಾಡುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ, ಈ ಆದೇಶದಲ್ಲಿ ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದರೆ ಪ್ರಸಾರಕ್ಕೂ ಒಪ್ಪಿಗೆ ನೀಡಿದಂತೆ ಅಲ್ಲ ಎಂಬ ಕಾನೂನು ಸ್ಥಿತಿಯನ್ನು ಸ್ಪಷ್ಟಪಡಿಸಲಾಗಿದೆ. ಅಂದರೆ, ಒಬ್ಬ ವ್ಯಕ್ತಿ ಚಿತ್ರ ಸೆರೆಹಿಡಿಯಲು ಒಪ್ಪಿಗೆ ನೀಡಿದ್ದರೂ, ಅದನ್ನು ಹಂಚಲು ಅಥವಾ ಪ್ರಸಾರ ಮಾಡಲು ಒಪ್ಪಿಗೆ ನೀಡದಿದ್ದರೆ, ಅದು ಸಂಜ್ಞೆಯ ಅಪರಾಧವಾಗಲಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) 2023ರ ಸೆಕ್ಷನ್ 77ರಂತೆ ಗೌಪ್ಯತೆ ಉಲ್ಲಂಘನೆಗೆ ಸಂಬಂಧಿಸಿದ ವಿಧಿಗಳು, ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಸೆಕ್ಷನ್ 66(ಇ), 67 ಮತ್ತು 67(ಎ)ಗಳನ್ನು ಅಳವಡಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ. ಮಹಿಳಾ ಸಂತ್ರಸ್ತರಿದ್ದಲ್ಲಿ 77ರ ವಿಧಿಯ ಜೊತೆಗೆ ಐಟಿ ಕಾಯ್ದೆಯ ಸೆಕ್ಷನ್ನಗಳನ್ನು ಸೇರಿಸಿ ಎಫ್‌ಐಆರ್ ಕಡ್ಡಾಯವಾಗಿ ನೋಂದಣಿ ಮಾಡಬೇಕೆಂದು ನಿರ್ದೇಶಿಸಲಾಗಿದೆ.

ತಕ್ಷಣವೇ ಎಫ್‌ಐಆರ್ ನೋಂದಣಿ: ಅನುಮತಿಯಿಲ್ಲದೆ ಖಾಸಗಿ/ಆಪ್ತ ಚಿತ್ರಗಳು ಅಥವಾ ವೀಡಿಯೊಗಳ ಪ್ರಸಾರ ಮತ್ತು ಬೆದರಿಕೆ ವಿಡಿಯೋಗಳು, ರಿವೆಂಜ್ ಪೋರ್ನೋಗ್ರಫಿ ಮುಂತಾದ ಪ್ರಕರಣಗಳಲ್ಲಿ ಕೂಡ ತಕ್ಷಣ ಎಫ್‌ಐಆರ್ ದಾಖಲಿಸಬೇಕು. ಪೀಡಿತರು ಮೊದಲು ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದ್ದರು ಎಂಬ ಕಾರಣಕ್ಕೆ ದೂರು ನಿರಾಕರಿಸಬಾರದು. ಅಪರಾಧ ಸ್ಥಳೀಯ ವ್ಯಾಪ್ತಿಯ ಹೊರಗೆ ನಡೆದಿದ್ದರೆ ಝೀರೋ ಎಫ್‌ಐಆರ್ ದಾಖಲಿಸಿ ಸಂಬಂಧಿತ ಠಾಣೆಗೆ ವರ್ಗಾಯಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಅಪರಾಧಕರ ವಿಷಯವನ್ನು ತಕ್ಷಣ ತೆಗೆದುಹಾಕಲು ಐಟಿ ನಿಯಮಗಳ ಪ್ರಕಾರ ಸಂಬಂಧಿತ ಸಂಸ್ಥೆಗಳಿಗೆ ನೋಟಿಸ್ ನೀಡಬೇಕು ಮತ್ತು ಎಲ್ಲ ಡಿಜಿಟಲ್ ಸಾಕ್ಷಿಗಳನ್ನು ಕಾನೂನುಬದ್ಧವಾಗಿ ಸಂರಕ್ಷಿಸಬೇಕು. ಪೀಡಿತರ ಗುರುತು ಗೌಪ್ಯವಾಗಿರಬೇಕು, ಮಹಿಳಾ ಸಂತ್ರಸ್ತೆಯ ದೂರುಗಳನ್ನು ಮಹಿಳಾ ಅಧಿಕಾರಿಗಳು ದಾಖಲಿಸು ವಂತೆ ಸೂಚಿಸಲಾಗಿದೆ.

ಸೈಬರ್ ಕ್ರೈಮ್ ಘಟಕಗಳೊಂದಿಗೆ ಸಮನ್ವಯತೆ: ತನಿಖಾಧಿಕಾರಿಗಳು ಸೈಬರ್ ಕ್ರೈಮ್ ಘಟಕಗಳೊಂದಿಗೆ ಸಮನ್ವಯತೆ ಸಾಧಿಸಿ ತಾಂತ್ರಿಕ ತನಿಖೆ ಹಾಗೂ ಫೋರೆನ್ಸಿಕ್ ವಿಶ್ಲೇಷಣೆ ನಡೆಸಬೇಕು. ವಿಳಂಬ ಮಾಡಿದರೆ ಸಂಬಂಧಿತ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಡಿಜಿ-ಐಜಿಪಿ ಎಚ್ಚರಿಕೆ ನೀಡಿದ್ದಾರೆ.

ಸಂಪಾದಕೀಯ

ಆಹಾರ ಸುರಕ್ಷೆಗೆ ಆದ್ಯತೆಯಿರಲಿ

ತಮ್ಮ ಆಹಾರ ಉತ್ಪನ್ನಗಳ ಕುರಿತಂತೆ ಗ್ರಾಹಕರ ದಿಕ್ಕು ತಪ್ಪಿಸುತ್ತಿರುವ ಹತ್ತಕ್ಕೂ ಅಧಿಕ ಕಂಪೆನಿಗಳಿಗೆ 'ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರ' (ಎಫ್‌ಎಸ್‌ಎಸ್‌ಎಐ) ನೋಟೀಸು ಜಾರಿ ಮಾಡಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಹೀಗೆ ನೋಟೀಸು ಪಡೆದ ಕಂಪೆನಿಗಳಲ್ಲಿ ಕೆಲವು ಪ್ರಖ್ಯಾತ ಕಂಪೆನಿಗಳೂ ಸೇರಿವೆ. ತಮ್ಮದು ಅತ್ಯಂತ ಶುದ್ಧ ಆಹಾರ, ಆರೋಗ್ಯಪೂರ್ಣ ಆಹಾರ, ಶಕ್ತಿವರ್ಧಕ ಉತ್ಪನ್ನ ಮುಂತಾಗಿ ಈ ಕಂಪೆನಿಗಳು ಬಣ್ಣಿಸಿಕೊಂಡಿದ್ದರೂ ಈ ಬಣ್ಣನೆಗಳನ್ನು ಸಮರ್ಥಿಸುವಂತಹ ಪುರಾವೆಗಳು ಉತ್ಪನ್ನಗಳಲ್ಲಿ ಇಲ್ಲದ ಕಾರಣದಿಂದಾಗಿ ಕಂಪೆನಿಗಳಿಗೆ ನೋಟೀಸು ಜಾರಿ ಮಾಡಲಾಗಿದೆ. ಒಂದೆಡೆಯಿಂದ ಜಂಕ್ ಫುಡ್‌ಗಳು ಮತ್ತು ಕಲಬೆರಕೆ ವಸ್ತುಗಳ ದೆಸೆಯಿಂದಾಗಿ, ಜನರ ಆರೋಗ್ಯ ಕೆಡುತ್ತಿರುವುದರ ಕುರಿತಂತೆ ಆತಂಕಗಳು ಹೆಚ್ಚುತ್ತಿದ್ದಂತೆ ಜನರಲ್ಲಿ ಆರೋಗ್ಯ ಕಾಳಜಿ ಹೆಚ್ಚುತ್ತಿರುವ ಮಧ್ಯೆಯೇ, ಈ ಕಾಳಜಿಯನ್ನೆ ಲಾಭ ಮಾಡಿಕೊಳ್ಳುವ ಹಲವಾರು ಕಂಪೆನಿಗಳು ತಮ್ಮದು ನೈಸರ್ಗಿಕವಾಗಿ ಪಡೆದ ಉತ್ಪನ್ನ, ಸಂಪೂರ್ಣ ಸಾವಯವ ಉತ್ಪನ್ನ ಮುಂತಾಗಿ ಪ್ರಚಾರ ಮಾಡುವ ಮೂಲಕ ಗ್ರಾಹಕರನ್ನು ತಮ್ಮೆಡೆಗೆ ಸೆಳೆಯುತ್ತವೆ.



ಆರೋಗ್ಯದ ಕುರಿತಂತೆ ಕಾಳಜಿ ಹೊಂದಿರುವ ಜನರು ಇಂತಹ ಉತ್ಪನ್ನಗಳನ್ನು ಖರೀದಿಸಲು ಆದ್ಯತೆ ನೀಡುವುದು ಸಹಜವೇ ಆಗಿದೆ. ಆದರೆ ವಾಸ್ತವದಲ್ಲಿ ಇಂತಹ ಉತ್ಪನ್ನಗಳು ತಾವು ಹೇಳಿಕೊಂಡಂತೆ ಇರುವುದಿಲ್ಲ. ರಾಸಾಯನಿಕಗಳನ್ನು ಬಳಸಿಯೇ ತಯಾರಿಸಲಾದ ವಸ್ತುಗಳನ್ನು ಸಾವಯವದ ಹೆಸರಿನಿಂದ ಮಾರಾಟ ಮಾಡುವ ನಿದರ್ಶನಗಳು ಈ ಹಿಂದೆಯೇ ಕಂಡುಬಂದಿದ್ದವು. 'ಆರೋಗ್ಯಪೂರ್ಣ' ಎಂದು ಹೇಳುವ ಉತ್ಪನ್ನಗಳಲ್ಲಿ ಅನಾರೋಗ್ಯಕರ ಅಂಶಗಳು ಪತ್ತೆಯಾಗಿದ್ದವು. ಈ ಹಿನ್ನೆಲೆಯಲ್ಲಿ ಎಫ್‌ಎಸ್‌ಎಸ್‌ಎಐ ಈ ಕಂಪೆನಿಗಳಿಗೆ ನೋಟೀಸು ನೀಡಿರುವುದು ಹಾಗೂ ಜನರನ್ನು ತಪ್ಪು ದಾರಿಗೆಳೆಯುವ ಜಾಹೀರಾತುಗಳನ್ನು ನೀಡದಂತೆ ಎಚ್ಚರಿಸಿರುವುದು ಸಕಾಲಿಕವಾಗಿದೆ. ಇದು ಜನರಲ್ಲಿ ಕೂಡಾ ಈ ಉತ್ಪನ್ನಗಳ ಕುರಿತಂತೆ ಜಾಗೃತಿ ಮೂಡಿಸಲು ಸಹಕಾರಿಯಾಗಲಿದೆ.

ಆದರೆ ಎಲ್ಲಾ ಕಂಪೆನಿಗಳು ಎಫ್‌ಎಸ್‌ಎಸ್‌ಎಐ ನಿರ್ದೇಶವನ್ನು ಪಾಲಿಸುತ್ತವೆಯೆ? ಹಾಗೆ ಪಾಲಿಸದ ಕಂಪೆನಿಗಳ ಮೇಲೆ ಎಫ್‌ಎಸ್‌ಎಸ್‌ಎಐ ಯಾವ ಕ್ರಮ ತೆಗೆದುಕೊಳ್ಳುತ್ತದೆಯೆ? ಈ ಕುರಿತಂತೆ ಮತ್ತ ಸೂಕ್ತ ಮಾಹಿತಿಗಳು ಲಭಿಸುವುದಿಲ್ಲ. ವರದಿಯೊಂದರ ಪ್ರಕಾರ ಎಫ್‌ಎಸ್‌ಎಸ್‌ಎಐ ನೋಟೀಸು ನೀಡಿದ ಬಳಿಕವೂ ಕೆಲವಾರು ಉತ್ಪನ್ನಗಳು ಅದೇ ಆಕರ್ಷಕ ಬಣ್ಣನೆಯೊಂದಿಗೆ ಈಗಲೂ ಮಾರುಕಟ್ಟೆಯಲ್ಲಿ ಉಳಿದಿರುವ ನಿದರ್ಶನಗಳಿವೆ. ಎಫ್‌ಎಸ್‌ಎಸ್‌ಎಐ ಕೇವಲ ನೋಟೀಸು ನೀಡಿ ಸುದ್ದಿಯಾಗುವಷ್ಟಕ್ಕೇ ಸೀಮಿತವಾಗುವುದು ಸರಿಯಲ್ಲ. ಸೂಕ್ತ ಕ್ರಮಗಳೊಂದಿಗೂ ಜನತೆಯ ಮುಂದೆ ಬರಬೇಕು. ಆ ಮೂಲಕ ಗ್ರಾಹಕರ ಹಿತ ರಕ್ಷಿಸುವಂತಾಗಬೇಕು.

ಮರಣಕ್ಕೆ ಸಂಬಂಧಪಟ್ಟ ಇನ್ನಷ್ಟು ವಿಷಯಗಳು

ಲೋಕದಲ್ಲಿರುವಂತೆ ಮರಣವನ್ನು ಶಾಸ್ತ್ರಗಳು ಅಶುಭವೆಂದು ಭಾವಿಸುವುದಿಲ್ಲ.

ಪದಸಂಚಲನ

• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಕಳೆದ ಅನೇಕ ಸಂಚಿಕೆಗಳಲ್ಲಿ ಹುಟ್ಟು ಹಾಗೂ ಮರಣ ಪ್ರಕ್ರಿಯೆಯ ಬಗ್ಗೆ ಭಾರತೀಯ ಜ್ಞಾನಪರಂಪರೆಯಲ್ಲಿ ಹೇಗೆ ತಿಳಿಸಲಾಗಿದೆ ಎಂಬುದನ್ನು ಅತ್ಯಂತ ವಿಸ್ತೃತವಾಗಿ ನೋಡಿದೆವು. ಇನ್ನು ಈ ಸರಣಿಯ ಕೊನೆಯ ಹಂತದಲ್ಲಿ ಈಗ ಮರಣ, ಅದರ ಪ್ರಕ್ರಿಯೆ ಹಾಗೂ ಮರಣದ ಅನಂತರದ ಕೆಲವು ವಿಷಯಗಳ ಬಗ್ಗೆ ಪುನರೀಕ್ಷಣೆಯನ್ನು ಮಾಡೋಣ. ಇಲ್ಲಿಯವರೆಗಿನ ಎಲ್ಲ ಲೇಖನಗಳ ಸಾರರೂಪದಲ್ಲಿ ಕೆಲವು ಅಂಶಗಳನ್ನು ಹೀಗೆ ಸಂಗ್ರಹಿಸಬಹುದು.

1. ಮರಣವು ದೇಹಕ್ಕೆ ಹೊರತೂ ಆತ್ಮಕ್ಕಲ್ಲ. ಅರ್ಥಾತ್ ಭಾರತೀಯ ಸಂಸ್ಕೃತಿಯಲ್ಲಿ ಮರಣವೆಂದರೆ ಕೊನೆಯಲ್ಲ. ಬದಲಿಗೆ ಅದೊಂದು ತುದಿ ಅಷ್ಟೆ. ಅಲ್ಲಿಂದ ಮತ್ತೆ ಮುಂದುವರಿಕೆ ಎಂಬುದು ಇದ್ದೇ ಇದೆ. ಹಾಗಾಗಿ ಮರಣಕ್ಕೆ ಒಳಗಾಗುವುದು ಪಾಂಚಭೌತಿಕ ದೇಹವೇ ಹೊರತೂ ಅದರೊಳಗಿನ ಆತ್ಮವಲ್ಲ.

2. ಮರಣವೊದಗಿದರೂ ಸೂಕ್ಷ್ಮಶರೀರ ಮತ್ತು ಕಾರಣಶರೀರಸಹಿತನಾದ ಜೀವನು ತನ್ನ ಮುಂದಿನ ಶರೀರಪ್ರಾಪ್ತಿಗಾಗಿ ಪ್ರಯಾಣವನ್ನು ಬೆಳೆಸುತ್ತಾನೆ. ಹಾಗಾಗಿ ಮರಣವು ಕೇವಲ ಸ್ಥೂಲಶರೀರಕ್ಕೆ ಮಾತ್ರ. ಈ ದೃಷ್ಟಿಯಿಂದ ಸ್ಥೂಲಶರೀರದ ಪರಿವರ್ತನೆಯೇ ಹುಟ್ಟು ಮತ್ತು ಮರಣದ ಉದ್ದೇಶ.

3. ಸ್ಥೂಲಶರೀರವು ಅವರವರ ಕರ್ಮಕ್ಕನುಗುಣವಾಗಿ ದೊರೆಯುತ್ತದೆ. ಜೊತೆಗೆ ಸ್ಥೂಲಶರೀರವಿಲ್ಲದೆಯೇ ಭೋಗವು ಉಂಟಾಗುವುದಿಲ್ಲ. ಹಾಗಿದ್ದರೆ ಈ ಕರ್ಮವು ದೇಹದಲ್ಲಿ ಎಲ್ಲಿರುತ್ತದೆ? ಎಂದರೆ, ಅದು ನಮ್ಮ ಸೂಕ್ಷ್ಮಶರೀರದಲ್ಲಿರುತ್ತದೆ. ಹಾಗಾಗಿ ಸ್ಥೂಲಶರೀರವನ್ನು ಬಿಟ್ಟು ಜೀವನು ಪ್ರಯಾಣವನ್ನು ಬೆಳೆಸಿದ ಮೇಲೂ, ತನ್ನ ಸೂಕ್ಷ್ಮಶರೀರದಲ್ಲಿ ಕರ್ಮಗಳು ಸೂಕ್ಷ್ಮವಾಗಿ ಇರುವುದರಿಂದ, ಅದನ್ನು ಹೊತ್ತೊಯ್ಯುತ್ತಾನೆ.

4. ಮರಣದ ಅನಂತರ ಮುಂದಿನ ಜನ್ಮವನ್ನು ಪಡೆಯಲು ಬಹಳ ಸಮಯ ಬೇಕಾಗುತ್ತದೆ. ಉಪನಿಷತ್ತಿನ ಪ್ರಕಾರ, ಅನೇಕ ಮಾರ್ಗವನ್ನು ಆ ಜೀವನು ಹಾದು ಬರಬೇಕಾಗುತ್ತದೆ. ಹಾಗಾಗಿ ಮರಣದ ಅನಂತರ ಕೂಡಲೇ ಆತನಿಗೆ ಮತ್ತೊಂದು ಶರೀರಪ್ರಾಪ್ತಿಯಾಗಲಾರದು.

5. ಮನುಷ್ಯನ ಕಾಲಮಾನ, ಪಿತೃ-ದೇವತೆಗಳ ಕಾಲಮಾನ ಬೇರೆ ಬೇರೆ. ಹಾಗಾಗಿ ಮನುಷ್ಯನ ಕಾಲಮಾನದಲ್ಲಿ ಒಂದು ವರ್ಷದವರೆಗೂ ಮರಣವನ್ನು ಹೊಂದಿದದವನು ಒಂದೊಂದು ಸ್ಥಾನವನ್ನು ತಲುಪುತ್ತಾ ಪ್ರಯಾಣವನ್ನು ಬೆಳಸುತ್ತಾನೆ. ಇದಕ್ಕೆ ಸಹಕಾರಿಯಾಗಿ ಉತ್ತರಕ್ರಿಯೆ ಮತ್ತು ಶ್ರಾದ್ಧಾದಿಗಳನ್ನು ಶಾಸ್ತ್ರವು ವಿಧಿಸಿದೆ.

6. ಶ್ರಾದ್ಧ ಅಥವಾ ಪಿತೃಕಾರ್ಯವು ಕೇವಲ ಮರಣವನ್ನು ಹೊಂದಿದವನಿಗಾಗಿ ಮಾತ್ರವಲ್ಲ, ಮುಖ್ಯವಾಗಿ ಮಕ್ಕಳಿಗೆ ತಮ್ಮ ಪಿತೃಋಣವನ್ನು ಕಳೆದುಕೊಳ್ಳಲೋಸುಗ ಇರುವ ಒಂದು ಮಾರ್ಗ. ಅಷ್ಟೇ ಅಲ್ಲ, ಇದು ಅವರಿಗೆ ಒಂದು ಕರ್ತವ್ಯ ಕೂಡ. ಆಚರಿಸದಿದ್ದರೆ ಕರ್ತವ್ಯಾಚರಣೆ ಮಾಡದಿರುವುದರಿಂದ ಮಕ್ಕಳು ಶ್ರೇಯಸ್ಸಿನಿಂದ ವಂಚಿತರಾಗುತ್ತಾರೆ. ನಿತ್ಯಕರ್ಮದಂತೆಯೇ ನೈಮಿತ್ತಿಕ ಕರ್ಮಗಳೂ ಕೂಡ ತಪ್ಪದೇ ಅನುಷ್ಠೇಯವೇ ಆಗಿವೆ. ಹಾಗಾಗಿ ಮರಣಾನಂತರದ ಕರ್ಮಗಳು ಕೇವಲ ಮರಣಹೊಂದಿದವನಿಗೆ ಎಂಬ ಭಾವನೆ ಸರಿಯಲ್ಲ.

7. ಜೀವಿಗೆ ಆಯುಸ್ಸು ನಿರ್ಧಾರವಾಗುವುದು ಆತನ ಕರ್ಮದಿಂದ. ಈ ಜನ್ಮದಲ್ಲಿ ಅನುಭವಿಸಲೆಂದು ನಿರ್ದಿಷ್ಟವಾದ ಕರ್ಮಗಳ ಪ್ರಮಾಣಕ್ಕನುಗುಣವಾಗಿ ಆತ ಈ ದೇಹದಲ್ಲಿ ನೆಲೆಸುತ್ತಾನೆ. ಅದನ್ನು ಪ್ರಾರಬ್ಧಕರ್ಮ ಎನ್ನಲಾಗುತ್ತದೆ. ಪ್ರಾರಬ್ಧಕರ್ಮವನ್ನು ಅನುಭವಮಾತ್ರದಿಂದಲೇ ನಾಶಮಾಡಿಕೊಳ್ಳಬೇಕಾಗಿದೆ. ಸಂಚಿತ ಮತ್ತು ಆಗಾಮಿಕರ್ಮಗಳು ಜ್ಞಾನದಿಂದಲೂ ನಾಶವಾಗಬಲ್ಲವು. ಹಾಗಾಗಿ ಅನಂತವಾದ ಈ ಹುಟ್ಟು-ಸಾವಿನ ಚಕ್ರದಿಂದ ಪಾರಾಗಲು ಆತ್ಮಜ್ಞಾನವನ್ನು ಪಡೆಯಬೇಕೆಂದು ಶಾಸ್ತ್ರಗಳು ತಿಳಿಸುತ್ತವೆ.

8. ವೇದಾಂತದ ಪ್ರಕಾರ, ಹುಟ್ಟು-ಸಾವುಗಳು ನಿರಂತರವಾದ ಒಂದು ಪ್ರಕ್ರಿಯೆ. ಲೋಕದಲ್ಲಿರುವಂತೆ ಮರಣವನ್ನು ಶಾಸ್ತ್ರಗಳು ಅಶುಭವೆಂದು ಭಾವಿಸುವುದಿಲ್ಲ. ನಿರಂತರವಾಗಿ ಜೀವಿಸಬೇಕೆಂಬ ಜೀವಿಯ ಇಚ್ಛೆಯೇ ಮರಣವನ್ನು ಅಶುಭವೆಂದು ತಿಳಿಯಲು ಕಾರಣ. ಅಷ್ಟೇ ಅಲ್ಲ, ಮರಣಾನಂತರ ಮತ್ತೆ ಯಾವ ರೀತಿಯ ಜನ್ಮ ದೊರೆಯುವುದೆಂಬ ಊಹೆ ನಮಗಿರುವುದಿಲ್ಲವಾದ ಕಾರಣ ನಮಗಿದು ಅಶುಭವೆಂದು ಅನಿಸುತ್ತದೆ.

9. ಶಾಸ್ತ್ರಗಳಲ್ಲಿ ಮರಣ ಮತ್ತು ಅದರ ಅನಂತರದ ಪ್ರಕ್ರಿಯೆಯನ್ನು ಮನುಷ್ಯನಿಗೆ ಈ ಹುಟ್ಟು-ಸಾವಿನ ಚಕ್ರದಿಂದ ತಪ್ಪಿಸಿಕೊಳ್ಳಲು ದೃಢವಾದ ವೈರಾಗ್ಯ ಉಂಟಾಗಲಿ ಎಂಬ ಉದ್ದೇಶದಿಂದ ವಿವರಿಸುತ್ತದೆ. ಎಲ್ಲಿಯವರೆಗೆ ಈ ಸಂಸಾರದ ಅನಿತ್ಯತ್ವವನ್ನು ಮತ್ತು ಇಲ್ಲಿನ ಅನರ್ಥವನ್ನು ಅರ್ಥಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಮನುಷ್ಯನು ಈ ಸಂಸಾರದ ಮೇಲೆ ತೀವ್ರವಾದ ಮೋಹವನ್ನು ಬೆಳೆಸಿಕೊಂಡು, ದುಃಖದಲ್ಲಿ ಬೀಳುತ್ತಾನೆ. ಎಷ್ಟೆಷ್ಟು ಅನಿತ್ಯತ್ವಬುದ್ಧಿ ಬೆಳೆಯುವುದೋ ಅಷ್ಟಷ್ಟು ನಿರ್ಲಿಪ್ತವಾಗಿ ಹಾಗೂ ಅರ್ಥಪೂರ್ಣವಾಗಿ ಜೀವನವನ್ನು ಮನುಷ್ಯನು ಕಳೆಯಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಉಪನಿಷತ್ತು, ಪುರಾಣಗಳೆಲ್ಲ ವಿಸ್ತೃತವಾಗಿ ಮರಣದ ಪ್ರಕ್ರಿಯೆಯನ್ನು ವಿವರಿಸುತ್ತವೆ. ಹಾಗಂತ ಶಾಸ್ತ್ರಗಳು ಇಹ ಜೀವನವನ್ನು ಉಪೇಕ್ಷಿಸುವುದಿಲ್ಲ. ಆದರೆ ಇದೇ ಪಾರಮಾರ್ಥಿಕವಲ್ಲ ಎಂಬುದು ಅವುಗಳ ದೃಷ್ಟಿ.

10. ಜೀವನಿಗೆ ಗರ್ಭವಾಸ ಇದೇ ಮೊದಲಲ್ಲ, ಹಾಗೆಯೇ ಮರಣವೂ ಕೂಡ. ಹಾಗಾಗಿ ಮರಣದ ಭಯ ಎಲ್ಲರಿಗೂ ಇರುತ್ತದೆ. ಈ ಹಿಂದೆ ಮರಣವನ್ನು ಹೊಂದಿದಾಗ ಅನುಭವಿಸಿದ ನೋವಿನ ಸಂಸ್ಕಾರವು ನಮ್ಮೆಲ್ಲರ ಮನಸ್ಸಿನಲ್ಲಿ ಇರುವುದರಿಂದ ಸಹಜವಾಗಿ ನಮಗೆಲ್ಲ ಮರಣದ ಭಯವಿರುತ್ತದೆ. ಇಂಥ ಮರಣದಿಂದ ತಪ್ಪಿಸಿಕೊಳ್ಳಬೇಕು ಮತ್ತು ಜೀವಂತವಾಗಿರಬೇಕೆಂಬ ಆಗ್ರಹವನ್ನೇ ಅಭಿನಿವೇಶವೆಂಬುದಾಗಿ ಯೋಗಶಾಸ್ತ್ರವು ತಿಳಿಸುತ್ತದೆ. ಆದರೆ ಶರೀರದಲ್ಲಿ ನಿತ್ಯವಾಗಿ ಇರಲು ಸಾಧ್ಯವಿಲ್ಲ. ಯಾಕೆಂದರೆ ಅದಕ್ಕೆ ಹುಟ್ಟು ಇದೆ. ಯಾವುದಕ್ಕೆ ಹುಟ್ಟಿದೆಯೋ ಅದೆಲ್ಲಕ್ಕೆ ಸಾವು ಕೂಡ ಅನಿವಾರ್ಯ. ಹಾಗಾಗಿ ಈ ಶರೀರಧಾರಣೆಯೇ ಮತ್ತೊಮ್ಮೆ ಘಟಿಸದಂತೆ ಮಾಡಿಕೊಳ್ಳಬೇಕು ಎಂಬುದಾಗಿ ಶಾಸ್ತ್ರಗಳು ಉಪದೇಶಿಸುತ್ತವೆ. ಅದನ್ನು ಮೋಕ್ಷವೆನ್ನಲಾಗುತ್ತದೆ.

11. ಮೋಕ್ಷವೇ ಪರಮಪುರುಷಾರ್ಥವಾಗಿದೆ. ಮೋಕ್ಷವನ್ನು ಹೊಂದಿದ ಮೇಲೆ ಸಂಸಾರಕ್ಕೆ ಮತ್ತೆ ಜೀವನು ಬೀಳಲಾರ. ಯಾಕೆಂದರೆ ಜ್ಞಾನದಿಂದ ಆತನ ಕರ್ಮವು ನಾಶವಾಗಿರುತ್ತದೆ. ಕರ್ಮಕ್ಕೆ ಕಾರಣವಾದ ಅಜ್ಞಾನವೂ ನಾಶವಾಗಿರುತ್ತದೆ. ಹೀಗೆ ಮುಕ್ತಿಯ ಸಂದರ್ಭದಲ್ಲಿ ಆ ಜ್ಞಾನಿಯ ಸೂಕ್ಷ್ಮಶರೀರಾದಿಯಾಗಿ ಎಲ್ಲವೂ ಇಲ್ಲೇ ವಿಲಯವನ್ನು ಹೊಂದುತ್ತವೆ.

12. ಇದಕ್ಕೆ ವ್ಯತಿರಿಕ್ತವಾಗಿ ಅಜ್ಞಾನಿಯ ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ ಹಾಗೂ ಅಜ್ಞಾನಗಳೆಲ್ಲ ಮರಣದ ಸಂದರ್ಭದಲ್ಲಿ ಈ ಶರೀರವನ್ನು ಬಿಟ್ಟು ಮುಂದಿನ ಶರೀರವನ್ನು ಪಡೆಯಲೋಸುಗ ಜೀವನ ಜೊತೆ ಹೊರಡುತ್ತವೆ. ಎಲ್ಲಿಯವರೆಗೆ ಆತ್ಮಕ್ಕೆ ಇಂಥ ಅಜ್ಞಾನದ ಸಂಸ್ಪರ್ಶವಿರುವುದೋ ಅಲ್ಲಿಯವರೆಗೆ ಹುಟ್ಟು-ಸಾವುಗಳು ತಪ್ಪಿದ್ದಲ್ಲ.

13. ಶಾಸ್ತ್ರಗಳು ಆತ್ಮನನ್ನು ಅಮೃತನೆಂದು ಕರೆಯುತ್ತವೆ. ಬಹುಶಃ ಭಾರತೀಯ ಸಂಸ್ಕೃತಿಯೊಂದನ್ನು ಬಿಟ್ಟು ಮತ್ತೆ ಬೇರಾವ ಮತಗಳಲ್ಲೂ ಆತ್ಮನನ್ನು ನಿತ್ಯವೆಂದು ನೋಡುವುದಿಲ್ಲ. ಆತ್ಮನನ್ನು ಆನಂದರೂಪಿಯೆಂದು ಉಪನಿಷತ್ತುಗಳು ತಿಳಿಸುತ್ತವೆ. ಹಾಗಾಗಿ ನಾವೆಲ್ಲ ಅಮೃತಸ್ವರೂಪಿಗಳು ಅಷ್ಟೇ ಅಲ್ಲ, ನಿತ್ಯಮುಕ್ತರು. ಇಂಥ ಭಾವನೆ ದೃಢವಾದಾಗ ಈ ಶರೀರದ ತ್ಯಾಗದ ಬಗೆಗಿನ ಭಯ ಸ್ವಲ್ಪ ಕಡಿಮೆಯಾಗುವುದರ ಜೊತೆಗೆ. ಈ ಜನ್ಮವನ್ನು ಕೇವಲ ಭೋಗಸಾಧನೆಯ ಬದಲು ಆಧ್ಯಾತ್ಮಸಾಧನೆಯ ಹಾದಿಗೆ ತಿರುಗಿಸಿಕೊಳ್ಳಬೇಕೆಂಬ ಪ್ರಜ್ಞೆ ಉದಯಿಸುತ್ತದೆ.

14. ಮರಣದ ಕ್ಷಣದಲ್ಲಿ ಜೀವನಿಗೆ ಯಾವ ರೀತಿಯ ಮನೋವೃತ್ತಿಗಳು ಹುಟ್ಟುತ್ತವೋ ಅಂಥ ಜನ್ಮವನ್ನೇ ಆತ ಮುಂದೆ ಪಡೆಯುತ್ತಾನೆ. ಹಾಗಾಗಿ ಮರಣದ ಸಮಯದಲ್ಲಿ ಶುಭವೃತ್ತಿಗಳು ಹುಟ್ಟುವಂತೆ ಇಡೀ ಜೀವನವನ್ನು ಆತ ಕಳೆಯಬೇಕು. ಸಾವಿನ ಸಮಯದಲ್ಲಿ ಮರ್ಮಚ್ಛೇದವಾಗುವ ಹಂತದಲ್ಲಿಯೂ ಭಗವಂತನ ಸ್ಮರಣೆ ಬರಬೇಕೆಂದರೆ ಜೀವನವಿಡೀ ಅನನ್ಯಭಕ್ತಿಯಿಂದ ಆತನನ್ನು ಭಜಿಸಬೇಕೆಂದರ್ಥ. ಒಟ್ಟಿನಲ್ಲಿ ಧರ್ಮಮಾರ್ಗದಲ್ಲಿ ಜೀವನವನ್ನು ಜೀವಿಸುತ್ತಾ, ಸಚ್ಚಿಂತನೆಯನ್ನೇ ಜೀವನವಿಡೀ ನಡೆಸಿಕೊಂಡು ಹೋಗಬೇಕೆಂಬುದು ತಾತ್ಪರ್ಯ. ಅನ್ಯಥಾ ಯಾವುದೋ ಹೀನಯೋನಿಯಲ್ಲಿ ಜನ್ಮವನ್ನು ಪಡೆದುಕೊಳ್ಳಬೇಕಾಗುತ್ತದೆ.

15. ನಮ್ಮ ಇವತ್ತಿನ ಸ್ಥಿತಿಗೆ ನಮ್ಮ ಕರ್ಮಗಳೇ ಕಾರಣ. ಹಾಗೆಂದಮಾತ್ರಕ್ಕೆ ಎಲ್ಲವೂ ಹಣೆಬರಹ ಎಂದರ್ಥವಲ್ಲ. ಈಗ ನಾವು ಅನುಭವಿಸುತ್ತಿರುವ ಸುಖ-ದುಃಖಗಳಿಗೆ ಕರ್ಮ ಕಾರಣ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹೊಸದಾದ ಕರ್ಮವನ್ನು ಕೂಡ ಮಾಡುತ್ತಿರುತ್ತೇವೆ. ಅದು ನಮ್ಮ ಕೈಯ್ಯಲ್ಲೇ ಇದೆ. ಪ್ರಯತ್ನಪೂರ್ವಕವಾಗಿ ನಾವು ಒಳ್ಳೆಯ ಕರ್ಮವನ್ನು ಆಚರಿಸುವ ಮೂಲಕ ನಮ್ಮ ಅಂತಃಕರಣದಲ್ಲಿರುವ ವಾಸನೆಗಳನ್ನು ಹಾಗೂ ನಮ್ಮ ಸಂಚಿತಕರ್ಮಗಳನ್ನು ಬದಲಾಯಿಸಿಕೊಳ್ಳಲು ಸಾಧ್ಯವಿದೆ. ಅದನ್ನು ಪುರುಷಪ್ರಯತ್ನ ಎನ್ನಲಾಗುತ್ತದೆ. ನಮ್ಮಲ್ಲಿ ಪುರುಷಪ್ರಯತ್ನಕ್ಕೆ ಹೆಚ್ಚಿನ ಮಹತ್ತ್ವವನ್ನು ಕೊಡಲಾಗಿದೆ. ಆದರೆ ಅದು ದೀರ್ಘವಾದ ಹಾಗೂ ನಿರಂತರವಾದ ಅಭ್ಯಾಸಮಾತ್ರದಿಂದಲೇ ಸಾಧ್ಯ.

ಹೀಗೆ ನಲವತ್ತಕ್ಕೂ ಹೆಚ್ಚು ಅಂಕಣಗಳಲ್ಲಿ ಪ್ರಸಾರವಾದ ಈ ಹುಟ್ಟು-ಸಾವಿನ ಪ್ರಕ್ರಿಯೆಗೆ ಸಂಬಂಧಿಸಿದ ಸರಣಿಯು ಇಲ್ಲಿಗೆ ಪೂರ್ಣಗೊಳ್ಳುತ್ತದೆ.

ಎಂದೆಂದಿಗೂ ಸುಖವೆಂಬುದು ಮರೀಚಿಕೆ

ಅಜ್ಞಾನವಲಿತೋ ಬಾಲ್ಯೇ ಮನಮೂಢಶ್ಚ ಯೌವನೇ ।
ವಾರ್ಧಕೇ ವಿಶ್ವಲಾಂಗಶ್ಚ ಕದಾ ಕುಶಲಭಾಕ್ ಜನಃ ॥ - ಮಹಾಸುಭಾಷಿತ ಸಂಗ್ರಹ

ಬಾಲ್ಯದಲ್ಲಿ ಅಜ್ಞಾನ ತುಂಬಿರುತ್ತದೆ. ಯೌವನ ಅಹಂಕಾರ ಮೌಢ್ಯಗಳಿಂದ ಕೂಡಿರುತ್ತದೆ. ಮುದಿತನದಲ್ಲಿ ನಿಶ್ಯಕ್ತವಾದ ಶರೀರವುಳ್ಳವನು ಆಗಿರುತ್ತಾನೆ. ಮನುಷ್ಯನು ತನ್ನ ಜೀವಮಾನದಲ್ಲಿ ಎಂದೆಂದೂ ಸುಖಿಯಾಗಿ ಇರುತ್ತಾನೆಂದು ಹೇಳಲಾಗುವುದಿಲ್ಲ - ಎಂಬುದು ಶ್ಲೋಕಾರ್ಥ.

ಯಾರೂ ಪೂರ್ಣ ಸುಖಿಗಳು ಎನ್ನುವಂತಿಲ್ಲ. ಸುಖದುಃಖಗಳು ಯಾರನ್ನೂ ಬಿಟ್ಟಿಲ್ಲ, ಬಿಡುವುದೂ ಇಲ್ಲ. ಏಕೆಂದರೆ 'ಸುಖಮಧ್ಯೇ ಸ್ಥಿತಂ ದುಃಖಂ, ದುಃಖ ಮಧ್ಯೇ ಸ್ಥಿತಂ ಸುಖಮ್' ಸುಖದ ಮಧ್ಯದಲ್ಲಿ ದುಃಖವಿದೆ ದುಃಖದ ಮಧ್ಯೆ ಸುಖವಿದೆ ಎಂಬುದು ಇದರ ಅರ್ಥ. ಸುಖವನ್ನು ಕಳೆದುಕೊಂಡರೆ ದುಃಖ ಬರುತ್ತದೆ. ದುಃಖವನ್ನು ತೊಡೆದು ಹಾಕಿದರೆ ಸುಖ ಸಿಗುತ್ತದೆ. ಒಟ್ಟಿನಲ್ಲಿ ಜೀವಮಾನದಲ್ಲಿ ಎಂದೆಂದಿಗೂ ಸುಖವಿರುತ್ತದೆ ಎನ್ನುವಂತಿಲ್ಲ. ಒಟ್ಟಿನಲ್ಲಿ ಸುಖ ದುಃಖಗಳ ವಿಶೇಷತೆಯೇ ಇದು



'ಸುಖಸ್ಯ ದುಃಖಸ್ಯ ನ ಕೋऽಪಿ ದಾತಾ' ಸುಖ-ದುಃಖಗಳನ್ನು ಕೊಡುವವರು ಯಾರೂ ಇಲ್ಲ. ಇನ್ನೊಬ್ಬರಿಂದ ಸುಖ-ದುಃಖ ಉಂಟಾಗಿವೆ ಎಂಬುದು ಅವಿವೇಕದ ಮಾತು. ನಾವು ಮಾಡಿದ ಪುಣ್ಯ ಪಾಪಕಾರ್ಯಗಳ ಪರಿಣಾಮರೂಪವಾಗಿ ಅನುಭವಿಸಲೇಬೇಕು. ನಿರಂತರ ಸುಖ ಬೇಕೆಂದು ಬಯಸುವುದಾದರೆ ಮಾನಸಿಕವಾಗಿ ಪೂರಕವಾಗಿ ನಡೆದುಕೊಳ್ಳಬೇಕು. ಸುಖದ ಮೂಲವೇ ಧರ್ಮವಾದುದರಿಂದ ಧರ್ಮಮಾರ್ಗವನ್ನು ಅನುಸರಿಸಬೇಕು. ಇದನ್ನೇ 'ಸುಖಸ್ಯ ಮೂಲಂ ಧರ್ಮಃ' ಎಂಬ ಸೂಕ್ತಿ ತಿಳಿಸಿದೆ.

ಪ್ರಸ್ತುತ ಶ್ಲೋಕದಲ್ಲಿ ಕವಿಯು ಮನುಷ್ಯನು ಎಂದೆಂದೂ ಸುಖವಾಗಿರುತ್ತಾನೆ ಎನ್ನುವಂತಿಲ್ಲ ಎಂಬ ಹೇಳಿಕೆಯನ್ನು ನೀಡಿ ಪೂರಕ ಸನ್ನಿವೇಶದೊಂದಿಗೆ ಸಮರ್ಥಿಸುತ್ತಾನೆ. ಬಾಲ್ಯದಲ್ಲಿ ಸುಖ-ದುಃಖಗಳ ಕಲ್ಪನೆಯೇ ಇರುವುದಿಲ್ಲ. ಬಾಲ್ಯದಲ್ಲಿ ಅಜ್ಞಾನವೇ ತುಂಬಿರುವುದರಿಂದ ಇದು ಸಹಜ. ಒಂದು ದೃಷ್ಟಿಯಲ್ಲಿ ನೋಡಿದರೆ ಬಾಲ್ಯವೇ ಸುಖವೆನ್ನಬಹುದು. ಯಾವ ಅರಿವೂ ಇಲ್ಲದಿರುವುದರಿಂದ, ಮುಗ್ಧ ಸ್ವಭಾವ ಅವರದಾದು ದರಿಂದ ದುಃಖದ ಕಲ್ಪನೆಯೇ ಬರದು. ಬಾಲಭಾವ ಅವರದ್ದಾದುದರಿಂದ ಸುಖ ದುಃಖಗಳ ಕಲ್ಪನೆ ಇರುವುದಿಲ್ಲ. ಮತ್ತು ಅವು ಅವರನ್ನು ಬಾಧಿಸುವುದಿಲ್ಲ.

ಯೌವನಾವಸ್ಥೆಯಲ್ಲೂ ಸುಖವಿಲ್ಲ. ಸುಖಮಯ ಜೀವನದ ಕಲ್ಪನೆಯನ್ನು ಕಟ್ಟಿಕೊಳ್ಳಬೇಕಾದ ಕಾಲಘಟ್ಟದಲ್ಲಿ ಮೌಢ್ಯವೇ ತುಂಬಿರುತ್ತದೆ. ಹುಚ್ಚು ಕಲ್ಪನೆಯಲ್ಲಿ ಎಟುಕದ ವಿಷಯದಲ್ಲಿ ಮನಸ್ಸು ಸಾಗುವುದರಿಂದ ಸುಖದ ಕಾಲವೇ ಕಳೆದುಹೋಗುತ್ತವೆ. ಜೀವನಪೂರ್ತಿ ಒದ್ದಾಡಿ ಬದುಕುವ ಸ್ಥಿತಿ ಎದುರಾದರೆ ಸುಖ ಎಲ್ಲಿಂದ ಸಿಗುತ್ತದೆ?

ಇನ್ನು ವಯಸ್ಸಾದ ಮೇಲೆ ಸುಖವೆಂಬುದು ಮರೀಚಿಕೆ. ಅಪಾರ ಅನುಭವವಿರಬಹುದು, ಗಳಿಕೆಯೂ ಸಾಕಷ್ಟಿರಬಹುದು. ಬಯಸಿದ್ದನ್ನು ತಿನ್ನುವ, ಎಣಿಸಿದ್ದನ್ನು ಮಾಡುವ ಶಕ್ತಿಯೇ ಉಡುಗಿ ಹೋಗುತ್ತದೆ. 'ಹಲ್ಲಿರುವಾಗ ಕಡ್ಲೆಯಿಲ್ಲ, ಕಡ್ಲೆಯಿರುವಾಗ ಹಲ್ಲಿಲ್ಲ' ಎನ್ನುವ ಸ್ಥಿತಿ. ಜರ್ಜರಿತವಾದ ದೇಹ, ಆವರಿಸಿದ ರೋಗ, ಜೀರ್ಣಶಕ್ತಿಯ ಅಭಾವ ಸುಖದಿಂದ ವಂಚಿತರನ್ನಾಗಿ ಮಾಡುತ್ತದೆ.

ಒಟ್ಟಿನಲ್ಲಿ ಜೀವನಪೂರ್ತಿ ಸುಖಿಯಾಗಿರುವ ಭರವಸೆಯಿಲ್ಲ. ಸುಖ ನಮ್ಮಲ್ಲೇ ಇದೆ. ಅದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು. ಇದನ್ನು ಸಾಧಿಸಿದರೆ ಮಾತ್ರ ಮಾನವ ಸುಖಿಯಾಗಿರುತ್ತಾನೆ.

ಸುದೀರ್ಘಾವಧಿಯ ಪ್ರಧಾನಿಗೆ ಸೈನಿಕನೊಬ್ಬನ ಸೆಲ್ಯೂಟ್!

• ಕ್ಯಾಪ್ಟನ್ ಬ್ರಿಜೇಶ್ ಚೌಟ

ಅದು 2013. ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ ನಂತರ ನಾನು ಊರಿಗೆ ಮರಳಿದ್ದೆ. ನನ್ನ ಪೀಳಿಗೆಯ ಅನೇಕ ಯುವಕರಂತೆ, ನಾನೂ ಜೀವನದ ಮಹತ್ವದ ತಿರುವಿನಲ್ಲಿದ್ದೆ. ರಾಷ್ಟ್ರ ಸೇವೆ ಮುಂದುವರಿಸಬೇಕೆಂಬ ದೃಢ ಸಂಕಲ್ಪ ನನ್ನಲ್ಲಿದ್ದರೂ, ಕಂಡುಕೊಳ್ಳಬೇಕಾದ ಹಾದಿಯ ಶೋಧನೆಯಲ್ಲಿದ್ದೆ. ಆಗ ದೇಶವೂ ಒಂದು ಮಹತ್ವದ ತಿರುವಿನಲ್ಲಿತ್ತು.

ಭಾರತಕ್ಕೆ ಇನ್ನೂ ಹೆಚ್ಚಿನ ಸಾಧನೆ ಮಾಡುವ ಸಾಮರ್ಥ್ಯವಿದೆ ಎಂಬ ಭಾವನೆ ಜನರಲ್ಲಿ ಗಟ್ಟಿಯಾಗುತ್ತಿತ್ತು ಮತ್ತು ಹಳ್ಳಿ, ಪಟ್ಟಣ, ನಗರಗಳ ಜನರಲ್ಲಿ ಹೊಸ ಚೈತನ್ಯ ರೂಪುಗೊಳ್ಳತೊಡಗಿತ್ತು. ಜನ ತಮ್ಮ ಆಶಯ, ಆತ್ಮವಿಶ್ವಾಸ ಮತ್ತು ಭವಿಷ್ಯದ ನಾಯಕತ್ವದ ಬಗ್ಗೆ ಚರ್ಚಿಸುತ್ತಿದ್ದರು. ಆಗ ಜನ-ಸಂವಾದದ ಕೇಂದ್ರಬಿಂದುವಾಗಿದ್ದವರು ಗುಜರಾತಿನ ಆಗಿನ ಮುಖ್ಯಮಂತ್ರಿ ನರೇಂದ್ರ ಮೋದಿ ಅವರು. ಬಲಿಷ್ಠ ಭಾರತವನ್ನು ಕಾಣಲು ಬಯಸಿದ್ದ ಕೋಟ್ಯಂತರ ಭಾರತೀಯರ ಮನಸ್ಸನ್ನು ಅವರು ಅದಾಗಲೇ ತಲುಪಿದ್ದರು.



2013ರ ಜೂನ್ ತಿಂಗಳಲ್ಲಿ, ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜವಾಬ್ದಾರಿ ನನ್ನ ಹೆಗಲೇರಿತು. ನಾನು ಧರಿಸುವ ಸಮವಸ್ತ್ರ ಬದಲಾಗಿದ್ದರೂ, ರಾಷ್ಟ್ರ ಮೊದಲು ಎಂಬ ಧ್ಯೇಯ ಮಾತ್ರ ಬದಲಾಗಿರಲಿಲ್ಲ. ನಾವಂದು ಕೇವಲ ರಾಜಕೀಯ ಪಕ್ಷದ ಪ್ರಚಾರ ಮಾಡಿರಲಿಲ್ಲ; ಮಹಾನ್ ಕಲ್ಪನೆಯ ಪರ ಪ್ರಚಾರ ಮಾಡಿದ್ದೆವು. ಭಾರತ ಇನ್ನಷ್ಟು ಬಲಿಷ್ಠವಾಗಬಹುದು, ಆತ್ಮವಿಶ್ವಾಸದಿಂದ ಕೂಡಿರಬಹುದು, ಮತ್ತಷ್ಟು ಸ್ವಾವಲಂಬಿಯಾಗಬಹುದು ಮತ್ತು ಜಾಗತಿಕ ಮಟ್ಟದಲ್ಲಿ ತನ್ನ ಗೌರವ-ಘನತೆ ಹೆಚ್ಚಿಸಿಕೊಳ್ಳಬಹುದು ಎಂಬ ಕಲ್ಪನೆಯ ಸಾಕಾರಕ್ಕಾಗಿ ಧ್ವನಿ ಎತ್ತಿದ್ದೆವು.

ಅದಾಗಿ ದಶಕದ ಬಳಿಕ (2024) ಲಕ್ಷಾಂತರ ಯುವ ಭಾರತೀಯರಲ್ಲಿ ದೊಡ್ಡ ಕನಸು ಕಾಣುವಂತೆ ಪ್ರೇರೇಪಿಸಿದ ಅದೇ ನಾಯಕನ ನೇತೃತ್ವದ ತಂಡದಲ್ಲಿ ಸಂಸತ್ ಸದಸ್ಯನಾಗಿ ಪ್ರಮಾಣವಚನ ಸ್ವೀಕರಿಸುವ ಸೌಭಾಗ್ಯ ನನಗೆ ದೊರೆಯಿತು. ನರೇಂದ್ರ ಮೋದಿ ಅವರು ಭಾರತದಲ್ಲಿ ಅತಿ ದೀರ್ಘಾವಧಿಗೆ ಸೇವೆ ಸಲ್ಲಿಸಿದ ಪ್ರಧಾನಮಂತ್ರಿಯಾಗಿರುವ ಈ ಸಂದರ್ಭದಲ್ಲಿ, ಕೇವಲ ರಾಷ್ಟ್ರದ ಪರಿವರ್ತನೆಯನ್ನಷ್ಟೇ ಅಲ್ಲ, ಈ ಅವಧಿಯು ನನ್ನಂತಹ ಸಾಮಾನ್ಯ ಭಾರತೀಯರಿಗೆ ಸೃಷ್ಟಿಸಿರುವ ಅಸಾಧಾರಣ ಅವಕಾಶಗಳನ್ನೂ ನೆನಪಿಸಿಕೊಳ್ಳುತ್ತಿದ್ದೇನೆ.

ಭಾರತದ ಸ್ಥಾನಮಾನದ ಚಿತ್ರಣ

ಕಳೆದೆರಡು ವರ್ಷಗಳು ಜಾಗತಿಕ ಇತಿಹಾಸದಲ್ಲೇ ಅತ್ಯಂತ ಸವಾಲಿನ ವರ್ಷಗಳು. ಭೌಗೋಳಿಕ-ರಾಜಕೀಯ ಸಂಘರ್ಷ, ಇಂಧನ ಭದ್ರತೆಯ ಕುರಿತ ಆತಂಕ, ಆರ್ಥಿಕ ಅನಿಶ್ಚಿತತೆ ಮತ್ತು ಭಯೋತ್ಪಾದನೆಯ ಬೆದರಿಕೆಗಳ ಮುಂದುವರಿಕೆ...ಹೀಗೆ ಇವುಗಳ ವಿರುದ್ಧ ಜಗತ್ತು ಈಗಲೂ ಹೋರಾಡುತ್ತಿದೆ. ಸಂಸತ್ ಸದಸ್ಯನಾಗಿ ನಾನು ಇಂಧನ ಮತ್ತು ರಕ್ಷಣಾ ಕ್ಷೇತ್ರಗಳಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಪಾಲ್ಗೊಂಡದ್ದರಿಂದ ಈ ಕ್ಷೇತ್ರದ ಬೆಳವಣಿಗೆಗಳನ್ನು ಸಮೀಪದಿಂದ ಗಮನಿಸಿದ್ದೇನೆ. ಆದರೂ, ಸಂಸದನಾಗಿ ಮೊದಲ ಅವಧಿಯಲ್ಲೇ ನನಗೆ ನೀಡಲಾದ ಎರಡು ಅಂತಾರಾಷ್ಟ್ರೀಯ ಜವಾಬ್ದಾರಿಗಳು ಜಾಗತಿಕವಾಗಿ ಭಾರತದ ಸ್ಥಾನಮಾನದ ಬಗ್ಗೆ ನನ್ನಲ್ಲಿ ಆಳವಾದ ಅರಿವು ಮೂಡಿಸಿದವು ಎಂದು ಖುಷಿಯಿಂದ ಹೇಳುತ್ತೇನೆ. ಪಾಕ್ ವಿರುದ್ಧ ಆಪರೇಷನ್ ಸಿಂದೂರ್ ಕಾರ್ಯಾಚರಣೆ ನಂತರ 2025ರ ಮೇ ತಿಂಗಳಲ್ಲಿ, ಭಯೋತ್ಪಾದನೆ ವಿರುದ್ಧದ ಭಾರತದ ಶೂನ್ಯ ಸಹಿಷ್ಣುತೆಯ ಸಂದೇಶವನ್ನು ವಿಶ್ವಕ್ಕೆ ತಲುಪಿಸುವ ಜವಾಬ್ದಾರಿ ಹೊಂದಿದ್ದ ಸಂಸತ್ತಿನ ಸರ್ವಪಕ್ಷಗಳ ನಿಯೋಗದ ಸದಸ್ಯನಾಗಿ ನನ್ನನ್ನು ಕೂಡ ಆಯ್ಕೆ ಮಾಡಲಾಗಿತ್ತು. ಈ ನಿಯೋಗ ಮಾಸ್ಕೋ, ಮ್ಯಾಡ್ರಿಡ್, ಅಥೆನ್ಸ್, ಲ್ಯೂಬ್ಲಿಯಾನಾ ಮತ್ತು ಲಾತ್ವಿಯಾ ದೇಶದ ರೀಗಾ ನಗರಗಳಿಗೆ ತೆರಳಿತ್ತು. ಓರ್ವ ಸೈನಿಕನಾಗಿ ನೋಡಿದರೆ, ಈ ಜವಾಬ್ದಾರಿ ನನ್ನ ಹೃದಯಕ್ಕೆ ಹತ್ತಿರವಾಗಿತ್ತು. ದಶಕಗಳಿಂದ ಭಾರತ ಎದುರಿಸುತ್ತಿದ್ದ ಉಗ್ರವಾದದ ವಾಸ್ತವಿಕತೆಯನ್ನು ನಾವು ಜಗತ್ತಿಗೆ ವಿವರಿಸಬೇಕಿತ್ತು. ವಿದೇಶಗಳಲ್ಲಿ ನಡೆದ ನಮ್ಮ ಸಂವಾದಗಳ ಸಂದರ್ಭದಲ್ಲಿ, ನಾನು ಒಂದು ವಿಭಿನ್ನ ವಾಸ್ತವಿಕತೆಗೆ ಸಾಕ್ಷಿಯಾಗಿದ್ದೆ. ಭಾರತದ ಧ್ವನಿಗೆ ಜಾಗತಿಕ ಮಟ್ಟದಲ್ಲಿ ಮಹತ್ವವಿತ್ತು ಮತ್ತು ಭಯೋತ್ಪಾದನೆ ವಿರುದ್ಧದ ನಮ್ಮ ಶೂನ್ಯ ಸಹಿಷ್ಣುತೆಯ ನಿಲುವಿಗೆ ಬೆಂಬಲ-ಮಾನ್ಯತೆ ದೊರೆಯುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ, ಸರ್ವಪಕ್ಷಗಳ ನಿಯೋಗದ ಮೂಲಕ ಭಾರತ ತನ್ನ ಶಕ್ತಿಯನ್ನು ಮತ್ತೊಮ್ಮೆ ಜಗತ್ತಿನ ಮುಂದೆ ಪ್ರದರ್ಶಿಸಿತ್ತು. ಭಾರತದ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಭಯೋತ್ಪಾದನೆ, ರಾಷ್ಟ್ರೀಯ ಭದ್ರತೆ ಮತ್ತು ನಾಗರಿಕರ ರಕ್ಷಣೆಯ ವಿಚಾರ ಬಂದಾಗ, ಭಾರತ ಒಂದೇ ಧ್ವನಿಯಲ್ಲಿ ಮಾತನಾಡುತ್ತದೆ ಎಂಬ ಸ್ಪಷ್ಟ ಸಂದೇಶ ರವಾನಿಸಿದ್ದೆವು. ವೈಯಕ್ತಿಕವಾಗಿ ಈ ಜವಾಬ್ದಾರಿ ನನಗೆ ಇನ್ನಷ್ಟು ವಿಶೇಷವಾಗಿತ್ತು. ಏಕೆಂದರೆ ಯೋಧನಾಗಿದ್ದಾಗಿನ ನನ್ನ ಆರಂಭಿಕ ದಿನಗಳನ್ನು ಅದು ನೆನಪಿಸಿತ್ತು. ಭಾರತೀಯ ಸೇನೆಯ 8 ಗೋರ್ಖಾ ರೈಫಲ್ಸ್‌ನಲ್ಲಿ ನಾನು ಯುವ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಎರಡನೇ ವರ್ಷದಲ್ಲೇ ಮಣಿಪುರದಲ್ಲಿ ನಡೆದ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳ ವೇಳೆ ಕಮಾಂಡಿಂಗ್ ಆಫೀಸರ್ ಅವರು ಘಾತಕ್ ಪ್ಲಾಟೂನ್ ಟ್ರೂಪ್ ನಾಯಕತ್ವದ ಜವಾಬ್ದಾರಿಯನ್ನು ನನ್ನ ಹೆಗಲಿಗೇರಿಸಿದ್ದರು. ಅದೇ ರೀತಿ, ಮೊದಲ ಬಾರಿಗೆ ಸಂಸದನಾಗಿದ್ದ ನನ್ನನ್ನು ಪ್ರಧಾನಿ ಮೋದಿ ಅವರು ಈ ಸರ್ವಪಕ್ಷ ನಿಯೋಗದ ಸದಸ್ಯನಾಗಿ ಆಯ್ಕೆ ಮಾಡಿದಾಗ, ಅದೇ ನಂಬಿಕೆ ಮತ್ತು ಜವಾಬ್ದಾರಿಯ ಭಾವನೆ ನನ್ನಲ್ಲಿ ಮತ್ತೆ ಮೂಡಿತ್ತು.

ಬದಲಾಯಿತು ನೋಡುವ ಬಗೆ

ಕೆಲ ತಿಂಗಳುಗಳ ಬಳಿಕ ನನ್ನ ಮುಂದೆ ಎರಡನೇ ಅಂತಾರಾಷ್ಟ್ರೀಯ ಜವಾಬ್ದಾರಿಯಿತ್ತು. 2025ರ ಅಕ್ಟೋಬರ್‌ನಲ್ಲಿ ವಿಶ್ವಸಂಸ್ಥೆಯ 80ನೇ ಸಾಮಾನ್ಯ ಸಭೆಯಲ್ಲಿ ಭಾರತದ ಸಂಸದೀಯ ನಿಯೋಗ ಪಾಲ್ಗೊಂಡಿತ್ತು. ಈ ನಿಯೋಗದ ಸದಸ್ಯನಾಗಿ ನಾನೂ ನ್ಯೂಯಾರ್ಕ್‌ಗೆ ತೆರಳಿ ಸಭೆಯಲ್ಲಿ ಭಾಗವಹಿಸಿದ್ದೆ. ಭಾರತದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿನಿಧಿಸಲು, ವಿವಿಧ ದೇಶಗಳ ಜನಪ್ರತಿನಿಧಿಗಳು ಮತ್ತು ನೀತಿ ನಿರೂಪಕರೊಂದಿಗೆ ಸಂವಾದ ನಡೆಸಲು, ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸಲು ಹಾಗೂ ದೇಶದ ಧ್ವನಿಯನ್ನು ವಿಶ್ವಸಂಸ್ಥೆಯ ಮುಂದಿಡಲು ಈ ನಿಯೋಗ ರಚಿಸಲಾಗಿತ್ತು.

2014ರ ನಂತರವಷ್ಟೇ ಮೊದಲ ವಿದೇಶ ಪ್ರವಾಸ ಮಾಡಿದ್ದ ನನ್ನಲ್ಲಿ ಈ ಪ್ರವಾಸ ಆಳವಾದ ಪ್ರಭಾವ ಬೀರಿತು. ಅಲ್ಲಿನ ಚರ್ಚೆ-ಭಾಷಣಗಳು ಕಳೆದೊಂದು ದಶಕದಲ್ಲಿ ಲಕ್ಷಾಂತರ ಭಾರತೀಯರಲ್ಲಿ ಮೂಡಿದ್ದ ಸಾಧ್ಯತೆಗಳ ವಿಶ್ವಾಸದ ಪ್ರತಿಬಿಂಬವಾಗಿದ್ದವು. ಜಗತ್ತು ಭಾರತವನ್ನು ನೋಡುವ ಮತ್ತು ಚರ್ಚಿಸುವ ವಿಧಾನ ನನ್ನನ್ನು ಬಹುವಾಗಿ ಆಕರ್ಷಿಸಿತ್ತು. ನಾವು ಅಲ್ಲಿ ಭೇಟಿ ಮಾಡುತ್ತಿದ್ದ ಅನಿವಾಸಿ ಭಾರತೀಯರೆಲ್ಲರೂ ಭಾರತದ ನಾಯಕತ್ವ ಹಾಗೂ ಜಾಗತಿಕ ಸ್ಥಾನಮಾನದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಉದ್ಯಮಿಗಳು, ವಿದ್ಯಾರ್ಥಿಗಳು, ವೃತ್ತಿಪರರು, ವೈದ್ಯರು, ಇಂಜಿನಿಯರ್‌ಗಳು ಹಾಗೂ ವಿವಿಧ ಸಮುದಾಯದ ನಾಯಕರು ಕೂಡ ವಿಶ್ವದಲ್ಲಿ ಭಾರತದ ಹೆಚ್ಚುತ್ತಿರುವ ಪ್ರಭಾವವನ್ನು ಮರೆಯದೆ ಉಲ್ಲೇಖಿಸುತ್ತಿದ್ದರು.

ನಮ್ಮ ಯೋಜನೆಗೆ ಸ್ಫೂರ್ತಿ

ಭಾರತವನ್ನು ಪರಿವರ್ತಿಸುವ ಮೊದಲು ಪ್ರಧಾನಿ ಮೋದಿ ಅವರು ಗುಜರಾತ್‌ನ್ನು ಪರಿವರ್ತಿಸಿದ್ದರು. ತಾಯ್ನೆಲದೊಂದಿಗೆ ಜೋಡಿಸಿಕೊಂಡ ನಾಯಕತ್ವವು ರಾಜ್ಯದಲ್ಲಿ ಏನನ್ನು ಸಾಧಿಸಬಹುದು ಎಂಬುದನ್ನು ಅವರು ತೋರಿಸಿಕೊಟ್ಟರು. ನಮ್ಮ ಆಲೋಚನೆ, ಬದ್ಧತೆಯನ್ನು ನಮ್ಮದೇ ಜನ ಮತ್ತು ಪ್ರದೇಶದ ಅಭಿವೃದ್ಧಿಗೆ ಸಮರ್ಪಿಸುವುದರಿಂದ ಬದಲಾವಣೆ ಸಾಧ್ಯ ಎನ್ನುವುದನ್ನು ಗುಜರಾತ್ ಸಾಬೀತುಪಡಿಸಿತು. ಅದು ನನ್ನ ಚಿಂತನೆಗಳ ಮೇಲೂ ಆಳವಾದ ಪ್ರಭಾವ ಬೀರಿತು.

ಮಂಗಳೂರಿನಲ್ಲಿ ನಾವು ಆರಂಭಿಸಿರುವ ಬ್ಯಾಕ್ ಟು ಊರು (Back-ToOoru) ಯೋಜನೆ ಹಿಂದಿರುವ ಸ್ಫೂರ್ತಿಯೂ ಇದೇ. ಈ ಯೋಜನೆ ಪ್ರತಿಭಾವಂತ ಯುವಕರು ತಮ್ಮ ಊರಿನಲ್ಲಿಯೇ ಅವಕಾಶಗಳನ್ನು ಮರುಶೋಧಿಸಲು ಪ್ರೋತ್ಸಾಹಿಸುತ್ತಿದೆ. ಅದೇ ರೀತಿ ಬೊಲ್ಪು (Bolpu) ಯೋಜನೆಯು ಸ್ಥಳೀಯ ಉದ್ಯಮಶೀಲತೆ ಮತ್ತು ಸಮುದಾಯ ಆಧಾರಿತ ಅಭಿವೃದ್ಧಿಯನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ. ಈ ಎರಡೂ ಯೋಜನೆಗಳ ಹಿಂದಿನ ನಂಬಿಕೆ ಏನೆಂದರೆ; ನಮ್ಮನ್ನು ರೂಪಿಸಿದ ನೆಲ ಮತ್ತು ಸಮುದಾಯಗಳಿಗೆ ನಾವು ಮರಳಿ ಕೊಡುಗೆ ನೀಡಿದಾಗ ಮಾತ್ರ ಶಾಶ್ವತ ಬದಲಾವಣೆ ಸಾಧ್ಯ ಎನ್ನುವುದು.

ನಾಯಕತ್ವದಿಂದ ಆತ್ಮವಿಶ್ವಾಸ

12 ವರ್ಷಗಳ ಹಿಂದೆ ಪ್ರಧಾನಮಂತ್ರಿಯಾಗಿ ಜವಾಬ್ದಾರಿ ವಹಿಸಿಕೊಂಡಾಗ, ಮೋದಿ ಅವರು ಲಕ್ಷಾಂತರ ಭಾರತೀಯರಿಗೆ ದೊಡ್ಡ ಕನಸು ಕಾಣಲು ಪ್ರೇರಣೆ ನೀಡಿದರು. ಲಕ್ಷಾಂತರ ಜನರು ಆ ಕನಸು ಕಂಡರು. ನನ್ನ ಕಥೆ ಅವುಗಳಲ್ಲಿ ಕೇವಲ ಒಂದಷ್ಟೇ. ಫರಂಗಿಪೇಟೆಯಿಂದ ಸಂಸತ್ತಿನವರೆಗೆ, ಸೇನೆಯಿಂದ ಸಾರ್ವಜನಿಕ ಜೀವನದವರೆಗೆ, ದಕ್ಷಿಣ ಕನ್ನಡವನ್ನು ಪ್ರತಿನಿಧಿಸುವುದರಿಂದ ವಿದೇಶಗಳಲ್ಲಿ ಭಾರತವನ್ನು ಪ್ರತಿನಿಧಿಸುವವರೆಗೆ ಸಾಗಿದ ನನ್ನ ಪಯಣದತ್ತ ದೃಷ್ಟಿ ಹಾಯಿಸಿದಾಗ, ಸಾಮಾನ್ಯ ನಾಗರಿಕರಲ್ಲಿ ಹಾಗೂ ಒಂದು ದೇಶವಾಗಿ ಭಾರತದ ಆತ್ಮವಿಶ್ವಾಸ ದೊಡ್ಡ ಮಟ್ಟಿಗೆ ವೃದ್ಧಿಯಾಗಿದೆ ಎಂಬ ದೃಢ ನಂಬಿಕೆ ನನ್ನಲ್ಲಿ ಮೂಡಿದೆ. ಪ್ರಧಾನಿಯವರ ನಾಯಕತ್ವ ರೂಪಿಸಿದ ಆತ್ಮವಿಶ್ವಾಸ ಈ ದೇಶವನ್ನು ಕಲ್ಪನೆಗೂ ಮೀರಿದ ಮಟ್ಟಿಗೆ ಮುನ್ನಡೆಸಿದೆ. ಆ ಕಾರಣಕ್ಕಾಗಿ ಹಾಗೂ ಭಾರತವನ್ನು ಜಗತ್ತಿಗೆ ಮತ್ತು ನಮಗೆ ಮರುಪರಿಚಯ ಮಾಡಿಕೊಟ್ಟದ್ದಕ್ಕಾಗಿ ಪ್ರಧಾನ ಸೇವಕ ನರೇಂದ್ರ ಮೋದಿ ಅವರಿಗೆ ಓರ್ವ ಸೈನಿಕನಾಗಿ ನನ್ನ ಹೃದಯಪೂರ್ವಕ ಸೆಲ್ಯೂಟ್.

• ಲೇಖಕರು – ಸಂಸದರು, ದಕ್ಷಿಣ ಕನ್ನಡ ಲೋಕಸಭೆ ಕ್ಷೇತ್ರ

ಪತ್ರ ಮಿತ್ರ

ಅರ್ಗಲಾ ಸ್ತೋತ್ರ ವಿಶೇಷ

ತಮಿಳುನಾಡಿನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಕೊಲ್ಲೂರು ಮೂಕಾಂಬಿಕೆಯ ದರ್ಶನ ಮಾಡಿ 1.6 ಕೆಜಿ ತೂಕದ ಬೆಳ್ಳಿಯ ಖಡ್ಗವನ್ನು ದೇವಿಗೆ ಸಮರ್ಪಿಸಿದರೆಂದು, ಈ ಸಂದರ್ಭದಲ್ಲಿ ಅರ್ಚಕರು ಅರ್ಗಲಾ ಸ್ತೋತ್ರವನ್ನು ಪಠಿಸಿ ಮುಖ್ಯಮಂತ್ರಿಯ ಕೈಗೆ ರಕ್ಷಾ ದಾರವನ್ನು ಕಟ್ಟಿದರೆಂದು ವರದಿಯಾಗಿದೆ. ಅರ್ಗಲವೆಂದರೆ 'ಕಪಾಟ ಬಂಧ ಕಾಷ್ಠ ವಿಶೇಷಃ' ಎಂದು ಅಮರಕೋಶ ತಿಳಿಸುತ್ತದೆ. ಬಾಗಿಲನ್ನು ಬಂಧಿಸುವ ಮರದ ಸಾಧನವೇ ಅರ್ಗಲ. ಕನ್ನಡದಲ್ಲಿ 'ಅಗಳಿ' ಎಂದರ್ಥ.

ದುರ್ಗೆಯ ಅನುಗ್ರಹಕ್ಕಾಗಿ ಸಪ್ತಶತೀ ಪಾರಾಯಣ, ಚಂಡೀ ಹವನಗಳನ್ನು ಮಾಡುವ ಸಂಪ್ರದಾಯ ನಮ್ಮಲ್ಲಿದೆ. ಏಳುನೂರು ಶ್ಲೋಕಗಳ ಹದಿಮೂರು ಅಧ್ಯಾಯಗಳ ಪಾರಾಯಣದ ಮೊದಲು ಕವಚ-ಅರ್ಗಲ-ಕೀಲಕ ಸ್ತೋತ್ರಗಳನ್ನು ಪಠಿಸಬೇಕು.

ಅರ್ಗಲಂ ದುರಿತಂ ಹಂತಿ ಕೀಲಕಂ ಫಲದಂ ತಥಾ।
ಕವಚಂ ರಕ್ಷತೇ ನಿತ್ಯಂ ಚಂಡಿಕಾ ತ್ರಿತಯಂ ದಿಶೇತ್॥
ಅರ್ಗಲಂ ಹೃದಯೇಯಸ್ಯ ಸ ಚಾನರ್ಗಲವಾಕ್ ಸದಾ।
ಕೀಲಕಂ ಹೃದಯೇ ಯಸ್ಯ ವಶಕೀಲಿತ ಮಾನಸಃ।
ಕವಚಂ ಹೃದಯೇ ಯಸ್ಯ ಸ ವಜ್ರ ಹೃದಯಃ ಖಲು॥

ಅರ್ಗಲ ಪಾರಾಯಣವು ದುರಿತಗಳನ್ನು ದೂರ ಮಾಡುತ್ತದೆ. ಕೀಲಕವು ಸತ್ಫಲಗಳನ್ನು ನೀಡುತ್ತದೆ. ಕವಚವು ಸದಾ ರಕ್ಷಣೆ ಮಾಡುತ್ತದೆ. ಈ ಮೂರನ್ನೂ ತಾಯಿ ದುರ್ಗೆ ಅನುಗ್ರಹಿಸುತ್ತಾಳೆ. ಅರ್ಗಲವನ್ನು ಹೃದಯದಲ್ಲಿ ಧ್ಯಾನಿಸಿದರೆ ನಿರರ್ಗಳ ಮಾತನಾಡುವ ಶಕ್ತಿಯೂ, ಕೀಲಕ ಧ್ಯಾನದಿಂದ ಮನೋ ನಿಗ್ರಹವೂ, ಕವಚ ಧ್ಯಾನದಿಂದ ವಜ್ರ ಹೃದಯವೂ ಸಿದ್ಧಿಸುತ್ತದೆ.

ಅರ್ಗಲಾ ಸ್ತೋತ್ರದಲ್ಲಿ ಇಪ್ಪತ್ತೈದು ಶ್ಲೋಕಗಳಿವೆ. ಇವುಗಳಲ್ಲಿ ಇಪ್ಪತ್ತೊಂದು ಶ್ಲೋಕಗಳ ಉತ್ತರಾರ್ಧದಲ್ಲಿ 'ರೂಪಂ ದೇಹಿ ಜಯಂ ದೇಹಿ ಯಶೋದೇಹಿ ದ್ವಿಷೋ ಜಹಿ' ಎಂಬ ಸ್ತುತಿಯಿದೆ. 'ರೂಪವನ್ನೂ, ಜಯವನ್ನೂ, ಯಶಸ್ಸನ್ನೂ ನೀಡಿ ಶತ್ರುಗಳನ್ನು ನಾಶ ಮಾಡು' ಎಂಬ ಪ್ರಾರ್ಥನೆ ಇದೆ.

ಜೋಸೆಫ್ ವಿಜಯರ ಕೊಲ್ಲೂರು ದರ್ಶನದ ಪರಿಣಾಮವಾಗಿ ಇನ್ನಷ್ಟು ತಮಿಳರು ಅಲ್ಲಿಗೆ ಲಗ್ಗೆ ಇಡಲಿದ್ದಾರೆ. ಹಿಂದೆಲ್ಲ ಎಂಜಿಆರ್ ಸಮರ್ಪಿಸಿದ 'ತಂಗವಾಳ'ನ್ನು ನೋಡಿ ಕೃತಾರ್ಥರಾದ ತಮಿಳರು ಇನ್ನು ಮುಂದೆ 'ಬೆಳ್ಳಿವಾಳ'ನ್ನು ನೋಡಿ ಧನ್ಯರಾಗಲಿದ್ದಾರೆ

-ಎಂ. ಸುಬ್ರಹ್ಮಣ್ಯ ಮುಡಿಪು

ವಿಪರ್ಯಾಸ

ತಮಿಳುನಾಡಿನ ಮುಖ್ಯಮಂತ್ರಿ ವಿಜಯ್ ತಮ್ಮ 'ಮೆರ್ಸಲ್' ಚಿತ್ರದಲ್ಲಿ 'ದೇವಸ್ಥಾನ ಕಟ್ಟಿಸುವುದಕ್ಕಿಂತ... ಆಸ್ಪತ್ರೆ ಕಟ್ಟಿಸಬೇಕು' ಅಂತ ಡೈಲಾಗ್ ಹೊಡೆದಿದ್ದೆ ಹೊಡೆದಿದ್ದು!

ಇದೀಗ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ಭಕ್ತಿಯ ಪರಾಕಾಷ್ಠೆ ತೋರಿ 1 ಕೆಜಿ 600 ಗ್ರಾಂ ತೂಕದ ಬೆಳ್ಳಿ ಖಡ್ಗ ಕೊಟ್ಟಿದ್ದು ಮಾತ್ರ ವಿಪರ್ಯಾಸ!!

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಎಷ್ಟು ಖರ್ಚು !

ತಮಿಳ್ನಾಡು ಮುಖ್ಯಮಂತ್ರಿ ವಿಜಯ್ ಕೊಲ್ಲೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ಬೆಂಗಾವಲು ವಾಹನಗಳು ಸಾಕಷ್ಟಿದ್ದವು. ಭದ್ರತಾ ವಾಹನಗಳೂ ಬಹಳಷ್ಟಿದ್ದವು. ಇವೆಲ್ಲವೂ ತಮಿಳ್ನಾಡಿನಿಂದಲೇ ಬಂದಿರುವಂತೆ ತೋರುತ್ತಿತ್ತು. ಪೆಟ್ರೋಲ್ ಕಡಿಮೆ ಬಳಸಬೇಕಾದ ಈ ಹೊತ್ತಿನಲ್ಲಿ ಇಷ್ಟೊಂದು ವೆಚ್ಚವೆ?!

–ಚಿದಂಬರ ರಾವ್, ಕುಂದಾಪುರ

ಟ್ರಂಪ್‌ಗೆ 'ಲಕ್ಷ್ಮಣ ರೇಖೆ!'

ಕೊನೆಗೂ ಇರಾನ್ ಜತೆಗಿನ ಸಮರ ಕೊನೆಗೊಂಡಿದೆಯೆಂದು ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ದಿನಕ್ಕೆ ನೂರು ಬಾರಿ ವೈರುಧ್ಯದ ಹೇಳಿಕೆಯನ್ನು ನೀಡುವ ಅವರ ಚಾಳಿಯನ್ನು ಕಳೆದ ಕೆಲವು ತಿಂಗಳುಗಳಿಂದ ನಿರಂತರ ಕಂಡವರಿಗೆ ಅವರ ಈ ಯುದ್ಧಾಂತ್ಯದ ಮಾತು ಕೂಡಾ ನಂಬುವುದು ಕಷ್ಟವಾಗುತ್ತಿದೆ. ಒಪ್ಪಂದ ಪೂರ್ಣಗೊಂಡಿದೆಯೆಂದು ಈ ಹಿಂದೆಯೂ ಅವರು ಎಷ್ಟು ಬಾರಿ ಹೇಳಿದ್ದರೆಂದು ನೆನಪಾಗುತ್ತಿಲ್ಲ. ಮತ್ತೆ ಯಾವಾಗ ಅವರು ಇರಾನ್ ಮೇಲೆ ಬಾಂಬು ಸುರಿಸುವರೆಂದೂ ಹೇಳಲಾಗುವುದಿಲ್ಲ. ತಮ್ಮ ಮನಸ್ಸಿಗೆ ತೋಚಿದಾಗಲೆಲ್ಲ ಅವರು ಯುದ್ಧ ಪುನರಾರಂಭಿಸಿಯಾರು.

ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಆಡಳಿತಗಾರರು ವಿಶ್ವಶಾಂತಿಯನ್ನು ಕಲಕುತ್ತಾರೆ. ಮುಸೋಲಿನಿ, ಬಿಸ್ಮಾರ್ಕ್, ಹಿಟ್ಲರ್, ಸ್ಟಾಲಿನ್ ಮೊದಲಾದವರು ಈ ರೀತಿ ಜಾಗತಿಕ ಶಾಂತಿ ಕದಡಿದವರೆ. ಪ್ರಸ್ತುತ ಕಾಲಮಾನಕ್ಕೆ ಬರುವಾಗ ಡೊನಾಲ್ಡ್ ಟ್ರಂಪ್ ಇದೇ ಗುಂಪಿಗೆ ಸೇರುವವರಂತೆ ಕಾಣುತ್ತಾರೆ. ಪುಟ್ಟ ಪುಟ್ಟ ರಾಷ್ಟ್ರಗಳನ್ನೆಲ್ಲ ಅಮೆರಿಕದ ವಶಕ್ಕೆ ತೆಗೆದುಕೊಳ್ಳುವ ಮಹತ್ವಾಕಾಂಕ್ಷೆಯನ್ನು ಅವರು ಪ್ರದರ್ಶಿಸುತ್ತಿದ್ದಾರೆ. ಇದು ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಸಂಘರ್ಷವೊಂದನ್ನು ಹುಟ್ಟು ಹಾಕಿ ಮೂರನೇ ಜಾಗತಿಕ ಸಮರಕ್ಕೆ ಹೇತುವಾದರೂ ಆಶ್ಚರ್ಯಪಡಬೇಕಾಗಿಲ್ಲ.

ಜಗತ್ತಿನ ಎಲ್ಲಾ ದೇಶಗಳ ಮುಖಂಡರನ್ನೂ ಟ್ರಂಪ್ ಎದುರು ಹಾಕಿಕೊಂಡಿದ್ದಾರೆ. ತಮ್ಮ ಮಿತ್ರರೆನಿಸಿಕೊಂಡವರನ್ನೂ ದೂರ ಮಾಡಿಕೊಂಡಿದ್ದಾರೆ. ಇನ್ನೀಗ ಈ ಮುಖಂಡರೆಲ್ಲರೂ ಜತೆಗೂಡಿ ಡೊನಾಲ್ಡ್ ಟ್ರಂಪ್‌ಗೊಂದು ಲಕ್ಷ್ಮಣ ರೇಖೆ ಎಳೆಯಬೇಕಾಗಿದೆ.

-ಎನ್.ಗಂಗಾಧರ ಗೌಡ, ಸುಳ್ಯ

ಅತಂತ್ರ ಭವಿಷ್ಯ

ಸರ್ಕಾರಿ ಆಂಗ್ಲ ಮಾಧ್ಯಮ ಶಾಲೆಗಳ 40,000 ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ಸರ್ಕಾರ ಅಧ್ವಾನಗೊಳಿಸಿದೆ. 7ನೇ ತರಗತಿಯವರೆಗೆ ಇಂಗ್ಲಿಷ್ ಕಲಿಸಿ ಈಗ 8ನೇ ತರಗತಿಗೆ ವಿಸ್ತರಿಸದೆ ಕೈಬಿಟ್ಟಿರುವುದು ಕಣ್ಣಿಲ್ಲದ ಆಡಳಿತಕ್ಕೆ ಸಾಕ್ಷಿ. ಜೂನ್ ಮುಗಿಯುತ್ತಿದ್ದರೂ ಯಾವುದೇ ಮಾಹಿತಿ ನೀಡದ ಶಿಕ್ಷಣ ಇಲಾಖೆಯ ನಡೆ ವಂಚನಾತ್ಮಕವಾಗಿದೆ.

ಕೆಪಿಎಸ್ ಶಾಲೆಗಳಿಗೆ 3700 ಕೋಟಿ ರೂ. ಸುರಿಯುವ ಸರ್ಕಾರಕ್ಕೆ ಈ 40,000 ಮಕ್ಕಳ ಕಣ್ಣೀರು ಕಾಣುತ್ತಿಲ್ಲವೇ? ಖಾಸಗಿ ಶಾಲೆಗಳ ದುಬಾರಿ ಶುಲ್ಕ ಕಟ್ಟಲಾಗದ ನಿರ್ಗತಿಕ ಪೋಷಕರ ಆಶಯಗಳಿಗೆ ಬೆಂಕಿ ಇಟ್ಟಂತಾಗಿದೆ. ಇದು ಕೇವಲ ನಿರ್ಲಕ್ಷ್ಯವಲ್ಲ ಬಡ ಮಕ್ಕಳ ಭವಿಷ್ಯದ ಕೊಲೆ. ಅಧಿಕಾರಿಗಳ ಮತ್ತು ರಾಜಕಾರಣಿಗಳ ಈ ಕುಂಭಕರ್ಣ ನಿದ್ರೆಯಿಂದಾಗಿ ಸಾವಿರಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರವು ಈ ಮಕ್ಕಳ ಅತಂತ್ರ ಸ್ಥಿತಿಯನ್ನು ತಕ್ಷಣ ನಿವಾರಿಸಬೇಕು.

-ಡಾ.ವಿಜಯಕುಮಾರ್, ರಾಯಚೂರು

ದಿಲ್ಲಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉಗ್ರ ಜಾಲ

ಪಾಕಿಸ್ತಾನ ಬೆಂಬಲಿತ ಏಳು ಉಗ್ರರ ಬಂಧನ

• **ಹೊಸದಿಲ್ಲಿ:** ಪಾಕಿಸ್ತಾನ ಬೆಂಬಲಿತ ಉಗ್ರ-ಅಪರಾಧ ಜಾಲವನ್ನು ದಿಲ್ಲಿ ಪೊಲೀಸರು ಭೇದಿಸಿದ್ದು, ಶಸ್ತ್ರಾಸ್ತ್ರ ಹಾಗೂ ಮಾದಕ ವಸ್ತುಗಳ ಕಳ್ಳಸಾಗಣೆ, ಸಂವೇದನಾಶೀಲ ಸ್ಥಳಗಳ ಮಾಹಿತಿ ಸಂಗ್ರಹಣೆ ಸೇರಿದಂತೆ ಹಲವು ಚಟುವಟಿಕೆಗಳಲ್ಲಿ ತೊಡಗಿದ್ದ ಏಳು ಉಗ್ರರನ್ನು ಬಂಧಿಸಿದ್ದಾರೆ. ಬಂಧಿತರು ಪಾಕಿಸ್ತಾನ ಮೂಲದ ಗ್ಯಾಂಗ್‌ಸ್ಟರ್‌ನಿಂದ ಉಗ್ರನಾಗಿರುವ ಶಹಜಾದ್ ಭಟ್ಟಿ ಹಾಗೂ ಆತನ ಸಹಚರ ಅಜ್ಮಲ್ ಗುಜ್ಜರ್‌ಗಾಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಇವರಿಬ್ಬರೂ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ. ಪೊಲೀಸರ ಮಾಹಿತಿ ಪ್ರಕಾರ, ಪಂಜಾಬ್ ಗಡಿಭಾಗದಲ್ಲಿ ಡ್ರೋನ್‌ಗಳ ಮೂಲಕ ಪಾಕಿಸ್ತಾನದಿಂದ ಶಸ್ತ್ರಾಸ್ತ್ರ ಹಾಗೂ ಮಾದಕ ವಸ್ತುಗಳನ್ನು ಕಳ್ಳಸಾಗಣೆ ಮಾಡಿ, ನಂತರ ದಿಲ್ಲಿ -ಎನ್‌ಸಿಆರ್ ಪ್ರದೇಶದಲ್ಲಿ ಅವುಗಳನ್ನು ಪೂರೈಸುವ ಕಾರ್ಯವನ್ನು ಈ ಜಾಲ ನಡೆಸುತ್ತಿತ್ತು.

ಬಂಧಿತರನ್ನು ಅನಾಸ್ ಅಲಿಯಾಸ್ ಅನಾಸ್ ತ್ಯಾಗಿ (26), ಮೋಹಿತ್ ಅಲಿಯಾಸ್ ಯೋಗಿ (26), ದೀಪಕ್ ಅಲಿಯಾಸ್ ದೀಪಕ್ ಅಗ್ರೋಲಾ (38), ಆರಿಫ್ ಅಲಿಯಾಸ್ ಪ್ರಧಾನ (30), ಕರಣವೀರ್ ಸಿಂಗ್ (26), ಜತನ್ (29) ಹಾಗೂ ಸಬೀರ್ (30) ಎಂದು ಗುರುತಿಸಲಾಗಿದೆ. ದಾಳಿಯ ವೇಳೆ ಐದು ಅತ್ಯಾಧುನಿಕ ಅರೆ-ಸ್ವಯಂಚಾಲಿತ ಪಿಸ್ತೂಲುಗಳು, 41 ಜೀವಂತ ಗುಂಡುಗಳು, ಉಗ್ರ ಚಟುವಟಿಕೆಗಳಿಗೆ ಸಂಬಂಧಿಸಿದ ಚಾಟ್ ಹಾಗೂ ಧ್ವನಿ ಸಂದೇಶಗಳಿರುವ ಏಳು ಮೊಬೈಲ್ ಫೋನ್‌ಗಳು ಮತ್ತು ಒಂದು ಎಸ್‌ಯುವಿ ವಾಹನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಜೊತೆಗೆ ಮಾದಕ ವಸ್ತು ಹಾಗೂ ಅಕ್ರಮ ಶಸ್ತ್ರಾಸ್ತ್ರ ಮಾರಾಟದಿಂದ ಬಂದ ಹಣ ವರ್ಗಾವಣೆಗಾಗಿ ಬಳಸಲಾಗಿದ್ದ ಬ್ಯಾಂಕ್ ಖಾತೆಗಳ ಮಾಹಿತಿಯೂ ಪತ್ತೆಯಾಗಿದೆ.



ವಶಕ್ಕೆ ಸಿಕ್ಕ ವಸ್ತುಗಳು

- 5 ಅತ್ಯಾಧುನಿಕ ಅರೆ-ಸ್ವಯಂಚಾಲಿತ ಪಿಸ್ತೂಲುಗಳು
- 41 ಜೀವಂತ ಗುಂಡುಗಳು
- 7 ಮೊಬೈಲ್ ಫೋನ್‌ಗಳು
- ಒಂದು ಎಸ್‌ಯುವಿ ವಾಹನ
- ಬ್ಯಾಂಕ್ ಖಾತೆಗಳ ವಿವರಗಳು
- ಪಾಕ್ ಹ್ಯಾಂಡ್ಲರ್‌ಗಳೊಂದಿಗೆ ನಡೆಸಿದ ಚಾಟ್ ಮತ್ತು ಧ್ವನಿ ಸಂದೇಶಗಳು

ಸಾಮಾಜಿಕ ಜಾಲತಾಣಗಳ ಬಳಕೆ: ಮೇ ತಿಂಗಳಲ್ಲಿ ದೊರೆತ ಗುಪ್ತಚರ ಮಾಹಿತಿಯ ಆಧಾರದಲ್ಲಿ ಪೊಲೀಸರು ತನಿಖೆ ಆರಂಭಿಸಿದ್ದರು. ಸಾಮಾಜಿಕ ಜಾಲತಾಣಗಳ ಮೂಲಕ ಯುವಕರನ್ನು ಸೆಳೆದು ದಿಲ್ಲಿ -ಎನ್‌ಸಿಆರ್‌ನಲ್ಲಿ ದಾಳಿ ನಡೆಸುವ ಸಂಚು ರೂಪಿಸಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿತ್ತು. ಇದನ್ನಾಧರಿಸಿ ಯಮುನಾ ವಿಹಾರದ ಭಗೀರಥ್ ಜಲಶುದ್ಧೀಕರಣ ಘಟಕದ ಸಮೀಪ ಮೋಹಿತ್‌ನನ್ನು ಬಂಧಿಸಲಾಗಿತ್ತು. ಆತನಿಂದ ಅಕ್ರಮ ಪಿಸ್ತೂಲು, ನಾಲ್ಕು ಜೀವಂತ ಗುಂಡುಗಳು ಹಾಗೂ ಅಜ್ಮಲ್ ಗುಜ್ಜರ್ ಜತೆಗಿನ ಸಂಭಾಷಣೆಯಿರುವ ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿತ್ತು.

ಎಲ್ಲಾ ಔಷಧಿಗೂ ವೈದ್ಯರ ಚೀಟಿ ಕಡ್ಡಾಯ

ಚೀಟಿ ಇಲ್ಲದೆ ಸಿಗಲ್ಲ ಸಿರಪ್

• **ಹೊಸದಿಲ್ಲಿ:** ದೇಶದಲ್ಲಿ ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಔಷಧೀಯ ಸಿರಪ್‌ಗಳ ಮಾರಾಟಕ್ಕೆ ಕೇಂದ್ರ ಸರ್ಕಾರ ಹೊಸ ನಿಯಮ ಜಾರಿಗೊಳಿಸಿದ್ದು, ಇನ್ನು ಮುಂದೆ ವೈದ್ಯರ ಚೀಟಿ ಇಲ್ಲದೆ ಇವುಗಳನ್ನು ಖರೀದಿಸಲು ಅವಕಾಶ ಇರುವುದಿಲ್ಲ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಔಷಧ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಿ ಈ ಆದೇಶ ಹೊರಡಿಸಿದೆ. ಹೊಸ ನಿಯಮದ ಪ್ರಕಾರ ವೈದ್ಯರ ಸಲಹೆ ಹಾಗೂ ಲಿಖಿತ ಪ್ರಿಸ್ಕ್ರಿಪ್ಷನ್ ಆಧರಿಸಿ ಮಾತ್ರ ಔಷಧ ಮಳಿಗೆಗಳು ಸಿರಪ್ ಔಷಧಿಗಳನ್ನು ವಿತರಿಸಬೇಕು. ದೇಶದಲ್ಲಿ ಕೆಲವು ಕೆಮ್ಮಿನ ಸಿರಪ್‌ಗಳ ದುರ್ಬಳಕೆ, ಅನಗತ್ಯ ಬಳಕೆ ಮತ್ತು ಕಳಪೆ ಗುಣಮಟ್ಟದ ಔಷಧಿಗಳಿಂದ ಉಂಟಾದ ಆರೋಗ್ಯ ಸಮಸ್ಯೆಗಳ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮ ಕೈಗೊಂಡಿದೆ. ಔಷಧಿಗಳ ಸುರಕ್ಷಿತ ಬಳಕೆಯನ್ನು ಖಚಿತಪಡಿಸುವ ಜೊತೆಗೆ ಸ್ವಯಂ ಔಷಧ ಸೇವನೆಗೆ ಕಡಿವಾಣ ಹಾಕುವುದು ಇದರ ಪ್ರಮುಖ ಉದ್ದೇಶವಾಗಿದೆ. ಆರೋಗ್ಯ ತಜ್ಞರ ಪ್ರಕಾರ, ಸಿರಪ್ ರೂಪದ ಔಷಧಿಗಳನ್ನು ವೈದ್ಯರ ಸಲಹೆ ಇಲ್ಲದೆ ಸೇವಿಸುವುದರಿಂದ ಕೆಲವೊಮ್ಮೆ ಗಂಭೀರ ಅಡ್ಡಪರಿಣಾಮಗಳು ಉಂಟಾಗುವ ಸಾಧ್ಯತೆ ಇದೆ. ಹೊಸ ನಿಯಮದಿಂದ ಔಷಧಗಳ ಬಳಕೆ ಮೇಲೆ ಹೆಚ್ಚಿನ ನಿಯಂತ್ರಣ ಸಾಧ್ಯವಾಗಲಿದ್ದು, ರೋಗಿಗಳ ಆರೋಗ್ಯ ಸುರಕ್ಷತೆಗೆ ನೆರವಾಗಲಿದೆ.

- ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಔಷಧೀಯ ಸಿರಪ್ ಖರೀದಿಗೆ ವೈದ್ಯರ ಚೀಟಿ ಕಡ್ಡಾಯ
- ವೈದ್ಯರ ಪ್ರಿಸ್ಕ್ರಿಪ್ಷನ್ ಇಲ್ಲದೆ ಔಷಧ ಮಳಿಗೆಗಳು ಸಿರಪ್ ಮಾರಾಟ ಮಾಡುವಂತಿಲ್ಲ
- ದೇಶದಾದ್ಯಂತ ಒಂದೇ ರೀತಿಯ ನಿಯಮ ಅನ್ವಯ
- ಔಷಧ ದುರ್ಬಳಕೆ ಹಾಗೂ ಸ್ವಯಂ ಚಿಕಿತ್ಸೆಗೆ ಕಡಿವಾಣ



ನಕಲಿ ಪ್ರಶ್ನೆಪತ್ರಿಕೆ ಜಾಲಕ್ಕೆ ಚೆಕ್‌ಮೇಟ್

ದೇಶದಲ್ಲಿ ನೀಟ್(ಯುಜಿ) 2026 ಮರುಪರೀಕ್ಷೆಯ ಸಮಯದಲ್ಲಿ ನಕಲಿ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಆನ್‌ಲೈನ್ ವಂಚನೆಯನ್ನು ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮೆಸೇಜಿಂಗ್ ಆ್ಯಪ್ ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿರ್ಬಂಧವನ್ನು ಹೇರಿದೆ. ಕೇಂದ್ರ ಸರ್ಕಾರ ತೆಗೆದುಕೊಂಡ ಕಠಿಣ ಕ್ರಮದ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸಾಮಾನ್ಯ ಜನರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮಾಹಿತಿ ತಂತ್ರಜ್ಞಾನ ಸಚಿವಾಲಯದ ಈ ನಿರ್ಬಂಧ ಕುರಿತಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ತನ್ನ ಸ್ಪಷ್ಟೀಕರಣವನ್ನೂ ಮಂಗಳವಾರ ನೀಡಿದೆ. ಮರುಪರೀಕ್ಷೆಯ ಪ್ರಶ್ನೆಪತ್ರಿಕೆ ಒದಗಿಸುವುದಾಗಿ ಟೆಲಿಗ್ರಾಮ್ ಮೂಲಕ ವಂಚನೆಮಾಡುವವರಿಗೆ ಕೇಂದ್ರ ಸರ್ಕಾರ ನೀಡಿದ ಚೆಕ್‌ಮೇಟ್ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ವಿದ್ಯಾರ್ಥಿಗಳನ್ನು ಗುರಿಯಾಗಿಸಿ ವಂಚಕರು ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಅನ್ನು ದುರ್ಬಳಕೆ ಮಾಡುತ್ತಿರುವ ಕಾರಣದಿಂದ ಈ ಕಠಿಣ ಕ್ರಮ ತೆಗೆದುಕೊಂಡಿದ್ದೇವೆ. ವಿದ್ಯಾರ್ಥಿಗಳಲ್ಲಿರುವ ಪರೀಕ್ಷೆಯ ಆತಂಕವನ್ನೇ ದಾಳವಾಗಿ ಬಳಸಿಕೊಂಡು ವಂಚಿಸುವುದು ತಿಳಿದುಬಂದಿದೆ.

■ **ಅಭಿಷೇಕ್ ಸಿಂಗ್, ಎನ್‌ಟಿಎ ಪ್ರಧಾನ ನಿರ್ದೇಶಕ**

ನಿರ್ಬಂಧ ಯಾಕೆ?

ನಾಡಿದ್ದು ಜೂ.21ರಂದು ಭಾನುವಾರ ನೀಟ್ (ಯುಜಿ) ಮರುಪರೀಕ್ಷೆ ನಡೆಯುವ ಹಿನ್ನೆಲೆ ಎನ್‌ಟಿಎ ಸುರಕ್ಷತಾ ಕ್ರಮವಾಗಿ ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿರ್ಬಂಧ ಹೇರಬೇಕೆಂಬ ಶಿಫಾರಸು ಮಾಡಿದ್ದು, ಈ ಶಿಫಾರಸಿನ ಆಧಾರದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ನೀಟ್ ಮರುಪರೀಕ್ಷೆ ಮುಗಿಯುವ ಮುಂದಿನ ದಿನದವರೆಗೂ ಅಂದರೆ ಜೂ.22ರವರೆಗೆ ಭಾರತದಲ್ಲಿ ಟೆಲಿಗ್ರಾಮ್‌ನ ಮೇಲೆ ನಿರ್ಬಂಧ ಹೇರಿದೆ. ಅಲ್ಲದೆ, ಜೂ.23ರಿಂದ ಟೆಲಿಗ್ರಾಮ್ ಲಭ್ಯವಾದರೂ ಜೂ.30ರವರೆಗೆ ಮೆಸೇಜ್ ಎಡಿಟಿಂಗ್ ಸೇವೆಯನ್ನು ತಾತ್ಕಾಲಿಕ ನಿಷ್ಕ್ರಿಯಗೊಳಿಸಲು ಟೆಲಿಗ್ರಾಮ್ ಆ್ಯಪ್‌ಗೆ ನಿರ್ದೇಶನ ನೀಡಲಾಗಿದೆ. ನೀಟ್ ಮರುಪರೀಕ್ಷೆಯ ಸಂದರ್ಭ ಹಲವು ಟೆಲಿಗ್ರಾಮ್ ಚಾನೆಲ್‌ಗಳು, ಬಾಟ್ ಪ್ರೊಫೈಲ್‌ಗಳ ಮೂಲಕ ಜೂ.21ರಂದು ನಡೆಯಲಿರುವ ಮರುಪರೀಕ್ಷೆಯ ಪ್ರಶ್ನೆಪತ್ರಿಕೆ ನೀಡುವುದಾಗಿ ನೀಟ್ ಅಭ್ಯರ್ಥಿಗಳು, ಪೋಷಕರು ಹಾಗೂ ಕುಟುಂಬ ಸದಸ್ಯರನ್ನು ನಂಬಿಸಿ ಲಕ್ಷಾಂತರ ರೂ. ವಂಚಿಸಿರುವ ಪ್ರಕರಣಗಳು ಬೆಳಕಿಗೆ ಬಂದ ಹಿನ್ನೆಲೆಯಿಂದ ಈ ಮಹತ್ವದ ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ ಸರ್ಕಾರ 200ಕ್ಕೂ ಅಧಿಕ ಚಾನೆಲ್‌ಗಳು, ಬಾಟ್‌ಗಳನ್ನು ತೆರವುಗೊಳಿಸಿದೆ.

- **ಜೂ.22ರವರೆಗೆ ಭಾರತದಲ್ಲಿ ಟೆಲಿಗ್ರಾಮ್ ತಾತ್ಕಾಲಿಕ ನಿಷೇಧ**
- **ಜೂ.30ರವರೆಗೆ ಟೆಲಿಗ್ರಾಮ್ ಮೆಸೇಜ್ ಎಡಿಟ್ ಸೌಲಭ್ಯವಿಲ್ಲ**
- **200ಕ್ಕೂ ಅಧಿಕ ಟೆಲಿಗ್ರಾಮ್ ಚಾನೆಲ್, ಬಾಟ್ ಪ್ರೊಫೈಲ್ ತೆರವು**

ವಾಟ್ಸ್ಆ್ಯಪ್ ಮೇಲೆ ಯಾಕಿಲ್ಲ ನಿರ್ಬಂಧ?

ಇತರ ದೈತ್ಯ ಟೆಕ್ ಕಂಪನಿಗಳಂತೆ ಸರ್ಕಾರಗಳೊಂದಿಗೆ ಸಹಕರಿಸುವ ಮೆಸೇಜಿಂಗ್ ಪ್ಲ್ಯಾಟ್‌ಫಾರಂಗಳ ಪಟ್ಟಿಗೆ ಟೆಲಿಗ್ರಾಮ್ ಸೇರುವುದಿಲ್ಲ. ಇದೇ ಉದ್ದೇಶದಿಂದಲೇ ಪಾವೆಲ್ ಡುರೊವ್ ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಅನ್ನು ಸ್ಥಾಪಿಸಿದ್ದರು. ವಾಟ್ಸ್ಆ್ಯಪ್ ಮತ್ತು ಎಕ್ಸ್ ಭಾರತದಲ್ಲಿ ಕೇಂದ್ರ ಸರ್ಕಾರದ ನಿರ್ದೇಶನ ಅನುಸರಿಸುತ್ತವೆ. ಆದರೆ ಟೆಲಿಗ್ರಾಮ್ ಭಾರತದಲ್ಲಿ ಕಚೇರಿ ಹೊಂದಿಲ್ಲ. ಟೆಲಿಗ್ರಾಮ್ ನಿಯಂತ್ರಿಸುವುದು ಇನ್ನಷ್ಟು ಕಠಿಣವಾಗಿದೆ. ಇದರಿಂದ ಸದ್ಯ ವಾಟ್ಸ್ಆ್ಯಪ್ ಮೇಲೆ ಸರ್ಕಾರ ನಿರ್ಬಂಧ ಹೇರಿಲ್ಲ. 2025ರಲ್ಲಿ ಟೆಲಿಗ್ರಾಮ್ 43.5 ದಶಲಕ್ಷ ಚಾನೆಲ್ ಮತ್ತು ಗ್ರೂಪ್‌ಗಳನ್ನು ಬ್ಲಾಕ್ ಮಾಡಿತ್ತು.

ನಿರ್ಬಂಧ ಕುರಿತು ಎನ್‌ಟಿಎ ಹೇಳಿದ್ದೇನು?

1 ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಕುರಿತಾಗಿ ನೀಡಲಾದ ನಿರ್ದೇಶನವನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಸ್ವಾಗತಿಸುತ್ತದೆ. ಎನ್‌ಟಿಎ ಶಿಫಾರಸಿನ ಆಧಾರದಲ್ಲಿ ಈ ನಿರ್ದೇಶನ ಜಾರಿಗೊಳಿಸಲಾಗಿದೆ.

(ಎ) ಮಾಹಿತಿ ತಂತ್ರಜ್ಞಾನ ಕಾಯ್ದೆ, 2000ದ ಸೆಕ್ಷನ್ 69 ಎ ಅನ್ವಯ ಟೆಲಿಗ್ರಾಮ್ ಅನ್ನು ನೀಟ್(ಯುಜಿ) 2026 ಮರುಪರೀಕ್ಷೆ ಮುಕ್ತಾಯದವರೆಗೆ, ಅಂದರೆ 2026ರ ಜೂ.22ರವರೆಗೆ ಸೀಮಿತ ಅವಧಿಯ ನಿರ್ಬಂಧ ಹೇರಲಾಗಿದೆ.

(ಬಿ) 2026ರ ಜೂ.30ರವರೆಗೆ ಭಾರತದಲ್ಲಿ ಟೆಲಿಗ್ರಾಮ್ ತನ್ನ ಮೆಸೇಜ್ ಎಡಿಟಿಂಗ್ ಸೇವೆಯನ್ನು ತಾತ್ಕಾಲಿಕವಾಗಿ ನಿಷ್ಕ್ರಿಯಗೊಳಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆ ಬಳಿಕ ಅದರ ಸಾಕ್ಷ್ಯಗಳನ್ನು ನಾಶಪಡಿಸಲು ಮೆಸೇಜ್ ಎಡಿಟಿಂಗ್ ಬಳಸಲಾಗಿತ್ತು. ಇದು ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಹಿತಾಸಕ್ತಿಯಿಂದ ತೆಗೆದುಕೊಂಡ ಪ್ರಮುಖ ಕ್ರಮಗಳಾಗಿವೆ. ಈ ಕ್ರಮ 2026ರ ಜೂ.21ರಂದು ಸುರಕ್ಷತೆಯಿಂದ ಪರೀಕ್ಷೆಯನ್ನು ನಡೆಸಲು ಎನ್‌ಟಿಎಗೆ ನೆರವಾಗಲಿವೆ.

2 ಕಾರ್ಯಾಚರಣೆಯಲ್ಲಿ ಕೇಂದ್ರ ಗೃಹ ಇಲಾಖೆ ಅನ್ವಯ ಭಾರತೀಯ ಸೈಬರ್ ಅಪರಾಧ ಸಹಯೋಗ ಕೇಂದ್ರ (ಐ4ಸಿ), ಬಿಹಾರ, ಗುಜರಾತ್ ಮತ್ತು ರಾಜಸ್ಥಾನ ಪೊಲೀಸರು ನೆರವಾಗಿದ್ದಾರೆ.

3 ನಿರ್ಬಂಧಗಳ ರೂಪುರೇಷೆ ಅತ್ಯಂತ ಮಿತಿಯಲ್ಲಿದೆ. ಪರೀಕ್ಷಾ ಅವಧಿವರೆಗೆ ಮಾತ್ರ ಸೀಮಿತ ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಪ್ರವೇಶ ನಿರ್ಬಂಧ ಹಾಗೂ ಪರೀಕ್ಷೆಯ ನಂತರ ನಿರ್ದಿಷ್ಟ ಅವಧಿಗೆ ಅನ್ವಯಿಸುವ ನಿರ್ಬಂಧಗಳನ್ನು ಇವು ಒಳಗೊಂಡಿವೆ. ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ಆತಂಕವನ್ನು ನಿವಾರಿಸಲು ಅಗತ್ಯವಿರುವ ಕನಿಷ್ಠ ಮಟ್ಟದ ನಿರ್ಬಂಧವನ್ನೇ ವಿಧಿಸುವ ಪ್ರಯತ್ನ ಇದಾಗಿದೆ.

4 ಪೇಪರ್ ಲೀಕ್ಡ್ ನೀಟ್, ರಿ-ನೀಟ್ 2026, ಪ್ರೈವೇಟ್ ಮಾಫಿಯಾ, ರಿ-ನೀಟ್ ಮಾಫಿಯಾ ಹೆಸರಿನ ಟೆಲಿಗ್ರಾಮ್ ಚಾನೆಲ್‌ಗಳು ನೀಟ್ ಅಭ್ಯರ್ಥಿಗಳ ಕುಟುಂಬ ಸದಸ್ಯರಿಂದ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಬದಲಿಗೆ ಲಕ್ಷಾಂತರ ಹಣ ಬೇಡಿಕೆ ಇಟ್ಟಿದ್ದವು. ಆದರೆ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿಲ್ಲ, ಇದೆಲ್ಲವೂ ನೀಟ್ ವಿದ್ಯಾರ್ಥಿಗಳ ದಾರಿತಪ್ಪಿಸುವ ಮತ್ತು ವಂಚಿಸುವ ಪ್ರಯತ್ನಗಳಾಗಿವೆ.

5 ಮೆಸೇಜ್ ಎಡಿಟಿಂಗ್ ಸೇವೆ, ಪ್ರಸ್ತುತ ಚಾನೆಲ್ ನಿರ್ವಾಹಕರಿಗೆ ಪಿಡಿಎಫ್‌ನಂತಹ ಕಡತಗಳ ಎಡಿಟಿಂಗ್ ಅವಕಾಶವನ್ನೂ ನೀಡುತ್ತದೆ. ಆದರೆ ಮೂಲ ಸಂದೇಶ ಕಳುಹಿಸಿದ ಸಮಯ ಹಾಗೆಯೇ ಉಳಿಯುತ್ತದೆ. ಈ ಸೇವೆಯನ್ನು ದುರುಪಯೋಗಪಡಿಸಿ ನಕಲಿ ಪ್ರಶ್ನೆಪತ್ರ ಸೋರಿಕೆ ಸಾಕ್ಷ್ಯಗಳನ್ನು ಸೃಷ್ಟಿಸಲಾಗಿದೆ. ಪರೀಕ್ಷೆ ಮುಗಿದ ನಂತರ, ಚಾನೆಲ್ ನಿರ್ವಾಹಕರು ಹಳೆಯ ನಿರಪರಾಧ ಸಂದೇಶವನ್ನು ಎಡಿಟ್ ಮಾಡಿ ನಿಜವಾದ ಪ್ರಶ್ನೆಪತ್ರಿಕೆಯನ್ನು ಸೇರಿಸುತ್ತಾರೆ. ನಂತರ ಆ ಚಾಟ್‌ನ ಸ್ಕ್ರೀನ್‌ಶಾಟ್‌ಗಳನ್ನು ಪರೀಕ್ಷೆಗೆ ಮುಂಚೆಯೇ ಸೋರಿಕೆಯಾಗಿದೆ ಎಂಬ ಸುಳ್ಳು ಸಾಕ್ಷ್ಯ ಸೃಷ್ಟಿಸಲಾಗುತ್ತದೆ. ಇಂತಹ ಕೃತ್ಯಗಳನ್ನು ತಡೆಯುವ ಉದ್ದೇಶದಿಂದ ಈ ನಿರ್ಬಂಧ ಹೇರಲಾಗಿದೆ.

6 ಅಹಮದಾಬಾದ್ ಸೈಬರ್ ಕ್ರೈಂ ಬ್ರ್ಯಾಂಚ್ ಅಂತರ್‌ರಾಜ್ಯ ಸೈಬರ್ ವಂಚನಾ ಜಾಲದ ಸದಸ್ಯರನ್ನು ಬಂಧಿಸಿದೆ. ಈ ಜಾಲವು ಇದೇ ರೀತಿಯ ವಂಚನಾ ಚಟುವಟಿಕೆಗಳಿಗಾಗಿ ಎಂಟು ಟೆಲಿಗ್ರಾಂ ಚಾನೆಲ್‌ಗಳನ್ನು ನಡೆಸುತ್ತಿತ್ತು. 1.5 ಕೋಟಿ ರೂ. ವಂಚನೆ ಮತ್ತು ತಿಂಗಳಲ್ಲೇ ಸಾವಿರ ಮೊಬೈಲ್ ಸಂಖ್ಯೆಗಳೊಂದಿಗೆ ಸಂಪರ್ಕ ಸಾಧಿಸಿದ್ದು ತನಿಖೆಯಲ್ಲಿ ತಿಳಿದುಬಂದಿದೆ.

7 ಮಾಹಿತಿ ತಂತ್ರಜ್ಞಾನ ಸಚಿವಾಲಯ ವಿಧಿಸಿದ ನಿರ್ಬಂಧದಿಂದ ಟೆಲಿಗ್ರಾಂ ಅನ್ನು ವೈಯಕ್ತಿಕ, ಶೈಕ್ಷಣಿಕ, ವೃತ್ತಿಪರ ಮತ್ತು ಮಾಹಿತಿ ಉದ್ದೇಶಗಳಿಗೆ ಕಾನೂನುಬದ್ಧವಾಗಿ ಬಳಸುವ ಲಕ್ಷಾಂತರ ನಾಗರಿಕರಿಗೆ ತೊಂದರೆಯಾಗಿರುವುದನ್ನು ಎನ್‌ಟಿಎ ಒಪ್ಪಿಕೊಳ್ಳುತ್ತದೆ ಮತ್ತು ಅದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತದೆ.

8 ನೀಟ್(ಯುಜಿ) 2026 ಮರುಪರೀಕ್ಷೆಯನ್ನು 2026ರ ಜೂ.21ರಂದು ನಿಗದಿಯಂತೆ ನಡೆಸಲಾಗುತ್ತದೆ. ತೆಗೆದುಕೊಳ್ಳಲಾದ ಕ್ರಮಗಳಿಂದ ಪರೀಕ್ಷಾ ಭದ್ರತೆಗೆ ಯಾವುದೇ ಧಕ್ಕೆಯಾಗಿಲ್ಲ. ನ್ಯಾಯಸಮ್ಮತ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಪರೀಕ್ಷೆ ನಡೆಸುವ ತನ್ನ ಬದ್ಧತೆಯನ್ನು ಎನ್‌ಟಿಎ ಪುನರುಚ್ಚರಿಸುತ್ತದೆ.

9 ಯಾವುದೇ ವಂಚನಾ ಪ್ರಯತ್ನಗಳು ಕಂಡುಬಂದರೆ ರಾಷ್ಟ್ರೀಯ ಸೈಬರ್ ಅಪರಾಧ ಸಹಾಯವಾಣಿ 1930ಕ್ಕೆ ಕರೆ ಮಾಡಿ ಅಥವಾ ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್‌ಗೆ ಮಾಹಿತಿ ನೀಡಬೇಕು.

ಎನ್‌ಟಿಎ ಸಹಾಯವಾಣಿ: 011-40759000/ 011-69227700 ಮತ್ತು ಇ-ಮೇಲ್ neetug@nta.ac.in.

10 ಸಮಯೋಚಿತ ಮತ್ತು ಸಮತೋಲಿತ ನಿರ್ದೇಶನಗಳನ್ನು ನೀಡಿದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ, ಗೃಹ ಸಚಿವಾಲಯ ಮತ್ತು ಐ4ಸಿ, ಸಿಬಿಐ ಹಾಗೂ ಬಿಹಾರ, ಗುಜರಾತ್, ರಾಜಸ್ಥಾನ ಮತ್ತು ಇತರ ರಾಜ್ಯಗಳ ಪೊಲೀಸ್ ಪಡೆಗಳಿಗೆ ಎನ್‌ಟಿಎ ತನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ತಿಳಿಸುತ್ತದೆ.

ಕಿರುಸುದ್ದಿ

ನೆಲಬಾಂಬ್ ಸ್ಫೋಟ: 4 ಯೋಧರಿಗೆ ಗಾಯ

• **ಶ್ರೀನಗರ:** ಜಮ್ಮು ಕಾಶ್ಮೀರದ ರಾಜೌರಿ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ)ನಲ್ಲಿ ಸೈನಿಕರು ದೈನಂದಿನ ಗಸ್ತು ನಡೆಸುವ ವೇಳೆ ಆಕಸ್ಮಿಕವಾಗಿ ನೆಲಬಾಂಬ್ (ಗ್ರೆನೇಡ್)ವೊಂದು ಸ್ಫೋಟಗೊಂಡಿದ್ದರಿಂದ ನಾಲ್ವರು ಸೈನಿಕರು ಗಾಯಗೊಂಡ ಘಟನೆ ಮಂಗಳವಾರ ನಡೆದಿದೆ. ವರದಿಗಳ ಪ್ರಕಾರ, ರಾಜೌರಿ ಜಿಲ್ಲೆಯ ನೌಶೇರಾ ಸೆಕ್ಟರ್‌ನಲ್ಲಿ ಘಟನೆ ಸಂಭವಿಸಿದೆ. ಗಾಯಗೊಂಡ ನಾಲ್ವರು ಸೈನಿಕರಲ್ಲಿ ಒಬ್ಬ ಜೂನಿಯರ್ ಕಮಿಷನ್ಡ್ ಆಫೀಸರ್(ಜೆಸಿಒ) ಮತ್ತು ಮೂವರು ಜವಾನರಿದ್ದಾರೆ. ಸೂಕ್ಷ್ಮ ಗಡಿ ಪ್ರದೇಶದಲ್ಲಿ ಎಂದಿನಂತೆ ಗಸ್ತು ಕರ್ತವ್ಯ ನಿರ್ವಹಣೆ ಸಂದರ್ಭ ಆಕಸ್ಮಿಕವಾಗಿ ನೆಲಬಾಂಬ್ ಸ್ಫೋಟಗೊಂಡಿದೆ.

ಆಧಾರ್ ದುರುಪಯೋಗ: ಕೇಂದ್ರ, ರಾಜ್ಯಕ್ಕೆ ನೋಟಿಸ್

• **ಹೊಸದಿಲ್ಲಿ:** ಆಧಾರ್ ಕಾರ್ಡ್‌ಗಳನ್ನು ಪೌರತ್ವ, ವಾಸಸ್ಥಳ ಮತ್ತು ವಸತಿ ವಿಳಾಸದ ಪುರಾವೆಯಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಗುರುತಿನ ಪರಿಶೀಲನೆಗಾಗಿ ಅದರ ಬಳಕೆಯನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲು ನಿರ್ದೇಶನಗಳನ್ನು ಕೋರಿ ಸಲ್ಲಿಸಿದ್ದ ಅರ್ಜಿ ಕುರಿತು ಸುಪ್ರೀಂ ಕೋರ್ಟ್, ಕೇಂದ್ರ ಮತ್ತು ರಾಜ್ಯಗಳ ಪ್ರತಿಕ್ರಿಯೆ ಕೇಳಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ವಿ.ಮೋಹನಾ ಅವರನ್ನೊಳಗೊಂಡ ಪೀಠವು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ ಅರ್ಜಿಯ ಮೇರೆಗೆ ಕೇಂದ್ರ ಮತ್ತು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೋಟಿಸ್ ನೀಡಿದೆ.

3 ಡ್ರಗ್ ಪೆಡ್ಲರ್‌ಗಳ 4 ಕೋಟಿ ಆಸ್ತಿ ಜಪ್ತಿ

• **ಶ್ರೀನಗರ:** ಜಮ್ಮು ಕಾಶ್ಮೀರದ ಪುಲ್ವಾಮ ಮತ್ತು ಶ್ರೀನಗರ ಜಿಲ್ಲೆಯಲ್ಲಿ ಮಂಗಳವಾರ ಮೂವರು ಮಾದಕವಸ್ತು ಮಾರಾಟಗಾರರಿಗೆ ಸೇರಿದ 4 ಕೋಟಿ ರೂ. ಮಾರುಕಟ್ಟೆ ಮೌಲ್ಯದ ಆಸ್ತಿಯನ್ನು ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎಂದು ಅಧಿಕೃತ ವಕ್ತಾರರು ತಿಳಿಸಿದ್ದಾರೆ. ಇದರಲ್ಲಿ ಕುಖ್ಯಾತ ಮಾದಕವಸ್ತು ಮಾರಾಟಗಾರ ನಿಸಾರ್ ಅಹ್ಮದ್ ಖಂಡೆಗೆ ಸೇರಿದ 2.5 ಕೋಟಿ ರೂ. ಮೌಲ್ಯದ ಎರಡು ಅಂತಸ್ತಿನ ವಸತಿಗೃಹ ಮತ್ತು ಭೂಮಿಯನ್ನು ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟಾನ್ಸಸ್(ಎನ್‌ಡಿಪಿಎಸ್) ಕಾಯ್ದೆಯ ಸೆಕ್ಷನ್ 68-ಎಫ್, 68-ಇ ಅನ್ವಯ ಪೊಲೀಸರು ವಶಪಡಿಸಿದ್ದಾರೆ. ಇನ್ನುಳಿದ 1.5 ಕೋಟಿ ರೂ. ಮೌಲ್ಯದ ಆಸ್ತಿ ಸಿಕಂದರ್ ಫಿರ್ದೌಸ್‌ಗೆ (80 ಲಕ್ಷ ರೂ.) ಸೇರಿದ ಶ್ರೀನಗರದ ವಸತಿಗೃಹ ಮತ್ತು ಘುಲಾಮ್ ಹಸ್ಸನ್ ಭಟ್‌ಗೆ (70 ಲಕ್ಷ ರೂ.) ಸೇರಿದ ಅನಂತನಾಗ್ ಜಿಲ್ಲೆಯ ವಸತಿಗೃಹವಾಗಿದೆ.

ರಾಗಾ ದೊಡ್ಡ ಜೋಕರ್ ಡಿಎಂಕೆ ತೀಕ್ಷ್ಣ ವಾಗ್ದಾಳಿ

• **ಚೆನ್ನೈ:** ತಮಿಳುನಾಡಿನಲ್ಲಿ ಕಾಂಗ್ರೆಸ್ ಹಾಗೂ ಡಿಎಂಕೆ ನಡುವಿನ ರಾಜಕೀಯ ಬಿಕ್ಕಟ್ಟು ಮತ್ತಷ್ಟು ತೀವ್ರಗೊಂಡಿದ್ದು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಡಿಎಂಕೆ ತೀಕ್ಷ್ಣ ವಾಗ್ದಾಳಿ ನಡೆಸಿದೆ. ರಾಹುಲ್ ಗಾಂಧಿ ಅವರನ್ನು 'ದೊಡ್ಡ ಜೋಕರ್' ಎಂದು ಟೀಕಿಸಿರುವ ಡಿಎಂಕೆ, 'ಇನ್ನೂ ರಾಜಕೀಯ ಪ್ರೌಢತೆ ಬೆಳೆಸಿಕೊಳ್ಳಲು ಸಾಧ್ಯವಾಗಿಲ್ಲ' ಎಂದು ಕಟುವಾಗಿ ಟೀಕಿಸಿದೆ. ಡಿಎಂಕೆಯ ಅಧಿಕೃತ ಮುಖವಾಣಿ ಮುರಸೋಲಿಯಲ್ಲಿ ಪ್ರಕಟವಾದ ಲೇಖನದಲ್ಲಿ ಕಾಂಗ್ರೆಸ್ ನಾಯಕತ್ವವನ್ನು ಗುರಿಯಾಗಿಸಿಕೊಂಡು ಟೀಕಿಸಲಾಗಿದ್ದು, ರಾಹುಲ್ ಗಾಂಧಿಯವರ ರಾಜಕೀಯ ಅಪರಿಪಕ್ವತೆ ಮತ್ತು ನಿರ್ಧಾರಗಳೇ ಕಾಂಗ್ರೆಸ್‌ಗೆ ಮಿತ್ರಪಕ್ಷಗಳಿಂದ ಟೀಕೆ ಎದುರಾಗಲು ಕಾರಣವಾಗಿವೆ ಎಂದು ಆರೋಪಿಸಲಾಗಿದೆ. ಇತ್ತೀಚಿನ ತಮಿಳುನಾಡು ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್, ಡಿಎಂಕೆ ಮೈತ್ರಿಯಿಂದ ಹೊರಬಂದು ತಮಿಳಗ ವೆಟ್ರಿ ಕಳಗಂ(ಟಿವಿಕೆ) ಸರ್ಕಾರಕ್ಕೆ ಬೆಂಬಲ ನೀಡಿದ ನಂತರ ಉಭಯ ಪಕ್ಷಗಳ ನಡುವಿನ ಸಂಬಂಧ ಹದಗೆಟ್ಟಿದೆ. ಇದೇ ಹಿನ್ನೆಲೆಯಲ್ಲಿ ಡಿಎಂಕೆ ನಿರಂತರವಾಗಿ ಕಾಂಗ್ರೆಸ್ ವಿರುದ್ಧ ಟೀಕಾ ಪ್ರಹಾರ ನಡೆಸುತ್ತಿದೆ. ಮುರಸೋಲಿ ಲೇಖನದಲ್ಲಿ ರಾಹುಲ್ ಗಾಂಧಿ ಅವರು ತಮ್ಮ ರಾಜಕೀಯ ತಪ್ಪುಗಳಿಂದಲೇ ಇಂಡಿ ಮೈತ್ರಿಕೂಟದೊಳಗೆ ಅಸಮಾಧಾನ ಉಂಟುಮಾಡಿದ್ದಾರೆ ಎಂದು ಹೇಳಲಾಗಿದೆ. ಕಾಂಗ್ರೆಸ್ ನಾಯಕತ್ವವು ಮಿತ್ರಪಕ್ಷಗಳ ಭಾವನೆಗಳಿಗೆ ಗೌರವ ನೀಡದೆ ವರ್ತಿಸಿರುವುದರಿಂದ ಮೈತ್ರಿ ರಾಜಕಾರಣದಲ್ಲಿ ವಿಶ್ವಾಸದ ಕೊರತೆ ಉಂಟಾಗಿದೆ ಎಂದು ಡಿಎಂಕೆ ಆರೋಪಿಸಿದೆ.

ಛತ್ತೀಸ್‌ಗಢ ಶಾಲೆಗಳಲಿ ಗಾಯತ್ರಿಮಂತ್ರ ಕಡ್ಡಾಯ

• **ರಾಯ್ಪುರ:** ಛತ್ತೀಸ್‌ಗಢ ಸರ್ಕಾರವು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಇತರ ಸಾಂಪ್ರದಾಯಿಕ ಹಿಂದು ಪ್ರಾರ್ಥನೆಗಳು, ರಾಷ್ಟ್ರಗೀತೆ ಜನ ಗಣ ಮನ ಮತ್ತು ರಾಷ್ಟ್ರೀಯಗೀತೆ ವಂದೇ ಮಾತರಂ ಜತೆಗೆ ಪ್ರತಿದಿನ ಗಾಯತ್ರಿ ಮಂತ್ರವನ್ನು ಪಠಿಸುವುದನ್ನು ಕಡ್ಡಾಯಗೊಳಿಸುವ ಆದೇಶವನ್ನು ಹೊರಡಿಸಿದೆ. ಶಾಲಾ ಶಿಕ್ಷಣ ಇಲಾಖೆಯು ರಚಿಸಿದ ಮತ್ತು ಎಲ್ಲಾ ಜಿಲ್ಲಾ ಶಿಕ್ಷಣ ಅಧಿಕಾರಿಗಳಿಗೆ(ಡಿಇಒ) ಹೊರಡಿಸಿದ ಈ ನಿರ್ದೇಶನವು ಶಿಕ್ಷಣ ಸಂಸ್ಥೆಗಳ ದೈನಂದಿನ ದಿನಚರಿಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ಸೂಚಿಸುತ್ತದೆ.

2026-27ರ ಶೈಕ್ಷಣಿಕ ಅಧಿವೇಶನದ ಆರಂಭದೊಂದಿಗೆ ಸಂಪೂರ್ಣ ಜಾರಿಗೆ ಬರುವ ಈ ಹೊಸ ನೀತಿಯು, ಶಾಲಾ ದಿನವಿಡೀ ಸಾಮೂಹಿಕ ಪಠಣ ಮತ್ತು ಗಾಯನಕ್ಕಾಗಿ ಕಟ್ಟುನಿಟ್ಟಾಗಿ ನಿಯಂತ್ರಿಸಲಾದ, ಮೂರು ಹಂತದ ವೇಳಾಪಟ್ಟಿಯನ್ನು ರೂಪಿಸಲಾಗಿದೆ. ಸರ್ಕಾರಿ ಅಧಿಕಾರಿಗಳ ಪ್ರಕಾರ, ಈ ಸಮಗ್ರ ಆದೇಶವು ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ಅನ್ವಯಿಸುತ್ತದೆ. ಹೊಸ ಶಿಷ್ಟಾಚಾರವು ಶಾಲಾ ದಿನವನ್ನು ಸಾಂಸ್ಕೃತಿಕ ಮತ್ತು ಮೌಲ್ಯ ಆಧಾರಿತ ಚಟುವಟಿಕೆಗಳಿಗೆ ಮೀಸಲಾಗಿರುವ ಮೂರು ನಿರ್ದಿಷ್ಟ ಸ್ಥಳಗಳಾಗಿ ವಿಂಗಡಿಸುತ್ತದೆ. ಹೊಸದಾಗಿ ಜಾರಿಗೆ ತರಲಾದ ಮಾರ್ಗಸೂಚಿಗಳಲ್ಲಿ, ಬೆಳಗಿನ ಸಭೆಯು ಈಗ ರಾಷ್ಟ್ರಗೀತೆ ಮತ್ತು ರಾಷ್ಟ್ರೀಯಗೀತೆಯನ್ನು ಸಾಮೂಹಿಕವಾಗಿ ಹಾಡುವ ಮೂಲಕ ಪ್ರಾರಂಭವಾಗುತ್ತದೆ. ನಂತರ ನೇರವಾಗಿ ದೀಪ್ ಮಂತ್ರ, ಸರಸ್ವತಿ ವಂದನಾ ಮತ್ತು ಗುರು ಮಂತ್ರವನ್ನು ಪಠಿಸಲಾಗುತ್ತದೆ. ಬೆಳಗಿನ ದಿನಚರಿಯು ಗಣ್ಯ ವ್ಯಕ್ತಿಗಳ ಜೀವನಚರಿತ್ರೆಗಳನ್ನು ಕಡ್ಡಾಯವಾಗಿ ಓದುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ.

ತ.ನಾಡಲ್ಲಿ ₹10 ಲಕ್ಷ ಕೋಟಿ ಸಾಲದ ಹೊರೆ

• **ಚೆನ್ನೈ:** ರಾಜ್ಯದ ಹಣಕಾಸಿನ ಸ್ಥಿತಿ ಬಗ್ಗೆ ತಮಿಳುನಾಡಿನ ಹಣಕಾಸು ಸಚಿವ ಮೇರಿ ವಿಲ್ಸನ್ ಮಂಗಳವಾರ ಶ್ವೇತಪತ್ರ ಬಿಡುಗಡೆ ಮಾಡಿದ್ದಾರೆ. ಸಚಿವಾಲಯದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ವಿಲ್ಸನ್, ತಮಿಳುನಾಡಿನಲ್ಲಿ 10 ಲಕ್ಷ ಕೋಟಿ ರೂ.ಗಳ ನೇರ ಸಾಲದ ಹೊರೆ ಮತ್ತು 78,324 ಕೋಟಿ ರೂ.ಗಳ ಆದಾಯ ಕೊರತೆ ಇದೆ. ರಾಜ್ಯದ ಸ್ವಂತ ತೆರಿಗೆ ಆದಾಯ(ಎಸ್‌ಒಟಿಆರ್) ಶೇ.5.45 ಮಾತ್ರ ಇದ್ದು, ಇದು ತುಂಬಾ ಕಡಿಮೆಯಾಗಿದೆ.



ರಾಜ್ಯದ ಸಾಲ ಮತ್ತು ಜಿಎಸ್‌ಡಿಪಿ ಅನುಪಾತ ಶೇ.28.3 ರಷ್ಟಿದೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ, ಟಿವಿಕೆ ಸಂಸ್ಥಾಪಕ ಸಿ. ಜೋಸೆಫ್ ವಿಜಯ್ ಅವರು ತಮ್ಮ ಸರ್ಕಾರವು ರಾಜ್ಯದ ಹಣಕಾಸು ಕುರಿತು ಶ್ವೇತಪತ್ರವನ್ನು ಬಿಡುಗಡೆ ಮಾಡುತ್ತದೆ ಎಂದು ಭರವಸೆ ನೀಡಿದ್ದರು. ಈ ಮೂಲಕ ತಮಿಳುನಾಡಿನಲ್ಲಿ ಜನಿಸಿದ ಪ್ರತಿ ಮಗುವಿನ ಮೇಲೆ ಸುಮಾರು 1 ಲಕ್ಷ ರೂ.ಗಳ ಸಾಲದ ಹೊರೆ ಇದೆ ಎಂದು ಅಂದಾಜಿಸಲಾಗಿದೆ. ಈ ದಾಖಲೆಯು ಸಾರ್ವಜನಿಕ ಹಣಕಾಸಿನ ಸುಸ್ಥಿರತೆಯ ಬಗ್ಗೆ ಹೆಚ್ಚುತ್ತಿರುವ ಕಳವಳಗಳನ್ನು ಎತ್ತಿ ತೋರಿಸುತ್ತದೆ. ವಿಶೇಷವಾಗಿ ಸಾಲದ ಸೇವೆಗಳ ವೆಚ್ಚಗಳು ಹೆಚ್ಚಾಗುತ್ತಿವೆ. ರಾಜ್ಯ ಸರ್ಕಾರವು ಗಳಿಸುವ ಪ್ರತಿ ರೂಪಾಯಿಗೆ, ಸುಮಾರು 22.8 ಪೈಸೆಗಳನ್ನು ಕೇವಲ ಬಡ್ಡಿ ಪಾವತಿಸಲಾಗುತ್ತದೆ. ಇದರಿಂದಾಗಿ ಅಭಿವೃದ್ಧಿ ವೆಚ್ಚ ಮತ್ತು ಕಲ್ಯಾಣ ಯೋಜನೆಗಳಿಗೆ ಅವಕಾಶ ಕಡಿಮೆಯಿರುತ್ತದೆ ಎಂದು ವರದಿ ಹೇಳಿದೆ.

23 ರಾಜ್ಯಗಳಲ್ಲಿ ಗಣತಿ ಪೂರ್ಣ

• **ಹೊಸದಿಲ್ಲಿ:** 2027ರ ಜನಗಣತಿಯ ಮೊದಲ ಹಂತದ ಮನೆ ಪಟ್ಟಿ ಮತ್ತು ಜನಗಣತಿ (ಎಚ್‌ಎಲ್‌ಒ) ಇಲ್ಲಿಯವರೆಗೆ 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪೂರ್ಣಗೊಂಡಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ. ಕೇರಳ ಮತ್ತು ನಾಗಾಲ್ಯಾಂಡ್‌ನಲ್ಲಿ 15 ದಿನಗಳ ಸ್ವಯಂ-ಎಣಿಕೆ ಪ್ರಕ್ರಿಯೆಯು ನಡೆಯುತ್ತಿದೆ. ಕ್ಷೇತ್ರ ಕಾರ್ಯಾಚರಣೆಯು ಜು.1ರಿಂದ ಪ್ರಾರಂಭವಾಗಿ ಜು.30ವರೆಗೆ ಮುಂದುವರಿಯುತ್ತದೆ. ಹಿಮಾಚಲ ಪ್ರದೇಶದಲ್ಲಿ ಮಂಗಳವಾರ ಆರಂಭವಾದ ಈ ಹಂತದ ಕಾರ್ಯಾಚರಣೆಗಳು ಈಗಾಗಲೇ ಗುಜರಾತ್, ಜಮ್ಮು-ಕಾಶ್ಮೀರ, ಲಡಾಖ್, ಪುದುಚೇರಿ ಮತ್ತು ಉತ್ತರ ಪ್ರದೇಶದಲ್ಲಿ ನಡೆಯುತ್ತಿವೆ. ಸ್ವಯಂ-ಗಣನೆಯನ್ನು ಪೂರ್ಣಗೊಳಿಸಿದ ನಿವಾಸಿಗಳು ತಮ್ಮ ಸ್ವಯಂ-ಗಣನೆಯ ಗುರುತಿನ ಚೀಟಿಯನ್ನು ಸಿದ್ಧವಾಗಿಟ್ಟುಕೊಳ್ಳುವಂತೆ ವಿನಂತಿಸಲಾಗಿದೆ ಮತ್ತು ಎಚ್‌ಎಲ್‌ಒ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ಷೇತ್ರ ಭೇಟಿಯ ವೇಳೆ ಅದನ್ನು ಎಣಿಕೆದಾರರೊಂದಿಗೆ ಹಂಚಿಕೊಳ್ಳಬೇಕು. ಸ್ವಯಂ ಗಣನೆಯನ್ನು ಆಯ್ಕೆ ಮಾಡದ ಕುಟುಂಬಗಳನ್ನು ಗಣಕರ ಪ್ರತ್ಯಕ್ಷ ಮನೆ-ಮನೆ ಭೇಟಿಯ ಸಮಯದಲ್ಲಿ ಒಳಗೊಳ್ಳಲಾಗುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಿಎಜಿ ವರದಿಯಲ್ಲಿ ಬಹಿರಂಗವಾದ ರಾಜ್ಯಗಳ ಹಣಕಾಸು ಸ್ಥಿತಿ

13 ರಾಜ್ಯಗಳಿಗೆ ಹೆಚ್ಚುವರಿ ಆದಾಯ

• **ಹೊಸದಿಲ್ಲಿ:** 2024-25ನೇ ಹಣಕಾಸು ವರ್ಷದಲ್ಲಿ ಉತ್ತರ ಪ್ರದೇಶ, ಗುಜರಾತ್, ಜಾರ್ಖಂಡ್, ಮಣಿಪುರ ಸೇರಿದಂತೆ ಒಟ್ಟು 13 ರಾಜ್ಯಗಳು ಹೆಚ್ಚುವರಿ ಆದಾಯ ದಾಖಲಿಸಿದರೆ, ಉಳಿದ 15 ರಾಜ್ಯಗಳು ಆದಾಯ ಕೊರತೆ ಅನುಭವಿಸಿವೆ ಎಂದು ಭಾರತದ ಮಹಾಲೆಕ್ಕಪರಿಶೋಧಕ (ಸಿಎಜಿ) ಬಿಡುಗಡೆ ಮಾಡಿದ ಸ್ಟೇಟ್ ಫೈನಾನ್ಸಸ್ 2024-25 ವರದಿ ತಿಳಿಸಿದೆ.

ಸಿಎಜಿ ಕೆ. ಸಂಜಯ್ ಮೂರ್ತಿ ಮಂಗಳವಾರ ಬಿಡುಗಡೆ ಮಾಡಿದ ವರದಿಯ ಪ್ರಕಾರ, ಒಟ್ಟು 18 ರಾಜ್ಯಗಳು ಆದಾಯ ಹೆಚ್ಚುವರಿ ಗುರಿ ಹೊಂದಿದ್ದರೂ, ಅವುಗಳಲ್ಲಿ ಕೇವಲ 9 ರಾಜ್ಯಗಳು ಮಾತ್ರ ಗುರಿ ತಲುಪಿವೆ. ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ಹರ್ಯಾಣ, ಹಿಮಾಚಲ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಮಿಜೋರಾಂ ಹಾಗೂ ತೆಲಂಗಾಣ ರಾಜ್ಯಗಳು ಗುರಿ ಸಾಧಿಸಲಾಗದೇ ವರ್ಷಾಂತ್ಯದಲ್ಲಿ ಆದಾಯ ಕೊರತೆಯಲ್ಲೇ ಉಳಿದಿವೆ. 15ನೇ ಹಣಕಾಸು ಆಯೋಗ ನಿಗದಿಪಡಿಸಿದ್ದ ಜಿಎಸ್‌ಡಿಪಿಯ ಶೇ.3 ಹಣಕಾಸು ಕೊರತೆ ಗುರಿಯನ್ನು 18 ರಾಜ್ಯಗಳು ಮೀರಿವೆ. 2024-25ರ ವೇಳೆಗೆ ರಾಜ್ಯಗಳ ಒಟ್ಟು ಬಾಧ್ಯತೆಗಳು 90.51 ಲಕ್ಷ ಕೋಟಿ ರೂ. ತಲುಪಿದ್ದು, ಎಲ್ಲಾ 28 ರಾಜ್ಯಗಳೂ ಹಣಕಾಸು ಕೊರತೆ ದಾಖಲಿಸಿವೆ.

ರಾಜ್ಯಗಳ ಆರ್ಥಿಕ ನಿರ್ವಹಣೆಯಲ್ಲಿ ಆದಾಯ ವೃದ್ಧಿ, ವೆಚ್ಚ ನಿಯಂತ್ರಣ ಮತ್ತು ಸಾಲದ ಹೊರೆ ಕಡಿತಗೊಳಿಸುವುದು ಮುಂದಿನ ವರ್ಷಗಳಲ್ಲಿ ಪ್ರಮುಖ ಸವಾಲಾಗಲಿದೆ.

■ **ಕೆ. ಸಂಜಯ್ ಮೂರ್ತಿ, ಸಿಎಜಿ**


ಎಸ್‌ಜಿಎಸ್‌ಟಿಯೇ ಆದಾಯ ಮೂಲ

ರಾಜ್ಯಗಳ ಒಟ್ಟು ಆದಾಯ ಸ್ವೀಕೃತಿ 40.52 ಲಕ್ಷ ಕೋಟಿ ರೂ. ಆಗಿದ್ದು, ಅದರ ಶೇ.50ರಷ್ಟು ರಾಜ್ಯಗಳ ಸ್ವಂತ ತೆರಿಗೆ ಆದಾಯದಿಂದ ಬಂದಿದೆ. ರಾಜ್ಯ ಜಿಎಸ್‌ಟಿ ಮಾತ್ರವೇ ಈ ತೆರಿಗೆ ಆದಾಯದ ಶೇ.43ಕ್ಕಿಂತ ಹೆಚ್ಚು ಪಾಲು ಹೊಂದಿದೆ. ರಾಜ್ಯಗಳ ಒಟ್ಟು ವೆಚ್ಚ 51.20 ಲಕ್ಷ ಕೋಟಿ ರೂ. ತಲುಪಿದ್ದು, ವೇತನ, ಪಿಂಚಣಿ ಹಾಗೂ ಬಡ್ಡಿ ಪಾವತಿಗಳು ಇನ್ನೂ ಪ್ರಮುಖ ವೆಚ್ಚಗಳಾಗಿ ಮುಂದುವರಿದಿವೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಸುಧಾರಣೆ ಅಗತ್ಯ: ಜಂಟಿ ಹೇಳಿಕೆ

ಭಾರತದ ಶಾಶ್ವತ ಸದಸ್ಯತ್ವಕ್ಕೆ ಬೆಂಬಲ

• **ಬ್ರಾಟಿಸ್ಲಾವ:** ವಿಶ್ವಸಂಸ್ಥೆಯ ಸುಧಾರಿತ ಭದ್ರತಾ ಮಂಡಳಿಯಲ್ಲಿ ಶಾಶ್ವತ ಸದಸ್ಯತ್ವ ನೀಡಬೇಕೆಂಬ ಭಾರತದ ಬೇಡಿಕೆಗೆ ಸ್ಲೊವಾಕಿಯಾ ಬೆಂಬಲಿಸಿದೆ. ವಿಶ್ವಸಂಸ್ಥೆ ಬಹುಪಕ್ಷೀಯ ಸಂಸ್ಥೆಯಾಗಿರಬೇಕು ಹಾಗೂ ಭದ್ರತಾ ಮಂಡಳಿಯಲ್ಲಿ ಸುಧಾರಣೆ ಅಗತ್ಯವಿದೆ ಎಂದು ಪ್ರಧಾನಿ ಮೋದಿ ಮತ್ತು ಸ್ಲೊವಾಕ್ ಪ್ರಧಾನಿ ರಾಬರ್ಟ್ ಫಿಕೊ ಸೋಮವಾರ ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ.



ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಇನ್ನಷ್ಟು ಪ್ರತಿನಿಧಿತ್ವ, ಅಂತರ್ಗತ ಮತ್ತು ಸಮಕಾಲೀನ ಭೌಗೋಳಿಕ ರಾಜಕೀಯ ಸತ್ಯವನ್ನು ಪ್ರತಿಬಿಂಬಿಸುವ ಅಗತ್ಯವಿದೆ. ವಿಶ್ವಸಂಸ್ಥೆ ಮತ್ತು ಅದರ ಭದ್ರತಾ ಮಂಡಳಿಯಲ್ಲಿ (ಯುಎನ್‌ಎಸ್‌ಸಿ) ಸಮಗ್ರ ಸುಧಾರಣೆಯ ಅಗತ್ಯವಿದೆ ಎಂದು ಪ್ರಧಾನಿ ಮೋದಿ ಹಾಗೂ ಸ್ಲೊವಾಕ್ ಪ್ರಧಾನಿ ರಾಬರ್ಟ್ ಫಿಕೊ ಸೋಮವಾರ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ವಿಶ್ವಸಂಸ್ಥೆ ಭದ್ರತಾ ಮಂಡಳಿಯನ್ನು ಶಾಶ್ವತ ಸದಸ್ಯರು ಮತ್ತು ಅಶಾಶ್ವತ ಸದಸ್ಯರೆಂಬ ಎರಡು ವಿಭಾಗಗಳಲ್ಲಿ ಇನ್ನಷ್ಟು ವಿಸ್ತರಿಸುವುದು ತುರ್ತು ಅಗತ್ಯವಿದೆ ಎಂದು ಇಬ್ಬರೂ ನಾಯಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮಧ್ಯ ಯುರೋಪ್ ರಾಷ್ಟ್ರ ಸ್ಲೊವಾಕಿಯಾಗೆ ನೀಡಿದ ಐತಿಹಾಸಿಕ ಭೇಟಿಯ ಸಂದರ್ಭ ಉಭಯ ರಾಷ್ಟ್ರಗಳು ಸಮಗ್ರ ಪಾಲುದಾರಿಕೆಯ ಮಟ್ಟವನ್ನು ಉನ್ನತೀಕರಿಸಿವೆ. ಇದೇ ವಿಚಾರದಲ್ಲಿ, ತನ್ನ ಶಾಶ್ವತ ಸದಸ್ಯತ್ವದ ಬೇಡಿಕೆಗೆ ಬೆಂಬಲಿಸಿದ ಸ್ಲೊವಾಕಿಯಾಗೆ ಭಾರತ ಕೃತಜ್ಞತೆಯನ್ನು ಜಂಟಿ ಹೇಳಿಕೆಯಲ್ಲೇ ಉಲ್ಲೇಖಿಸಿದೆ.

ಮೋದಿಗೆ ಸ್ಲೊವಾಕ್ ಅತ್ಯುನ್ನತ ನಾಗರಿಕ ಪ್ರಶಸ್ತಿ: ಸ್ಲೊವಾಕ್ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಪ್ರಧಾನಿ ಮೋದಿಯವರಿಗೆ ಆರ್ಡರ್ ಆಫ್ ದಿ ವೈಟ್ ಡಬಲ್ ಕ್ರಾಸ್ (ಫಸ್ಟ್ ಕ್ಲಾಸ್) ಸ್ಲೊವಾಕಿಯಾ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಇದು ಪ್ರಧಾನಿಗೆ ಸಿಕ್ಕ 33ನೇ ಅಂತಾರಾಷ್ಟ್ರೀಯ ಪ್ರಶಸ್ತಿಯಾಗಿದೆ.

IN THE COURT OF THE IV ADDITIONAL CIVIL JUDGE & J.M.F.C. AT BALLARI
Crl.M.C. No. 92 /2026

Between:-
MULAMANE GADILINGA ....Petitioner
And
The Tahasildar cum Register of Births and Deaths, Taluk Office, Ballari ...Respondent

NOTICE
TO WHOM SO EVER IT MAY CONCERNED

To
Respondent: The Tahasildar cum Register of Births and Deaths, Taluk Office, Ballari

WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners grandmother certificate by name G.Marremma W/o Late veereppa who died 05-08-2006 at above stated address at #152, Bennikal Village, Ballari Taluk and District.

You are hereby directed to appear in this court in person or by a pleader duly instructed on 14/07/2026 at about 11 00.a.m. in the before this court to show cause against the above petition, failing which the petition will be heard and determined ex-parte.

Given under my hand and seal of the court on this 16th day June 2026

By Order of the Court
sd/- Sherestedar, Chief Ministerial Officer IV Addl Civil Judge & JMFC Court Ballari.
sd/-T.suresh,Advocate for the petitioners

ಪ್ರಮಾಣ ಪತ್ರ

ಇದರಲ್ಲಿ ನಾನು, ಶ್ರೀಮತಿ. ಶೀಲಾ ಕೋಂ. ಮಲ್ಲೇಶ ಭೋವಿ @ ವಡ್ಡರ, ವಯಾ:35 ವರ್ಷ ಉದ್ಯೋಗ: ಕೂಲಿ, ಸಾ|| ಗುತ್ತಲ, ಪ್ರಮಾಣ ಪೂರ್ವಕವಾಗಿ ಮಾಡುವ ಪ್ರಮಾಣ ಪತ್ರ ಏನೆಂದರೆ, ಮೂಲಕ

1)ನಾನು ಮೇಲ್ಕಾಣಿಸಿದ ವಿಳಾಸದಲ್ಲಿ ಖಾಯಂ ಶರೀಖ ರಹವಾಸಿ ಇರುತ್ತೇನೆ.2) ನಾನು ದಿನಾಂಕ 04/12/2015ರಂದು ಶ್ರೀಮತಿ.ಪಾರ್ವತೆವ್ವ ಕೋಂ. ಹನುಮಂತಪ್ಪ ತಳವಾರ, ಸಾ:ಗುತ್ತಲ ಇವರಿಂದ ಹಾವೇರಿ ತಾಲೂಕ, ಗುತ್ತಲ ಪಟ್ಟಣದ ಅ.ನಂ. 4137. ಆಸ್ತಿ ನಂ.3947. ಒಟ್ಟು 8167.5 ಚೌ. ಫೂಟ ನೇದ್ದರ ಪೈಕಿ ಉತ್ತರ ಭಾಗದ ಬೈಲು ಜಾಗಾ ಕ್ಷೇತ್ರ ಪೂ-ಪ 41.88 ಫೂಟ. ಉ-ದ 26 ಫೂಟ ಒಟ್ಟು 1088.88 ಚೌ.ಫೂಟ ವಿಸ್ತೀರ್ಣ ವುಳ್ಳ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡಿದ್ದು ಇರುತ್ತದೆ.3) ದಿನಾಂಕ 30/05/2026 ರಂದು ನನ್ನ ವಯಕ್ತಿಕ ಕೆಲಸಕ್ಕೆ ಅಂತಾ ಹಾವೇರಿ ಹೋಗುವ ಸಲುವಾಗಿ ಗುತ್ತಲ ಬಸ್ ನಿಲ್ದಾಣಕ್ಕೆ ಬಂದಾಗ ನಜರಚೂಕಿನಿಂದ ಸದರ ಮೇಲ್ಕಂಡ ಆಸ್ತಿಯ ಮೂಲ ಖರೀದಿ ಪತ್ರವು ನಜರಚೂಕಿ ನಿಂದ ಕಳೆದುಹೋಗಿರುತ್ತದೆ.4)ಸದರ ಮೇಲ್ಕಂಡ ಮೂಲ ಖರೀದಿ ಪತ್ರವು ಹುಡುಕಲಾಗಿ ಸಿಕ್ಕಿರು ವುದಿಲ್ಲ. 5) ಸದರ ಪ್ರಮಾಣ ಪತ್ರವನ್ನು ಪಿ.ಎಸ್ .ಆಯ್. ಗುತ್ತಲ ಇವರ ಮುಂದೆ ಹಾಜರ ಪಡಿಸಿ ಮೂಲ ಖರೀದಿ ಪತ್ರ ಕಳೆದುಹೋದ ಬಗ್ಗೆ ಫಿರ್ಯಾದೆ ಕೊಡುವ ಕುರಿತು ಈ ಪ್ರಮಾಣ ಪತ್ರವನ್ನು ಮಾಡಿದ್ದು ಇರುತ್ತದೆ. 6) ಸದರ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ತಪ್ಪೆಂದು ಕಂಡು ಬಂದಲ್ಲಿ ನಾನು ಶಿಕ್ಷೆಗೆ ಅರ್ಹಳಿರುತ್ತೇನೆ.

ಸ್ಥಳ: ಗುತ್ತಲ
ದಿ: 09/06/2026

ಈ ಪ್ರಮಾಣ ಪತ್ರದಲ್ಲಿ ಬರೆದಿಯಾವತ್ತು ಸಂಗತಿಗಳು ನನಗೆ ದೊರೆತಕಾಗದ ಪತ್ರ ಮತ್ತು ನನ್ನ ಸ್ವಂತ ಮಾಹಿತಿ ಮೇಲಿಂದ ನಾನೇ ಹೇಳಿ ಬರೆಯಿಸಿದ್ದು ಅವುಗಳೆಲ್ಲವೂ ನಿಜವೆಂದು ನಂಬಿ ನಾನು ಸಹಿ ಮಾಡಿರುತ್ತೇನೆ.

ಸ್ಥಳ: ಗುತ್ತಲ
ದಿ: 09/06/2026

ಸಹಿ/-ಶೀಲಾ ಪ್ರಮಾಣಕರ್ತಳು

ಕ್ರಿ.ಮಿ. ನಂ: 27/2026

ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ಕಲಘಟಗಿ ಇವರಲ್ಲಿ

ಅರ್ಜಿದಾರ: ಮನೋಜ ತಂದೆ ಚನ್ನಪ್ಪ ಶಿಂಗನಹಳ್ಳಿ.

ವಿರುದ್ಧ

ಎದುರುಗಾರರು : 1 ಮೇ|| ತಹಶೀಲ್ದಾರರು ಹಾಗೂ ಜನನ ವ ಮರಣ ನೋಂದಣಿ ಅಧಿಕಾರಿಗಳು, ಕಲಘಟಗಿ, ಹಾಗೂ ಇನ್ನೊಬ್ಬರು.

ಸೈಟೇಶನ

ಮೇಲ್ಕಾಣಿಸಿದ ಪ್ರಕರಣವನ್ನು ಅರ್ಜಿದಾರನ ತಾಯಿಯಾದ "ಶ್ರೀಮತಿ ವಿಜಯಲಕ್ಷ್ಮೀ ಕೋಂ ಚನ್ನಪ್ಪ ಶಿಂಗನಳ್ಳಿ" ಇವರು ದಿನಾಂಕ: 17/01 /2021ರಂದು ಕಲಘಟಗಿ ತಾಲೂಕ ಯಲವದಾಳ ಗ್ರಾಮದಲ್ಲಿ ಮರಣ ಹೊಂದಿದ್ದು ಇರುತ್ತದೆ.ಸದರಿ ಮೃತಳ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಸದರಿ ಪ್ರಕರಣವನ್ನು ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಕಲಘಟಗಿ ಇವರಲ್ಲಿ ದಾಖಲ ಮಾಡಿದ್ದು ಇರುತ್ತದೆ. ಸದರ ಪೋತಿಯವರಿಗೆ ಯಾರಾದರೂ ಸರಳ ವ ಸಮೀಪದ ವಾರಸುವಾರರು ಇದ್ದಲ್ಲಿ ಮತ್ತು ಅದಕ್ಕೆ ಯಾವುದೇ ರೀತಿಯ ತಕರಾರು ಇದ್ದಲ್ಲಿ ದಿನಾಂಕ :18/06/2026ರಂದು ಬೆಳಿಗ್ಗೆ 11-00 ಘಂಟೆಗೆ ತಮ್ಮ ತಮ್ಮ ತಕರಾರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರಪಡಿಸಬಹುದು ಇಲ್ಲದೇ ಇದ್ದ ಪಕ್ಷದಲ್ಲಿ ಯಾರದು ತಕರಾರು ಇಲ್ಲವೆಂದು ಸದರಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು.

ಸ್ಥಳ : ಕಲಘಟಗಿ
ದಿನಾಂಕ : 16/06/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು(ದಿವಾಣಿ ಹಾಗೂ ಜೆ.ಎಮ್ ಎಫ್.ಸಿ ನ್ಯಾಯಾಲಯ ಕಲಘಟಗಿ)
ಸಹಿ/- (ಎಸ್. ಆರ್. ಹಿರೇಮಠ)
ಅರ್ಜಿದಾರನ ಪರ ವಕೀಲರು.

ಕೋಟಿ ಕೋಟಿ ವಚನಗಳು ಇರಲು ಸಾಧ್ಯವೇ?: ಡಾ.ಬಿರಾದಾರ



• **ವಿಜಯಪುರ:** ಕೋಟ್ಯಂತರ ಶರಣರ ವಚನಗಳನ್ನು ಸುಟ್ಟರು ಎಂದು ಹೇಳುವುದು ಲಾಜಿಕ್ ಅಲ್ಲವೇ ಅಲ್ಲ, ಅಷ್ಟೊಂದು ವಚನಗಳನ್ನು ಇರಬೇಕು ಎಂದರೆ ಒಬ್ಬೊಬ್ಬ ಶರಣರು 23 ಸಾವಿರ ವಚನಗಳನ್ನು ಬರೆಯಲು ಸಾಧ್ಯವೇ? ಎಂದು ಬಿಜೆಪಿ ಮುಖಂಡ ಡಾ.ಸುರೇಶ ಬಿರಾದಾರ ಪ್ರಶ್ನಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವಣ್ಣನನ್ನು ಕೆಲವರು ಬಿಸಿನೆಸ್ ಮಾಡಿಕೊಂಡಿದ್ದಾರೆ, ನಮ್ಮ ವಿಚಾರಧಾರೆಯನ್ನು ನಾವು ಪ್ರತಿಪಾದಿಸುತ್ತಿದ್ದೇವೆ, ಹಿಂದೂಗಳನ್ನು ಬೈದು ಬಿಟ್ಟರೆ ಅಲ್ಪಸಂಖ್ಯಾತರು ಖುಷಿಯಾಗುತ್ತಾರೆ ಎನ್ನುವ ಕಾರಣಕ್ಕೆ ಈ ರೀತಿ ಕೆಲವರು ಹೇಳಿಕೆ ನೀಡುತ್ತಿದ್ದಾರೆ. ನಿಮ್ಮ ವಿಚಾರಧಾರೆ ನಿಮಗೆ, ನಮ್ಮ ವಿಚಾರಧಾರೆ ನಮಗೆ, ಅದನ್ನು ಪಾಲಿಸುವ ವಿವೇಚನೆ ಜನರಿಗೆ ಬಿಡೋಣ ಎಂದರು.

12 ನೇ ಶತಮಾನದಲ್ಲಿ ಬಸವ ಕಲ್ಯಾಣದಲ್ಲಿ ಜನಸಂಖ್ಯೆ ಎಷ್ಟಿತ್ತು, ಕಗ್ಗೊಲೆ ಮಾಡಿದರು ಎಂಬ ಆರೋಪವನ್ನು ಹಿಂದೂ ಧರ್ಮಿಯರ ಮೇಲೆ ಹಾಕುತ್ತಾರೆ, ಅದರೆ ಅಲ್ಲಿದ್ದ ಬಿಜ್ಜಳ ರಾಜ ಜೈನರು, ಅವರು ಎಂದೂ ಹಿಂಸೆಯನ್ನು ಪ್ರೋತ್ಸಾಹಿಸುವವರೇ ಅಲ್ಲ, ಈ ರೀತಿ ಕಗ್ಗೊಲೆ ನಡೆದರೆ ಅವರು ಸುಮ್ಮನೇಕೆ ಕುಳಿತರು ಎಂದರು.

ಪ್ರಚಾರಕ್ಕಾಗಿ ಹಾಗೂ ಯಾರನ್ನೋ ಓಲೈಕೆಗೆಕನ್ನೇರಿ ಶ್ರೀಗಳಿಗೆಹಗುರವಾಗಿ ಪದ ಬಳಸಿರುವುದು ಸರಿಯಲ್ಲ, ಲಿಂಗಾಯತರು ಹಿಂದೂಗಳು, ಹಿಂದೂ ಮುಸ್ಲಿಂ, ಹಿಂದೂ ಕ್ರಿಶ್ಚಿಯನ್ ಎಂದೇ ಇದ್ದವು, ರಾಜಕೀಯವಾಗಿ ಅದನ್ನು ಒಡೆಯಲಾಯಿತು, ಬಸವಾದಿ ಹಿಂದೂ ಸಮಾವೇಶ ಕಲಬೆರಕೆ ಸಮಾವೇಶ ಎಂದಿರುವುದು ಯಾವ ನ್ಯಾಯ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ಬುರುಡೆ ಗ್ಯಾಂಗ್ ಬಿಟ್ಟು ಧರ್ಮಸ್ಥಳದ ಗುರುಗಳ ತೇಜೋವಧೆ ಮಾಡುವ ಹುನ್ನಾರದ ರೀತಿಯಲ್ಲಿ ಕಾಂಗ್ರೆಸ್ ಬೆಂಬಲಿಗರು ಕನ್ನೇರಿ ಶ್ರೀಗಳ ತೇಜೋವಧೆಯ ಪ್ರಯತ್ನ ನಡೆದಿದೆ. ಈ ರೀತಿ ಸಂತ, ಮಹಾಂತರನ್ನು ಅವಮಾನಿಸುತ್ತಿರುವುದಕ್ಕೆ ಕಾಂಗ್ರೆಸ್ ಪಕ್ಷ ಮೊದಲು ಬಹಿರಂಗ ಕ್ಷಮೆಯಾಚಿಸಬೇಕು ಎಂದರು.

ಬಿಜೆಪಿ ಮುಖಂಡ ಚಿದಾನಂದ ಚಲವಾದಿ, ಬಿಜೆಪಿ ಮಾಧ್ಯಮ ಪ್ರಮುಖ ವಿಜಯ ಜೋಶಿ ಇತರರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಸಮುದ್ರ ಪಾಲಾಗಿದ್ದ ಯುವಕನ ಮೃತದೇಹ ಪತ್ತೆ

• **ಕುಮಟಾ:** ತಾಲೂಕಿನ ಕಡ್ಲೆ ಸಮುದ್ರ ತೀರದಲ್ಲಿ ಸಮುದ್ರದ ಅಲೆಗಳ ಹೊಡೆತಕ್ಕೆ ಕೊಚ್ಚಿ ಹೋಗಿ ಸಮುದ್ರ ಪಾಲಾಗಿದ್ದ ಯುವಕನ ಮೃತದೇಹ ಮಂಗಳವಾರ ಬೆಳ್ಗೆ ಪತ್ತೆಯಾಗಿದೆ.



ಸೋಮವಾರ ಮಧ್ಯಾಹ್ನ ಗೆಳೆಯರ ಜೊತೆ ಕಡ್ಲೆ ಸಮುದ್ರ ತೀರದಲ್ಲಿ ನೀರಿಗಿಳಿದ ಸಂದರ್ಭದಲ್ಲಿ ಪೂಣಾ ಮೂಲದ ಜೀವನ್ ಭಟ್ರಾಯಿ(26) ಎಂಬ ಯುವಕ ಅಲೆಗಳ ಜೊತೆ ಕೊಚ್ಚಿ ಹೋಗಿ ಕಣ್ಮರೆಯಾಗಿದ್ದ. ಕರಾವಳಿ ಕಾವಲು ಪಡೆ, ಅಗ್ನಿಶಾಮಕ ದಳದ ಸಿಬ್ಬಂದಿಗಳು ಸಾಕಷ್ಟು ಶೋಧ ಕಾರ್ಯ ನಡೆಸಿದರೂ ಮೃತದೇಹ ಪತ್ತೆಯಾಗಿರಲಿಲ್ಲ, ಮಂಗಳವಾರ ಮುಂಜಾನೆ ಕುಮಟಾದ ಕಡೆಕೋಡಿ ಸಮುದ್ರ ವ್ಯಾಪ್ತಿಯಲ್ಲಿ ಮೃತದೇಹ ಪತ್ತೆಯಾಗಿದ್ದು, ಕರಾವಳಿ ಕಾವಲು ಪಡೆಯ ಸಿಬ್ಬಂದಿಗಳು ಮೃತದೇಹವನ್ನು ದಡಕ್ಕೆ ಸಾಗಿಸುವ ಕಾರ್ಯ ನಡೆಸಿದರು.

ಅತ್ಯಾಚಾರ: ಆರೋಪಿ ಬಂಧನ

• **ಸಿಂಧನೂರು:** ನಗರದ ನಗರ ಪೊಲೀಸ್ ಠಾಣೆಯಲ್ಲಿ ಅಪ್ರಾಪ್ತ ಸೋದರಿಯರಿಬ್ಬರ ಮೇಲೆ ಬಾಬು ಎಂಬಾತ ಅತ್ಯಾಚಾರ ನಡೆಸಿದ್ದು, ಆತನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ನಗರದ ವಾರ್ಡ್ ನಂ.30ರಲ್ಲಿ ಬರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹತ್ತಿರ ಇರುವ ಗೀತಾ ಐಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವ ಬಾಬು ಎಂಬಾತ ಅತ್ಯಾಚಾರ ಮಾಡಿದ ಆರೋಪಿಯಾಗಿದ್ದಾನೆ. ಬಾಲಕಿಯರು ಶಾಲೆ ಮುಗಿಸಿಕೊಂಡು ಬಂದವರು ಸಂಜೆ ಮನೆಯ ಹತ್ತಿರ ಆಟ ಹಾಡುತ್ತಿರುವಾಗ ಆರೋಪಿಯು ಮನೆಯ ಒಳಗಡೆ ಕರೆದುಕೊಂಡು ಶೆಡ್ ಮನೆಯಲ್ಲಿ ಈ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ. ನಂತರ ಆರೋಪಿಯು ಈ ವಿಷಯ ಯಾರಿಗಾದರೂ ಹೇಳಿದರೆ ನಿಮ್ಮ ತಂದೆ, ತಾಯಿಯನ್ನು ಕೊಲೆ ಮಾಡುವುದಾಗಿ ಬಾಲಕಿಯರಿಗೆ ಬೆದರಿಕೆ ಹಾಕಿದ್ದಾನೆ. ಈ ವಿಷಯವಾಗಿ ಆತನನ್ನು ಬಂಧಿಸಿ ತನಿಖೆ ನಡೆಸುತ್ತಿದ್ದೇವೆ ಎಂದು ಡಿವೈಎಸ್ಪಿ ಚಂದ್ರಶೇಖರ ಹಾಗೂ ನಗರ ಠಾಣೆಯ ಪಿಐ ವೀರಾರೆಡ್ಡಿ ಹೇಳಿದರು.

ಮಾದಕ ವಸ್ತುಗಳ ಮಾರಾಟ: ಓರ್ವನ ಬಂಧನ

• **ಕಾರವಾರ:** ಸಮಾಜಕ್ಕೆ ಹಾನಿಕರ ಆಗುವ ರೀತಿಯಲ್ಲಿ ನಿರಂತರವಾಗಿ ಕಾನೂನು ಬಾಹಿರ ಮಾದಕ ವಸ್ತುಗಳ ಚಟುವಟಿಕೆಯಲ್ಲಿ ತೊಡಗಿದ್ದ ವ್ಯಕ್ತಿಯನ್ನುಪಶ್ಚಿಮವಲಯಪೊಲೀಸ್ಮಹಾನಿರೀಕ್ಷಕರನಿರ್ದೇಶನದಂತೆ ಮಾದಕ ವಸ್ತುಗಳ ಅಕ್ರಮ ಸಾಗಾಟ ತಡೆ ಕಾಯ್ದೆ ಅಡಿಯಲ್ಲಿ ಬಂಧಿಸಿ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಒಪ್ಪಿಸಲಾಗಿದೆ. ಕಾರವಾರ ಹಬ್ಬುವಾಡದ ಕುಂತಿ ಮಹಾಮಾಯಿ ದೇವಾಲಯದ ಸಮೀಪದ ನಿವಾಸಿ ಇಬ್ರಾಹಿಂ ದವಳಸಾಬ್ ಚೋಪದಾರ್(22) ಮಾದಕ ವಸ್ತುಗಳ ಸಾಗಾಟ, ಮಾರಾಟ ಮತ್ತು ಸೇವನೆಗೆ ಸಂಬಂಧಿಸಿದಂತೆ ಈತನ ಮೇಲೆ ಕಾರವಾರ ನಗರ ಪೊಲೀಸ್ ಠಾಣೆ, ಚಿತ್ತಾಕುಲ ಪೊಲೀಸ್ ಠಾಣೆ ಮತ್ತು ಅಂಕೋಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಐದು ಪ್ರಕರಣಗಳು ದಾಖಲಾಗಿತ್ತು. ಆದರೂ ಕಾನೂನು ಬಾಹಿರ ಮಾದಕ ವಸ್ತುಗಳ ಸಾಗಾಣಿಕೆ, ಮಾರಾಟ ಮತ್ತು ಸೇವನೆ ಮುಂದುವರಿಸಿದ್ದು ಜಾಮೀನು ಷರತ್ತುಗಳನ್ನು ಉಲ್ಲಂಘಿಸಿದ ಪರಿಣಾಮ ಕಾರವಾರ ಶಹರ ಪೊಲೀಸ್ ನಿರೀಕ್ಷಕರು ಮತ್ತು ಡಿ.ವೈ.ಎಸ್.ಪಿ ಅವರು ಪೊಲೀಸ್ ವರಿಷ್ಠರಿಗೆ ಕೋರಿಕೆ ಸಲ್ಲಿಸಿದ್ದರಿಂದ ಪೊಲೀಸ್ ಅಧೀಕ್ಷಕರು ಸೂಕ್ತ ದಾಖಲಾತಿಗಳೊಂದಿಗೆ ಪಶ್ಚಿಮ ವಲಯ ಪೊಲೀಸ್ ಮಹಾನಿರ್ದೇಶಕರಿಗೆ ನಿವೇದನೆ ಸಲ್ಲಿಸಿದ್ದರು. ಪಶ್ಚಿಮ ವಲಯ ಪೊಲೀಸ್ ಮಹಾನಿರ್ದೇಶಕರು ಎನ್.ಡಿ.ಪಿ.ಎಸ್ ಕಾಯ್ದೆಯ ಅಡಿಯಲ್ಲಿ ಡ್ರಗ್ ಪೆಡ್ಲರ್ ಇಬ್ರಾಹಿಂನನ್ನು ಬಳ್ಳಾರಿ ಜಿಲ್ಲೆಯ ಕೇಂದ್ರ ಕಾರಾಗೃಹದಲ್ಲಿ ಬಂಧನದಲ್ಲಿ ಇಡುವಂತೆ ಆದೇಶ ಹೊರಡಿಸಿದ್ದು ಬಂಧಿತನನ್ನು ಬಳ್ಳಾರಿ ಜೈಲಿಗೆ ಒಪ್ಪಿಸಲಾಗಿದೆ. ಮಾದಕ ವಸ್ತುಗಳ ಸಾಗಾಟ, ಮಾರಾಟ ಮತ್ತು ಸೇವನೆಯನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದ್ದು ಯುವಜನರು, ಸಾರ್ವಜನಿಕರು ಮಾದಕ ವಸ್ತುಗಳಿಂದ ದೂರ ಇರುವಂತೆ, ಮಾದಕ ವಸ್ತುಗಳ ಸಾಗಾಟ, ಮಾರಾಟ, ಸೇವನೆಯಂತ ಕಾನೂನು ಬಾಹಿರ ಚಟುವಟಿಕೆಗಳು ಕಂಡು ಬಂದರೆ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಕೋರಲಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಆಲಸಂದೆ ಕಾಳು	2136	4579
ಕಡಲೆಕಾಳು	1209	5916
ಉದ್ದಿನಕಾಳು	2511	7310
ಒಣ ಮೆಣಸಿನಕಾಯಿ	18900	50000
ಹೆಸರುಕಾಳು	1200	7586
ನೆಲಗಡಲೆ (ಶೇಂಗಾ)	2122	5658
ಜೋಳ	1716	4166
ಮೆಕ್ಕೆಜೋಳ	2056	2056
ಮಡಿಕೆ (ಮಟಕಿ)	5580	6500
ಈರುಳ್ಳಿ	400	2100
ಆಲೂಗಡ್ಡೆ	1200	1800
ಸೋಯಾಬಿನ್	2270	6819

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ-563 103
E-Mail:bnuregevl@karnataka.gov.in
web: www.bnu.karnataka.gov.in

ದಿನಾಂಕ: 15.06.2026

ಇ-ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ ಇಲ್ಲಿಗೆ ಈ ಕೆಳಕಂಡಂತೆ ವಿವಿಧ ಪ್ರಕ್ರಿಯೆಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. (1) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವದ ಅಂಗವಾಗಿ ಪರೀಕ್ಷಾ ವಿಭಾಗಕ್ಕೆ **ಗೋಲ್ಡ್ ಮೆಡಲ್** ಸರಬರಾಜು ಮಾಡುವ ಬಗ್ಗೆ. **ಟೆಂಡರ್‌ನಂ: BNU/2026-27/IND0068.** (2) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರದ ಪರೀಕ್ಷಾ ವಿಭಾಗಕ್ಕೆ **Kora Cloth Bag** ಗಳನ್ನು ಸರಬರಾಜು ಮಾಡುವ ಬಗ್ಗೆ. **ಟೆಂಡರ್‌ನಂ: BNU/2026-27/IND0069** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು **ಟೆಂಡರ್ ದಾಖಲೆಗಳನ್ನು ದಿನಾಂಕ: 12.06.2026** ರಿಂದ **http://kppp. karna taka.gov.in ವೆಬ್‌ಸೈಟ್ ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.** ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವರು ಮೌಲ್ಯಮಾಪನ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/- ಕುಲಸಚಿವರು(ಮೌ)
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಟಮಕ, ಕೋಲಾರ-563103

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:121/ಕೆಎಸ್ಎಂಸಿಎ/2026-27

G & W No. 89/2026
IN THE COURT OF THE I-ADDL SENIOR CIVIL JUDGE & JMFC AT: HUBBALLI
Petitioner : Smt. Rajeshwari W/o Fakkirappa Danammanavar
V/s.
Respondents : NIL

CITATION

WHEREAS, The above named petitioner has filed the above mentioned petition for appointment of guardian seeking permission to sell the share of minor in the property bearing R.S No. 59/6B, measuring 10 guntas, situated at Kuradikeri village, Tq:Hubballi, Dist:Dharwad.

Any person having any sort of claim, objections may put forth their appearance personally or through their Advocate on 01-07-2026 at 10-30 A.M. If no person appears before this Court on the said date & time, the matter will be heard & appropriate order will be passed.

Given under my hand & seal of the Court this 16th day of the June 2026.

COURT SEAL
By order of the Court
Sd/- Sherestedar
I-Addl. Sr. Civil Judge Court, Hubballi
Basavaraj F. Antal
Advocate for Petitioner

IN THE COURT OF THE IV ADDITIONAL CIVIL JUDGE & J.M.F.C. AT BALLARI
Crl.M.C. No. 91 /2026

Between:-
MULAMANE GADILINGA ......Petitioner
And
The Tahasildar cum Register of Births and Deaths, Taluk Office, Ballari ...Respondent

NOTICE
TO WHOM SO EVER IT MAY CONCERNED

To
Respondent: The Tahasildar cum Register of Births and Deaths, Taluk Office, Ballari

WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners grandfather certificate by name Veerappa s/o Late Basappa who died 10-02-2000 at above stated address at #152, Bennikal Village, Ballari Taluk and District.

You are hereby directed to appear in this court in person or by a pleader duly instructed on 14/07/2026 at about 11 00.a.m. in the before this court to show cause against the above petition, failing which the petition will be heard and determined ex-parte.

Given under my hand and seal of the court on this 16th day June 2026

By Order of the Court
sd/- Sherestedar, Chief Ministerial Officer IV Addl Civil Judge & JMFC Court Ballari.
sd/-suresh,Advocate for the petitioners

ಸಾರ್ವಜನಿಕ ಪ್ರಕಟಣೆ
ಸಿದ್ದಾಪುರ ಜೆ.ಎಂ.ಎಫ್.ಸಿ. ಕೋರ್ಟಿನಲ್ಲಿ,
ಕ್ರಿ.ಮಿ.ನಂ: 26/2026

ಅಣ್ಣಪ್ಪ ಬಸವಣ್ಣಿ ಮಡಿವಾಳ ....ಅರ್ಜಿದಾರ
ವಿರುದ್ಧ
1ನೇ ತಹಶೀಲ್ದಾರರು ತಾ:ಸಿದ್ದಾಪುರ (ಉ.ಕ.)
ಕೂಡಾ .... ಎದುರುದಾರರು

ಸದ್ರಿ ಪ್ರಕರಣದ ಎದುರುದಾರರು ಮತ್ತು ಹಿತಾಸಕ್ತಿಯುಳ್ಳ ಸಂಬಂಧಿಕರು ಹಾಗೂ,ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ:-

ಈ ಪ್ರಕರಣದ ಅರ್ಜಿದಾರನು ಸಿದ್ದಾಪುರ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ತನ್ನಹೆಂಡತಿ ಪಾರ್ವತಿ ಅಣ್ಣಪ್ಪ ಮಡಿವಾಳ ಇವಳು ದಿನಾಂಕ: 20-10-2009 ರಂದು ಸಿದ್ದಾಪುರ ತಾಲೂಕು ಹೆಗ್ಗೆಕೊಪ್ಪ ಗ್ರಾಮದ ಹೆಗ್ಗೆಕೊಪ್ಪ ಊರಿನಲ್ಲಿ ಮೃತರಾಗಿರುವುದಾಗಿಯೂ ಮತ್ತು ಮೃತರ ಮರಣ ದಾಖಲೆಯನ್ನು ಅರ್ಜಿದಾರರಿಗೆ ಪೂರೈಸುವಂತೆ 1 ಮತ್ತು 2ನೇಎದುರುದಾರರಿಗೆ ಆದೇಶವಾಗುವಂತೆ ಕೋರಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾನೆ.ಅರ್ಜಿದಾರನ ಕೋರಿಕೆಗೆ ಯಾವುದಾದರೂ ತಕ್ರಾರುಗಳಿದ್ದಲ್ಲಿ ದಿನಾಂಕ:18/1/26ರಂದು ಬೆಳಿಗ್ಗೆ10-30.ಗಂಟೆಗೆ ಸಿದ್ದಾಪುರ, ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಹಾಜರಾಗಿ ಮೇಲೆ ಹೇಳಿದ ಪ್ರಕರಣದಲ್ಲಿ ತಮ್ಮ ತಕ್ರಾರು ಸಲ್ಲಿಸಬಹುದಾಗಿದೆ ಎಂದು ಈ ಮೂಲಕ ತಿಳಿಸಲಾಗಿರುತ್ತದೆ.

ಇಂದು ದಿನಾಂಕ: 18/07/2026ರಂದು ನ್ಯಾಯಾಲಯದ ಮೊಹರಿನೊಂದಿಗೆ ಸಹಿ ಮಾಡಿ ನೀಡಲಾಗಿದೆ

ಸಿದ್ದಾಪುರ
ದಿನಾಂಕ:18/07/2026

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು/-ಜೆ.ಎಂ.ಎಫ್.ಸಿ. ಕೋರ್ಟ ಸಿದ್ದಾಪುರ (ಉ.ಕ.)
ಸಹಿ/-ಎನ್.ವೈ. ಅಪ್ಪಿನಬೈಲ್ ಅರ್ಜಿದಾರರ ಪರ ವಕೀಲರು

CHANGE OF SURNAME

1,ANIL NINGAPPA MURABATTI, aged 28 years, residing at Gothe Village, Taluk Jamkhandi, District Bagalkot, Karnataka, have changed my surname from "MURABATTI" to "MANTOOR" by way of an affidavit sworn before a Notary Public on 02/06/2026. Hereafter, I shall be known and called as ANIL NINGAPPA MANTOOR for all purposes.
Sd/-ANIL NINGAPPA MANTOOR

CHANGE OF SURNAME

I, NINGAPPA S/O ADIVEPPA MURABATTI, aged 60 years, residing at Gothe Village, Taluk Jamkhandi, District Bagalkot, Karnataka, have changed my surname from "MURABATTI" to "MANTOOR" by way of an affidavit sworn before a Notary Public on 02/06/2026. Hereafter, I shall be known and called as NINGAPPA S/O ADIVEPPAMANTOOR for all purposes.
Sd/-NINGAPPA ADIVEPPA MANTOOR

CHANGE OF NAME

I, **HAMEEDA BANU ITI (Old Name)** have changed my name as **HAMEEDABANU MOULASAB ITI (New Name).** Henceforth I will be recognized and called by the new name for all purposes. R/o H.N.160, Shivaji Nagar, Rangappa Temple Road, Betageri, Gadag, Tq:/Dist: Gadag. State: Karnataka. Submitted an affidavit dated 16.06.2026 through M.K. Kagadagar, Notary, Gadag.

CHANGE OF NAME

I, **HASAAN MOHAMMAD ALTAPH SHAIKH** (Old Name) R/o: 39 Altaf Manzil Ambarkodla Road Kakarmath Ankola 581314, have changed my name as **HASAAN ALTAF SHAIKH** (New Name) henceforth I will be called and recognized by new name for all future purposes, dated: 16/06/2026.

CHANGE OF NAME

I, **RIYAJAHAMMAD RAJESAHEB ATTAR** (Old Name) Resident of # 376/3, Somawar Peth Jamiya Masjid Galli, Kittur - 591115, Dt: Belgaum (address), have changed my name as **RIYAZAHMAD RAJESAHEB ATTAR** (New Name) henceforth I will be called and recognized by new name for all future purposes, dated: 16/06/2026.

CHANGE OF NAME

I, **IBRAHIM KOPPAL (Old Name)** have changed my name as **IBRAHIM MEHABOOBALI KOPPAL (New Name).** Henceforth I will be recognized and called by the new name for all purposes. Plot No. LIG 624, Near KHB Colony Gadag Tq:/Dist: Gadag, State: Karnataka. Submitted an affidavit dated 16.06.2026 through M.M. Hiremath, Notary, Gadag.

CHANGE OF NAME

I, **SHAHANAJ BEGAM ATTAR** (Old Name) Resident of # 376/3, Somawar Peth Jamiya Masjid Galli, Kittur - 591115, Dt: Belgaum (address), have changed my name as **SHAHANAZ BEGAM RIYAZ AHAMAD ATTAR** (New Name) henceforth I will be called and recognized by new name for all future purposes, dated: 16/06/2026.

CHANGE OF NAME

I, **SIKHANDAR KARADI (Old Name)** have changed my name as **SIKANDAR KARADI (New Name)** as there is variation in first name. Henceforth I will be recognized and called by the new name for all purposes. R/o Hospet Chowk, Gadag, Tq:/Dist: Gadag, State: Karnataka. Submitted an affidavit dated 16.06.2026 through M.M. Hiremath, Notary, Gadag.

CHANGE OF NAME

I, **JUBEDA MAIDIN SAB** (Old Name) Resident of Kurva, Post: Herangadi, Taluk: Honnavar, Dist: Uttara Kannada, Karnataka state, pin code : 581334, have changed my name as **JUBEDA SHAHULHAMEED KURWE** (New Name) for all purposes affidavit Dtd.: 16-06-2026 sworn before notary **S. G. Hedge.**

CHANGE OF NAME

I, **NAHIDA ANJUM PATHAN** (Old Name) Resident of H No: 05, Near Banatikatta Circle, Kalmesinwar Nagar, Hubli, Old Hubli, Dharwad, Karnataka, Pin Code: 580024, have changed my name as **NAHIDA ANJUM** (New Name) henceforth I will be called and recognized by new name for all future purposes, dated: 16/06/2026.

CHANGE OF NAME

I, **MASABBI (Old Name)** R/o Gudnapur Galli, Haliyal-581329 have changed my name to **MASABI BASHIR AHAMAD KITTUR (New Name)** Vide Affidavit Sworn Before Notary S.F. Huilgol on 15-06-2026

ಕ್ರಿ.ಮಿ. ನಂ: 64/2026

ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ಕಲಘಟಗಿ ಇವರಲ್ಲಿ

ಅರ್ಜಿದಾರಳು : ಶ್ರೀಮತಿ ದೇವಕ್ಕ ಕೋಂ ಜಂಬು ಉಪ್ಪಾರ.

ವಿರುದ್ಧ

ಎದುರುಗಾರರು :ಮೇ|| ತಹಶೀಲ್ದಾರರು ಹಾಗೂ ಜನನ ವ ಮರಣ ನೋಂದಣಿ ಅಧಿಕಾರಿಗಳು, ಕಲಘಟಗಿ, ಹಾಗೂ ಇನ್ನೊಬ್ಬರು.

ಸೈಟೇಶನ

ಮೇಲ್ಕಾಣಿಸಿದ ಪ್ರಕರಣವನ್ನು ಅರ್ಜಿದಾರಳ ಗಂಡನಾದ"ಜಂಬು ತಂದೆ ವಿರುಪಾಕ್ಷಪ್ಪ.ಉಪ್ಪಾರ" ಇವರು ದಿನಾಂಕ :14/09/2022ರಂದು ಕಲಘಟಗಿ ತಾಲೂಕಿನ ಎಮ್ಮೆಟ್ಟಿ ಗ್ರಾಮದಲ್ಲಿ ಮರಣ ಹೊಂದಿದ್ದು ಇರುತ್ತದೆ. ಸದರಿ ಮೃತರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಸದರಿ ಪ್ರಕರಣವನ್ನು ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಕಲಘಟಗಿ ಇವರಲ್ಲಿ ದಾಖಲ ಮಾಡಿದ್ದು ಇರುತ್ತದೆ. ಸದರ ಪೋತಿಗೆ ಯಾರಾದರೂ ಸರಳ ವ ಸಮೀಪದ ವಾರಸುದಾರರು ಇದ್ದರೆ, ಮತ್ತು ಅದಕ್ಕೆ ಯಾವುದೇ ರೀತಿಯ ತಕರಾರು ಇದ್ದಲ್ಲಿ ದಿನಾಂಕ : 03/07/26 ರಂದು ಬೆಳಿಗ್ಗೆ 11-00 ಘಂಟೆಗೆ ತಮ್ಮ ತಮ್ಮ ತಕರಾರನ್ನು ಮಾನ್ಯ ನ್ಯಾಯಾ ಲಯದ ಮುಂದೆ ಹಾಜರ ಪಡಿಸ ಬಹುದು ಇಲ್ಲದೇ ಇದ್ದ ಪಕ್ಷದಲ್ಲಿ ಯಾರದು ತಕರಾರು ಇಲ್ಲವೆಂದು ಸದರಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು.

ಸ್ಥಳ :ಕಲಘಟಗಿ
ದಿನಾಂಕ: 16/06/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶೀರಸ್ತೆದಾರರು (ದಿವಾಣಿ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಕಲಘಟಗಿ)
ಸಹಿ/-(ಶ್ರೀ ಎಸ್. ಐ. ಕುಂಬಾರ)
ಅರ್ಜಿದಾರಳ ಪರ ವಕೀಲರು.

ಮಾನ್ಯ ಧನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್.ಎಲ್.ಎಮ್.ಸಿ. ಸಂಖ್ಯೆ: 635/2026

ಅರ್ಜಿದಾರರು :ಹುಲುಗಪ್ಪ ತಂದೆ ಸಣ್ಣ ನಿಂಗಪ್ಪ ಮತ್ತು ಇತರರು

ವಿರುದ್ಧ

ಎದುರುದಾರರು :ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಸಂಡೂರು,

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1ರಿಂದ 7ರವರ ದೊಡ್ಡಪ್ಪನ ಮಗಳಾದ ದೇವದಾಸಿ ಹುಲಿಗೆಮ್ಮ ತಂದೆ ದೊಡ್ಡ ಗುಂಡಪ್ಪ ಇವರು ದಿನಾಂಕ: 05-02-2024 ರಂದು ತಾರಾನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ :23-07-2026 ಬೆಳಿಗ್ಗೆ 11:00, ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು.ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರು ನೊಂದಿಗೆ ದಿನಾಂಕ :15/06/2026 ರಂದು ನೀಡಲಾಯಿತು

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು. ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/-ಹುಲಿಗೇಶಿ.ಎ
ಅರ್ಜಿದಾರರ ಪರ ವಕೀಲರು ಸಂಡೂರು

ಜಿಲ್ಲಾ ಮಕ್ಕಳ ರಕ್ಷಣಾ ಘಟಕ
(ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಕೊಪ್ಪಳ - 583 231. ದೂರವಾಣಿ: 08539-225030, ಇ-ಮೇಲ್: dcpukoppal@gmail.com

ಸಂಖ್ಯೆ : ಡಿ.ಜಿ.ಮ.ರ.ಘ.ಕೊ./ಆ.&ಇ.ವ./ಟೆಂಡರ್/2026-27 ದಿನಾಂಕ : 16-06-2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026-27 ನೇ ಸಾಲಿಗಾಗಿ ಜಿಲ್ಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿ, ಮಿಷನ್ ವಾತ್ಸಲ್ಯ ಮಾರ್ಗಸೂಚಿಯನ್ವಯ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳಾದ ಬಾಲಕರ / ಬಾಲಕಿಯರ ಸರ್ಕಾರಿ ಬಾಲಮಂದಿರ, ಕೊಪ್ಪಳ ಸಂಸ್ಥೆಗಳಲ್ಲಿನ ನಿವಾಸಿ ಮಕ್ಕಳಿಗೆ ಆಹಾರ ಮತ್ತು ಇತರೆ ಅಗತ್ಯ ವಸ್ತುಗಳನ್ನು ಪೂರೈಸಲು ಅರ್ಹ ಏಜೆನ್ಸಿ / ಸಂಸ್ಥೆಯನ್ನು ಗುರುತಿಸಲು ದ್ವಿ-ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. **ಟೆಂಡರ್‌ನ ಅಂದಾಜು ಮೊತ್ತ : ರೂ. 28.82 ಲಕ್ಷಗಳು ಆಗಿರುತ್ತದೆ.**

ಇ-ಪೋರ್ಟಲ್‌ನಲ್ಲಿ ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ : 17-06-2026, ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 02-07-2026 ರ ಸಂಜೆ 5.00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 03-07-2026 ರ ಸಂಜೆ 5.30 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 06-07-2026 ರ ಬೆಳಿಗ್ಗೆ 10.30 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ - 583231 ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರ್ ಅರ್ಜಿಯನ್ನು ಇ-ಪೋರ್ಟಲ್ **https://kppp.karnataka.gov.in/#/portal/portal-home (Indent : DCP/2026-27/IND0107)** ಮುಖಾಂತರ ಸಲ್ಲಿಸತಕ್ಕದ್ದು. **ದೂರವಾಣಿ ಸಂಖ್ಯೆಗಳು : 08539-225030 ಅಥವಾ 96864 62444.**

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ

ಡಿಐಪಿಆರ್/ಕೊಪ್ಪಳ/170/ಮಣಿಪಾಲ್/2026-27

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆ.ಪಿ.ಪಿ ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 4/2026-27 ದಿನಾಂಕ: 10.06.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ2000ರ ಪ್ರಕಾರ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ದ್ವಿ-ಲಕೋಟೆ ಪದ್ಧತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ 2025-26 ನೇ ಸಾಲಿನ CMIDP ಲೆಕ್ಕಶೀರ್ಷಿಕೆಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಕೆ.ಪಿ.ಪಿ ಇ-ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 10.07.2026** ರ **16.30 ರವರೆಗೆ (2)** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 13.07.2026** ರಂದು **16.35** ನಂತರ **(3)** ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 14.07.2026** ರಂದು ಬೆಳಿಗ್ಗೆ **11.30** ನಂತರ (4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): e- Procurement ನಿಯಮಾನುಸಾರ

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಕಾಲಮಿತಿ ಮಳೆಗಾಲ ಸೇರಿ
1	Improvements to road from Ucchodanahalli village to Konapura approch road in Gauribidanur Taluk. (INDENT NO:RDPR/2026-27/RD/WORK_INDENT27284)	160.00	240000.00	9 ತಿಂಗಳು
2	Improvements to road from Hosur Allipura main road to Kenkare approch road ,in Gouribidanur taluk, (INDENT NO:RDPR/2026-27/RD/WORK_INDENT27285	130.00	195000.00	9 ತಿಂಗಳು
3	Improvements to road from A.C.C.factory to Basavanahalli approch road in Gouribidanur Taluk (INDENT NO:RDPR/2026-27/RD/WORK_INDENT27286)	200.00	300000.00	9 ತಿಂಗಳು
4	Improvements to road from Bommashettihalli Village to Kurudi approch road in Gouribidanur Taluk, (INDENT NO:RDPR/2026-27/RD/WORK_INDENT27287)	170.00	255000.00	9 ತಿಂಗಳು
	Total	660.00		

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:104/ಕೆಎಸ್ಎಂಸಿಎ/2026-27

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
ಮಿನಿ ವಿಧಾನ ಸೌಧ ಪಕ್ಕದಲ್ಲಿ, ಸ್ಟೇಶನ್ ಮುಖ್ಯ ರಸ್ತೆ, ಕಲಬುರಗಿ-585102
E-mail : commissionergda@gmail.com / Phone No. 08472-221214

ಸಂಖ್ಯೆ: ನಪ್ರಾಕ/ನ.ಯೋ.ಸ./ಭೂಉಬ/ಆನ್‌ಲೈನ್-10404/2026-27/1134 ದಿನಾಂಕ : 15-05-2026

:: ಪ್ರಕಟಣೆ ::

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ರ ಪ್ರಕಾರ)

ಕಲಬುರಗಿ ನಗರದ ಸ್ಥಳೀಯ ಯೋಜನಾ ಕ್ಷೇತ್ರಕ್ಕೆ ಅನುಮೋದಿತ ಪರಿಷ್ಕೃತ-2 ಮಹಾಯೋಜನೆ ನಕ್ಷೆಯಲ್ಲಿ ಬರುವ ಈ ಕೆಳಕಂಡ ಗ್ರಾಮದ ಸರ್ವೆ ನಂಬರ **ಕೃಷಿ** ಉದ್ದೇಶದಿಂದ **ವಸತಿ** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗಾಗಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

1) ಜಮೀನು ವಿವರ : **ಹಾಗರಗಾ ಸರ್ವೆ ನಂ. 227/*/1,** 2) ವಿಸ್ತೀರ್ಣ ಎ-ಗುಂ : **06-31,** 3) ಮಹಾಯೋಜನೆಯಲ್ಲಿ ಕಾಯ್ದಿರಿಸಿದ ಉದ್ದೇಶ : **ಕೃಷಿ,** 4) ಅರ್ಜಿದಾರರು ಕೇಳಿರುವ ಉದ್ದೇಶ : **ವಸತಿ,** 5) ಅರ್ಜಿದಾರರ ಹೆಸರು : **ಶ್ರೀ ಬಸವರಾಜ ತಂದೆ ಭೀಮಾಶಂಕರ,** 6) ಅರ್ಜಿದಾರರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅಂಶಗಳು : 1) ನಿವೇಶನ ರಹಿತ ಜನರಿಗೆ ನಿವೇಶನಗಳನ್ನು ಒದಗಿಸಲಾಗುವುದು, 2) ನಿರುದ್ಯೋಗಿ ಜನರಿಗೆ ಉದ್ಯೋಗ ದೊರಕುವುದು, 3) ಯೋಜಿತ ನಗರದ ಬೆಳವಣಿಗೆ ಸಾಧ್ಯ, 4) ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ಆದ್ದರಿಂದ ಸದರಿ ಪ್ರಸ್ತಾವನೆ ಕುರಿತು ಸಾರ್ವಜನಿಕ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳ ಒಳಗಾಗಿ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ ರವರ ಕಛೇರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/221/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ - 581 334
OFFICE OF THE DEPUTY CONSERVATOR OF FORESTS, HONAVAR DIVISION, HONAVAR-581334
ದೂರವಾಣಿ ನಂ.: 08387-295236 Email: dcf.honavar@gmail.com
ಸಂ.ಎ2/ಬಜೆಟ್/ಕೆಶೋರ್/ಟೆಂಡರ್/ವಿವ-/2026-27 ದಿನಾಂಕ: 08.06.2026

ಟೆಂಡರ್ ಪ್ರಕಟಣೆ

(1) 2026-27 ನೇ ಸಾಲಿಗೆ ಭಟಕಳ ಉಪ ವಿಭಾಗದಲ್ಲಿ ವಿಶ್ವ ಬ್ಯಾಂಕ ನೆರವಿನ ಕೆ-ಶೋರ್ ಯೋಜನೆಯಡಿ ವಿವಿಧ ಮಾದರಿಗಳಲ್ಲಿ ನೆಡುತೋಪು ರಚನೆ, ನಿರ್ವಹಣೆ ಹಾಗೂ ನರ್ಸರಿ ಕಾಮಗಾರಿ ಕೆಲಸಗಳ ಒಟ್ಟೂ 10 ಯುನಿಟ್ಟುಗಳಿಗೆ ದಿನಾಂಕ: 17.06.2026 ರಂದು ಆರ್ಥಿಕ ಬಿಡ್ ಟೆಂಡರ ಕರೆಯಲಾಗಿದೆ. (2) 2026-27 ನೇ ಸಾಲಿಗೆ ಕುಮಟಾ ಉಪ ವಿಭಾಗದಲ್ಲಿ ವಿಶ್ವ ಬ್ಯಾಂಕ ನೆರವಿನ ಕೆ-ಶೋರ್ ಯೋಜನೆಯಡಿ ವಿವಿಧ ಮಾದರಿಗಳಲ್ಲಿ ನೆಡುತೋಪು ರಚನೆ, ನಿರ್ವಹಣೆ ಹಾಗೂ ನರ್ಸರಿ ಕಾಮಗಾರಿ ಕೆಲಸಗಳ ಒಟ್ಟೂ 25 ಯುನಿಟ್ಟುಗಳಿಗೆ ದಿನಾಂಕ: 19.06.2026 ರಂದು ಆರ್ಥಿಕ ಬಿಡ್ ಟೆಂಡರ ಕರೆಯಲಾಗಿದೆ. (3) 2026-27 ನೇ ಸಾಲಿಗೆ ಕುಮಟಾ ಉಪ ವಿಭಾಗದಲ್ಲಿ ವಿಶ್ವ ಬ್ಯಾಂಕ ನೆರವಿನ ಕೆ-ಶೋರ್ ಯೋಜನೆಯಡಿ ವಿವಿಧ ಮಾದರಿಗಳಲ್ಲಿ ನೆಡುತೋಪು ರಚನೆ, ನಿರ್ವಹಣೆ ಹಾಗೂ ನರ್ಸರಿ ಕಾಮಗಾರಿ ಕೆಲಸಗಳ ಒಟ್ಟೂ 17 ಯುನಿಟ್ಟುಗಳಿಗೆ ದಿನಾಂಕ: 22.06.2026 ರಂದು ಆರ್ಥಿಕ ಬಿಡ್ ಟೆಂಡರ ಕರೆಯಲಾಗಿದೆ. ದಿನಾಂಕ: 06.12.2024 ಮತ್ತು 17.10.2025 ರ **Pre qualified tender** ವಿಜೇತ ಟೆಂಡರುದಾರರು ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ. **https://kppp.karnataka.gov.in** ಮೂಲಕ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08387-295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

DIPR/KWR/KSMCA/211/26-27 dt. 16.06.2026

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು–572 120 ತುಮಕೂರು ಜಿಲ್ಲೆ.
ಫೋನ್ ನಂ.0816–2957008 ಇ–ಮೇಲ್: eehcidhebbur@gmail.com

ಸಂಖ್ಯೆ: 04/2026–27 ದಿನಾಂಕ: 12.06.2026

ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 04 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ Item rate ಆಧಾರದ ಮೇಲೆ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ: 16.06.2026 ಮತ್ತು ಅಂತಿಮ ದಿನಾಂಕ: 24.06.2026 ಹೆಚ್ಚಿನ ವಿವರಗಳನ್ನು, ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ತನಿಖಾ ವಿಭಾಗ, ಕಾ.ನೀ.ನಿ.ನಿ, ಹೆಬ್ಬೂರು

DIPR/TUM/107/KSMCA/2026-27

ಕ್ರಿ.ಮಿ. ನಂ. 98/2026

ಮಾನ್ಯ 4ನೇ ಅಧಿಕ ಸಿವಿಲ್ ನ್ಯಾಯಾಲಯ (ಕಿ. ವಿ.) ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರಳು : ಶ್ರೀಮತಿ ಗೀತಾ ಕೋಂ ಗಣೇಶ ಗೋಂದಕರ

ವಿರುದ್ಧ

ಎದುರುಗಾರರು : 1) ಮುಖ್ಯ ಆರೋಗ್ಯಾಧಿಕಾರಿಗಳು, ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.
2) ಮಾನ್ಯ ಸಹಾಯಕ ಆಯುಕ್ತರು, ವಲಯ ಕಚೇರಿ ನಂ 10, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹಳೇಹುಬ್ಬಳ್ಳಿ, ಹೆಗ್ಗೇರಿ, ಹುಬ್ಬಳ್ಳಿ

ಜಾಹೀರ ನೋಟೀಸು

ಅರ್ಜಿದಾರಳ ಗಂಡನಾದ ಗಣೇಶ ತಂದೆ ತಿಪ್ಪಣ್ಣ ಗೋಂದಕರ ಇವರ ತಾತನಾದ **ರಾಮಚಂದ್ರಪ್ಪ ತಂದೆ ಪರಮೇಶ್ವರಪ್ಪ ಮಿರಜಕರ @ ಕಾತರಕಿ ಇವರು ಧಾರವಾಡ ಜಿಲ್ಲಾ, ಹುಬ್ಬಳ್ಳಿ ತಾಲ್ಲೂಕ, ಹಳೇ ಹುಬ್ಬಳ್ಳಿಯ ಮುಸ್ತಾನಸೋಫಾ ಓಣಿಯಲ್ಲಿ ದಿ. 10–06–1978** ರಂದು ಮರಣ ಹೊಂದಿದ್ದರಿಂದ, ಅರ್ಜಿದಾರರು ತನ್ನ ಗಂಡನ ತಾತನ ಮರಣ ಪ್ರಮಾಣ ಪತ್ರಕ್ಕಾಗಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿಯವರ ಮರಣದ ಬಗ್ಗೆ ಯಾರ ದಾದರು ತಕರಾರು/ಹಕ್ಕು ಹಿತಾಸಕ್ತಿ ವಗೈರೆ ಇದ್ದಲ್ಲಿ, ದಿ:29–07–2026 ರಂದು ನ್ಯಾಯಾಲಯದ ಮುಂದೆ ಮುಂಜಾನೆ 11–00 ಗಂಟೆಗೆ ತಾವಾಗಲೀ ಅಥವಾ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಸದರಿ ಈ ಅರ್ಜಿಯನ್ನು, ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಅಂತಾ ಪರಿಗಣಿಸಿ ಸೂಕ್ತ ಆದೇಶ ಹೊರಡಿಸಲಾಗುವುದು.

ಈ ಹೊತ್ತು ದಿ: 16–06–2026 ರಂದು ನಮ್ಮ ಸಹಿಯೊಂದಿಗೆ ಕೋರ್ಟಿನ ಮೊಹರು ಮಾಡಿಕೊಡಲ್ಪಟ್ಟಿತು. (ಕೋರ್ಟ ಮೊಹರು)

ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/–ಶಿರಸ್ತೇದಾರರು
4ನೇ ಅಧಿಕ ಸಿವಿಲ್ ನ್ಯಾಯಾಲಯ (ಕಿ.ವಿ.) ಹಾಗೂ ಜೆಎಮ್.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

ಹುಬ್ಬಳ್ಳಿ
ದಿ:16–06–2026
ಶ್ರೀಮತಿ ವಿದ್ಯಾಶ್ರೀ ಆರ್. ಪವಾರ,
ಅರ್ಜಿದಾರಳ ಪರ ವಕೀಲರು, ಹುಬ್ಬಳ್ಳಿ

ಸಾರ್ವಜನಿಕ ಪ್ರಕಟಣೆ

ಶ್ರೀಯುತ ಗೋವರ್ಧನದಾಸ ತಂದೆ ಬಿಹಾರಿಲಾಲ ಭೂತಡಾ, ಸಾ॥ ಬಾಗಲಕೋಟ, ತಾಲೂಕ ಮತ್ತು ಜಿಲ್ಲಾ ಬಾಗಲಕೋಟ, ಈ ಮೂಲಕ ಯಾವತ್ತೂ ಸಾರ್ವಜನಿಕರಿಗೆ ತಿಳಿಯಪಡಿಸುವುದು ಏನೆಂದರೇ,

ನಾನು ಬಾದಾಮಿ ತಾಲೂಕ ಪೈಕಿ ಹೂಲಗೇರಿ ಗ್ರಾಮದ ಜಮೀನು ರಿ.ಸ.ನಂಬರ 39/2 ವಿಸ್ತೀರ್ಣ 3 ಎಕರೆ 16 ಗುಂಟೆ ಇದರ ಮಾಲಿಕನು ಇರುತ್ತೇನೆ. ಸದರಿ ಜಮೀನನ್ನು, ಸದಾನಂದ ತಂದೆ ರಾಜಶೇಖರ ಪಾಟೀಲ ಇವರಿಂದಾ ಗುರುಪಾದಪ್ಪ ತಂದೆ ಶಿವಪ್ಪ ಜವಳಿ ಇವರು ದಿನಾಂಕ 19–11–2012 ರಂದು ನೊಂದಾಯಿತ ಕ್ರಯ ಪತ್ರದ ಅಡಿಯಲ್ಲಿ ದಕ್ಕ ಖರೀದಿಗೆ ಹಿಡಿದಿರುತ್ತಾರೆ. ನಂತರ ನಾನು ಸದರಿ ಗುರುಪಾದಪ್ಪ ತಂದೆ ಶಿವಪ್ಪ ಜವಳಿ ಇವರಿಂದಾ ದಿನಾಂಕ 20–12–2014 ರಂದು ಸದರಿ ಜಮೀನನ್ನು ನೊಂದಾಯಿತ ಕ್ರಯ ಪತ್ರದ ಅಡಿಯಲ್ಲಿ ದಕ್ಕ ಖರೀದಿಗೆ ಹಿಡಿದಿರುತ್ತೇನೆ. ಸದರಿ ದಿನಾಂಕ 19–11–2012 ರಂದು ಖರೀದಿಸಿದ ಮೂಲ ಖರೀದಿ ಪತ್ರವನ್ನು ನಾನು ದಿನಾಂಕ 30–05–2026 ರಂದು ಹೂಲಗೇರಿ ಇಂದಾ ಕೆರೂರ ಕಡೆಗೆ ಹೋಗುವ ಸಮಯದಲ್ಲಿ ಕಳೆದುಕೊಂಡಿರುತ್ತೇನೆ. ಆ ಬಗ್ಗೆ ದಿನಾಂಕ 15–06–2026 ರಂದು ಕೆರೂರ ಪೋಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತೇನೆ. ಈಗ ನಾನು ಸದರಿ ಜಮೀನಿನ ಆಧಾರದ ಮೇಲೆ ಕೆನರಾ ಬ್ಯಾಂಕ್ ಕೆರೂರ ಶಾಖೆಯಲ್ಲಿ ಸಾಲ ತೆಗೆದುಕೊಳ್ಳುವವನು ಇರುತ್ತೇನೆ. ನಾನು ಸದರಿ ಮೂಲ ಕ್ರಯ ದಾಖಲೆಗಳ ಮೇಲೆ ಯಾವದೇ ಬ್ಯಾಂಕಿನಲ್ಲಿ / ಸಹಕಾರಿ ಸಂಘದಲ್ಲಿ ಮೂಲ ಕ್ರಯ ಪತ್ರಗಳನ್ನು ಅಡಮಾನ ಮಾಡಿ ಸಾಲ ಪಡೆದುಕೊಂಡಿರುವದಿಲ್ಲಾ ಅಂತಾ ಈ ಮೂಲಕ ತಿಳಿಯ ಪಡಿಸುತ್ತೇನೆ.

ಸಹಿ/– ಶ್ರೀಯುತ ಗೋವರ್ಧನದಾಸ ತಂದೆ ಬಿಹಾರಿಲಾಲ ಭೂತಡಾ,
ಸಾ॥ ಬಾಗಲಕೋಟ, ಜಿಲ್ಲಾ ಬಾಗಲಕೋಟ

ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರರು, ಪಂಚಾಯತ್‌ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ

ದೂರವಾಣಿ: 0836–2442316(ಕ) 0836–2749018 ಫ್ಯಾಕ್ಸ್ ಇ–ಮೇಲ್: zpeddwd@rediffmail.com

ಕ್ರ.ಸಂ.ಪಂ.ರಾ.ಇಂ.ವಿ.ಧಾ/ಸ.ಇಂ.–1/2026–2027/916 ದಿನಾಂಕ : 16–06–2026

ಟೆಂಡರ್ ಪ್ರಕಟಣೆ – 03/2026-27

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ **ಕಾರ್ಯಪಾಲಕ ಇಂಜನೀಯರ್, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ** ಇವರಿಂದ ಸರ್ಕಾರಿ ಆದೇಶ ಸಂಖ್ಯೆ: **No.FD 876 Exp-12/2017, Bangalore, dated: 15-09-2017** ರನ್ವಯ ವಿವಿಧ ಲೆಕ್ಕಶೀರ್ಷಿಕೆಗಳ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಲೋಕೋಪಯೋಗಿ/ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ ಟೆಂಡರ್ ಡಾಕ್ಯುಮೆಂಟ್ಸ್ ಕೆಡಬ್ಲ್ಯೂ–1, ಕೆಡಬ್ಲ್ಯೂ–3, ಕೆಡಬ್ಲ್ಯೂ–4 ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯು ಇ–ಪ್ರೊಕ್ಯೂರ್‌ಮೆಂಟ್‌ನ https://kppp.karnataka.gov.in/ ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers : 26837, 26835, 26827, 26843, 26850, 26828, 27090.
SC : 26862. ST : 26568.
CAT-II (A) : 26839.

ಕ್ಯಾಲೆಂಡರ್ ಆಫ್ ಇವೆಂಟ್ಸ್;

1) ಪ್ರಿ–ಬಿಡ್ ಮಿಟಿಂಗ್ ದಿನಾಂಕ: 18–06–2026 ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ. 2) ಟೆಂಡರ್ ದಾಖಲೆಗಳನ್ನು ದಿನಾಂಕ: 16–06–2026 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: 30–06–2026 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. 3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ 01–07–2026 ರ ಸಾಯಂಕಾಲ 4.30 ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 03–07–2026 ರ ಬೆಳಿಗ್ಗೆ 11.00 ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/ ಇಎಂಡಿ ಮೊತ್ತ ಇತ್ಯಾದಿ ವಿವರಗಳಿಗೆ https://kppp.karnataka.gov.in/ ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ಶ್ರೀಶೈಲ ಹೊನಕೇರಿ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.

ಡಿಐಪಿಆರ್/ಧಾರವಾಡ/312/ಮಣಿಪಾಲ್/2026–27

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ

ಕ್ರ.ಸಂ.ಪಂ.ರಾ.ಇಂ.ವಿ.ಧಾ/ಸ.ಇಂ.–2/2026–2027/915 ದಿನಾಂಕ : 16–06–2026.

ಅಲ್ಪಾವಧಿ ಟೆಂಡರ್ ಪ್ರಕಟಣೆ –04/2026–27
(ಇ–ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನೀಯರ್, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: No.FD 876 Exp-12/2017, Bangalore, dated: 15–09–2017 ರನ್ವಯ ವಿವಿಧ ಯೋಜನೆಯಡಿ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಲೋಕೋಪಯೋಗಿ/ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ ಟೆಂಡರ್ ಡಾಕ್ಯುಮೆಂಟ್ಸ್ **KW-1, KW-2, KW-3** ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ–ಪ್ರೊಕ್ಯೂರಮೆಂಟ್‌ನ https://kppp.karnataka.gov.in/ ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರಗಳನ್ನು ಸಲ್ಲಿಸಬಹುದು.

Indent Numbers :
General : 26403, 26769, 26404, 26431, 26411 ,26772, 26438/Call-2 26445/Call-2, 26526/Call-2, 26529/Call-2, 24812/Call-2 24801/Call-2, 26430/Call-2, 24390/Call-2, 24507/Call-2 24473/Call-2, 26963/Call-2.
SC Category : 26774, 26698, 24333/Call-2, 24320/Call-2.
ST Category : 26773, 26402, 24348/Call-2, 24808/Call-2.
CAT-2 (A) : 26425, 26408.
CAT-1 : 23958/Call-2

ಕ್ಯಾಲೆಂಡರ್ ಆಫ್ ಇವೆಂಟ್ಸ್;

1) ಟೆಂಡರ್ ದಾಖಲೆಗಳನ್ನು ದಿನಾಂಕ: 18–06–2026 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: 29–06–2026 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. 2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30–06–2026 ರ ಸಾಯಂಕಾಲ 4.30 ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/ EMD ಮೊತ್ತ ಇತ್ಯಾದಿ ವಿವರಗಳಿಗೆ https://kppp.karnataka.gov.in/ ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ಶ್ರೀ ಶ್ರೀಶೈಲ ಹೊನಕೇರಿ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.

ವಾ.ಸಾ.ಸಂ.ಇ/ಧಾರವಾಡ/313/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರಕಾರ

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಉರ್ವಾಸ್ಟೋರ್ಸ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಸಂಖ್ಯೆ: ಮನಪ್ರಾ: ತಾಂತ್ರಿಕ : ಜೆಇ(32) : 2026–27 ದಿನಾಂಕ: 16–06–2026

ಟೆಂಡರು ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ http://kppp.karnataka.gov.in ನಲ್ಲಿ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ Standard Tender Document KW-1 & 2 ರ ಪ್ರಕಾರ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ನಿಯಮಾವಳಿಯಂತೆ ಕನಿಷ್ಠ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಟೆಂಡರುದಾರರು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. ಟೆಂಡರುದಾರರು ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬೇಕಾಗಿರುತ್ತದೆ. ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **01–07–2026** ಅಪರಾಹ್ನ **4.00** ಗಂಟೆ (16–00 ಗಂಟೆ) ಒಳಗೆ ಸಲ್ಲಿಸತಕ್ಕದ್ದು ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಿಸಲಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

DIPR/DK/KSMCA/380/26-27 dt. 16.06.2026

ಕರ್ನಾಟಕ ಸರ್ಕಾರ

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ

ಕಮಲಾಪುರ. ದೂರವಾಣಿ: 08394–241661
e-mail ID: hwhama@gmail.com

ಸಂಖ್ಯೆ:ಹವಿಪಪ್ರನಿಪ್ರಾ/ಕ/ಕ.ದು/2025–26 ದಿನಾಂಕ: 15–06–2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯಲ್ಲಿ ಆದೇಶದನ್ವಯ ಈ ಕೆಳಗಿನ ಇ–ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಕಮಲಾಪುರ ಇವರ ಕಛೇರಿಗೆ. ಕಛೇರಿ ಅವಧಿಗೆ ಸಂಪರ್ಕಿಸಬಹುದಾಗಿದೆ.

ವಿವರ: ಇ–ಟೆಂಡರ್ ಇಂಡೆಂಟ್ ನಂ: HWHAMA/2026-27/IND0004. PET Bottle Reverse Vending Machines at ASI protected monument premises in Hampi for plastic waste management and sustainable heritage tourism. ಅಂದಾಜು ಮೊತ್ತ (ರೂ.ಗಳಲ್ಲಿ): 21.60 ಲಕ್ಷ ರೂ. ಇಎಂಡಿ ಮೊತ್ತ (ರೂ.ಗಳಲ್ಲಿ): 41200/–. ಅವಧಿ: 90 ದಿನಗಳು.

ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1.Last Date of Tender Queries/Clarifications: **18-06-2026.**
2.Last Date and Time for Receipt of Tenders: **23-06-2026 05:00:00 PM.**
3.Date and Time for Opening of Financial Bid: **24-06-2026 5:30:00 PM**

ಸಹಿ/–ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಕಮಲಾಪುರ

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/145

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ–580025. ಫೋನ್: 0836–2956097, 2224195, 2224274, 2222161.

ಕ್ರ.ಸಂ: ಹು.ಧಾ.ನ.ಪ್ರಾ.ಸ:ಯೋ.ವಿ/ಭೂ.ಬ/43/45/2026–27/1756 ದಿನಾಂಕ: 15.06.2026

ಪತ್ರಿಕಾ ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನುಗಳನ್ನು ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಭೌತಿಕ ಮನವಿಗಳನ್ನು ಸಲ್ಲಿಸಿದ್ದು, ಜಮೀನುಗಳ ವಿವರಣೆ ಈ ಕೆಳಗಿನಂತೆ ಇರುತ್ತದೆ.

ಅ. ನಂ	ಅರ್ಜಿದಾರರ ಹೆಸರು	ಗ್ರಾಮ	ರಿ.ಸ.ನ/ ಬ್ಲಾಕ ನಂ.	ಕ್ಷೇತ್ರ	ಮ.ಯೋ.ಪ–II ರಂತೆ ಹಾಲಿ ಉಪಯೋಗ	ಭೂ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಶ್ರೀ ಕಲ್ಲಯ್ಯ ಬ ಕುಂದರಗಿಮಠ ಹಾಗೂ ಇತರರು	ಧಾರವಾಡ (ಪ್ರ)	399/1 399/3 399/4 399/5 399/6 399/7	1ಎ–31ಗುಂ–08ಆ 1ಎ–31ಗುಂ–08ಆ 4ಗುಂ 4ಗುಂ 4ಗುಂ 4ಗುಂ ಒಟ್ಟು ಕ್ಷೇತ್ರ 3ಎ–39ಗುಂ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಎಂದು ತಿಳಿಸಿರುತ್ತಾರೆ
2	ಶ್ರೀ ಸಮರ್ಥ ಎಸ್ ಭಟ್ಟ ಹಾಗೂ ಇತರರು	ಜೋಗ ಯಲ್ಲಾಪೂರ	22/7 22/8	2ಎ–20ಗುಂ–04ಆ ಪೈಕಿ (04ಆಣೆ 'ಅ' ಖರಾಬ ಹೊರತು ಪಡಿಸಿ) 2ಎ–20ಗುಂ 2ಎ–13ಗುಂ–4ಆ (04ಆಣೆ 'ಅ'ಖರಾಬ ಹೊರತು ಪಡಿಸಿ) 2ಎ–13ಗುಂ ಒಟ್ಟು ಕ್ಷೇತ್ರ 4ಎಕರೆ–33ಗುಂ	ವ್ಯವಸಾಯ	ವಸತಿ	

ಸದರಿ ಜಮೀನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14(ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ ಹುಬ್ಬಳ್ಳಿ–580025 ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಆಯುಕ್ತರು,
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.

ವಾಸಾಸಂಇ/ಧಾ/ದಿಶಾ/311/2026–27

ಎಮ್.ವ್ಹಿ.ಸಿ : 1282/2024

ಮಾನ್ಯ ಹಾನಗಲ್ಲ ಪ್ರಧಾನ ಹಿರಿಯ ದಿವಾಣಿ ನ್ಯಾಯಾದೀಶರು ಇವರ ನ್ಯಾಯ್ಯಾಲಯದಲ್ಲಿ

ಅರ್ಜಿದಾರರು: ಶ್ರೀಮತಿ ಅನಿತಾ ಕೋಂ ಅಶೋಕಗೌಡ ಪಾಟೀಲ ವಯಾ:42 ವರ್ಷ ಉದ್ಯೋಗ: ಶೇತ್ಕರಿ ಸಾ॥ ಶಿವಪುರ ತಾ॥ ಹಾನಗಲ್ಲ ಜಿ॥ ಹಾವೇರಿ ಹಾಗೂ ಇನ್ನೊಬ್ಬರು

ವಿರುದ್ಧ

ಎದುರುಗಾರರು: ಶ್ರೀ ವಿಷ್ಣು ತಂದೆ ಧರ್ಮಪ್ಪ ಲಮಾಣಿ ವಯಾ:41 ವರ್ಷ ಉದ್ಯೋಗ: ಶೇತ್ಕರಿ ಸಾ:ಶಿರಬಡಗಿ ತಾ॥ ಸವಣೂರ ಜಿ॥ ಹಾವೇರಿ ಹಾಗೂ ಇನ್ನೊಬ್ಬರು

ಇಸ್ತಿಯಾರ

ಸದರ ಅರ್ಜಿಯಲ್ಲಿ ಈ ಕೆಳಗೆ ನಮೂದಿಸಿದ 2 ನೇ ಎದುರುಗಾರನಿಗೆ ಸಮನ್ಸ ಜಾರಿಯಾಗದೆ ಇದ್ದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಲು ಪಡೆದುಕೊಂಡ ಇಸ್ತಿಯಾರ. ಎದುರುಗಾರ ನಂ:2) ಅಲ್ತಾಫ ಅಹ್ಮದ @ ಅಲ್ತಾಫ ನಜೀರ ಅಹ್ಮದ ತಂದೆ ನಜೀರ ಅಹ್ಮದ ಭಾಗವಾಲೆ @ ಅಲ್ತಾಫ್ ವಯಾ:ವಯಸ್ಕ ಉದ್ಯೋಗ ಕೂಲಿ ಸಾ॥ ಖಾದರಬಾಗ ಮಶೂರ ನಗರ – ಸವಣೂರ ತಾ॥ ಸವಣೂರ ಜಿ॥ಹಾವೇರಿ ನೇಷ್ದರವರ ವಿರುದ್ಧ ಅರ್ಜಿದಾರರು ಅಪಘಾತದ ವಿಮೆ ಪರಿಹಾರ ಕುರಿತು ಅರ್ಜಿ ದಾಖಲಿಸಿದ್ದು ಇರುತ್ತದೆ. ಆದ್ದರಿಂದ ದಿನಾಂಕ:20–07–2026 ರಂದು ಮುಂಜಾನೆ 11:00 ಘಂಟೆಗೆ ಮಾನ್ಯ ಹಾನಗಲ್ಲ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ಇವರ ನ್ಯಾಯಾಲಯದಲ್ಲಿ ಮುದ್ದತ್ತು ನೇಮಿಸಿದ್ದರಿಂದ ಖುದ್ದಾಗಿ ಅಥವಾ ತಮ್ಮ ಪರ ವಕೀಲರ ಮೂಲಕ ಹಾಜರಾಗಿ ತಕರಾರುಗಳು ಇದ್ದರೆ ಸಲ್ಲಿಸಲು ವಿನಂತಿ. ಇಲ್ಲದೇ ಇದ್ದಲ್ಲಿ ಏಕತರ್ಫಿ ಆದೇಶ ಮಾಡಲಾ ಗುವುದು.

ಇಂದು ದಿನಾಂಕ: 11/06/2026 ರಂದು ನನ್ನ ಸಹಿ ಹಾಗೂ ನ್ಯಾಯಾಲಯದ ಮೋಹರಿನೊಂದಿಗೆ ಕೊಡಲ್ಪಟ್ಟಿತು.

ಸ್ಥಳ: ಹಾನಗಲ್ಲ
ದಿನಾಂಕ :16/06/2026

ಅರ್ಜಿದಾರರ ಪರ ವಕೀಲರು ನ್ಯಾಯಾಲಯದ ಆದೇಶದ ಮೇರೆಗೆ

ಸಹಿ/–ಶ್ರೀ ಎ.ಆರ್. ಜೋಗಣ್ಣನವರ
ಶಿರಸ್ತೆದಾರರು,ಪ್ರಧಾನ ಹಿರಿಯ ದಿವಾಣಿ ನ್ಯಾಯಾದೀಶರ ಜೆ.ಎಮ್.ಎಫ್.ಸಿ ನ್ಯಾಯಾಲಯ, ಹಾನಗಲ್ಲ

ಸಹಿ/–ಎಸ್.ಎಮ್.ಉಜ್ಜಪ್ಪನವರ ವಕೀಲರು ಹಾನಗಲ್ಲ

ಸಾರಸ್ವತ್ ಬ್ಯಾಂಕ್

ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ವಸೂಲಾತಿ ವಿಭಾಗ: ವಲಯ ಕಚೇರಿ ಕೊಲ್ಹಾಪುರ,
2127–ಸಿ, ಸಿ ವಾರ್ಡ್, ಭಹುಸಿಂಗ್‌ಜೀ ರಸ್ತೆ, ಕೊಲ್ಹಾಪುರ– 416002
ಫೋನ್ ನಂ. +91 231 2644542, 2644478

ಇ–ಹರಾಜು ಮಾರಾಟ ನೋಟಿಸ್

(ವೆಬ್‌ಸೈಟ್: https://sarfaesi.auctiontiger.net ಮೂಲಕ ಮಾತ್ರವೇ ಹರಾಜು ಮಾರಾಟ/ಬಿಡ್ಡಿಂಗ್ ನಡೆಸಲಾಗುತ್ತದೆ)

ಸೆಕ್ಯುರಿಟೈಸೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ–2002 ಅನ್ವಯ ಬ್ಯಾಂಕಿಗೆ ಚಾರ್ಜ್ ಮಾಡಲಾದ ಸ್ಥಿರಾಸ್ತಿಗಳ ಮಾರಾಟ

ಸೆಕ್ಷನ್ 13(2)ರ ಅಡಿಯಲ್ಲಿ ನೀಡಲಾದ ಡಿಮ್ಯಾಂಡ್ ನೋಟಿಸ್‌ಗೆ ಅನುಸಾರ, ಈ ಕೆಳಗೆ ಸಹಿ ಮಾಡಿದ ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಈ ಕೆಳಗಿನ ಆಸ್ತಿಗಳನ್ನು ಸರ್ಫೇಸಿ ಕಾಯ್ದೆಯ ಸೆಕ್ಷನ್ 13(4)ರ ಅನ್ವಯ ಸ್ವಾಧೀನಕ್ಕೆ ಪಡೆದಿರುತ್ತಾರೆ. ಸಾರ್ವಜನಿಕರಿಗೆ ವಿಸ್ತೃತವಾಗಿ ಮಾಹಿತಿ ನೀಡುವುದೇನೆಂದರೆ ಬ್ಯಾಂಕಿಗೆ ಬಾಕಿ ಇರುವ ಬಾಕಿ ಮೊತ್ತವನ್ನು ವಸೂಲಿ ಮಾಡಿಕೊಳ್ಳುವ ಸಲುವಾಗಿ ಈ ಕೆಳಗೆ ಹೆಸರಿಸಿದ ಪ್ರಕರಣಗಳಲ್ಲಿ ಚಾರ್ಜ್ ಮಾಡಲಾದ ಆಸ್ತಿಗಳನ್ನು **"ಎಲ್ಲಿದೆಯೋ ಅದು ಆಧಾರದಲ್ಲಿ" "ಏನಿದೆಯೋ ಅದು ಆಧಾರದಲಿ"** ಮತ್ತು **"ಮರುಪಾವಸ್ಸಾತಿ"** ಇಲ್ಲದ ಆಧಾರದಲ್ಲಿ ಈ ಕೆಳಗೆ ನಿರ್ದಿಷ್ಟಪಡಿಸಿದಂತೆ ಇ–ಹರಾಜು (ಸರ್ಫೇಸಿ ಕಾಯ್ದೆ–2002ರ ಅಡಿಯಲ್ಲಿ) ಮಾಡಲಾಗುತ್ತದೆ.

ಕ್ರ. ಸಂ.	ಸಾಲಗಾರರು, ಸಹ ಸಾಲಗಾರರು/ ಜಾಮೀನುದಾರರು/ ಅಡಮಾನದಾರರು, ಉತ್ತರಾಧಿಕಾರಿಗಳ (ಅನ್ವಯವಾಗುವುದಾದಲ್ಲಿ) ಹೆಸರು	ಎ. ಡಿಮ್ಯಾಂಡ್ ನೋಟಿಸ್ ದಿನಾಂಕ ಬಿ. ಸ್ವಾಧೀನ ವಿಧ/ ದಿನಾಂಕ ಸಿ. ಡಿಮ್ಯಾಂಡ್‌ಮೊತ್ತ	ಆಸ್ತಿಯ ವಿವರಣೆ	1. ಮೀಸಲು ಬೆಲೆ 2. ಇಎಂಡಿ 3. ಬಿಡ್ ಏರಿಕೆ ಮೊತ್ತ	ತಪಾಸಣೆಯ ದಿನಾಂಕ/ ಸಮಯ	ಇಎಂಡಿ & ಕೆವೈಸಿ ಸಲ್ಲಿಕೆಗೆ ಕೊನೆಯ ದಿನಾಂಕ/ ಸಮಯ	ಇ–ಹರಾಜು ದಿನಾಂಕ/ ಸಮಯ
1)	ಸಾಲಗಾರ/ಅಡಮಾನದಾರರು ಶ್ರೀಮತಿ ಗೀತಾ ಹನುಮಂತಪ್ಪ ದೊಡ್ಡಮನಿ **ಸಹ ಸಾಲಗಾರರು/ ಅಡಮಾನದಾರರು** **1. ಭೂಷಣ್ ಫೈರಪ್ಪ ವಾಲ್ಮೀಕಿ**	ಎ. **03.10.2024** ಬಿ. **ಭೌತಿಕ/ 17.07.2025** ಸಿ. **03.10.2024ಕ್ಕೆ** ಇದ್ದಂತೆ ರೂ. **35,47,016.46 ಮತ್ತು ಆ ಬಳಿಕದ ಬಡ್ಡಿ***	ಎನ್‌ಎ ಭೂಮಿ/ ಪ್ಲಾಟ್ ಎನ್‌ಎನ್ ಪ್ಲಾಟ್ ನಂ. 1/ಎ/2ಎ/1ಎ (ವಿಸ್ತೀರ್ಣ ಒಟ್ಟು 17364 ಚದರ ಅಡಿಯ ಪೈಕಿ ಸುಮಾರು 3427 ಚದರ ಅಡಿ ಸ್ಥಿರಾಸ್ತಿಯ ಎಲ್ಲ ತುಂಡು ಮತ್ತು ತುಣುಕುಗಳು. ಇದರಲ್ಲಿ ವಸತಿ ಕಟ್ಟಡ ಮತ್ತು ಮುಕ್ತ ಸ್ಥಳ ಇದೆ. ವಿಳಾಸ: **ಅತ್ತಿಕೊಳ್ಳ, ಧಾರವಾಡ, ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆ. ಇದರ ಒಡೆತನವನ್ನು ಶ್ರೀಮತಿ ಗೀತಾ ಹನುಮಂತಪ್ಪ ದೊಡ್ಡಮನಿ ಮತ್ತು ಶ್ರೀ ಭೂಷಣ್ ಫೈರಪ್ಪ ವಾಲ್ಮೀಕಿ ಹೊಂದಿದ್ದಾರೆ.**	ರೂ. 52.13 ಲಕ್ಷ ರೂ. 5.22 ಲಕ್ಷ ** ರೂ. 0.50 ಲಕ್ಷ	24.06.2026 ಮಧ್ಯಾಹ್ನ 2.00 ರಿಂದ ಸಂಜೆ 4.00	20.07.2026 ಸಂಜೆ 5.00 ಗಂಟೆವರೆಗೆ	22.07.2026 ಮಧ್ಯಾಹ್ನ 2.00 ರಿಂದ ಸಂಜೆ 4.00

* ಪಾವತಿ ಮಾಡುವ ಮತ್ತು/ ಅಥವಾ ವಸೂಲಾತಿಯಾಗುವ ದಿನಾಂಕದವರೆಗೆ ಅನ್ವಯವಾಗುವ ಮುಂದಿನ ಬಡ್ಡಿ, ಸಾಂಧರ್ಬಿಕ ವೆಚ್ಚಗಳು, ಖರ್ಚುಗಳು, ಚಾರ್ಜ್‌ಗಳು ಇತ್ಯಾದಿ.
** ಯಶಸ್ವಿ ಬಿಡ್ಡರ್‌ಗಳು ಅಂತಿಮ ಬಿಡ್ ಮೊತ್ತದ ಶೇಕಡ 25ನ್ನು ಮಂದಿನ ಕೆಲಸದ ದಿನಗಳ ಒಳಗಾಗಿ ಪಾವತಿಸಬೇಕಾಗುತ್ತದೆ.

ಹರಾಜನ್ನು ಬ್ಯಾಂಕಿನ ಅನುಮೋದಿತ ಸೇವಾ ಪೂರೈಕೆದಾರರಾದ ಮೆಸರ್ಸ್ ಇ–ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್ (ಆಕ್ಷನ್ ಟೈಗರ್) ಮೂಲಕ ನಡೆಸಲಾಗುತ್ತದೆ. ಬಿಡ್ ಫಾರ್ಮ್, ಮೇಲೆ ಹೇಳಿದ ಮಾರಾಟ/ಹರಾಜಿನ ಷರತ್ತು ಮತ್ತು ನಿಬಂಧನೆಗಳು, ಬಿಡ್/ಆಫರ್ ಸಲ್ಲಿಸುವ ವಿಧಿವಿಧಾನಗಳು ಅವರ ವೆಬ್‌ಸೈಟ್:**https://sarfaesi.auctiontiger.net** ನಲ್ಲಿ ಲಭ್ಯವಿರುತ್ತದೆ.

ಸರ್ಫೇಸಿ ಕಾಯ್ದೆ–2002ರ ನಿಯಮ 8(6) ಅನ್ವಯ ಶಾಸನಬದ್ಧ ನೋಟಿಸ್

ಈ ನೋಟಿಸನ್ನು ಮೇಲೆ ಹೇಳಿದ ಮಾರಾಟ ದಿನಾಂಕದ ಮೊದಲು ಸಂಪೂರ್ಣವಾಗಿ ಪಾವತಿಸುವಂತೆ ಸಾಲ ಖಾತೆಯ ಸಾಲಗಾರರು/ ಅಡಮಾನದಾರರು & ಜಾಮೀನುದಾರರಿಗೆ ನೀಡಲಾದ ನೋಟಿಸ್ ಎಂದೂ ಪರಿಗಣಿಸಬೇಕು. ತಪ್ಪಿದಲ್ಲಿ ಆಸ್ತಿಯನ್ನು ಮೇಲೆ ಹೇಳಿದ ದಿನಾಂಕದಂದು ಹರಾಜು ಮಾರಾಟ ಮಾಡಲಾಗುತ್ತದೆ.

ದಿನಾಂಕ: 17.06.2026
ಸ್ಥಳ: ಹುಬ್ಬಳ್ಳಿ

ಅಧಿಕೃತ ಅಧಿಕಾರಿ
ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಶ್ರೀ.ವೀರಶೈವ ಪತ್ತಿನ ಸಹಕಾರಿ ಸಂಘ ನಿಯಮಿತ
ಮುದ್ದೇಬಿಹಾಳ–586202, ಜಿ:ವಿಜಯಪುರ

ಸಾರ್ವಜನಿಕ ಪ್ರಕಟಣೆ ದಿನಾಂಕ:16/06/2026

ಶ್ರೀಮತಿ.ಶಿವಗಂಗಮ್ಮ ಕೋಂ. ಚನ್ನಪ್ಪಗೌಡ ಬೆಳಗಲ್, ಮಾರುತಿ ನಗರ, ಸಾಕೀನ: ಮುದ್ದೇಬಿಹಾಳ, ತಾ: ಮುದ್ದೇಬಿಹಾಳ, ಜಿ:ವಿಜಯಪುರ. ಇವರ ಈ ಕೆಳಕಂಡ ಸ್ಥಿರಾಸ್ತಿಗಳು ನಮ್ಮ ಬ್ಯಾಂಕಿಗೆ ವರ್ಗವಣೆ ಆಗಿದ್ದು ಅವುಗಳ ಕಬ್ಜಾ ವಹಿಸಿಕೊಡಲು, ಅವರಿಗೆ ನೋಟೀಸು ಜಾರಿಗೆ ಮಾಡಿದರೂ ಸಹ, ಕಬ್ಜಾ ವಹಿಸಿಕೊಡಲು ಅಲಭ್ಯರಾಗಿರುವದರಿಂದ, ಕಟ್ಟಡ ಸಮೇತ ದಿನಾಂಕ:02/07/2026 ರಂದು ಬೆಳಿಗ್ಗೆ 11:00 ಗಂಟೆಗೆ ನಮ್ಮ ಬ್ಯಾಂಕಿನ ಸಿಬ್ಬಂದಿಗಳ ಮತ್ತು ನಿರ್ದೇಶಕರ ಸಮಕ್ಷಮದಲ್ಲಿ ಕೀಲಿಒಡೆದು, ಪೋಲೀಸರ ಸಮಕ್ಷಮ, ಕಬ್ಜಾ ವಹಿಸಿಕೊಳ್ಳಲಾಗುವದು.

ಮುದ್ದೇಬಿಹಾಳ ಶಹರದ, ಮಾರುತಿ ನಗರದಲ್ಲಿರುವ ಸ್ವತ್ತುಗಳ ಸಂಖ್ಯೆ: (1)40–515–388, ವಾರ್ಡ ನಂ.2, ಸ್ವತ್ತಿನ ಹಳೇ ಸಂಖ್ಯೆ: 95/ಕ/21, ನಿರ್ಧರಣಾ ಸಂಖ್ಯೆ: 95/ಕ/21, ಅಧಿಕೃತ ನಿವೇಶನ, ನಿವೇಶನದ ಅಳತೆ : ಪೂರ್ವ–ಪಶ್ಚಿಮ: 12 ಉತ್ತರ–ದಕ್ಷಿಣ:10 ಮೀಟರಗಳು, ನಿವೇಶನದ ವಿಸ್ತೀರ್ಣ:120 ಚದುರ ಮೀಟರ, ಚಕಬಂದಿ: ಉತ್ತರ:ಪ್ಲಾಟ ನಂ.17, ಪೂರ್ವ:ಪ್ಲಾಟ ನಂ.20 ಮತ್ತು 22, ಪಶ್ಚಿಮ :9ಮೀಟರ ರಸ್ತೆ, ದಕ್ಷಿಣ: ಪ್ಲಾಟ ನಂ. 22, (2) 40–515–392, ವಾರ್ಡ ನಂ.2, ಸ್ವತ್ತಿನ ಹಳೇ ಸಂಖ್ಯೆ: 95/ಕ/19, ನಿರ್ಧರಣಾ ಸಂಖ್ಯೆ:95/ಕ/19, ಅಧಿಕೃತ ನಿವೇಶನ, ನಿವೇಶನದ ಅಳತೆ :ಪೂರ್ವ–ಪಶ್ಚಿಮ: 12, ಉತ್ತರ–ದಕ್ಷಿಣ: 10 ಮೀಟರಗಳು, ನಿವೇಶನದ ವಿಸ್ತೀರ್ಣ:120 ಚದುರ ಮೀಟರ, ಚಕಬಂದಿ: ಉತ್ತರ: ಪ್ಲಾಟ ನಂ.17, ಪೂರ್ವ:ಪ್ಲಾಟ ನಂ.20 ಮತ್ತು 22, ಪಶ್ಚಿಮ: 9 ಮೀಟರ ರಸ್ತೆ, ದಕ್ಷಿಣ: ಪ್ಲಾಟ ನಂ.23,

ಕಾರ್ಯದರ್ಶಿ
ವೀರಶೈವ ಪತ್ತಿನ ಸಹಕಾರಿ ಸಂಘ ನಿಯಮಿತ
ಮುದ್ದೇಬಿಹಾಳ ಜಿ॥ ವಿಜಯಪೂರ

ಕರ್ನಾಟಕ ಸರಕಾರ (ಕರ್ನಾಟಕ ಸರ್ಕಾರದ ಸ್ವಾಯುತ್ತ ಸಂಸ್ಥೆ)

ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

ಹಿಂದಿನ ಹೆಸರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಮುಳಗುಂದ ರಸ್ತೆ, ಮಲ್ಲಸಮುದ್ರ, ಗದಗ–582103 ದೂರವಾಣಿ ಸಂಖ್ಯೆ: 08372–200601
E-mail ID : gimsgadag@gmail.com
web : www.gimsgadag.karnataka.gov.in
File No : KHPIMS/Tender/Cost Per Test/20/2026-27/35
Date : 16.06.2026

ಇ–ಟೆಂಡರ ಪ್ರಕಟಣೆ

ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜೀವ ರಸಾಯನ ವಿಭಾಗಕ್ಕೆ Biochemistry Analyser Reagents Cost Per Reportable Test Reagent Rental Basis ಮುಖಾಂತರ ವೈದ್ಯಕೀಯ ಪ್ರಯೋಗ ಶಾಲಾ ಪರೀಕ್ಷೆಗಳಿಗಾಗಿ ಬಾಡಿಗೆ ಆದಾರದ ಮೇಲೆ ಸರಬರಾಜುವಿಗಾಗಿ ಕರೆದ ಟೆಂಡರ ಆಸಕ್ತಿಯುಳ್ಳ ಸಂಘ–ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ ಕರೆಯಲಾಗಿದ್ದು, ದಿನಾಂಕ : **17.06.2026** ರಿಂದ ದಿನಾಂಕ : **01.07.2026**ರ ಸಾಯಂಕಾಲ 4:00 ಗಂಟೆವರೆಗೆ ಇ–ಪೋರ್ಟಾಲ್ ಸಂಖ್ಯೆ:DME/2026-27/IND2076 (https://kppp.Karnataka .gov.in/)ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

ವಾಸಾಸಂಇ/ಗದಗ/122/ಕೆಎಸ್‌ಎಂಸಿಎ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರರವರ ಕಛೇರಿ. ನಂ.1 ತುಂಗಭದ್ರಾ ಜಲಾಶಯ ವಿಭಾಗ ಮುನಿರಾಬಾದ್.
E-Mail-trdmrb@gmail.com

EE/KNNL/No.1 T R Dvn/Mrb/ 2026-27/647 Date: 15/06/2026

ಟೆಂಡರ್ ಪ್ರಕಟಣೆ
(Only through kppp-procurement portal) (Two Cover)

ಈ ವಿಭಾಗದ ವ್ಯಾಪ್ತಿಗೆ ಒಳಪಡುವ ವಿಜಯನಗರ ಕಾಲುವೆಗಳ ಉಪ ವಿಭಾಗ, ಕಮಲಾಪುರ, ಅಡಿಯಲ್ಲಿ ಬರುವ ಲೆಕ್ಕ ಶೀರ್ಷಿಕೆ 2701 ಅಡಿಯಲ್ಲಿನ ಈ ಕೆಳಗಿನ 06 ಕಾಮಗಾರಿಗಳಿಗೆ ಟೆಂಡರ್‌ನ್ನು ಲೋಕೋಪಯೋಗಿ ಇಲಾಖೆ ಹಾಗೂ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕನೀನಿನಿ, ನಂ.1 ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್ ಇವರಿಂದ ಕರೆಯಲಾಗಿದೆ.

ಕ್ರ. ಸಂ	ಕಾಮಗಾರಿ ಹೆಸರು	TENDER DOCUMENT	ಟೆಂಡರ್ ಗಿಟ್ಟಿ ಮೊತ್ತ ರೂ. ಲಕ್ಷಗಳಲ್ಲಿ	ಗುತ್ತಿಗೆದಾರರ ಶ್ರೇಣಿ	ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	REPAIRS TO ELECTRICAL SYSTEM AND RE-FILLING OF FIRE EXTINGUISHER ARRANGE-MENTS OF HAGARIBOMMANAHALLI DAM (ST)	KW-1	16.91	KPWD CLASS-IV OR ABOVE	29.06.2026 @ 4:00 PM	30.06.2026 @ 4:30 PM
2	DEWATERING OF STILLING BASIN AND OTHER REPAIR WORKS TO NARIHALLA DAM (CAT-II-A)		9.07			
3	ESTIMATE FOR CHECKING HEALTH STATUS OF SPILLWAY GATES AND ITS EMBEDDED PARTS OF HAGARIBOMMANAGALLI DAM.		10.00			
4	REPAIRS TO SPILLWAY BRIDGES & REPAIRS TO GAUGE ROOM AT HAGARIBOMMANAHALLI DAM.		8.47			
5	IMPOROVEMENTS TO SUPERINTENDING ENGINEER OFFICE CHAMBER AT MUNIRABAD		12.70			
6	ESTIMATE TO CHECK HEALTH STATUS OF SPILLWAY GATES AND ITS EMBEDDED PARTS, DAM BREAK ANALYSIS, EAP& O&M MANUAL OF NARIHALLA DAM		10.06			

ಸದರಿ ಕಾಮಗಾರಿಗಳ ವಿವರಗಳನ್ನು https://kppp.karnataka.gov.in/ ಜಾಲದಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳು ಬೇಕಾದಲ್ಲಿ trdmrb@gmail.com ಜಾಲದಲ್ಲಿ ಮತ್ತು ಈ ಕಛೇರಿಯ ವೇಳೆಯ ಕೆಲಸದ ದಿನಗಳಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕನೀನಿನಿ,ನಂ.1 ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್.

ಡಿಐಪಿಆರ್/ಕೊಪ್ಪಳ/166/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ –585401.

Email: eokvafsu@gmail.com, ಕಛೇರಿ ದೂರವಾಣಿ: 08482–245361

ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟಿ.ನಂ.151/ಕಾಮಗಾರಿ/2026–27 ದಿನಾಂಕ:15.06.2026

ಟೆಂಡರ ಪ್ರಕಟಣೆ
(ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

1) ಕಾಮಗಾರಿ ವಿವರ Construction of Concrete roadinfront of main building and providing new name board for main gate at IAH&VB, Hebbal, Bangalore, 2) ಕಾಮಗಾರಿ ಅಂದಾಜು ಮೊತ್ತ **Rs.2643842.00** (Excluding GST), 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ ಟೆಂಡರ ಮೊತ್ತದ ವಿವರ **Rs.2643842.00** (Excluding GST), 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ **23.06.2026 up to 5.00 PM,** 7) ಫೈನಾನ್ಸಿಯಲ ಬಿಡ ಟೆಂಡರ ತೆರೆಯುವ ದಿನಾಂಕ **25.06.2026 at 11.30 AM,** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ, ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482–245446, 9) ಅಂತರ್ಜಾಲ ತಾಣದ ವಿಳಾಸ e-procurement portal- www.eproc.karnataka.gov.in.

ಸಹಿ/– ಆಸ್ತಿ ಅಧಿಕಾರಿಗಳು
ಕಪಪಮೀವಿವಿ, ಬೀದರ.

ವಾ.ಸಾ.ಸಂ.ಇ/ಬೀದರ/61/ಕೆಎಸ್‌ಎಂಸಿ&ಎ/2026–27

ಕಳೆದಿದೆ

ನಾನು ಶ್ರೀಮತಿ ಶೀಲಾ ಕೋಂ. ಮಲ್ಲೇಶ ಭೋವಿ @ ವಡ್ಡರ, ಸಾ॥ ಗುತ್ತಲ, ತಾ॥ ವ ಜಿ॥ ಹಾವೇರಿ. ನಾನು ದಿನಾಂಕ 04/12/2015 ರಂದು ಶ್ರೀಮತಿ ಪಾರ್ವತೆವ್ವ ಕೋಂ, ಹನುಮಂತಪ್ಪ ತಳವಾರ ಸಾ॥ ಗುತ್ತಲ ಇವರಿಂದ ಹಾವೇರಿ ತಾಲೂಕ, ಗುತ್ತಲ ಪಟ್ಟಣದ ಆ.ನಂ. 4137, ಆಸ್ತಿ ನಂ. 3947, ಒಟ್ಟು 8167.5 ಚೌ.ಫೂಟ ನೇದ್ದರ ಪೈಕಿ ಉತ್ತರ ಭಾಗದ ಬೈಲು ಜಾಗಾ ಕ್ಷೇತ್ರ: ಪೂ–ಪ 41.88 ಫೂಟ, ಉ–ದ 26 ಫೂಟ ಒಟ್ಟು 1088.88 ಚೌ.ಫೂಟ ವಿಸ್ತೀರ್ಣವುಳ್ಳ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡಿದ್ದು ಇರುತ್ತದೆ.

ದಿನಾಂಕ 30/05/2026 ರಂದು ನನ್ನ ವಯಕ್ತಿಕ ಕೆಲಸಕ್ಕೆ ಅಂತಾ ಹಾವೇರಿ ಹೋಗುವ ಸಲುವಾಗಿ ಗುತ್ತಲ ಬಸ್ ನಿಲ್ದಾಣಕ್ಕೆ ಬಂದಾಗ ಸದರ ಆಸ್ತಿಯ ಮೂಲ ಖರೀದಿ ಪತ್ರವನ್ನು ನಜರಚೂಕಿನಿಂದ ಕಳೆದುಕೊಂಡಿರುತ್ತೇನೆ. ಸದರ ಮೂಲ ಖರೀದಿ ಪತ್ರವು ಎಷ್ಟು ಹುಡುಕಿದರೂ ಸಿಕ್ಕಿರುವುದಿಲ್ಲ. ಈ ಬಗ್ಗೆ ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ (ಜಿಎಸ್‌ಸಿ ಸಂಖ್ಯೆ: 2252300/2026) ದಾಖಲಿಸಿದ್ದು, ಯಾರಿಗಾದರೂ ಸಿಕ್ಕಲ್ಲಿ ದಯವಿಟ್ಟು ಮೇಲಿನ ವಿಳಾಸಕ್ಕೆ ಅಥವಾ ಗುತ್ತಲ ಪೊಲೀಸ್ ಠಾಣೆಗೆ ತಲುಪಿಸಬೇಕೆಂದು ವಿನಂತಿ.

ಸಂಪರ್ಕಿಸಿ ಮೊ: 6364516995

ಬೆಲ್ಜಿಯಂ-ಈಜಿಪ್ಟ್ 1-1ರಿಂದ ಡ್ರಾ



ದಿನದ ಮತ್ತೊಂದು ಪಂದ್ಯದಲ್ಲಿ ಬೆಲ್ಜಿಯಂ ಮತ್ತು ಈಜಿಪ್ಟ್ ನಡುವಿನ ಪಂದ್ಯ 1-1 ಗೋಲುಗಳ ಸಮಬಲದಲ್ಲಿ ಅಂತ್ಯಗೊಂಡಿತು. ಸಿಯಾಟಲ್‌ನಲ್ಲಿ ನಡೆದ ಈ ಪಂದ್ಯದಲ್ಲಿ ರೊಮೆಲು ಲುಕಾಕು ಬದಲಿ ಆಟಗಾರನಾಗಿ ಕಣಕ್ಕಿಳಿದ ಕೆಲವೇ ಕ್ಷಣಗಳಲ್ಲಿ ಬೆಲ್ಜಿಯಂಗೆ ಸಮಬಲ ತಂದುಕೊಟ್ಟು ಸೋಲಿನಿಂದ ಪಾರು ಮಾಡಿದರು. ಪಂದ್ಯದ 19ನೇ ನಿಮಿಷದಲ್ಲಿ ಈಜಿಪ್ಟ್‌ನ ಮಧ್ಯಮೈದಾನ ಆಟಗಾರ ಇಮಾಮ್ ಅಶೂರ್ ಗೋಲು ಬಾರಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ರಕ್ಷಣಾ ವಿಭಾಗದ ತಪ್ಪನ್ನು ಸದುಪಯೋಗಪಡಿಸಿಕೊಂಡ ಅಶೂರ್, ತಮ್ಮ ಅಂತಾರಾಷ್ಟ್ರೀಯ ವೃತ್ತಿಜೀವನದ ಮೊದಲ ಗೋಲು ದಾಖಲಿಸಿದರು. ಮುನ್ನಡೆ ಪಡೆದ ಈಜಿಪ್ಟ್ ಪಂದ್ಯದಲ್ಲಿ ಹಲವು ಅವಕಾಶಗಳನ್ನು ಸೃಷ್ಟಿಸಿದರೂ ಗೋಲುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ವಿಫಲವಾಯಿತು.

23 ಸೆಕೆಂಡ್.. ಪಂದ್ಯದ ದಿಕ್ಕೇ ಬದಲು: 66ನೇ ನಿಮಿಷದಲ್ಲಿ ಬೆಲ್ಜಿಯಂ ಪರ ರೊಮೆಲು ಲುಕಾಕು ಬದಲಿ ಆಟಗಾರನಾಗಿ ಕಣಕ್ಕಿಳಿದರು. ಕಣಕ್ಕಿಳಿದ ಕೇವಲ 23 ಸೆಕೆಂಡುಗಳಲ್ಲೇ ಅವರ ಸಾನ್ನಿಧ್ಯವೇ ಪಂದ್ಯದ ದಿಕ್ಕು ಬದಲಿಸಿತು. ಬಲಭಾಗದಿಂದ ಬಂದ ಕ್ರಾಸ್ ಅನ್ನು ತಡೆಯುವ ಯತ್ನದಲ್ಲಿ ಈಜಿಪ್ಟ್ ರಕ್ಷಣಾ ಆಟಗಾರ ಮೊಹಮದ್ ಹಾನಿ ಚೆಂಡನ್ನು ತಮ್ಮದೇ ಗೋಲುಪೆಟ್ಟಿಗೆಯೊಳಗೆ ಸೇರಿಸಿದರು. ಇದರೊಂದಿಗೆ ಬೆಲ್ಜಿಯಂ 1-1 ಸಮಬಲ ಸಾಧಿಸಿತು.

- **ಬೆಲ್ಜಿಯಂ 1-1 ಈಜಿಪ್ಟ್**
- 19ನೇ ನಿಮಿಷ ಇಮಾಮ್ ಅಶೂರ್ ಗೋಲು
- 66ನೇ ನಿಮಿಷ ಲುಕಾಕು ಬದಲಿ ಆಟಗಾರನಾಗಿ ಪ್ರವೇಶ
- **66ನೇ ನಿಮಿಷ + 23 ಸೆಕೆಂಡು:** ಮೊಹಮದ್ ಗೋಲು

- ಸ್ಪೇನ್‌ಗೆ ವಿರುದ್ಧ 0-0ರಿಂದ ಡ್ರಾ
- ಐದೇ ಲಕ್ಷ ಜನರಿರುವ ದೇಶದಿಂದ ಜಾದೂ
- ವೊಜಿನ್ಹಾ ಸಾಹಸಕ್ಕೆ ಭಾರೀ ಮೆಚ್ಚುಗೆ
- ಎಲ್ಲಾ ಪಂದ್ಯಗಳು ಡ್ರಾ!

ಯಾರಿಗೆಷ್ಟು?

- ವಿಶ್ವಕಪ್‌ನಲ್ಲಿ ಕೇಪ್ ವರ್ಡೆಯ ಚೊಚ್ಚಲ ಪಂದ್ಯ
- 40 ವರ್ಷದ ಗೋಲ್‌ಕೀಪರ್ ವೊಜಿನ್ಹಾ ಮಿಂಚಿನ ಪ್ರದರ್ಶನ

ಕೇಪ್ ವರ್ಡೆ ಚಮತ್ಕಾರ



ಅಟ್ಲಾಂಟಾ: ಗೋಲ್-ಕೀಪರ್ ವೊಜಿನ್ಹಾಗೆ ಎಂಬಾತರಿಗೆ 40 ವರ್ಷ. ಕೇಪ್ ವರ್ಡೆ ಎಂಬ ತಂಡದಲ್ಲಿ ವರ್ಷಗಳಿಂದಲೂ ಆಡುತ್ತಿರುವ ಅವರು, ತಮ್ಮ ತಂಡವನ್ನು ವಿಶ್ವಕಪ್‌ಗೆ ಅರ್ಹತೆ ಕೊಡಿಸಲು ಸರ್ವಸ್ವವನ್ನೇ ಕೊಟ್ಟರು. ಅಂತೂ ಇಂತೂ ಅವಕಾಶ ಸಿಕ್ಕಿತೆನ್ನುವಷ್ಟರಲ್ಲಿ ಮುಖ್ಯ ಡ್ರಾದಲ್ಲಿ ದೊಡ್ಡ ಶಾಕ್, ಅದು ಏನೆಂದರೆ ಮೊದಲ ಎದುರಾಳಿಯೇ ಬಲಿಷ್ಠ ಸ್ಪೇನ್ ತಂಡ! 2026ರ ಫಿಫಾ ವಿಶ್ವಕಪ್‌ನಲ್ಲಿ ಅಚ್ಚರಿಯ ಫಲಿತಾಂಶವೊಂದು ದಾಖಲಾಗಿದೆ. ವಿಶ್ವಕಪ್‌ಗೆ ಮೊದಲ ಬಾರಿಗೆ ಅರ್ಹತೆ ಪಡೆದ ಕೇಪ್ ವರ್ಡೆ, ಬಲಿಷ್ಠ ಸ್ಪೇನ್ ತಂಡವನ್ನು 0-0 ಗೋಲುಗಳಿಂದ ಸಮಬಲದಲ್ಲಿ ಕಟ್ಟಿಹಾಕಿ ಸಂಚಲನ ಮೂಡಿಸಿದೆ. ಅಟ್ಲಾಂಟಾದಲ್ಲಿ ನಡೆದ ಪಂದ್ಯದಲ್ಲಿ ಯುರೋಪಿಯನ್ ಚಾಂಪಿಯನ್ ಸ್ಪೇನ್ ಆರಂಭದಿಂದಲೇ ಮೇಲುಗೈ ಸಾಧಿಸಿದರೂ, ಕೇಪ್ ವರ್ಡೆಯ ಅನುಭವಿ ಗೋಲ್‌ಕೀಪರ್ ವೊಜಿನ್ಹಾ ಅದ್ಭುತ ಪ್ರದರ್ಶನ ನೀಡಿ ಸ್ಪೇನ್ ದಾಳಿಗಳನ್ನು ವಿಫಲಗೊಳಿಸಿದರು.

ಕೇಪ್ ವರ್ಡೆಗಿದು ಮೊದಲ ವಿಶ್ವಕಪ್

ತಡೆಗೋಡೆಯಾದ ವೊಜಿನ್ಹಾ : ಬಾರ್ಸಿಲೋನಾ ತಾರೆ ಫೆರಾನ್ ಟೊರೆಸ್ ಸ್ಪೇನ್ ಪರ ಗೋಲು ಗಳಿಸುವುದಕ್ಕೆ ಅತ್ಯಂತ ಸಮೀಪ ಬಂದಿದ್ದರು. ಅವರ ಒಂದು ಶಾಟ್ ಕ್ರಾಸ್‌ಬಾರ್‌ಗೆ ತಾಗಿ ಹೊರಬಿದ್ದರೆ, ಮತ್ತೊಂದು ಪ್ರಯತ್ನವನ್ನು ವೊಜಿನ್ಹಾ ಅದ್ಭುತವಾಗಿ ತಡೆದರು. ಪೆಡ್ರಿ ಸೇರಿದಂತೆ ಹಲವು ಸ್ಪ್ಯಾನಿಷ್ ಆಟಗಾರರ ಪ್ರಯತ್ನಗಳನ್ನೂ ಅವರು ವಿಫಲಗೊಳಿಸಿದರು. ದ್ವಿತೀಯಾರ್ಧದಲ್ಲೂ ಕೇಪ್ ವರ್ಡೆ ಸಂಘಟಿತ ರಕ್ಷಣಾ ಆಟ ಪ್ರದರ್ಶಿಸಿತು. ಬದಲಿ ಆಟಗಾರನಾಗಿ ಕಣಕ್ಕಿಳಿದ ಯುವ ತಾರೆ ಲಮಿನ್ ಯಮಾಲ್ ಕೂಡ ಪಂದ್ಯದ ಫಲಿತಾಂಶ ಬದಲಾಯಿಸಲು ಸಾಧ್ಯವಾಗಲಿಲ್ಲ. ಪಂದ್ಯದ ಕೊನೆಯ ಕ್ಷಣಗಳಲ್ಲಿ ಕೇಪ್ ವರ್ಡೆಗೆ ಗೆಲುವಿನ ಅವಕಾಶವೂ ದೊರಕಿತ್ತು. ಡಿನೇ ಬೋರ್ಜಸ್ ಅವರ ಹೆಡರ್ ಅನ್ನು ಸ್ಪೇನ್ ಗೋಲ್‌ಕೀಪರ್ ಉನೈ ಸಿಮೊನ್ ತಡೆದು ತಂಡವನ್ನು ಸೋಲಿನಿಂದ ಪಾರು ಮಾಡಿದರು. ಸುಮಾರು ಐದು ಲಕ್ಷ ಜನಸಂಖ್ಯೆಯ ದ್ವೀಪ ರಾಷ್ಟ್ರ ಕೇಪ್ ವರ್ಡೆ ತನ್ನ ಮೊದಲ ವಿಶ್ವಕಪ್ ಪಂದ್ಯದಲ್ಲೇ ಬಲಿಷ್ಠ ಸ್ಪೇನ್ ವಿರುದ್ಧ ಅಂಕ ಕಸಿದು ಇತಿಹಾಸ ನಿರ್ಮಿಸಿದೆ.

ಬುಧವಾರದ ಪಂದ್ಯಗಳು

- ಅರ್ಜೆಂಟಿನಾ-ಅಲ್ಜೇರಿಯಾ (ಬೆಳಗ್ಗೆ 6:30)
- ಆಸ್ಟ್ರೀಯಾ-ಜಾರ್ಡನ್ (ಬೆಳಗ್ಗೆ 9:30)
- ಪೋರ್ಚುಗಲ್- ಕೊಂಗೊ (ರಾತ್ರಿ 10:30)

ಬುಧವಾರ ಮಧ್ಯರಾತ್ರಿ

- ಇಂಗ್ಲೆಂಡ್-ಕ್ರೋವೇಷಿಯಾ (ಮ.ರಾತ್ರಿ 1:30)
- ಘನಾ-ಪನಾಮಾ (ಮುಂಜಾನೆ 4:30)

ಸೌದಿ ಅರೇಬಿಯಾ ಉರುಗ್ವೆ ಸಮಬಲ

ಮಿಯಾಮಿ ಗಾರ್ಡನ್ಸ್: ಎಚ್ ಗುಂಪಿನ ಪಂದ್ಯದಲ್ಲಿ ಸೌದಿ ಅರೇಬಿಯಾ ಮತ್ತು ಉರುಗ್ವೆ ತಂಡಗಳು 1-1 ಗೋಲುಗಳ ಸಮಬಲ ಸಾಧಿಸಿದವು. ಅಂತ್ಯದವರೆಗೂ ಹೋರಾಟ ನಡೆಸಿದ ಉರುಗ್ವೆ ಸೋಲಿನಿಂದ ಪಾರಾಗಿ ಒಂದು ಅಂಕ ಗಳಿಸಿತು. 41ನೇ ನಿಮಿಷದಲ್ಲಿ ಅಬ್ದುಲ್ಲೇಲಾ ಅಲ್-ಅಮ್ರಿ ಗೋಲು ಬಾರಿಸಿ ಸೌದಿ ಅರೇಬಿಯಾಗೆ ಮುನ್ನಡೆ ನೀಡಿದರು. ಉರುಗ್ವೆ ಗೋಲ್‌ಕೀಪರ್ ಫೆರ್ನಾಂಡೊ ಮುಸ್ಲೆರಾ ತಡೆದ ಚೆಂಡಿನ ರೀಬೌಂಡ್ ಅನ್ನು ಅಲ್-ಅಮ್ರಿ ಜಾಲಕ್ಕೆ ತಳ್ಳಿದರು. 80ನೇ ನಿಮಿಷದಲ್ಲಿ ಮ್ಯಾಕ್ಸಿ ಅರೌಜೊ ಸಮಬಲದ ಗೋಲು ದಾಖಲಿಸಿ ಉರುಗ್ವೆಗೆ ರಕ್ಷಕರಾದರು. ಉರುಗ್ವೆ ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿ 28 ಗೋಲು ಪ್ರಯತ್ನಗಳನ್ನು ನಡೆಸಿತು. ಅತ್ತ ಸೌದಿ ಅರೇಬಿಯಾ ಕೇವಲ 7 ಪ್ರಯತ್ನಗಳಿಗೆ ಸೀಮಿತವಾಯಿತು. ಸೌದಿ ಗೋಲ್‌ಕೀಪರ್ ಮೊಹಮ್ಮದ್ ಅಲ್-ಒವೈಸ್ ಹಲವು ಅದ್ಭುತ ಸೇವ್‌ಗಳ ಮೂಲಕ ತಂಡವನ್ನು ಮುನ್ನಡೆಸಿದರು. ಫೆಡೆರಿಕೊ ವಿನಾಸ್, ಮ್ಯಾನುಯೆಲ್ ಉಗಾರ್ಟೆ ಹಾಗೂ ಫೆಡೆರಿಕೊ ವಾಲ್ವೆರ್ಡೆ ಅವರ ಪ್ರಯತ್ನಗಳನ್ನು ಅಲ್-ಒವೈಸ್ ವಿಫಲಗೊಳಿಸಿದರು. ಎರಡೂ ತಂಡದ ಸತತ ಪ್ರಯತ್ನಗಳ ನಂತರವೂ ಪಂದ್ಯ 1-1ರಿಂದ ಡ್ರಾಗೊಂಡಿತು.



ಸ್ಕೋರ್‌ಬೋರ್ಡ್

- ಸೌದಿ ಅರೇಬಿಯಾ 1-1 ಉರುಗ್ವೆ
- ಅಬ್ದುಲ್ಲೇಲಾ ಅಲ್-ಅಮ್ರಿ (41ನೇ ನಿಮಿಷ)
- ಮ್ಯಾಕ್ಸಿ ಅರೌಜೊ (80ನೇ ನಿಮಿಷ)

ಹಿನ್ನಡೆಯಿಂದ ಮರಳಿದ ಇರಾನ್, ಕಿವೀಸ್ ವಿರುದ್ಧ 2-2 ಡ್ರಾ

ಇಂಗಲ್‌ವುಡ್: ದಿನದ ಮತ್ತೊಂದು ಪಂದ್ಯದಲ್ಲಿ ಇರಾನ್ ಮತ್ತು ನ್ಯೂಜಿಲೆಂಡ್ 2-2 ಗೋಲಿನಿಂದ ಡ್ರಾ ಮಾಡಿಕೊಂಡವು. ಇಂಗಲ್‌ವುಡ್‌ನ ಸೋಫಿ ಕ್ರೀಡಾಂಗಣದಲ್ಲಿ ನಡೆದ ಈ ರೋಚಕ ಪಂದ್ಯದಲ್ಲಿ ಎರಡು ಬಾರಿ ಹಿನ್ನಡೆ ಅನುಭವಿಸಿದ ಇರಾನ್, ಎರಡೂ ಸಂದರ್ಭಗಳಲ್ಲಿ ತಿರುಗೇಟು ನೀಡಿತು. ಪಂದ್ಯ ಆರಂಭವಾದ ಏಳನೇ ನಿಮಿಷದಲ್ಲೇ ನ್ಯೂಜಿಲೆಂಡ್‌ಗೆ ಮುನ್ನಡೆ ದೊರೆಯಿತು. ನಾಯಕ ಕ್ರಿಸ್ ವುಡ್ ಸೃಷ್ಟಿಸಿದ ಅವಕಾಶವನ್ನು ಎಲಿಜಾ ಜಸ್ಟ್ ಗೋಲಾಗಿ ಪರಿವರ್ತಿಸಿ ತಂಡವನ್ನು ಮುನ್ನಡೆಸಿದರು. ಇರಾನ್ 32ನೇ ನಿಮಿಷದಲ್ಲಿ ಸಮಬಲ ಸಾಧಿಸಿತು. ರಮಿನ್ ರೆಜಾಯಿಯನ್ ತಮ್ಮ ಬೂಟಿನ ಹೊರಭಾಗದಿಂದ ಅದ್ಭುತ ಚಿಪ್ ಶಾಟ್ ಮೂಲಕ ಚೆಂಡನ್ನು ಗೋಲುಪೆಟ್ಟಿಗೆಯೊಳಗೆ ಸೇರಿಸಿದರು. ದ್ವಿತೀಯಾರ್ಧದ 54ನೇ ನಿಮಿಷದಲ್ಲಿ ಮತ್ತೆ ಎಲಿಜಾ ಜಸ್ಟ್ ಮಿಂಚಿ ನ್ಯೂಜಿಲೆಂಡ್‌ಗೆ 2-1 ಮುನ್ನಡೆ ತಂದುಕೊಟ್ಟರು. ಮತ್ತೊಮ್ಮೆ ಕ್ರಿಸ್ ವುಡ್ ಅವರೇ ಗೋಲು ಅವಕಾಶ ಸೃಷ್ಟಿಸಿದ್ದರು. ಆದರೆ 64ನೇ ನಿಮಿಷದಲ್ಲಿ ರಮಿನ್ ರೆಜಾಯಿಯನ್ ನೀಡಿದ ನಿಖರವಾದ ಉದ್ದ ಪಾಸ್ ಅನ್ನು ಮೊಹಮ್ಮದ್ ಮೊಹೆಬ್ಬಿ ಹೆಡರ್ ಮೂಲಕ ಗೋಲಾಗಿ ಪರಿವರ್ತಿಸಿ ಇರಾನ್‌ಗೆ 2-2 ಸಮಬಲ ತಂದುಕೊಟ್ಟರು.



- **ಇರಾನ್ 2-2 ನ್ಯೂಜಿಲೆಂಡ್**
- **7ನೇ ನಿಮಿಷ:** ಎಲಿಜಾ ಜಸ್ಟ್ (ನ್ಯೂಜಿಲೆಂಡ್)
- **32ನೇ ನಿಮಿಷ:** ರಮಿನ್ ರೆಜಾಯಿಯನ್ (ಇರಾನ್)
- **54ನೇ ನಿಮಿಷ:** ಎಲಿಜಾ ಜಸ್ಟ್ (ನ್ಯೂಜಿಲೆಂಡ್)
- **64ನೇ ನಿಮಿಷ** ಮೊಹಮ್ಮದ್ ಮೊಹೆಬ್ಬಿ (ಇರಾನ್)

5 ಚಿನ್ನ ಸೇರಿ ರಾಜ್ಯಕ್ಕೆ 16 ಪದಕ



ಹೈದಾರಾಬಾದ್: ಇಲ್ಲಿನ ಕೊಂಪಲ್ಲಿಯ 'ದಿ ಹಬ್ ಆಫ್ ಪಿಕಲ್ಬಾಲ್ ಸ್ಟೇಡಿಯಂ'ನಲ್ಲಿ ನಡೆದ ಮೂರು ದಿನಗಳ 12ನೇ ದಕ್ಷಿಣ ವಲಯ ಪಿಕಲ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಆಟಗಾರರು ವಿವಿಧ ಪದಕಗಳನ್ನು ಗೆದ್ದಿದ್ದಾರೆ. ಅಖಿಲ ಭಾರತ ಪಿಕಲ್ಬಾಲ್ ಅಸೋಸಿಯೇಷನ್(ಎಸ್‌ಪಿಎ) ಹಾಗೂ ತೆಲಂಗಾಣ ಕ್ರೀಡಾ ಪ್ರಾಧಿಕಾರದ ಮಾರ್ಗದರ್ಶನದಲ್ಲಿ ನಡೆದ ಈ ಪ್ರತಿಷ್ಠಿತ ಟೂರ್ನಮೆಂಟ್‌ನಲ್ಲಿ ಕರ್ನಾಟಕದಿಂದ ಒಟ್ಟು 27 ಮಂದಿ ಭಾಗವಹಿಸಿದ್ದರು.

ಈ ಪೈಕಿ ಮೊದಲ ದಿನ ಅಂಡರ್ 12 ವಿಭಾಗದಲ್ಲಿ ಶ್ರೀಹರಿ ಶತಾನ್ಯೂ ಚಿನ್ನವನ್ನು ಗೆದ್ದರೆ, 2ನೇ ದಿನ ಅಂಡರ್ 12 ಬಾಲಕರ ಹಾಗೂ ಅಂಡರ್ 14 ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ಕರ್ನಾಟಕಕ್ಕೆ ಚಿನ್ನ ಒಲಿದು ಬಂದಿದೆ. ಅಂಡರ್ 12 ಹಾಗೂ ಅಂಡರ್ 14 ಮಿಶ್ರ ವಿಭಾಗಗಳಲ್ಲಿ ಕರ್ನಾಟಕ ತಂಡ ಸ್ವರ್ಣ ಗೆದ್ದು ಬೀಗಿದೆ. ಇಷ್ಟೇ ಅಲ್ಲದೇ, 3 ಬೆಳ್ಳಿ ಜೊತೆಗೆ 8 ಕಂಚಿನ ಪದಕಗಳನ್ನು ಕೂಡ ಕರ್ನಾಟಕ ಪಡೆ ಗೆದ್ದುಕೊಂಡಿದ್ದು, ಮೇಲುಗೈ ಸಾಧಿಸಿದೆ. ಇಡೀ 27 ಮಂದಿಯ ಪೈಕಿ ಶ್ರೀಹರಿ ಶತಾನ್ಯೂ ಎಲ್ಲರ ಗಮನ ಸೆಳೆದಿದ್ದು, 5 ಪದಕಗಳನ್ನು ಗೆದ್ದಿದ್ದಾರೆ.

ಕೌರ್ ಬಳಗಕ್ಕೆ ಗೆಲುವಿನ ಛಲ

ಲೀಡ್ಸ್: ಪಾಕಿಸ್ತಾನ ತಂಡದ ಬೇಟೆಯಾಡಿರುವ ಭಾರತ ಮಹಿಳಾ ತಂಡವು ತನ್ನ ವಿಶ್ವಕಪ್ ಅಭಿಯಾನದಲ್ಲಿ ಗೆಲುವಿನ ನಾಗಾಲೋಟವನ್ನು ನೆದರ್ಲೆಂಡ್ಸ್‌ಗೆ ವಿಸ್ತರಿಸಬೇಕಿದೆ. ಏಕದಿನ ವಿಶ್ವಕಪ್ ಗೆದ್ದ ನಂತರ ಟಿ20 ವಿಶ್ವಕಪ್ ಮೇಲೆ ಕಣ್ಣಿಟ್ಟಿರುವ ಹರ್ಮನ್‌ಪ್ರೀತ್ ಕೌರ್ ಪಡೆ ಪಾಕ್ ವಿರುದ್ಧದ ಮೊದಲನೇ ಪಂದ್ಯದಲ್ಲಿ ಗೆದ್ದು ಈಗಾಗಲೇ ಶುಭಾರಂಭ ಮಾಡಿದೆ.

ಮಂಧಾನ ಅವರ ಬ್ಯಾಟಿಂಗ್ ಹಾಗೂ ದೀಪ್ತಿ ಶರ್ಮ ಅವರ ಮಾರಕ ಬೌಲಿಂಗ್ ದಾಳಿಯೊಂದಿಗೆ ಮಿಂಚಿರುವ ಭಾರತಕ್ಕೆ ಗೆಲ್ಲುವ ವಿಶ್ವಾಸವಿದ್ದು, ನೆದರ್ಲೆಂಡ್ಸ್ ಮೇಲೆ ಪ್ರಾಬಲ್ಯಕ್ಕೆ ಅಣಿಯಾಗುತ್ತಿದೆ. ಪಾಕ್ ವಿರುದ್ಧದ ಪಂದ್ಯದಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸಮತೋಲಿತ ಪ್ರದರ್ಶನ ನೀಡಿತ್ತು. ಇದಲ್ಲದೆ ಬೇಗನೇ ವಿಕೆಟ್ ಕಳೆದುಕೊಂಡರೂ ಲಯ ಬಿಡದ ಭಾರತ ಕಂಬ್ಯಾಕ್ ಮಾಡಿತ್ತು. ಬೌಲಿಂಗ್ ವಿಚಾರದಲ್ಲೂ ಮೊದಲಿಗೆ ಅಲ್ಪ ಹಿನ್ನಡೆ ಅನುಭವಿಸಿದ್ದರೂ ನಂತರ ಪಂದ್ಯಕ್ಕೆ ಮರಳಿತು. ವಿಶ್ವಕಪ್ ಅಭಿಯಾನದ ಭಾರತದ ಎರಡನೇ ಪಂದ್ಯ ಲೀಡ್ಸ್‌ನಲ್ಲಿ ನಡೆಯಲಿದೆ.

ಪಿಚ್: ಲೀಡ್ಸ್‌ನಲ್ಲಿ ಪಂದ್ಯ ನಡೆಯಲಿದೆ. ಅಲ್ಲಿನ ಪಿಚ್ ಬ್ಯಾಟರ್‌ಗಳಿಗೆ ಮತ್ತು ಬೌಲರ್‌ಗಳಿಗೆ ಸಮಾನ ಲಾಭ ಕೊಡಲಿದೆ. ತುಂಬಾ ಹೈಸ್ಕೋರಿಂಗ್ ಪಿಚ್ ಹೊಂದಿಲ್ಲ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಬೌಲರ್‌ಗಳೇ ಹಿತವಾಗಿ ಕಾಣಿಸಿಕೊಂಡಿದ್ದಾರೆ. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ ಸಿಗಬಹುದು.



ಪಂದ್ಯದ ವಿವರ

- ಯಾವಾಗ: ಬುಧವಾರ
- ಎಲ್ಲಿ: ಲೀಡ್ಸ್, ಇಂಗ್ಲೆಂಡ್
- ಸಮಯ: ಸಂಜೆ 7:00(ಭಾರತೀಯ ಕಾಲಮಾನ)

ಸರಣಿ ವಶ ಭಾರತದ ಗುರಿ

ಲಖನೌ: ಮೊದಲ ಪಂದ್ಯದಲ್ಲಿ ಸರಳ ಜಯ ಸಾಧಿಸಿರುವ ಭಾರತ ಪುರುಷರ ತಂಡವು ಬುಧವಾರದಂದು ಅಫ್ಘಾನಿಸ್ತಾನ ವಿರುದ್ಧ ಎರಡನೇ ಪಂದ್ಯವಾಡಲು ಸಿದ್ಧವಾಗಿದೆ.

ಶುಭಮನ್ ಗಿಲ್ ನೇತೃತ್ವದ ಬಳಗ ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಸರಣಿ ವಶಕ್ಕಾಗಿ ಪಂದ್ಯಾಟವಾಡಲಿದೆ. ವಿರಾಟ್ ಕೊಹ್ಲಿ ಆಡದ ನಿಟ್ಟಿನಲ್ಲಿ ನಿರಾಸೆಯಾಗಿರುವ ಅಭಿಮಾನಿಗಳಿಗೆ ಇನ್ನೊಂದು ಆಘಾತ ಎದುರಾಗಲಿದ್ದು, ಬುಧವಾರದ ಪಂದ್ಯದಲ್ಲಿ ರೋಹಿತ್ ಶರ್ಮ ಆಡುವುದು ಅನುಮಾನ ಎನ್ನಲಾಗಿದೆ. ಹಿಂದಿನ ಪಂದ್ಯದಲ್ಲಿ ರನ್ ಔಟ್‌ನಿಂದಾಗಿ ನಿರಾಸೆ ಮೂಡಿಸಿದ್ದ ಅವರು, ಗಾಯಗೊಂಡಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವರದಿಯಾಗಿದೆ.

ಆಫ್ಘನ್ನರ ವಿರುದ್ಧ ಇಂದು 2ನೇ ಏಕದಿನ

ಕಳೆದ ಪಂದ್ಯದಲ್ಲಿ ಸಮತೋಲಿತ ಪ್ರದರ್ಶನ ನೀಡಿದ್ದ ಭಾರತ ತಂಡವು ನಿಗದಿತ 25 ಓವರ್‌ಗಳಲ್ಲಿ ಪ್ರಾಬಲ್ಯ ಸಾಧಿಸಿತ್ತು. ರೆಹಮತ್ತುಲ್ಲಾ ಗುರ್ಬಾಜ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಫ್ಘಾನಿಸ್ತಾನ ಕೂಡ ಉತ್ತಮ ಪ್ರದರ್ಶನವನ್ನೇ ನೀಡಿತ್ತು. ಆದರೆ ಬೌಲಿಂಗ್ ಮಾಡುವ ವೇಳೆ ಎಡವಿತ್ತು.



ಪಿಚ್ ರಿಪೋರ್ಟ್: ಲಖನೌನ ಏಕಾನಾ ಕ್ರೀಡಾಂಗಣ ಅಲ್ಪ ಬೌಲರ್‌ಗಳಿಗೆ ಸಹಾಯಕವಾಗಿರಲಿದೆ. 50 ಓವರ್‌ಗಳ ವರೆಗೆ ಇಬ್ಬನಿ ಕಾಟ ಸ್ಪಷ್ಟವಾಗಿ ಕಾಡಬಹುದು. ಐಪಿಎಲ್‌ನಲ್ಲಿ ಬ್ಯಾಟಿಗರು ಉತ್ತಮ ಬೌನ್ಸ್‌ನಿಂದ ಲಾಭ ಪಡೆಯುತ್ತಿದ್ದರು. ಪರಿಣಾಮ ಈಗಲೂ ಹೆಚ್ಚಿನ ಬೌನ್ಸ್ ಇರುವುದು ಕಾಣಬಹುದು.

ಪಂದ್ಯದ ವಿವರ

- ಯಾವಾಗ: ಬುಧವಾರ
- ಎಲ್ಲಿ: ಏಕಾನಾ, ಲಖನೌ
- ಸಮಯ: ಮಧ್ಯಾಹ್ನ 1:30

ಗುಲ್ಬರ್ಗಾ ತಂಡಕ್ಕೆ ಮನೀಷ್ ನಾಯಕ

ಕಲಬುರಗಿ: ಭಾರತ ತಂಡಕ್ಕಾಡಿರುವ ಅನುಭವಿ ಕ್ರಿಕೆಟರ್, ಸ್ಫೋಟಕ ಬ್ಯಾಟರ್ ಮನೀಷ್ ಪಾಂಡೆ ಈ ಬಾರಿ ಗುಲ್ಬರ್ಗಾ ಮ್ಯಾಸ್ಟಿಕ್ಸ್ ತಂಡದ ನಾಯಕತ್ವ ನಿಭಾಯಿಸಲಿದ್ದಾರೆ. ಪ್ರತಿಷ್ಠಿತ ಮಹಾರಾಜ ಟ್ರೋಫಿ ಪಂದ್ಯಾವಳಿಗೆ ಮೂರೇ ದಿನ ಬಾಕಿ ಇರುವಂತೆ ಮಂಗಳವಾರದಂದು ಗುಲ್ಬರ್ಗಾ ಮ್ಯಾಸ್ಟಿಕ್ಸ್ ತಂಡವು ಮಾಧ್ಯಮಗೋಷ್ಠಿ ನಡೆಸಿ ತನ್ನ ತಂಡವನ್ನು ಪರಿಚಯಿಸಿತು. ಅಲ್ಲದೆ ತಂಡದ ಜೆರ್ಸಿ ಬಿಡುಗಡೆ ಕಾರ್ಯಕ್ರಮವನ್ನೂ ಮಾಡಿದ ಗುಲ್ಬರ್ಗಾ ಪಂದ್ಯಾವಳಿಗೆ ಸಿದ್ಧ ಎಂಬ ಸಂದೇಶ ಸಾರಿತು.



ವೈಭವ್ ಭೇಟಿಗಾಗಿ 80ರ ಅನುರ್ 160 ಕಿ.ಮೀ ಪ್ರಯಾಣ

ಡಂಬುಲ್ಲಾ: 15 ವರ್ಷದ ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ ಭೇಟಿಯಾಗಲು ಶ್ರೀಲಂಕಾ ಮಾಜಿ ದಿಗ್ಗಜ ಕ್ರಿಕೆಟಿಗ 80ರ ಅನುರ್ ತೆನ್ನೆಕೂನ್ 161 ಕಿಲೋ ಮೀಟರ್ ಪ್ರಯಾಣಿಸಿ ಹಾರೈಸಿದ್ದಾರೆ. ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ವಿಶ್ವ ಕ್ರಿಕೆಟ್ ಗಮನ ಸೆಳೆದಿರುವ ವೈಭವ್ ಸೂರ್ಯವಂಶಿ ಭಾರತ ಎ ತಂಡದಲ್ಲಿ ಆಡುತ್ತಿದ್ದಾರೆ. ಶ್ರೀಲಂಕಾದಲ್ಲಿ ಅಫ್ಘಾನಿಸ್ತಾನ, ಶ್ರೀಲಂಕಾ ಮತ್ತು ಭಾರತ ಎ ತಂಡಗಳ ನಡುವೆ ತ್ರಿಕೋನ ಸರಣಿ ನಡೆಯುತ್ತಿದೆ. ಸೋಮವಾರ ಶ್ರೀಲಂಕಾ ವಿರುದ್ಧ ಭಾರತ ಪಂದ್ಯವನ್ನಾಡಿತ್ತು. ಪಂದ್ಯದ ನಂತರ ಭಾರತದ ಡ್ರೆಸ್ಸಿಂಗ್ ರೂಮ್‌ಗೆ ಬಂದಿರುವ ಅನುರ್ ವೈಭವ್ ಅವರನ್ನು ಹೊಗಳಿದ್ದಾರೆ. ಅಲ್ಲದೆ ವೈಭವ್‌ಗಾಗಿ ಒಂದು ಗಂಟೆಗೂ ಹೆಚ್ಚು ಕಾದು ಕೂತಿದ್ದಾರೆ.




ಹಾಕಿ: ಸೆಮಿಗೆ ಮಹಿಳಾ ತಂಡ

ಹೊಸದಿಲ್ಲಿ: ಮಹಿಳೆಯರ ಎಫ್‌ಐಎಚ್ ಹಾಕಿ ನೇಷನ್ಸ್ ಕಪ್ ಪಂದ್ಯಾವಳಿಯಲ್ಲಿ ಭಾರತೀಯ ಮಹಿಳೆಯರು ಪಾರುಪತ್ಯ ಸಾಧಿಸಿದ್ದು ಜಪಾನ್ ತಂಡವನ್ನು 2-1ರಿಂದ ಮಣಿಸಿ ಪ್ರತಿಷ್ಠಿತ ಕೂಟದ ಸೆಮಿಫೈನಲ್‌ಗೇರಿದೆ. ಆವುಕ್‌ಲ್ಯಾಂಡ್‌ನಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಎ ಪೂಲ್‌ನಲ್ಲಿರುವ ಭಾರತ ಮಹಿಳೆಯರ ತಂಡ ತನಗಿದ್ದ ಎರಡೂ ಪಂದ್ಯಗಳನ್ನು ಗೆದ್ದಿದೆ. ಮಂಗಳವಾರ ನಡೆದ ಜಪಾನ್ ವಿರುದ್ಧದ ಪಂದ್ಯದಲ್ಲಿ ಭಾರತವು 2-1ರಿಂದ ಗೆಲುವು ಸಾಧಿಸಿತು. ಸಲೀಮಾ 33ನೇ ನಿಮಿಷಕ್ಕೆ ಮೊದಲ ಗೋಲು ಗಳಿಸಿದರೆ, ಲಾಲ್ರೆಮ್ಸಿಯಾಮಿ 49ನೇ ನಿಮಿಷದಲ್ಲಿ ಗೋಲು ಗಳಿಸಿದರು. ಜಪಾನ್ ಪರ ಹಿರಾಮಿಸ್ತು 35ನೇ ನಿಮಿಷಕ್ಕೆ ಒಂದು ಗೋಲು ಗಳಿಸಿದರು. ಸೆಮಿಫೈನಲ್ ಪಂದ್ಯದಲ್ಲಿ ಭಾರತವು ಉರುಗ್ವೆ ವಿರುದ್ಧ ಆಡಲಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6017

ಎಡದಿಂದ ಬಲಕ್ಕೆ

1.ರೈತ ಬೆಳೆ ಕೊಯ್ಲು ಮಾಡುವ ಸಂತಸದ ಸಮಯ (4)
2.ನ್ಯಾಯಾಲಯದಲ್ಲಿ ಎದುರುವಾದಿ (4)
4.ಸಮರ್ಥ-ನಿಷ್ಣಾತನೀತ (3)
6.ಇದು ಉಗುರಿನಿಂದಾದ ಗೀರು (4)
8.ಈತ ಗೆಲುವನ್ನು ಸಾಧಿಸಿದವನು (4)
10.ಥಾರ್ ಮರುಭೂಮಿ ಹೊಂದಿದ ರಾಜ್ಯ (4)
12.ರವಿ ನಡುವೆ ತಿರುಗಿ ನಿರಂತರವಾಯ್ತು (4)
14.ಅವುಗಳಿಗೆ ಅದು ಹಲ್ಲಿಯಂತೆ ಕಾಣಿಸುತ್ತಿದೆ (3)
15.ಮಾತನ್ನು ಮೀರು ಎಂಬರ್ಥದ ಶಬ್ದ (4)
16.ರಾತ್ರಿ ಅರಳುವ ಮಲ್ಲಿಗೆಯ ಬಗೆ (4)

ಮೇಲಿನಿಂದ ಕೆಳಕ್ಕೆ

1.ಸುಂದರವಾದ ಕಣ್ಣು (4)
3.ಒಂದು ದಿವಸದ ದುಡಿಮೆಗೆ ಕೊಡುವ ಭತ್ಯೆ (4)
4.ಗತಿಸಿ ಹೋದದ್ದು-ಹಿಂದೆ ಆದದ್ದು (2)
5.ಜನಗಳ ನಡುವೆ ಸಿಕ್ಕಿಬಿದ್ದ ಆನೆ (2)
7.ಭೂಮಿಯ ಅಡಿಯಲ್ಲಿ ಸಿಗುವ ಅಜೈವಿಕ ವಸ್ತು (3)
9.ಗಾಯಕನ ಧ್ವನಿ-ಕಂಠವಿದು (3)
10.ಅಪಸ್ವರ ನುಡಿ-ತಕರಾರು ಮಾಡು (4)
11.ಆಭರಣ ಧರಿಸಿ ಏರಿದ ಬೆಟ್ಟ (2)
12.ವಸ್ತು-ಜೀವದ ಅಂತ್ಯವಿದು (2)
13.ಅದರ ಪಕ್ಕದಲ್ಲಿ-ಸಮೀಪದಲ್ಲಿ ಎಂಬರ್ಥದ ಶಬ್ದ (4)

6016 ಉತ್ತರ

ಎಡದಿಂದ ಬಲಕ್ಕೆ:
1.ಅಭಿರಾಮ
3.ದಂಗುಬಡಿ 6.ಕಲರವ
7.ರಾಮಾಚಾರಿ 8.ತಿಗರಿ
10.ವಣಿಕ 12.ಸುಕುಮಾರಿ
13.ರತ್ನಾಕರ 16.ಗಡಿಕಲ್ಲು
17.ರುಗ್ಣಾಲಯ

ಮೇಲಿನಿಂದ ಕೆಳಕ್ಕೆ :
1.ಅಣ್ಣ 2.ಮದಕರಿ
4.ಗುಣವತಿ 5.ಡಿಕ್ಕಿ
7.ರಾಜೀವ 9.ರಿಪೇರಿ
11.ಕರಣಿಕ 12.ಸುರತರು
14.ಅಂಗ 15.ಮಾಯ

ಕಿರುಸುದ್ದಿ



ನರಗುಂದ: ಮುಂಡರಗೋಡ ಪಟ್ಟಣದಲ್ಲಿ ಆಯಾದುರ್ಗಾದೇವಿ ಪ್ರಕಾಶನ ಮತ್ತು ಮಾನ್ವಿತಾ ಸ್ಟುಡಿಯೋ ಇವರ ಪ್ರಾಯೋಜಕತ್ವದಲ್ಲಿ ಜರುಗಿದ ಕುಂದಕಲೋತ್ಸವ-2026 ರ ಸಮಾರಂಭದಲ್ಲಿ ನರಗುಂದ ಪಟ್ಟಣದ ಮಾರುತಿ ನಗರದ ಶಿಕ್ಷಕ ರಾಘವೇಂದ್ರ ಗೆಜ್ಜಿ ಅವರಿಗೆ ಸಾಧಕರ ದಿಗ್ಗಜಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಚಿವ ಸ್ಥಾನ ಸಿಗಲಿ



ನರೇಗಲ್ಲ: ಜಿ.ಎಸ್. ಪಾಟೀಲರ ಮುತ್ಸದ್ದಿತನ, ಜನಪರ ಕಾಳಜಿ ಹಾಗೂ ಅಭಿವೃದ್ಧಿ ದೃಷ್ಟಿಕೋನ ಹೊಂದಿರುವ ಜನನಾಯಕರಲ್ಲಿ ಪ್ರಮುಖರು. ಹಾಗೂ ರೋಣ ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಅವರು, ಕ್ಷೇತ್ರದ ಜನರ ವಿಶ್ವಾಸವನ್ನು ಗಳಿಸಿರುವ ಸಮರ್ಥ ನಾಯಕರು. ಅವರಿಗೆ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನಮಠದ ಪೀಠಾಧಿಪತಿ ಮುಪ್ಪಿನ ಬಸವಲಿಂಗ ಸ್ವಾಮೀಜಿ ಆಗ್ರಹಿಸಿದರು. ಜಿ.ಎಸ್. ಪಾಟೀಲರು ನಮ್ಮ ಮಠದ ಭಕ್ತರು. ಅವರ ತಾಯಿ ನಮ್ಮ ಹಾಲಕೆರೆ ಗ್ರಾಮದವರು ಹಾಗೂ ಜಿಎಸ್ ಪಾಟೀಲರ ಪತ್ನಿ ಅವರು ಇದೇ ಗ್ರಾಮದವರು. ಅವರ ತರುವಾಯ ಪಾಟೀಲ ಮನೆತನದಿಂದ ಅವರ ಮಕ್ಕಳು ಕೂಡ ನಮ್ಮ ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆದುಕೊಂಡು ಬಂದಿದ್ದಾರೆ. ಕ್ಷೇತ್ರದ ಸಮಸ್ಯೆಗಳು, ಜನರ ಅಗತ್ಯಗಳು ಹಾಗೂ ಅಭಿವೃದ್ಧಿಯ ಅವಶ್ಯಕತೆಗಳನ್ನು ಸಮರ್ಪಕವಾಗಿ ಅರಿತಿರುವ ಜಿ.ಎಸ್. ಪಾಟೀಲರಿಗೆ ಕರ್ನಾಟಕ ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ನೀಡುವುದು ಸೂಕ್ತ. ಅವರಿಗೆ ಸಚಿವ ಸ್ಥಾನ ದೊರೆತಲ್ಲಿ ಈ ಭಾಗದ ಜನರಿಗೆ ಸರ್ಕಾರದ ವಿಶೇಷ ಆದ್ಯತೆ ದೊರಕಲಿದೆ ಎಂದಾಗುತ್ತದೆ. ಜೊತೆಗೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೊಸ ಚೈತನ್ಯ ದೊರೆಯಲಿದ್ದು, ಅಭಿವೃದ್ಧಿಗೆ ಹೆಚ್ಚಿನ ವೇಗ ಸಿಗುವ ನಿರೀಕ್ಷೆಯಿದೆ ಎಂದಿದ್ದಾರೆ.

ಅರ್ಜಿ ಆಹ್ವಾನ

ಗದಗ: ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕಿನ ರೈತ ಬಾಂಧವರಿಗೆ ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುವ ಯೋಜನೆಗಳಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ತಂತ್ರಜ್ಞಾನ ಅಭಿಯಾನ ಯೋಜನೆ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಕಾರ್ಯಕ್ರಮಗಳಡಿ ಪ್ರೋತ್ಸಾಹಧನ/ಸಹಾಯಧನ ಸೌಲಭ್ಯಕ್ಕಾಗಿ ಆಸಕ್ತಿ ಹೊಂದಿದ ಫಲಾನುಭವಿಗಳಿಂದ ಪ್ರತ್ಯೇಕ ಅರ್ಜಿ ಆಹ್ವಾನಿಸಲಾಗಿದೆ.

ರೈತರು (ಸಾಮಾನ್ಯ/ಪ.ಜಾ/ಪ.ಪಂಗಡ) ನಿಗದಿತ ಅರ್ಜಿನಮೂನೆ, ಪಹಣಿ ಪತ್ರ (ಆರ್ ಟಿ ಸಿ) ಆಧಾರ್ ಕಾರ್ಡ್ ಪ್ರತಿಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ರೈತ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. 2026-27ನೇ ಸಾಲಿನ ಆಯಾ ಯೋಜನೆಯ ಸುತ್ತೋಲೆ/ಮಾರ್ಗಸೂಚಿ ಮಾನದಂಡಗಳನ್ವಯ ಫಲಾನುಭವಿ ಆಯ್ಕೆ ಮಾಡಲಾಗುವುದು. ಅರ್ಜಿ ಸಲ್ಲಿಸಲು ಜೂ.17 ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಶಿರಹಟ್ಟಿ ಕಚೇರಿಗೆ ಸಂಪರ್ಕಿಸಬಹುದಾಗಿದೆ.

ಪದಾಧಿಕಾರಿಗಳ ಆಯ್ಕೆ



ಮುಂಡರಗಿ: ಮುಂಡರಗಿ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ವಿರೇಶ ಮಡಿವಾಳರ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಬಸವರಾಜ ಹೊಲಿ ಆಯ್ಕೆಯಾಗಿದ್ದಾರೆ.

ಈ ಕುರಿತು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎ.ಬಳಿಗಾರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ಪ್ರೊ. ಆರ್.ಎಲ್. ಪೊಲೀಸಪಾಟೀಲ, ನಿಕಟಪೂರ್ವ ಅಧ್ಯಕ್ಷ ಡಾ.ಸಂತೋಷ ಹಿರೇಮಠ, ಉಪಾಧ್ಯಕ್ಷರಾಗಿ ಶಿವಾನಂದ ಶಿರುಂದ, ಮಹಿಳಾ ಉಪಾಧ್ಯಕ್ಷರಾಗಿ ಶೋಭಾ ಮೇಟಿ, ಸಹ ಕಾರ್ಯದರ್ಶಿಯಾಗಿ ಶರಣಪ್ಪ ಕಲಾಲ, ಕೋಶಾಧ್ಯಕ್ಷರಾಗಿ ಆರ್.ಎಂ.ಕೋಳಿ, ಸಹಕೋಶಾಧ್ಯಕ್ಷರಾಗಿ ಮಹೇಶ್ವರ ಮೇಟಿ, ಸಂಘಟನಾ ಕಾರ್ಯದರ್ಶಿಯಾಗಿ ಎಂ.ಪಿ.ಶೀಲವಂತ, ಕಲಾವಿ ಪ್ರತಿನಿಧಿಯಾಗಿ ಎಂ.ಜಿ.ಗಚ್ಚಣ್ಣವರ, ಕದಳಿ ಮಹಿಳಾ ವೇದಿಕೆಯ ಪ್ರತಿನಿಧಿಯಾಗಿ ಸೀತಾ ಬಸಾಪುರ, ಮಹಿಳಾ ಪ್ರತಿನಿಧಿಯಾಗಿ ಪ್ರತಿಭಾ ಹೊಸಮನಿ, ಪತ್ರಿಕಾ ಪ್ರತಿನಿಧಿಯಾಗಿ ಸಂತೋಷಕುಮಾರ ಮುರಡಿ, ಕಾರ್ಯಕಾರಿಣಿ ಸದಸ್ಯರಾಗಿ ವಿ.ಜೆ.ಹಿರೇಮಠ, ಎಸ್.ಸಿ.ಚಕ್ಕಡಿಮಠ, ಸುರೇಶ ಕೋತಂಬರಿ, ಎಸ್.ಎಸ್.ಗಡ್ಡದ, ಸಂತೋಷ ಅಂಗಡಿ, ಡಾ.ಕುಮಾರ ಜೆ., ಗಿರೀಶಗೌಡ ಪಾಟೀಲ, ವಿನಯಕುಮಾರ ಗಂಧದ, ಆನಂದ ಕಾತರಕಿ, ಈರಣ್ಣ ಹಡಪದ, ಗುಡದೀರಯ್ಯ ನವಲಿಹಿರೇಮಠ, ಚಂದ್ರು ಮಜ್ಜಗಿ, ಉಮೇಶ ಅಂಕದ, ಈರಪ್ಪ ಸೊರಟೂರ, ಮಹಾಂತೇಶ ಬಡಪ್ಪನವರ ಆಯ್ಕೆಯಾಗಿದ್ದಾರೆ.



ಗದಗ: ತಾಲೂಕಿನ ಬಳಗಾನೂರಿನ ಚಿಕೇನಕೊಪ್ಪದ ಚನ್ನವೀರಶರಣರ ವಿದ್ಯಾಪೀಠದ ಸಮೂಹ ಸಂಸ್ಥೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಿವಶಾಂತವೀರ ಶರಣರು, ಎಸ್.ಎಸ್. ಪುರಾಣಿಕಮಠ, ಯಶಪಾಲ ಸಿಕ್ಕೆದೇಸಾಯಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಬೆಳೆವಿಮೆ ವಿತರಣೆಯಲ್ಲಿ ತಾರತಮ್ಯ: ಆರೋಪ

ಶಿರಹಟ್ಟಿ: ಸ್ಥಳೀಯ ತೋಟಗಾರಿಕೆ ಇಲಾಖೆಯಲ್ಲಿ ಬೆಳೆವಿಮೆ ತಾರತಮ್ಯ ಸರಿಪಡಿಸುವಂತೆ ಆಗ್ರಹಿಸಿ ತಾಲೂಕಿನ ರೈತರು ತೋಟಗಾರಿಕೆ ಸಹಾಯಕ ನಿರ್ದೇಶಕ ಜಿಪಂ ಅಜರುದ್ದೀನ ಗುಳೆದಗುಡ್ಡ ಅವರಿಗೆ ಮನವಿ ಸಲ್ಲಿಸಲಾಯಿತು.

ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಪರಮೇಶ್ವರ ಅಂದಲಗಿ ಮಾತನಾಡಿ, ಸ್ಥಳೀಯ ಗಂಡಾಂತರದಡಿ ಒಟ್ಟು 3,8177 ಅರ್ಜಿಗಳನ್ನು ಸ್ವೀಕೃತಗೊಂಡಿದ್ದು, ಸ್ವೀಕರಿಸಿದ ಎಲ್ಲಾ ಅರ್ಜಿ ಪರಿಶೀಲನೆ ಮಾಡದೆ ತೋಟಗಾರಿಕೆ ಇಲಾಖೆ ಮತ್ತು ಕಂಪನಿಯವರು ಕೂಡಿ ಕೇವಲ ಪಿಆರ್ ಎ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಮಾಡಿರುವ ಕ್ರಾಪ್ ಸರ್ವೆ ಮಾಹಿತಿ ಮೇಲೆ ಅವುಗಳ ಪೈಕಿ 9,687 ಪ್ರಸ್ತಾವನೆಗಳಲ್ಲಿ ಕೆಂಪು ಮೆಣಸಿನಾಯಿ ಬೆಳೆ ಲಭ್ಯವಿದೆ ಮತ್ತು 4,755 ಪ್ರಸ್ತಾವನೆಗಳ ಬೆಳೆ ಸಮೀಕ್ಷೆಯಲ್ಲಿ ಪಾಳೇಂದು ನಮೂದಿಸಿದ್ದಾರೆ ಮತ್ತು 1319 ಪ್ರಸ್ತಾವನೆಗಳಿಗೆ ಬೆಳೆ ಸಮೀಕ್ಷೆ ಮಾಹಿತಿ ಲಭ್ಯವಿಲ್ಲ ಎಂದು ಇಲಾಖೆ ಮಾಹಿತಿ ನೀಡಿದ್ದು ಕೇವಲ 15,761 ಪ್ರಸ್ತಾವನೆಗಳಿಗೆ ಕಂಪನಿ ತಮ್ಮ ಮನಬಂದ ಹಾಗೆ ಹಣ ಸಂದಾಯ ಮಾಡಿದ್ದು, ಈ ಜಮೀನುಗಳಲ್ಲಿ ಮೆಕ್ಕೆಜೋಳ, ಹೆಸರು, ಶೇಂಗಾ, ಈರುಳ್ಳಿ, ಕಬ್ಬು ಜಿಪಿಎಸ್ ಆಗಿವೆ. ಆದ್ರು ಬೆಳೆವಿಮೆ ಸಂದಾಯ ಮಾಡಿದ್ದಾರೆ. ನಿಜವಾದ ಬೆಳೆ ಬೆಳೆದ ರೈತರಿಗೆ ಅನ್ಯಾಯವಾಗಿದ್ದು, ಕಂಪನಿಯವರು 2,2356 ಪ್ರಸ್ತಾವನೆಗಳಿಗೆ ಬೆಳೆವಿಮೆ ಪರಿಹಾರ ನೀಡಬೇಕು. ಇಲ್ಲದಿದ್ದರೆ ಜಂಟಿ ಕೃಷಿ ನಿರ್ದೇಶಕರ ಇಲಾಖೆಯ ಮುಂದೆ ಧರಣಿ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.



ಶಿರಹಟ್ಟಿ: ಸ್ಥಳೀಯ ತೋಟಗಾರಿಕೆ ಇಲಾಖೆಯಲ್ಲಿ ಬೆಳೆವಿಮೆ ತಾರತಮ್ಯ ಸರಿಪಡಿಸುವಂತೆ ಆಗ್ರಹಿಸಿ ತಾಲೂಕಿನ ರೈತರು ತೋಟಗಾರಿಕೆ ಸಹಾಯಕ ನಿರ್ದೇಶಕ ಜಿಪಂ ಅಜರುದ್ದೀನ ಗುಳೆದಗುಡ್ಡ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಶಿವಾಜಿ ಹುಬ್ಬಳ್ಳಿ, ನಾಗರಾಜ ಮಜ್ಜಿಗುಡ್ಡದ, ಬಸವರಾಜ ವಡವಿ, ಎಂ.ಸಿ. ಪೂಜಾರ, ಚಂದ್ರಶೇಖರ ದಾನಿ, ಎಸ್.ಎಸ್.ಗೊರವರ, ಎಚ್.ಆರ್. ಪಾಟೀಲ, ಶೇಖಪ್ಪ ಮಜ್ಜಿಗುಡ್ಡದ, ಮಹೇಶ ಗೊರವರ, ಎ.ಬಿ. ಪೂಜಾರ, ಎಸ್.ಬಿ. ದಾನಿ ಇತರ ರೈತರು ಇದ್ದರು.

ಸ್ವಚ್ಛತಾ ಪರಿಕರಗಳ ಬಳಕೆ ಕುರಿತು ತಿಳಿವಳಿಕೆ | ಜಿಲ್ಲಾಧಿಕಾರಿ ಸೂಚನೆ

ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಲಿ



ಗದಗ: ಸ್ವಚ್ಛತೆ ದೇವರಿಗೆ ಸಮಾನವಾಗಿದ್ದು, ನಮ್ಮ ದೇಹವನ್ನು ಹೇಗೆ ಸ್ವಚ್ಛವಾಗಿ ಇಟ್ಟುಕೊಳ್ಳುತ್ತೇವೆಯೋ ಅದೇ ರೀತಿ ನಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಸ್ವಚ್ಛ ವಾತಾವರಣದಿಂದ ಅನಾರೋಗ್ಯವನ್ನು ದೂರವಿಡಲು ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಹೇಳಿದರು.

ನಗರದ ಜಿಲ್ಲಾಡಳಿತ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ನಗರಸಭೆ ಗದಗ-ಬೆಟಗೇರಿ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಪೌರಕಾರ್ಮಿಕರಿಗೆ ಹಾಗೂ ಸ್ವಚ್ಛತಾ ಕೆಲಸಗಾರರಿಗೆ ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು-2026 ಮತ್ತು ಸ್ವಚ್ಛತಾ ಪರಿಕರಗಳ ಬಳಕೆ ಕುರಿತು ತಿಳುವಳಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗದಗ ಬೆಟಗೇರಿ ನಗರಸಭೆ ಎಇಇ (ಪರಿಸರ) ಆನಂದ ಬದಿ ಸ್ವಾಗತಿಸಿ, ವಂದಿಸಿ ನಿರೂಪಿಸಿದರು. ಉಪವಿಭಾಗಾಧಿಕಾರಿ ಗಂಗಪ್ಪ ಎಂ., ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸವನಗೌಡ ಕೊಟೂರು, ಕಾನೂನು ಸಲಹೆಗಾರ ಎಸ್.ಜಿ. ಪಲ್ಲೆದ, ಪೌರಕಾರ್ಮಿಕರ ಸಂಘದ ಅಧ್ಯಕ್ಷ ಎಚ್.ಎಂ. ಶೆಟ್ಟಿ, ಸಂಚಾಲಕ ರಮೇಶ ಕೊಳೂರು ಇತರರಿದ್ದರು.

- ವಸತಿಯುತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ
- ಪೌರಕಾರ್ಮಿಕ ಆರೋಗ್ಯದ ಬಗ್ಗೆ ಸರ್ಕಾರದಿಂದ ವಿಶೇಷ ಕಾಳಜಿ
- ನಿಯಮಿತ ಆರೋಗ್ಯ ತಪಾಸಣೆ, ಅಗತ್ಯ ಚಿಕಿತ್ಸಾ ಸೌಲಭ್ಯ ಹಾಗೂ ಸುರಕ್ಷತಾ ಪರಿಕರಗಳ ಒದಗಿಸುವಿಕೆ
- ಕಾರ್ಮಿಕರು ತಮ್ಮ ಸುರಕ್ಷತೆಗೆ ಹೆಚ್ಚಿನ ಗಮನ ನೀಡಲು ಎಂದು ಸಲಹೆ ನೀಡಿದ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ. ನಂದಾ ಹಣಬರಟ್ಟಿ

ತ್ಯಾಜ್ಯ ನಿರ್ವಹಣೆ ವೈಜ್ಞಾನಿಕವಾಗಲಿ

ಕಸವನ್ನು ಹಸಿಕಸ, ಒಣಕಸ, ಸ್ಯಾನಿಟರಿ ತ್ಯಾಜ್ಯ ಹಾಗೂ ವಿಶೇಷ ಕಾಳಜಿ ತ್ಯಾಜ್ಯ ಎಂಬ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಗುತ್ತಿದೆ. ತ್ಯಾಜ್ಯವನ್ನು ಮೂಲದಲ್ಲಿಯೇ ಪ್ರತ್ಯೇಕಿಸುವುದರಿಂದ ಅದರ ಸಮರ್ಪಕ ನಿರ್ವಹಣೆ ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಹೆಚ್ಚು ನೀರನ್ನು ಬಳಸುವ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದ ಘನ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಇಂತಹ ಸ್ಥಳಗಳಿಗೆ ವಿಶೇಷ ಗಮನ ಹರಿಸಿ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡಬೇಕಾಗಿದೆ ಎಂದು ಡಿ.ಸಿ. ಸಿ.ಎನ್. ಶ್ರೀಧರ ಹೇಳಿದರು.

> ಸಮಾಜದಲ್ಲಿ ತಲೆ ಎತ್ತಿ ಬಾಳುವಂತೆ ಮಾಡಿದ ಮಹಾತ್ಮರ ಆಶಯದಂತೆ ಪೌರಕಾರ್ಮಿಕರ ಬದುಕಿಗೆ ಭದ್ರತೆ ಹಾಗೂ ಸ್ವಾಭಿಮಾನವನ್ನು ತಂದುಕೊಡುವುದು ಸರ್ಕಾರದ ಕರ್ತವ್ಯವಾಗಿದೆ.
>
> ■ ಎಸ್.ಎನ್. ಬಳ್ಳಾರಿ, ಸಫಾಯಿ ಕರ್ಮಚಾರಿ ಸಂಘದ ನಾಮನಿರ್ದೇಶಿತ ಸದಸ್ಯ

ಆರೋಗ್ಯ ಕಾಪಾಡಿಕೊಳ್ಳಿ

ನಗರದ ಪ್ರತಿಯೊಬ್ಬ ನಾಗರಿಕನೂ ನೆಮ್ಮದಿಯಿಂದ ಉಸಿರಾಡಲು ಮತ್ತು ಸ್ವಚ್ಛವಾಗಿ ಬದುಕಲು ಪೌರಕಾರ್ಮಿಕರೇ ಕಾರಣ. ಹೀಗಾಗಿ ನಿಮ್ಮ ಆರೋಗ್ಯದ ಕಡೆಗೆ ನೀವು ಹೆಚ್ಚಿನ ಗಮನ ಹರಿಸಬೇಕು. ಯಾವುದೇ ಕಾರಣಕ್ಕೂ ಸುರಕ್ಷತಾ ಉಪಕರಣಗಳಿಲ್ಲದೆ ನೇರವಾಗಿ ಕೈಗಳಿಂದ ಕಸವನ್ನು ಮುಟ್ಟಬೇಡಿ. ಅಧಿಕಾರಿಗಳು ಒದಗಿಸುವ ಮಾಸ್ಕ್, ಗ್ಲೌಸ್ ಸೇರಿದಂತೆ ಆಧುನಿಕ ಯಂತ್ರೋಪಕರಣಗಳನ್ನು ಕಡ್ಡಾಯವಾಗಿ ಬಳಸಿ ಕೆಲಸ ಮಾಡಿ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ದಿವಾಣಿ ನ್ಯಾಯದೀಶ ಸಿ.ಎಸ್. ಶಿವನಗೌಡ್ರ ಹೇಳಿದರು.

ಸಮೃದ್ಧ ಮಳೆ, ಬೆಳೆಗಾಗಿ ವಿಶೇಷ ಪೂಜೆ

ಲಕ್ಷ್ಮೇಶ್ವರ: ಸಮೃದ್ಧ ಮಳೆ, ಬೆಳೆಗಾಗಿ ಲಕ್ಷ್ಮೇಶ್ವರದ ರೈತ ಸಮುದಾಯದಿಂದ ಮಂಗಳವಾರ ಮುಂಜಾನೆಯಿಂದ ಕೊಲ್ಲಾಪುರಮ್ಮ ದೇವಿಗೆ ಸಾಂಪ್ರದಾಯಿಕವಾಗಿ ಹೊಂಡಕ್ಕೆ ನೀರು ತುಂಬಿಸಿ ವರುಣ ದೇವನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಪಟ್ಟಣದ ಸೊಪ್ಪಿನಕೇರಿ ಓಣಿಯ ರೈತರು ಪಂಕ್ತಿ ಬಸವೇಶ್ವರ ದೇವಸ್ಥಾನದಿಂದ ಭಜನೆ ಹಾಡುತ್ತಾ ಕೊಲ್ಲಾಪುರಮ್ಮ ದೇವಿಯ ಸನ್ನಿಧಿಗೆ ತೆರಳಿ ಸಂಪ್ರದಾಯಬದ್ಧ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು. ದೇವಿಯ ಪ್ರಾಂಗಣದ ಮುಂಭಾಗದಲ್ಲಿ ಸಣ್ಣ ಹೊಂಡ ನಿರ್ಮಿಸಿ ಅದರಲ್ಲಿ ನೀರು ತುಂಬಿಸಿ, ವರುಣ ದೇವರ ಮೂರ್ತಿಯನ್ನು ತಯಾರಿಸಿ ಪೂಜೆ ಸಲ್ಲಿಸಲಾಯಿತು. ಅಕ್ಷತೆ, ಕುಂಕುಮ ಪೂಜೆ ನೆರವೇರಿಸಲಾಯಿತು. ಮಳೆ ಸಮೃದ್ಧಿಯಾಗಿ ಸುರಿದು ರೈತರ ಬದುಕು ಹಸನಾಗಲಿ ಎಂಬ ಆಶಯದೊಂದಿಗೆ ರೈತರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಈ ವಿಶೇಷ ಪೂಜಾವಿಧಿ ಮೂಲಕ ಕೊಲ್ಲಾಪುರಮ್ಮ ಮಳೆಯ ಆಗಮನದ ವಾಣಿಯಾಗುತ್ತದೆ. ವಾಣಿಯಂತೆ 3 ದಿನಗಳಲ್ಲಿ ಮಳೆಯಾಗುತ್ತದೆ. ಭೂಮಿ ತಾಯಿಯ ಮಕ್ಕಳಾದ ರೈತರು ಸಂಪ್ರದಾಯ, ದೇವರು ಧರ್ಮದ ಮೊರೆ ಹೋಗುವುದನ್ನು ಮರೆಯಬಾರದು ಎನ್ನಲಾಯಿತು.

ಹಿರಿಯರ ಕಾಲದಿಂದಲೂ ಮಳೆರಾಯನ ಕೃಪೆಗಾಗಿ ಕೊಲ್ಲಾಪುರಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸುವ ವೇಳೆ 5 ಮಂಗಳವಾರ ವ್ರತಾಚರಣೆ ಸಂಪ್ರದಾಯ ಮಾಡುತ್ತಾ ಬರಲಾಗಿದೆ. ದೇವಿಯ ವಾಣಿಯಂತೆ ಮಳೆಯಾದ ನಂತರದಲ್ಲಿ ರೈತ ಸಮುದಾಯದವರೆಲ್ಲ ಸೇರಿ ಗೋದಿ ಹುಗ್ಗಿ, ಜೋಳದ ಕಿಚಡಿ, ಅನ್ನ ಪ್ರಸಾದ ಸಿದ್ಧಪಡಿಸಿ ಬಂಡಿಯಲ್ಲಿ ಹೇರಿಕೊಂಡು ಹುಲ್ಲದ ಸಂಪ್ರದಾಯದಂತೆ ಆಗಮಿಸಿ ಪೂಜೆ, ಪ್ರಸಾದ ಮಾಡಲಾಗುತ್ತದೆ. ದೇವಿಯ ವಾಣಿ ಎಂದಿಗೂ ಸುಳ್ಳಾಗಿಲ್ಲ ಎಂದು ಹಿರಿಯರಾದ ಭರಮಪ್ಪ ಗುಡಗೇರಿ, ನೀಲಪ್ಪ ಕನವಳ್ಳಿ ಹೇಳಿದರು.

ನೀಲಪ್ಪ ಕನವಳ್ಳಿ, ಭರಮಪ್ಪ ಹೊಟ್ಟಿ, ಚನ್ನಪ್ಪ ಆದಿ, ಭರಮಣ್ಣ ಗುಡಗೇರಿ, ಮುದಕಣ್ಣ ಪಾಟೀಲ, ಈರಣ್ಣ ಮುಳಗುಂದ, ಸೋಮಣ್ಣ ಚಿಂಚಲಿ, ವಿರೂಪಾಕ್ಷ ಆದಿ, ಮಯೂರಗೌಡ ಪಾಟೀಲ, ಮಂಜಪ್ಪ ಮುಳಗುಂದ, ಈರಪ್ಪ ಗುಡಗೇರಿ, ರಮೇಶ ಹೊಳ್ಳ, ಬಸವರಾಜ ಆದಿ, ಸಿದ್ದು ರಾಜನಾಯ್ಕರ, ಶೇಖಪ್ಪ ಪುಟಾಣಿ, ಈರಣ್ಣ ಹುಳಕಣ್ಣವರ, ಶಂಭು ತಂಡಿಗೇರ, ಪರಶುರಾಮ ಶಿರಹಟ್ಟಿ ಸೇರಿದಂತೆ ರೈತರು ಹಾಗೂ ಮಹಿಳೆಯರು ಪಾಲ್ಗೊಂಡಿದ್ದರು.



ಅಪಘಾತದಲ್ಲಿ ಮೃತಪಟ್ಟ, ಗಾಯಾಳುಗಳಿಗೆ ಪರಿಹಾರ ನೀಡಿ

ಗಜೇಂದ್ರಗಡ: ರೋಣ ತಾಲೂಕಿನ ಜಿಗಳೂರು ಕ್ರಾಸ್ ಬಳಿ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಹಾಗೂ ಗಾಯಾಳುಗಳ ತುರ್ತು ಪರಿಹಾರಕ್ಕಾಗಿ ಒತ್ತಾಯಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಹಾಗೂ ಮೃತರ ಕುಟುಂಬ ಹಾಗೂ ಗಾಯಳುಗಳ ಕುಟುಂಬದವರು ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಹಾಗೂ ಶಾಸಕರಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ನ್ಯಾಯವಾದಿ ಎಂ.ಎಸ್.ಹಡಪದ ಮಾತನಾಡಿ, ರೋಣ ತಾಲೂಕಿನ ಜಿಗಳೂರು ಕ್ರಾಸ್ ಬಳಿ ಕ್ರೂಸರ್ ವಾಹನದಲ್ಲಿ ಕಡಲೆ ಕೀಳಲು ಕೃಷಿ ಕೆಲಸಕ್ಕೆ ಹೋಗುತ್ತಿರುವಾಗ ರೋಣದಿಂದ ಗಜೇಂದ್ರಗಡ ಕಡೆಗೆ ಹೊರಟಿದ್ದ ಕ್ಯಾಂಟರ್ ವಾಹನದ ಚಾಲಕನು ನಿಷ್ಕಾಳಜಿತನದಿಂದ ಚಲಾಯಿಸಿ ಕ್ರೂಸರ್ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತ ಮಾಡಿದ್ದು ಕ್ರೂಸರ್ ವಾಹನದಲ್ಲಿದ್ದ ಕೃಷಿಕೂಲಿಕಾರರಾದ ಮರಿಯಂಬು ದಾದೇಸಾಬ ಹುನಗುಂದ ಹಾಗೂ ಅನ್ನಪೂರ್ಣ ಲಕ್ಷಣ ಚಂಗಳಿ, ಸುಜಾತಾ ರಾಜಪ್ಪ ಹೊಸಮನಿ ಈ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಇನ್ನುಳಿದ 16 ಜನರಿಗೆ ತೀವ್ರ ಗಾಯಗಳಾಗಿದ್ದವು. ಈ ಸಂದರ್ಭದಲ್ಲಿ ಶಾಸಕ ಜಿ.ಎಸ್.ಪಾಟೀಲ ಅವರು ದುರ್ಘಟನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮೃತರ ಕುಟುಂಬದವರಿಗೆ ತಲಾ ರೂ.2,00,000ಗಳನ್ನು ಹಾಗೂ ಗಾಯಾಳುಗಳಿಗೆ ತಲಾ ರೂ.50,000ಗಳ ಮಾನವೀಯ ನೆರವನ್ನು ತಕ್ಷಣವೇ ನೀಡುವ ಭರವಸೆ ನೀಡಿದ್ದರು. ಆದರೆ ಇದುವರೆಗೆ ಶಾಸಕರು ಪರಿಹಾರ ಕೊಡಿಸಿಲ್ಲ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೊಡಿಸುವಂತೆ ನೊಂದ ಕುಟುಂಬದವರು ಕಳೆದ ನಾಲ್ಕು ತಿಂಗಳಿಂದ ಶಾಸಕರಿಗೆ ಒತ್ತಾಯ ಮಾಡುತ್ತಲೇ ಬಂದಿದ್ದಾರೆ. ಆದರೂ ಶಾಸಕರು ಈ ವಿಷಯದಲ್ಲಿ ನಿರ್ಲಕ್ಷ್ಯ ಧೋರಣೆ ತೋರುತ್ತಿದ್ದಾರೆ ಎಂದು ಆರೋಪಿಸಿದರು.



ಯುವ ವಕೀಲ ದಾವಲಸಾಬ ತಾಳಿಕೋಟಿ ಮಾತನಾಡಿ, ಮೃತರ ಕುಟುಂಬಸ್ಥರು ಹಾಗೂ ಗಾಯಳುಗಳು 4-5 ಬಾರಿ ಜಿಲ್ಲಾಡಳಿತ ಹಾಗೂ ತಾಲೂಕಾಡಳಿತದ ಮೂಲಕ ಅವರು ಕೇಳಿದ ಎಲ್ಲ ಸೂಕ್ತ ದಾಖಲೆಗಳನ್ನು ಸರ್ಕಾರಕ್ಕೆ ಸಲ್ಲಿಸಿ 4 ತಿಂಗಳು ಕಳೆದರೂ ಇದುವರೆಗೂ ನಯಾಪೈಸೆ ಪರಿಹಾರ ಬಿಡುಗಡೆಯಾಗಿಲ್ಲ. ಸಂತ್ರಸ್ತರಿಗೆ ಪುನಃ ಆ ದಾಖಲೆ ಕೊಡಿ, ಈ ದಾಖಲೆ ಕೊಡಿ ಎಂದು ಕೇವಲ ಪತ್ರ ವ್ಯವಹಾರ ಮಾಡುತ್ತಲೇ ಕಾಲಹರಣ ಮಾಡುತ್ತಾ ಬಂದಿದ್ದಾರೆ. ಈ ಕೂಡಲೇ ಶಾಸಕರು ಸ್ವತಃ ತಾವೇ ಮುತುವರ್ಜಿ ವಹಿಸಿ 15 ದಿನಗಳಲ್ಲಿ ಸಂತ್ರಸ್ತರಿಗೆ ಪರಿಹಾರ ಒದಗಿಸಬೇಕು. ಇಲ್ಲವಾದಲ್ಲಿ ತಹಶೀಲ್ದಾರ್ ಕಚೇರಿ ಮುಂಭಾಗದಲ್ಲಿ ಅನಿರ್ದಿಷ್ಟಾವಧಿ ಧರಣಿ ಮಾಡಲಾಗುವುದು ಎಂದರು.

ಐ.ಬಿ.ಹಾಳಕೇರಿ, ಆರ್. ವೈ.ಕೇಶಣ್ಣನವರ, ರಾಜಪ್ಪ ಹೊಸಮನಿ, ಪ್ಯೆಬು ಹುನಗುಂದ, ಎಚ್.ಎಚ್.ತಹಶೀಲ್ದಾರ, ಶಶಿಧರ ಗೌಡರ, ಆನಂದ ಮುರಾರಿ, ಚಂದ್ರು ಚಂಗಳಿ, ಪರಶುರಾಮ ಹೊಸಮನಿ, ಮಹಮದ ಹವಾಲ್ದಾರ, ಮಂಜುನಾಥ ಚವ್ಹಾಣ, ಪ್ರದೀಪ ಗೊಂಗಡಶೆಟ್ಟಿ, ಬಸವರಾಜ ಹೊಸಮನಿ, ವಿನಾಯಕ ಕೊಟಗಿ, ಎಸ್.ಎಚ್.ಹಾಳಕೇರಿ, ಕಾಲೇಶ ತಳವಾರ, ಬಿ.ಎಚ್.ಹಾಲಕೇರಿ,ರವಿ ವಡಗೇರಿ,ಕಿರಣ ಮಡಿವಾಳರ, ಅಬ್ಬು ಮುದಗಾರ, ಸೇರಿದಂತೆ ಅನೇಕರು ಇದ್ದರು.

50 ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಣೆ

ನರಗುಂದ: ತಾಲೂಕಿನ ಬೈರನಹಟ್ಟಿ ಗ್ರಾಮದ ದೊರೆಸ್ವಾಮಿ ವಿರಕ್ತಮಠದಲ್ಲಿ ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯಘಟಕದ ಅಧ್ಯಕ್ಷ, ಸಾಹಿತಿ ಡಾ.ಅರ್ಜುನ ಗೊಳಸಂಗಿ ಅವರು ತಮ್ಮ ಪುತ್ರ ದಿ.ಜೀವನ ಗೊಳಸಂಗಿ ಅವರ ಜನ್ಮದಿನವನ್ನು 50 ವಿದ್ಯಾರ್ಥಿಗಳಿಗೆ ವರ್ಷಂಪೂರ್ತಿ ಬೇಕಾಗುವ ಕಲಿಕಾ ಸಾಮಗ್ರಿಗಳನ್ನು ವಿತರಿಸುವ ಮೂಲಕ ವಿಶಿಷ್ಟವಾಗಿ ಆಚರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಬೆಳಗಾವಿ ಆರ್.ಪಿಡಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಹರೀಶ ಕೋಲಕಾರ ಮಾತನಾಡಿ, ಜನ್ಮದಿನವನ್ನು ಕೇಕ್ ಕತ್ತರಿಸಿ, ಸಿಹಿ ಹಂಚುವಿಕೆಗೆ ಮಾತ್ರ ಮೀಸಲಾಗಿರದೇ ಮಠದ ಎಲ್ಲ ವಿದ್ಯಾರ್ಥಿಗಳಿಗೆ ನೋಟಬುಕ್, ಜಾಮಿಟ್ರಿ ಬಾಕ್ಸ ಸೇರಿದಂತೆ ವಿವಿಧ ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಡಾ.ಗೊಳಸಂಗಿ ಅವರು ಮಗನ ಸ್ಮರಣೆಯನ್ನು ಈ ಮೂಲಕ ಮಾಡಿರುವುದು ಶ್ಲಾಘನೀಯ. ಅವರ ಪುತ್ರ ಜೀವನದಾದ್ಯಂತ ಸಾಕಷ್ಟು ಸಮಾಜಮುಖಿ ಕಾರ್ಯ ನೆರವೇರಿಸಿದ್ದರು ಎಂದರು. ಡಾ.ಅರ್ಜುನ ಗೊಳಸಂಗಿ ಮಾತನಾಡಿ, ಮಠದಲ್ಲಿ ಮಗನ ಜನ್ಮದಿನವನ್ನು ಮಕ್ಕಳಿಗೆ ಕಲಿಕಾಸಾಮಗ್ರಿ ವಿತರಿಸಿ ಆಚರಿಸಲಾಗಿದೆ. ಮುಂದಿನ ದಿನಗಳಲ್ಲಿ ಯುವಕರಿಗೆ ಪ್ರೇರಣೆಯಾಗುವ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಮಾಧ್ಯಮ ಕ್ಷೇತ್ರ ಒಳಗೊಂಡ ಕಾರ್ಯಕ್ರಮವನ್ನು ಸಮಾಜಕ್ಕೆ ಉಪಯೋಗವಾಗುವ ರೀತಿಯಲ್ಲಿ ವಿಶೇಷವಾದ ಯೋಜನೆ ಹಮ್ಮಿಕೊಳ್ಳಲಾಗುತ್ತಿದೆ. ಇದಕ್ಕೆಲ್ಲಾ ಗದುಗಿನ ತೋಂಟದಾರ್ಯ ಮಠ, ಬೈರನಹಟ್ಟಿಯ ದೊರೆಸ್ವಾಮಿ ಮಠಗಳ ಕಾರ್ಯ ಚಟುವಟಿಕೆಗಳು ನಿರಂತರ ಗೌರವ ಮತ್ತು ಪ್ರೇರಣೆ ನೀಡಿವೆ ಎಂದರು. ಶಿರಸಿಯ ಎಂಇಎಸ್ ಪದವಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ. ವಿಜಯಮಹಾಂತೇಶ ದೇವರ, ದೇವರಹಿಪ್ಪರಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದೈಹಿಕ ಶಿಕ್ಷಣ ನಿರ್ದೇಶಕ ಡಾ.ಮಲ್ಲಿಕಾರ್ಜುನ ಲಕ್ಷ್ಮೇಶ, ಗುರಗುಂಟಾದ ಉಪತಹಶೀಲ್ದಾರ ರಾಘವೇಂದ್ರ ಕೊಪ್ಪದ, ಕಿರಣ ಲಕ್ಕೀಶ, ಆರ್.ಡಿ.ನೂಲ್ವಿ, ರೇಖಾ ಕೋಲಕಾರ, ಮಲ್ಲಿಕಾ ಗೊಳಸಂಗಿ, ರೇಖಾ ಕೊಪ್ಪದ, ರವಿ ಕಟ್ಟಿಮನಿ, ಶೃತಿ ಗೊಳಸಂಗಿ, ಕೃಷ್ಣಾ, ಗೌತಮಿ, ಕೀರ್ತಿ ಕೊಪ್ಪದ, ಮಠದ ವ್ಯವಸ್ಥಾಪಕ ಮಹಾಂತ ಹಿರೇಮಠ ಹಾಗೂ ಮಠದ ಭಕ್ತರು ಉಪಸ್ಥಿತರಿದ್ದರು.



ಪ್ರಯತ್ನಕ್ಕೆ ತಕ್ಕ ಪ್ರೋತ್ಸಾಹ ಸಿಕ್ಕಾಗ ಪ್ರತಿಭೆಗಳು ಬೆಳೆಯಲು ಸಾಧ್ಯ: ಸಂಜೀವ ರಿತ್ತಿ

ಮುಂಡರಗಿ: ಜೀವನದಲ್ಲಿ ಪ್ರತಿಯೊಬ್ಬರೂ ಸಾಧನೆಯ ಗುರಿ ತಲುಪಲು ಸತತ ಪ್ರಯತ್ನ ಮಾಡಬೇಕು. ಪ್ರಯತ್ನಕ್ಕೆ ತಕ್ಕ ಪ್ರೋತ್ಸಾಹ ಸಿಕ್ಕರೆ ಆ ವ್ಯಕ್ತಿ ಎತ್ತರಕ್ಕೆ ಬೆಳೆಯುತ್ತಾನೆ ಎಂದು ನಿವೃತ್ತ ಶಿಕ್ಷಕ ಸಂಜೀವ ರಿತ್ತಿ ಹೇಳಿದರು.

ಅವರು ಮುಂಡರಗಿ ಕೋಟೆ ಭಾಗದ ಶ್ರೀ ಮಾರುತಿ ದೇವರ ಟ್ರಸ್ಟ್ ಕಮಿಟಿ ಹಾಗೂ ಜಾತ್ರಾ ಸಮಿತಿ ಹಮ್ಮಿಕೊಂಡಿದ್ದ ಪ್ರತಿಭಾವಂತರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಮಾತನಾಡಿದರು. ಅಧಿಕ ಮಾಸದಲ್ಲಿ ನಾವು ಮಾಡುವ ನಿರ್ಮಲ ಭಕ್ತಿಯ ದೇವರ ಪೂಜೆಗೆ ಭಗವಂತ ನಮ್ಮ ಇಷ್ಟಾರ್ಥವನ್ನು ಈಡೇರಿಸುತ್ತಾನೆ. ಅಧಿಕ ಮಾಸವನ್ನು ಪುರಷೋತ್ತಮ ಮಾಸ ಎನ್ನುತ್ತಾರೆ. ಇದು ಸರ್ವಶ್ರೇಷ್ಠ ಮಾಸವಾಗಿದೆ ಎಂದರು.

ಈ ಸಂದರ್ಭದಲ್ಲಿ ಸಾಧಕರಾದ ಭಾರತೀಯ ಸೇನೆಗೆ (ಅಗ್ನಿವೀರ) ಆಯ್ಕೆಯಾದ ಸಂತೋಷ ಕಿಟ್ಟಪ್ಪ ಮೊರನಾಳ, ಪ್ರಶಾಂಸನಾ ಪ್ರಶಸ್ತಿ ಪುರಸ್ಕೃತರಾದ ಜಾಫರ್ ಬಚೇರಿ ಡಿ.ಜಿ. ಮತ್ತು ಐ ಜಿ.ಪಿ, ನೋಟರಿ ಪಬ್ಲಿಕ್ ಆದ ವಕೀಲ ಅಂದಪ್ಪ ಕುರಿ, ತಾಲೂಕು ಶ್ರೇಷ್ಠ ಕೃಷಿಕ ಪ್ರಶಸ್ತಿ ಪುರಸ್ಕೃತ ರಾಘವೇಂದ್ರ ಕುರಿ, ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಸೌಭಾಗ್ಯ ವಿರೂಪಾಕ್ಷಪ್ಪ ಬಾರಕೇರ, ಹಾಸ್ಯ ನಟ ಶರಣಪ್ಪ ಹೊಂಬಳಗಟ್ಟಿ ಅವರನ್ನು ಸನ್ಮಾನಿಸಲಾಯಿತು. ಟ್ರಸ್ಟ್ ಕಮಿಟಿ ಅಧ್ಯಕ್ಷ ಶಿವಪ್ಪ ಚಿಕ್ಕಣ್ಣನವರ ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನ ಪೂಜಾರಿ ಮುತ್ತಪ್ಪ ಆಗಸಿಮುಂದಿನ, ಯಂಕಪ್ಪ ಮಲ್ಲಾರ್ಜಿ, ದುರಗಪ್ಪ ರಾಮೇನಹಳ್ಳಿ, ಅಂದಪ್ಪ ಹಂದ್ರಾಳ, ನಾಗೇಶ ಹುಬ್ಬಳ್ಳಿ, ಶೇಖಪ್ಪ ಬಳ್ಳಾರಿ, ಮುದಕಪ್ಪ ಕುಂಬಾರ ವಿರೂಪಾಕ್ಷಪ್ಪ ಬಾರಕೇರ, ಭೀಮಣ್ಣ ಆರೇರ, ಮಂಜುನಾಥ ಮುಧೋಳ, ಪವನ ಲೇಂಡ್ವೆ, ಶಿವಾನಂದ ದಂಡಿನ, ನಿಂಗಪ್ಪ ಚೌಡಕ್ಕಿ, ಈಶಪ್ಪ ಉಳ್ಳಾಗಡ್ಡಿ, ಉಮೇಶ ಬಳ್ಳಾರಿ, ಅರುಣ ಬಾರಕೇರ,ನಾಗರಾಜ ಹೊಸಮನಿ, ಅವಿನಾಶ ಗೊಡಕ್ಕಿಂಡಿ ಮುಂತಾದವರಿದ್ದರು. ಮಂಜುನಾಥ ಇಟಗಿ ನಿರೂಪಿಸಿ, ವಂದಿಸಿದರು.



ಪರ್ಯಾಯ ವಿದ್ಯುತ್ ಪರವಾನಗಿಗೆ ಭಾರೀ ವಿರೋಧ

ಗದಗ: ರಾಜ್ಯಲ್ಲಿ ಟಾಟಾ ವಿದ್ಯುತ್ ಪವರ್ ಕಂಪನಿಯ ಪರ್ಯಾಯ ವಿದ್ಯುತ್ ಪರವಾನಗಿಗೆ ಜಿಲ್ಲೆಯಲ್ಲಿ ಭಾರೀ ವಿರೋಧ ವ್ಯಕ್ತವಾಗುತ್ತಿದ್ದು, ವಿದ್ಯುತ್ ಖಾಸಗೀಕರಣಕ್ಕೆ ನಗರದ ಹೆಸ್ಕಾಂ ನೌಕರರೆಲ್ಲರೂ ಭಾರೀ ವಿರೋಧ ವ್ಯಕ್ತಪಡಿಸಿದರು.



ನಗರದ ಮುಳಗುಂದ ನಾಕಾ ಬಳಿಯ ಜಿಲ್ಲಾ ಹೆಸ್ಕಾಂ ಕಚೇರಿ ಅಂಗಳದಲ್ಲಿ ಸಭೆ ನಡೆಸಿದರು. ನಗರದ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ರಾಜೇಶ್ ಕಲ್ಯಾಣಶೆಟ್ಟರ್ ನೇತೃತ್ವದಲ್ಲಿ ಸಭೆ ನಡೆಸಲಾಯಿತು. ನಂತರ ಟಾಟಾ ಪವರ್ ಕಂಪನಿಯ ಪ್ರಸ್ತಾಪವನ್ನು ನಿರಾಕರಿಸಲು ಒತ್ತಾಯಿಸಿದರು. ರಾಜ್ಯದಲ್ಲಿ 19 ಜಿಲ್ಲೆಗಳ ವಿದ್ಯುತ್ ವಿತರಣೆಗೆ ಖಾಸಗಿ ಕಂಪನಿ ಆಗಮಿಸುತ್ತಿದ್ದು, ಕರ್ನಾಟಕ ವಿದ್ಯುತ್ ಶಕ್ತಿ ನಿಯಂತ್ರಣ ಆಯೋಗದ ಎದುರು ಪ್ರಸ್ತಾಪ ಸಲ್ಲಿಸಿದೆ. ಜೂ.23ರ ಒಳಗೆ ತಕರಾರು ಅರ್ಜಿಯನ್ನು ಪತ್ರದ ಮೂಲಕ ಸಲ್ಲಿಸಬಹುದು ಎಂದಿದ್ದಾರೆ. 5 ವಿಭಾಗದ ನೌಕರರು, ಸಾರ್ವಜನಿಕರು ವಿರೋಧ ಮಾಡಿದರೆ ಅದು ಅಷ್ಟಕ್ಕೇ ನಿಲ್ಲುತ್ತದೆ. ಇಲ್ಲವಾದರೆ ವಿದ್ಯುತ್ ಖಾಸಗೀಕರಣವಾದರೆ ಹೆಸ್ಕಾಂ, ಬೆಸ್ಕಾಂ, ಜೆಸ್ಕಾಂ, ಚೆಸ್ಕಾಂ ಸೇರಿದಂತೆ 5 ವಿಭಾಗದ ಆದಾಯಕ್ಕೆ ದೊಡ್ಡ ಹೊಡೆತ ಬೀಳಲಿದೆ ಎಂದರು.

ಸುಮಾರು 60 ವರ್ಷದಿಂದ ನಾವು ವಿದ್ಯುತ್ ಪ್ರಸರಣ ಮಾಡುತ್ತಾ ಬಂದಿದ್ದೇವೆ. ಈಗ ಖಾಸಗಿ ಕಂಪನಿಯವರು ಮೊದಲು 19 ಜಿಲ್ಲೆಯನ್ನು ವಶಕ್ಕೆ ಪಡೆದು ಮುಂದೆ ಕರ್ನಾಟಕ ಎಲ್ಲಾ ಜಿಲ್ಲೆಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಸಾಧ್ಯತೆಯಿದೆ. ವಿದ್ಯುತ್ ಪ್ರಸರಣದ 5 ವಿಭಾಗಕ್ಕೂ ಇದು ಮರಣ ಶಾಸನವಿದ್ದಂತೆ. ಮುಂದೆ ನಾವೆಲ್ಲಾ ಅವರ ಗುಲಾಮರಂತೆ ಕೆಲಸ ಮಾಡಬೇಕಾಗುತ್ತದೆ. ಕೆಇಬಿ ನೌಕರರ ಹಿತಾಸಕ್ತಿಗೆ ವಿರೋಧಿ ಪ್ರಸ್ತಾಪ ಕೈ ಬಿಡುವಂತೆ ಆಗ್ರಹಿಸಿದರು.

ಜಿಲ್ಲೆಯ ಹೆಸ್ಕಾಂ ಅಧಿಕಾರಿಗಳು, ಗುತ್ತಿಗೆ ಸಂಘದ ಹೋರಾಟ ಸಮಿತಿ ಉಪಾಧ್ಯಕ್ಷ ರವಿ ಜೋಗಿನ್, ಮಲ್ಲಪ್ಪ ಕಿಂದರಿ, ಪ್ರಕಾಶ್ ಅಂಗಡಿ, ಜಮೀರ್ ಮಟ್ಟಿ, ಎಸ್.ಎನ್. ಬಳ್ಳಾರಿ, ಎಲ್.ಡಿ. ಚಂದಾವರಿ, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಗುಡಿಮನಿ, ಬಿ.ಆರ್. ಕಲಾಲ, ಕೃಷ್ಣಾ ಹೆಬಸೂರ, ಪ್ರವೀಣ ದ್ಯಾನಪ್ಪನವರ್, ಮೋಶಿ ಉಮಚಗಿ, ಸಂತೋಷ ಪೂಜಾರ್, ಬಸವರಾಜ ಸಾಬಳೆ, ನಾಗರಾಜ ಕುರಿ ಇದ್ದರು.

ಎಚ್‌ಕೆಪಾಗೆ ಸಚಿವ ಸ್ಥಾನ ನೀಡಿ

ಗದಗ: ರಾಜ್ಯ ಸಚಿವ ಸಂಪುಟದಲ್ಲಿ ಶಾಸಕ ಎಚ್.ಕೆ. ಪಾಟೀಲರಿಗೆ ಸ್ಥಾನ ನೀಡುವಂತೆ ಆಗ್ರಹಿಸಿ ಮಂಗಳವಾರ ಕಾಂಗ್ರೆಸ್ ಕಾರ್ಯಕರ್ತರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ನಗರದ ದಿ. ಕಾಟನ್ ಸೇಲ್ ಸೊಸೈಟಿಯಿಂದ ಆರಂಭಗೊಂಡ ಪ್ರತಿಭಟನಾ ಮೆರವಣಿಗೆಯಲ್ಲಿ ಹಲವಾರು ಅಟೋಗಳು ಸಾಗಿದವು. ಬಹುತೇಕರು ಪಾದಯಾತ್ರೆಯಲ್ಲಿ, ಇನ್ನು ಕೆಲವರು ಎತ್ತಿನಬಂಡಿಗಳು, ಟ್ರ್ಯಾಕ್ಟರ್‌ಗಳಲ್ಲಿ ತೆರಳಿದರು. ಕಹಳೆ, ತಮಟೆ ಸೇರಿದಂತೆ ವಾದ್ಯ ಮೇಳ ಹಾಗೂ ಹಾಡುಗಳು ಮೊಳಗಿದವು. ವಾದ್ಯ ತಾಳಕ್ಕೆ ತಕ್ಕಂತೆ ಪ್ರತಿಭಟನಕಾರರು ಕುಣಿದಾಡಿದರು. ಕೆಲವೆಡೆ ಪಟಾಕಿ ಸಿಡಿಸಲಾಯಿತು. ಕೆಲವು ಕಿ.ಮೀ. ಕ್ರಮಿಸಿ ಮುಳಗುಂದ ನಾಕಾ ತಲುಪಿ, ಪ್ರತಿಭಟನಾ ಸಭೆ ನಡೆಸಲಾಯಿತು. ಜಿಲ್ಲೆ ಸೇರಿದಂತೆ ಹಾವೇರಿ, ಬಾಗಲಕೋಟೆಯಿಂದ ಆಗಮಿಸಿದ ಮುಖಂಡರು, ಎಚ್.ಕೆ. ಪಾಟೀಲರಿಗೆ ಬೆಂಬಲ ವ್ಯಕ್ತಪಡಿಸಿದರು. ಸಮರ್ಥ ನಾಯಕನನ್ನು ಕಾಂಗ್ರೆಸ್ ಕಡೆಗಣಿಸಬಾರದು. ಹೀಗೆ ಮಾಡಿದರೆ ರಾಜ್ಯ ಅವಮಾನ ಮಾಡಿದಂತಾಗುತ್ತದೆ. ಅವರು ಇಲ್ಲದೆ ಸಚಿವ ಸಂಪುಟ ವ್ಯರ್ಥವಾಗುತ್ತದೆ. ಹಿರಿಯರಿಲ್ಲದ ಮನೆಯಂತಾಗುತ್ತದೆ. ಸಂಪುಟ ವಿಸ್ತರಣೆ ಸಮಯದಲ್ಲಿ ಅವರಿಗೆ ಪ್ರಾಶಸ್ತ್ಯ ನೀಡಬೇಕು. ಇಲ್ಲದಿದ್ದರೆ ಜಿಲ್ಲೆಯ ಕಾಂಗ್ರೆಸ್ ಪದಾಧಿಕಾರಿಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡುವರು. ಮುಂದಿನ ದಿನಗಳಲ್ಲಿ ರಾಜ್ಯದ ಜನರು ಕಾಂಗ್ರೆಸ್‌ಗೆ ಪಾಠ ಕಲಿಸುತ್ತಾರೆ ಎಂದಿ ಎಚ್ಚರಿಕೆ ನೀಡಿದರು.



ವಿದ್ಯುತ್ ಕ್ಷೇತ್ರ ಖಾಸಗೀಕರಣ ಸಲ್ಲ: ರಾಜೇಶ ಕಲ್ಯಾಣಶೆಟ್ಟಿ

ಲಕ್ಷ್ಮೇಶ್ವರ: ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಯಾವುದೇ ಕ್ರಮವೂ ರೈತರು, ವಿದ್ಯುತ್ ಬಳಕೆದಾರರು ಹಾಗೂ ವಿದ್ಯುತ್ ವಲಯದ ನೌಕರರ ಭವಿಷ್ಯಕ್ಕೆ ಮಾರಕವಾಗಿದೆ ಎಂದು ಗದಗ ಪಾಲನಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ರಾಜೇಶ ಕಲ್ಯಾಣಶೆಟ್ಟಿ ಹೇಳಿದರು.

ಅವರು ಪಟ್ಟಣದ ಹೆಸ್ಕಾಂ ಉಪವಿಭಾಗ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ವತಿಯಿಂದ ಟಾಟಾ ಪವರ್ ಕಂಪನಿಗೆ ವಿದ್ಯುತ್ ವಿತರಣಾ ಪರವಾನಗಿ ನೀಡದಂತೆ ಹಾಗೂ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸದಂತೆ ರೈತರು, ಬಳಕೆದಾರರು ಮತ್ತು ಹೆಸ್ಕಾಂ ನೌಕರರಿಗಾಗಿ ಹಮ್ಮಿಕೊಂಡಿದ್ದ ಆಕ್ಷೇಪಣಾ ಅರ್ಜಿ ಸಲ್ಲಿಸುವುದು ಹಾಗೂ ಜನಜಾಗೃತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.



ಹೆಸ್ಕಾಂ ಸಂಸ್ಥೆಯು ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ವಿದ್ಯುತ್ ಕಂಬಗಳು, ಉಪಕೇಂದ್ರಗಳು ಸೇರಿದಂತೆ ಮೂಲಸೌಕರ್ಯಗಳನ್ನು ಖಾಸಗಿ ಕಂಪನಿಗಳಿಗೆ ಬಳಸಲು ಅವಕಾಶ ನೀಡಿದರೆ ಅದು ಸರ್ಕಾರಿ ಆಸ್ತಿಯನ್ನು ಖಾಸಗಿ ಸಂಸ್ಥೆಗಳಿಗೆ ಒಪ್ಪಿಸಿದಂತಾಗುತ್ತದೆ. ಖಾಸಗೀಕರಣದಿಂದ ರೈತರಿಗೆ ನೀಡುತ್ತಿರುವ ಉಚಿತ ವಿದ್ಯುತ್ ಸೌಲಭ್ಯ ರದ್ದಾಗುವ ಸಾಧ್ಯತೆಯಿದ್ದು, ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಕಡ್ಡಾಯವಾಗಬಹುದು. ಸರ್ಕಾರದ ಗೃಹಜ್ಯೋತಿ, ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಹಾಗೂ ಗಂಗಾ ಕಲ್ಯಾಣ ಸೇರಿದಂತೆ ಹಲವು ಜನಪರ ಯೋಜನೆಗಳು ಸ್ಥಗಿತಗೊಳ್ಳುವ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ರಾಜ್ಯ ಕಿಸಾನ್ ಜಾಗೃತಿ ಸಂಘದ ಜಿಲ್ಲಾ ಗೌರವಾಧ್ಯಕ್ಷ ಟಾಕಪ್ಪ ಸಾತಪುತೆ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸುರೇಶ ಸ್ವಾದಿ, ಅಂಜುಮನ್-ಎ-ಇಸ್ಲಾಂ ಸಂಸ್ಥೆಯ ಅಧ್ಯಕ್ಷ ಮುಕ್ತಾರ ಅಹ್ಮದ್ ಗದಗ, ಬಾಬಣ್ಣ ಉಮಚಗಿ, ಬಸವರಾಜ ಸೂರಣಗಿ ಹಾಗೂ ಬಸವರಾಜ ಟೋಕಾಳಿ , ಹೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಅಂಜನೇಪ್ಪ ಬಿ., ಶಾಖಾಧಿಕಾರಿಗಳಾದ ಕಿರಣಕುಮಾರ ಪಮ್ಮಾರ, ರಘುಪತಿ ನಾಯಕ, ಇರನಗೌಡ, ಬಸವರಾಜ, ವಿಜಯ, ಸಂತೋಷ ನಾಯಕ, ಅಂಬರೀಷ ಹುಲಗೂರ, ಅಮರೇಶ್ವರ ಬಾ. ಹುಲಗೂರ, ಮಹಾಂತೇಶ ಇಟಗಿ ಇತರರಿದ್ದರು.

ಕೇಂದ್ರ ಸಚಿವ ಭೂಪತಿರಾಜು ಶ್ರೀನಿವಾಸ್ ವರ್ಮಾ ಹೇಳಿಕೆ

ಬೆಳಗಾವಿ ವಿಮಾನ ನಿಲ್ದಾಣ ವಿಸ್ತರಣೆ ಆರ್ಥಿಕತೆಗೆ ಹೊಸ ಉತ್ತೇಜನ

ವಿಕಸಿತ ಭಾರತ ಸಂಕಲ್ಪ ಅಭಿಯಾನ ಉದ್ಘಾಟನೆ

◆ **ಬೆಳಗಾವಿ:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳ ಪರಿಣಾಮವಾಗಿ ದೇಶದ ಮೂಲಸೌಕರ್ಯ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳು ಕಂಡು ಬರುತ್ತಿದ್ದು, ಬೆಳಗಾವಿ ವಿಮಾನ ನಿಲ್ದಾಣದ ಬೃಹತ್ ವಿಸ್ತರಣಾ ಕಾಮಗಾರಿ ಪೂರ್ಣಗೊಳ್ಳುವ ಹಂತ ತಲುಪಿರುವುದು ಈ ಭಾಗದ ಅಭಿವೃದ್ಧಿಗೆ ಹೊಸ ಮೈಲಿಗಲ್ಲಾಗಲಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಭೂಪತಿರಾಜು ಶ್ರೀನಿವಾಸ್ ವರ್ಮಾ ಹೇಳಿದರು.

ಮಂಗವಾರ ನಗರದ ಮಹಾವೀರ ಭವನದಲ್ಲಿ ಆಯೋಜಿಸಿದ್ದ 'ವಿಕಸಿತ ಭಾರತ ಸಂಕಲ್ಪ ಅಭಿಯಾನ' ಕಾರ್ಯಕ್ರಮಕ್ಕೆ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಪರಿಣಾಮ ರಸ್ತೆ, ರೈಲ್ವೆ ಮತ್ತು ವಿಮಾನಯಾನ ಕ್ಷೇತ್ರಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ಹೇಳಿದರು.

ಪ್ರಸ್ತುತ ಬೆಂಗಳೂರಿನಿಂದ ವಿವಿಧ ನಗರಗಳಿಗೆ ಎಂಟುವಂದೇಭಾರತ್‌ರೈಲುಗಳುಸಂಚರಿಸುತ್ತಿದ್ದು, ಇತ್ತೀಚೆಗೆ ಬೆಳಗಾವಿ-ಬೆಂಗಳೂರು ವಂದೇ ಭಾರತ್ ರೈಲು ಸೇವೆಯನ್ನೂ ಆರಂಭಿಸಲಾಗಿದೆ ಎಂದು ಅವರು ತಿಳಿಸಿದರು.



ಹೊಸ ಟರ್ಮಿನಲ್ ಕಾರ್ಯಾರಂಭವಾದ ಬಳಿಕ ವರ್ಷಕ್ಕೆ ಸುಮಾರು 36 ಲಕ್ಷ ಪ್ರಯಾಣಿಕರಿಗೆ ಸೇವೆ ಒದಗಿಸುವ ಸಾಮರ್ಥ್ಯ ಹೊಂದಲಿದ್ದು, ಪ್ರದೇಶದ ಆರ್ಥಿಕ ಚಟುವಟಿಕೆಗಳಿಗೆ ಮಹತ್ವದ ಉತ್ತೇಜನ ನೀಡಲಿದೆ.

■ **ಭೂಪತಿರಾಜು ಶ್ರೀನಿವಾಸ್ ವರ್ಮಾ, ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ**

ರೂ. 250 ಕೋಟಿ ವೆಚ್ಚದಲ್ಲಿ ಬೆಳಗಾವಿ ವಿಮಾನ ನಿಲ್ದಾಣವನ್ನು ಆಧುನಿಕ ಸೌಲಭ್ಯಗಳೊಂದಿಗೆ ವಿಸ್ತರಿಸಲಾಗುತ್ತಿದ್ದು, ಶೇ.90ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದರು.

ಇದೇ ವೇಳೆ ಸಂಸದ ಜಗದೀಶ ಶೆಟ್ಟರ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ಸಾಧನೆಯನ್ನು ಶ್ಲಾಘಿಸಿದರು. ಮಾಜಿ ಪ್ರಧಾನಿ ಜವಾಹರಲಾಲ್ ನೆಹರು ಅವರ ಸುದೀರ್ಘ ಆಡಳಿತದ ದಾಖಲೆಯನ್ನು ಮೀರಿ, ಮೋದಿ ಅವರು 4,399 ದಿನ ದೇಶದ ಆಡಳಿತ ನಡೆಸುವ ಮೂಲಕ ಹೊಸ ರಾಜಕೀಯ ಇತಿಹಾಸ ನಿರ್ಮಿಸಿದ್ದಾರೆ ಎಂದು ಹೇಳಿದರು.

ಈ ಸಾಧನೆಗೆ ಅವರ ಕಠಿಣ ಪರಿಶ್ರಮ, ಪ್ರಾಮಾಣಿಕತೆ ಮತ್ತು ನಿರಂತರ ಕಾರ್ಯಶೀಲತೆ ಕಾರಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಬೆಳಗಾವಿ ನಗರದ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ಮತ್ತು ವಿವಿಧ ಯೋಜನೆಗಳ ಮಾಹಿತಿಯನ್ನು ಹಂಚಿಕೊಂಡರು.

ಬೆಳಗಾವಿ ದಕ್ಷಿಣ ಕ್ಷೇತ್ರದ ಶಾಸಕ ಅಭಯ್ ಪಾಟೀಲ್ ಮಾತನಾಡಿ, ದೇಶದ ಡಿಜಿಟಲ್ ಕ್ಷೇತ್ರದಲ್ಲಿ ಕಳೆದ ದಶಕದಲ್ಲಿ ಮಹತ್ವದ ಪ್ರಗತಿ ಸಾಧನೆಯಾಗಿದೆ. ಹಿಂದೆ ಒಂದು ವಾಟ್ಸ್‌ಆ್ಯಪ್ ಸಂದೇಶವನ್ನು ಡೌನ್ಲೋಡ್ ಮಾಡಲು ಹಲವು ನಿಮಿಷಗಳು ಬೇಕಾಗುತ್ತಿದ್ದರೆ, ಇಂದು ಕೆಲವೇ ಸೆಕೆಂಡುಗಳಲ್ಲಿ ಸಾಧ್ಯವಾಗುತ್ತಿದೆ. ಇದು ದೇಶದ ಡಿಜಿಟಲ್ ಪರಿವರ್ತನೆಯ ಪ್ರತೀಕವಾಗಿದೆ ಎಂದರು.

2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸುವ ಪ್ರಧಾನಿ ಮೋದಿಯವರ ಸಂಕಲ್ಪವನ್ನು ಸಾಕಾರಗೊಳಿಸಲು ಎಲ್ಲರೂ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷ ಸುಭಾಷ್ ಪಾಟೀಲ, ಬಿಜೆಪಿ ಜಿಲ್ಲಾ ಅಧ್ಯಕ್ಷೆ ಗೀತಾ ಸುತಾರ್ ಹಾಗೂ ಗ್ರಾಮೀಣ ಜಿಲ್ಲಾ ಅಧ್ಯಕ್ಷ ಸುಭಾಷ್ ಪಾಟೀಲ್ ವಹಿಸಿದ್ದರು. ಈ ಸಂದರ್ಭದಲ್ಲಿ ಮಹಾಪೌರ ಪ್ರೀತಿ ಕಾಮಕರ್, ಉಪ ಮಹಾಪೌರ ಹಣಮಂತ ಕೊಂಗಾಲಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಅನಿಲ ಬೆನಕೆ, ಮಾಜಿ ಶಾಸಕ ಸಂಜಯ ಪಾಟೀಲ, ಮಾಜಿ ಮುಖ್ಯ ಸಚೇತಕ ಮಹಾಂತೇಶ್ ಕವಟಗಿಮಠ ಸೇರಿದಂತೆ ಮಹಾನಗರ ಪಾಲಿಕೆಯ ಸದಸ್ಯರು, ಪಕ್ಷದ ಪದಾಧಿಕಾರಿಗಳು, ಹಿರಿಯ ನಾಗರಿಕರು ಸೇರಿದಂತೆ ಬಿಜೆಪಿಯ ಕಾರ್ಯಕರ್ತರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕನ್ನಡಿಗರಿಗೆ ಉದ್ಯಮ ಸ್ಥಾಪಿಸಲು ಅವಕಾಶ ನೀಡದ ಸರ್ಕಾರ: ನಿರಾಣಿ

◆ **ಬಾಗಲಕೋಟೆ:** ಬೇರೆ ದೇಶದಿಂದ ಬಂಡವಾಳ ಹೂಡುವವರಿಗೆ ರೆಡ್ ಕಾರ್ಪರೆಟ್ ಹಾಸಿ ಅವರಿಗೆ ಅವಕಾಶ ನೀಡುವ ರಾಜ್ಯ ಸರ್ಕಾರ ಕನ್ನಡಿಗರೊಬ್ಬರು ಬಂಡವಾಳ ಹೂಡಿ ಕನ್ನಡಿಗರಿಗೆ ಉದ್ಯೋಗ ನೀಡಲು ಮುಂದಾದರೆ ಅಂತಹವರಿಗೆ ಅವಕಾಶವನ್ನು ರಾಜ್ಯ



ಸರ್ಕಾರ ನೀಡುತ್ತಿಲ್ಲವೆಂದು ಉದ್ಯಮಿ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ ಬೇಸರ ಹೊರಹಾಕಿದರು.

ನವನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಮಾನಗಳಿಗೆ ಪೆಟ್ರೋಲ್ ತಯಾರಿಸುವ ಎಥನಾಲ್ ಘಟಕ ಹಾಗೂ ಬಯೋ ಪ್ಲಾಸ್ಟಿಕ್ ಘಟಕ ನಿರ್ಮಾಣಕ್ಕೆ ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅವಧಿಯಲ್ಲಿ ಅವಕಾಶ ನೀಡಲು ಕೇಳಿಕೊಳ್ಳಲಾಗಿತ್ತು. ಆದರೆ, ಕಳೆದ ಒಂದು ತಿಂಗಳ ನಮ್ಮ ಬಂಡವಾಳ ಹೂಡಿಕೆಯ ಅರ್ಜಿಯನ್ನು ತಿರಸ್ಕರಿಸುವ ಮೂಲಕ ಕನ್ನಡಿಗರಿಗೆ ಉದ್ಯಮ ಸ್ಥಾಪಿಸಲು ಅವಕಾಶ ನೀಡುವುದಿಲ್ಲ ಎಂದು ಸರ್ಕಾರದ ನಡೆಯನ್ನು ತೋರಿಸಲಾಗಿದೆ ಎಂದು ಆರೋಪಿಸಿದರು.

ಜಮಖಂಡಿ ಅಥವಾ ಕೆರಕಲಮಟ್ಟಿಯ ಕೇದಾರ ಶುಗರ್ಸ್‌ಕಾರ್ಖಾನೆಯ ಆವರಣದ ನಮ್ಮ ಜಾಗದಲ್ಲಿ ಎಥೆನಾಲ್ ಘಟಕ ಮತ್ತು ಬಯೋ ಪ್ಲಾಸ್ಟಿಕ್ ಘಟಕ ನಿರ್ಮಾಣಕ್ಕೆ 6 ಸಾವಿರ ಕೋಟಿಯಷ್ಟು ಬಂಡವಾಳ ಹೂಡಿಕೆ ಮಾಡಲು ಸಿದ್ಧರಿದ್ದರೂ ಹಿಂದಿನ ಮುಖ್ಯಮಂತ್ರಿಗಳು ಅವಕಾಶ ನೀಡದೇ ನಮ್ಮ ಬೇಡಿಕೆಯನ್ನು ತಿರಸ್ಕರಿಸಿದ್ದಾರೆ. ಈಗ ಬಂದಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರನ್ನು ಸಹ ಒಮ್ಮೆ ಭೇಟಿಯಾಗಿ ಅವಕಾಶ ನೀಡಲು ಕೇಳಲಾಗುವುದು ಎಂದು ಹೇಳಿದರು.

ಜಿಲ್ಲೆಯ ಸಾವಿರಾರು ಯುವಕರಿಗೆ ಉದ್ಯೋಗ ನೀಡುವಂತಹ ಉದ್ಯಮಕ್ಕೆ ಅವಕಾಶ ನೀಡಲಿಲ್ಲ. ಒಂದು ವೇಳೆ ಈಗಿರುವ ಸರ್ಕಾರದ ಮುಖ್ಯಮಂತ್ರಿಗಳು ಅವಕಾಶ ಕೊಡದೇ ಇದ್ದರೆ ಯುವಕರೊಂದಿಗೆ ವಿಧಾನಸೌಧದ ಮುಂದೆ ಹೋರಾಟ ನಡೆಸಲಾಗುವುದು.

■ **ಮುರುಗೇಶ ನಿರಾಣಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ**

ಒಂದು ವೇಳೆ ರಾಜ್ಯ ಸರ್ಕಾರ ಒಂದು ತಿಂಗಳೊಳಗೆ ಎಥೆನಾಲ್ ಹಾಗೂ ಬಯೋ ಪ್ಲಾಸ್ಟಿಕ್ ಘಟಕ ಸ್ಥಾಪನೆಗೆ ಅವಕಾಶ ನೀಡದಿದ್ದರೆ ಈಗಾಗಲೇ ಆಂಧ್ರ ಪ್ರದೇಶದಲ್ಲಿ 400 ಎಕರೆ ಜಾಗವನ್ನು ಕಡಿಮೆ ದರದಲ್ಲಿ ಕೊಟ್ಟು ನಮ್ಮಲ್ಲಿ ಸ್ಥಾಪಿಸಲು ಆಂಧ್ರ ಸರ್ಕಾರ ಕೇಳಿಕೊಂಡಿದೆ. ಇನ್ನೂ ಮಹಾರಾಷ್ಟ್ರ ಮತ್ತು ಬಿಹಾರ ಮುಖ್ಯಮಂತ್ರಿಯವರು ಸಹ ನಮ್ಮಲ್ಲಿ ಎಥೆನಾಲ್ ಘಟಕ ಸ್ಥಾಪಿಸಲು ಮುಂದಾಗಿ ಎಂದು ಕೇಳಿಕೊಂಡಿದ್ದಾರೆ. ಮೊದಲ ಆದ್ಯತೆಯನ್ನು ಕರ್ನಾಟಕಕ್ಕೆ ನೀಡಿದ್ದೇವೆ. ಸರ್ಕಾರ ಅವಕಾಶ ಕೊಡದೇ ಇದ್ದರೆ ಬೇರೆ ರಾಜ್ಯದಲ್ಲಿ ಸ್ಥಾಪನೆ ಮಾಡಲು ಮುಂದಾಗುತ್ತೇವೆ ಎಂದರು.

ರಾಜಕೀಯ ಪುನರ್ಜನ್ಮ ನೀಡಿದ ಬಾಗಲಕೋಟೆ ಜಿಲ್ಲೆಗೆ ಸಿದ್ಧರಾಮಯ್ಯನವರು ಮಹಾ ಮೋಸ ಮಾಡಿದರು. ಜಿಲ್ಲೆಯ ಸಾವಿರಾರು ಯುವಕರಿಗೆ ಉದ್ಯೋಗ ನೀಡುವಂತಹ ಉದ್ಯಮಕ್ಕೆ ಅವಕಾಶ ನೀಡಲಿಲ್ಲ. ಒಂದು ವೇಳೆ ಈಗಿರುವ ಸರ್ಕಾರದ ಮುಖ್ಯಮಂತ್ರಿಗಳು ಅವಕಾಶ ಕೊಡದೇ ಇದ್ದರೆ ಯುವಕರೊಂದಿಗೆ ವಿಧಾನಸೌಧದ ಮುಂದೆ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಮಾಜಿ ಎಂ.ಕೆ.ಪಟ್ಟಣಶೆಟ್ಟಿ, ಹೂವಪ್ಪ ರಾಠೋಡ ಪತ್ರಿಕಾಗೋಷ್ಠಿಯಲ್ಲಿದ್ದರು.

ಕಿರುಸುದ್ದಿ

ಜೂ.20ರಿಂದ ಹೊರನಾಡ ಕನ್ನಡ 10ನೇ ಮಹಾಮೇಳ


◆ **ಧಾರವಾಡ:** ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ ಪ್ರತಿನಿಧಿಗಳ 10ನೇ ಮಹಾಮೇಳ ಜೂ.20, 21ರಂದು ಎರಡು ದಿನದ ಮಹಾರಾಷ್ಟ್ರದ ಸೋಲ್ಲಾಪುರದ ಹುತಾತ್ಮ ಸ್ಮೃತಿ ಮಂದಿರದಲ್ಲಿ ಜರುಗಲಿದೆ. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕವಿಸಂ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ, ಸೋಲ್ಲಾಪುರ ಜಿಲ್ಲೆಯ ಕನ್ನಡ ಸಂಘಗಳ ನೇತೃತ್ವದ ಮಹಾಮೇಳದ ಸಾನ್ನಿಧ್ಯ ಸೋಲ್ಲಾಪುರದ ಸ್ವಾಮಿನಾಥ ಸ್ವಾಮೀಜಿ ವಹಿಸಲಿದ್ದಾರೆ ಎಂದರು. ಮಾಜಿ ಸಚಿವ ಎಚ್.ಕೆ.ಪಾಟೀಲ ಉದ್ಘಾಟಿಸಲಿದ್ದು, ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಲಿದ್ದು, ಅಕ್ಕಲಕೋಟ ಶಾಸಕ ಸಚಿನ ಕಲ್ಯಾಣಶೆಟ್ಟಿ ಗ್ರಂಥ ಬಿಡುಗಡೆ ಮಾಡಲಿದ್ದು, ಪೊಲೀಸ್ ಅಧೀಕ್ಷಕ ಅತುಲ್ ಕುಲಕರ್ಣಿ ಪಾಲ್ಗೊಳ್ಳಲಿದ್ದಾರೆ ಎಂದರು. ಮಹಾಮೇಳದಲ್ಲಿ ವಿವಿಧ ವಿಷಯಗಳ ಕುರಿತು ಎರಡು ಗೋಷ್ಠಿಗಳು ಜರುಗಲಿವೆ. ಸಂಜೆ 5.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕನ್ನಡ-ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ ಪಾಟೀಲ್ ಚಾಲನೆ ನೀಡುವುದಾಗಿ ಮಾಹಿತಿ ನೀಡಿದರು. ಶಾಂತವೀರ ಬಸವಂತಿ, ಬಸವರಾಜ ಮಸೂತಿ, ಮಹಾದೇವ ಕೋಗನೂರೆ, ಶ್ರೀಶೈಲ ಮಾಳಗೆ, ಬಸವರಾಜ ಗುರವ, ರಾಜಶೇಖರ ಉಂಬರಾಣಿಕರ ಅವರಿಗೆ ಸನ್ಮಾನಿಸಲಿದ್ದು, ಶಾಸಕ ವಿಜಯಕುಮಾರ ದೇಶಮುಖ ಅಧ್ಯಕ್ಷತೆ ವಹಿಸುವರು ಎಂದರು. ಜೂ.21ರ ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಎರಡು ಗೋಷ್ಠಿ ಜರುಗಲಿವೆ. ಮಧ್ಯಾಹ್ನ 3ಕ್ಕೆ ಕವಿ ಮಿಲನ, ಸಂಜೆ 4.30ಕ್ಕೆ ಸಮಾರೋಪದಲ್ಲಿ ಕಾಶಿ ಪೀಠದ ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯರು ಸಾನ್ನಿಧ್ಯ ವಹಿಸುವರು ಎಂದು ಹೇಳಿದರು. ಶಾಸಕ ಬಿ.ಆರ್.ಪಾಟೀಲ ಸಮಾರೋಪದ ನುಡಿಗಳಾಡಲಿದ್ದು, ಮಾಜಿ ಶಾಸಕ ವಿಶ್ವನಾಥ ಬಾಬುರಾವ ಚಾಕೋತೆ ಪಾಲ್ಗೊಳ್ಳುವರು. ಇದೇ ವೇಳೆ ವಿವಿಧ ಗಣ್ಯರಿಗೆ ಸನ್ಮಾನಿಸಲಿದ್ದು, ಸಂಜೆ 6.15ಕ್ಕೆ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಜರುಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಂಕರ ಹಲಗತ್ತಿ, ಸಂಜೀವ ಕುಲಕರ್ಣಿ, ಶಂಕರ ಕುಂಬಿ, ವೀರಣ್ಣ ಒಡ್ಡೀನ, ವಿಶ್ವೇಶ್ವರಿ ಹಿರೇಮಠ, ಸತೀಶ ತುರುಮುರಿ ಇತರರು ಇದ್ದರು.

ಗಾಳಿಗೆ ಹಾರಿದ ಶಾಲಾ ಕಟ್ಟಡದ ಮೇಲ್ಛಾವಣಿ

◆ **ಹುಬ್ಬಳ್ಳಿ:** ತಾಲೂಕಿನ ಬಂಡಿವಾಡ ಗ್ರಾಮದಲ್ಲಿ ಸೋಮವಾರ ಮಳೆ ಸಮೇತ ಜೋರಾಗಿ ಗಾಳಿ ಬೀಸಿದ್ದರಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡದ ಮೇಲ್ಛಾವಣಿಗಳು ಹಾರಿ ಬಿದ್ದಿವೆ. ಸಂಜೆ 5.10ರ ಸುಮಾರಿ ಏಕಾಏಕಿ ಮಳೆ ಹಾಗೂ ಬಿರುಗಾಳಿ ಬೀಸಿದೆ. ಶಾಲೆ ಆಗ ಬಿಟ್ಟಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ.

ಶಾಲೆಯ ಐದು ಕೊಠಡಿಗಳಿಗೆ ಅಳವಡಿಸಿದ್ದ ಟಗಡಿನ ಮೇಲ್ಛಾವಣಿಗಳು ಹಾರಿ ಬಿದ್ದಿವೆ. ಗಾಳಿಯ ರಭಸಕ್ಕೆ ಹಾಗೂ ಮಳೆಗೆ ಕಟ್ಟಡದ ಕಲ್ಲು, ಸಿಮೆಂಟ್ ಕಡಿಗಳು ಉದುರಿದ್ದು ಕಲಿಕಾ ಸಾಮಗ್ರಿಗಳು, ಡೆಸ್ಕ್, ಬೇಂಚ್ ಹಾಗೂ ಇತರೆ ದಾಖಲೆ ಪತ್ರಗಳು ಹಾಳಾಗಿವೆ.

ಮಂಗಳವಾರ ಶಿಕ್ಷಣ ಇಲಾಖೆ ಮತ್ತು ತಾಲೂಕು ಪಂಚಾಯ್ತಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಶಾಲೆಯಲ್ಲಿ ಎಲ್‌ಕೆಜಿಯಿಂದ ಎಂಟನೇ ತರಗತಿ ವರೆಗೆ 220 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ತುಂಬಾ ಹಳೆಯ ಕಟ್ಟಡವಾಗಿದ್ದು, ಕಳೆದ 2 ವರ್ಷಗಳ ಹಿಂದೆ ತಗಡಿನ ಶೀಟ್ ಅಳವಡಿಸಲಾಗಿತ್ತು. ಬಿರುಗಾಳಿ ಬಿಸಿದ್ದರಿಂದ ಮೇಲ್ಛಾವಣಿ ಹಾರಿ ಮೈದಾನದಲ್ಲಿ ಬಿದ್ದಿವೆ ಎಂದು ಗ್ರಾಮಸ್ಥರು ತಿಳಿಸಿದರು.



ಈ ಕುರಿತು ಡಿಡಿಪಿಐ ಉಮೇಶ ಬೊಮ್ಮಕ್ಕನವರ ಪ್ರತಿಕ್ರಿಯಿಸಿ, ಈ ಶಾಲೆ 65 ವರ್ಷದ ಹಿಂದಿನ ಕಟ್ಟಡವಾಗಿದೆ. ಕಳೆದ ಕೆಲವು ವರ್ಷದ ಹಿಂದೆ ಗ್ರಾಮಪಂಚಾಯಿತಿಯಿಂದ ಮೇಲ್ಛಾವಣಿ ಅಳವಡಿಸಲಾಗಿತ್ತು. ಜೋರಾಗಿ ಗಾಳಿ ಬಿಸಿದ್ದರಿಂದ ಚಾವಣಿ ಹಾರಿವೆ. ಮುಂಜಾಗ್ರತ ಕ್ರಮವಾಗಿ ಮಂಗಳವಾರ ಮಕ್ಕಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದರು.

ತಾಪಂ ಇಒ , ಶಿಕ್ಷಣ ಸಂಯೋಜಕರು, ಎಸ್ ಡಿಎಂಸಿ ಸದಸ್ಯರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಟ್ಟಡ ಬಾಳಿಕೆ ಹಾಗೂ ಸುರಕ್ಷತೆ ಕುರಿತು ಪರಿಶೀಲಿಸಿ ವರದಿ ನೀಡುವಂತೆ ಡಿಡಿಪಿಐ ಸೂಚಿಸಿದ್ದಾರೆ.

ಆಲಮಟ್ಟಿ ನೀರಿನ ಮಟ್ಟ ಎತ್ತರಕ್ಕೆ ಆಗ್ರಹಿಸಿ

ನಿಯೋಗದಿಂದ ಪ್ರಧಾನಿ ಭೇಟಿಗೆ ತೀರ್ಮಾನ

◆ **ವಿಜಯಪುರ:** ನ್ಯಾ. ಬ್ರಿಜೇಶಕುಮಾರ ನೇತೃತ್ವದ 2ನೇ ನ್ಯಾಯಾಧಿಕರಣದ ತೀರ್ಪಿನಂತೆ ಆಲಮಟ್ಟಿ ಜಲಾಶಯದ ನೀರಿನ ಮಟ್ಟವನ್ನು 524.256ಕ್ಕೆ ನೀರು ನಿಲ್ಲಿಸಲು ಹಾಗೂ ಗೇಟ್ ಅಳವಡಿಸಲು ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸುವಂತೆ ಒತ್ತಾಯಿಸಲು ಶೀಘ್ರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಳಿ ಹೋರಾಟ ಸಮಿತಿ ನೇತೃತ್ವದಲ್ಲಿ ನಿಯೋಗ ತಗೆದುಕೊಂಡು ಹೋಗಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಭಾಭವನದಲ್ಲಿ ರೈತಪರ, ದಲಿತಪರ ಹಾಗೂ ಪಕ್ಷಾತೀತವಾಗಿ ಎಲ್ಲ ರಾಜಕೀಯ ಮುಖಂಡರ ಹಾಗೂ ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಿ ಮುಂದಿನ ಹೋರಾಟಕ್ಕಾಗಿ ಕೃಷ್ಣಾ ಕೊಳ್ಳ ಜಲ ರಕ್ಷಣಾ ಹೋರಾಟ ಸಮಿತಿ ರಚಿಸಲಾಯಿತು.

ಸಭೆಯ ನಂತರ ಸಂಸದ ರಮೇಶ ಜಿಗಜಿಣಗಿ ಅವರ ಕಚೇರಿಗೆ ತೆರಳಿ ಸಂಸದರಿಗೆ ಭೇಟಿಯಾಗಿ ಪ್ರಧಾನಮಂತ್ರಿ ಬಳಿ ನಿಯೋಗ ತಗೆದುಕೊಂಡು ಹೋಗಲು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರನ್ನು ಭೇಟಿಯಾಗಿ ದಿನಾಂಕ ನಿಗದಿ ಪಡೆಸಲು ಎಲ್ಲ ಹೋರಾಟ ಸಮಿತಿ ಮುಖಂಡರು ಮನವಿ ಮಾಡಿಕೊಂಡರು.



ಇದಕ್ಕೆ ಸ್ಪಂದಿಸಿದ ಸಂಸದ ರಮೇಶ ಜಿಗಜಿಣಗಿ ಅವರು, ನೀರಾವರಿ ವಿಷಯದಲ್ಲಿ ಯಾವುದೇ ಜಾತಿ ರಾಜಕಾರಣ ಬೇಡ ಜಲಾಶಯ ನೀರಿನ ಮಟ್ಟವನ್ನು ಹೆಚ್ಚಿಸಲು ನ್ಯಾಯಾಧಿಕರಣ ತೀರ್ಪಿನಂತೆ ಅಧಿಸೂಚನೆ ಹೊರಡಿಸಲು ಪ್ರಧಾನ ಮಂತ್ರಿ ಬಳಿ ನಿಯೋಗ ತಗೆದುಕೊಂಡು ಹೋಗಲು ಬಾಗಲಕೋಟ ಸಂಸದ ಪಿ.ಸಿ. ಗದ್ದಿಗೌಡರ ಸೇರಿದಂತೆ ಇನ್ನುಳಿದ ಸಂಸದರನ್ನು ಕರೆದುಕೊಂಡು ಮೊದಲು ಪ್ರಹ್ಲಾದ ಜೋಶಿಯವರಿಗೆ ಭೇಟಿಯಾಗಿ ಪ್ರಧಾನಮಂತ್ರಿ ಬಳಿ ನಿಯೋಗಕ್ಕೆ ದಿನಾಂಕ ನಿಗದಿಪಡಿಸಲು ಶೀಘ್ರದಲ್ಲಿ ಭೇಟಿಯಾಗೋಣವೆಂದು ಹೋರಾಟ ಸಮಿತಿಯವರಿಗೆ ಭರವಸೆ ನೀಡಿದರು.

ಡಾ.ರಾಜೇಂದ್ರ ಪೊದ್ದಾರ ಮಾತನಾಡಿ, ಅವಳಿ ಜಿಲ್ಲೆಯ ರೈತರ ಜಮೀನುಗಳಿಗೆ ಸಮಗ್ರ ನೀರಾವರಿ ಆಗಲು 524.256ಕ್ಕೆ ನೀರು ನಿಲ್ಲಿಸಬೇಕೆಂದರೆ, ಮೊದಲು ಕೇಂದ್ರ ಸರ್ಕಾರ ಅಽಸೂಚನೆ ಹೊರಡಿಸಬೇಕು. ತದನಂತರ ರಾಜ್ಯ ಸರ್ಕಾರ ಮೂರನೇ ಹಂತದ ಯೋಜನೆಗೆ ತಗುಲುವ ಹಣವನ್ನು ರಾಜ್ಯ ಸರ್ಕಾರ ಭರಿಸಬೇಕು. ಈ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ಬಳಿ ನಿಯೋಗ ತಗೆದುಕೊಂಡು ಹೋಗಿ ಭೇಟಿಯಾಗಿ ಒತ್ತಾಯಿಸಲಾಗುವುದು ಎಂದರು.

ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ, ಮುಖಂಡ ಮಲ್ಲಿಕಾರ್ಜುನ ಲೋಣಿ ಮಾತನಾಡಿದರು.

ಹೋರಾಟ ಸಮಿತಿಯ ಪ್ರಮುಖ, ರೈತ ಮುಖಂಡ ಅರವಿಂದ ಕುಲಕರ್ಣಿ, ನಿವೃತ್ತ ನ್ಯಾಯಾಧೀಶ ಬಿ.ಸಿ. ಬಿರಾದಾರ, ಪಂಚಪ್ಪ ಕಲಬುರ್ಗಿ, ಎಸ್.ವಿ.ಪಾಟೀಲ, ಮಲ್ಲಿಕಾರ್ಜುನ ಯಂಡಿಗೇರಿ, ಭೀಮಶಿ ಕೊಕರೆ, ಚಾಣಕ್ಯ ಕರಿಯರ್ ಅಕಾಡೆಮಿಯ ಅಧ್ಯಕ್ಷ ಎಮ್.ಎನ್.ಬಿರಾದಾರ, ಅಣ್ಣಾರಾಯ ಈಳಗೇರಿ, ಬಿ.ಭಗವಾನ ರೆಡ್ಡಿ, ಲಕ್ಷ್ಮಣ ಹಂದ್ರಾಳ, ಭೋಗೇಶ ಸೊಲಾಪುರ, ಅಬ್ದುಲ್ ಖಾದ್ರಿ, ಮಲ್ಲಿಕಾರ್ಜುನ ಬಟಗಿ, ಲಲಿತಾ ಬಿಜ್ಜರಗಿ, ನೀಲಾಂಬಿಕ ಬಿರಾದಾರ, ಭೀಮರಾಯ ಪೂಜಾರಿ ಇದ್ದರು.

ಜೆಎಸ್ಸೆಸ್, ಎನ್‌ಐಎಸ್‌ಎಂ ಒಪ್ಪಂದ

◆ **ಧಾರವಾಡ:** ನಗರದ ಜನತಾ ಶಿಕ್ಷಣ ಸಮಿತಿ ಮಂಜುನಾಥೇಶ್ವರ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಸಂಸ್ಥೆ ಹಾಗೂ ಮುಂಬೈನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸೆಕ್ಯೂರಿಟೀಸ್ ಮಾರ್ಕೆಟ್ಸ್ ಪರಸ್ಪರ ತಿಳಿವಳಿಕಾ ಪತ್ರಗೆ ಸಹಿ ಹಾಕಿವೆ.

ಜೆಎಸ್ಸೆಸ್ ಸಂಸ್ಥೆಯ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಮತ್ತು ಮುಂಬೈನ ಎನ್‌ಐಎಸ್ ಎಂನ ಪ್ರಧಾನ ವ್ಯವಸ್ಥಾಪಕ ಸಂಜೀವ ಬಜಾಜ್ ಅವರು ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿದರು.

ಎನ್.ಐ.ಎಸ್.ಎಂ ಪ್ರಮಾಣೀಕರಣ ಕಾರ್ಯಕ್ರಮ, ತರಬೇತಿ, ಕಾರ್ಯಾಗಾರ ಮತ್ತು ಶೈಕ್ಷಣಿಕ ಉಪಕ್ರಮಗಳು, ಹಣಕಾಸು ಸಾಕ್ಷರತೆ, ಹಣ ಹೂಡಿಕೆದಾರರ ಜಾಗೃತಿ ಮತ್ತು ಉದ್ಯಮ-ಆಧಾರಿತ ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವ ಗುರಿ ಹೊಂದಿದೆ.



ಈ ಪಾಲುದಾರಿಕೆಯು ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾವಕಾಶಗಳನ್ನು ಮತ್ತು ಹಣಕಾಸು ಸೇವಾ ವಲಯದಲ್ಲಿ ಹೆಚ್ಚಿನ ಮಾನ್ಯತೆ ನೀಡುವುದು ಈ ಒಪ್ಪಂದದ ಮುಖ್ಯ ಉದ್ದೇವಾಗಿದೆ.

ಜೆಎಸ್ಸೆಸ್ ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ, ಬಿಬಿಎ ವಿಭಾಗದ ಸಹಾಯಕ ಪ್ರಾಧ್ಯಾಪಕ ಅವಿನಾಶ ಹೊಳಿಹೊಸೂರ ಇದ್ದರು.

ಸಂಸದರಿಂದ ಅಶ್ಲೀಲ ಪದ ಬಳಕೆ: ಬಿಜೆಪಿ ಪ್ರತಿಭಟನೆ

◆ **ಬಳ್ಳಾರಿ:** ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕಳಪೆಯಾಗಿರುವುದನ್ನು ಪ್ರಶ್ನಿಸಿದ ಸಾರ್ವಜನಿಕರಿಗೆ ಸಂಸದ ಈ.ತುಕಾರಾಂ ಅಶ್ಲೀಲ ಪದ ಬಳಕೆ ಮಾಡಿರುವ ಕ್ರಮ ಖಂಡಿಸಿ ಇಲ್ಲಿನ ಬಿಜೆಪಿ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿ, ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ನಗರದ ಹೃದಯಭಾಗ ರಾಯಲ್ ವೃತ್ತದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ ಅವರ ನೇತೃತ್ವದಲ್ಲಿ ಜಮಾಯಿಸಿದ ನೂರಾರು ಕಾರ್ಯಕರ್ತರು ನಾನಾ ಘೋಷಣೆಗಳನ್ನು ಕೂಗಿ, ಸಂಸದರ ಭಾವಚಿತ್ರ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅವರು ಮಾತನಾಡಿ, ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕಳಪೆಯಾಗಿರುವುದನ್ನು ಗಮನಿಸಿದ ಸ್ಥಳೀಯರು ಸಂಸದ ಈ.ತುಕಾರಾಂ ಅವರನ್ನು



ಸಾರ್ವಜನಿಕರು ಪ್ರಶ್ನಿಸಿದ್ದು, ಈ ವೇಳೆ ಸಂಸದ ಈ. ತುಕಾರಾಂ, ಅಶ್ಲೀಲ ಪದಗಳನ್ನೂ ಬಳಸಿ ಅವರನ್ನು ನಿಂದಿಸಿ ಅಪಮಾನ ಮಾಡಿದ್ದಾರೆ ಇದು ಸರಿಯಲ್ಲ ಎಂದರು.

ಡಾನಾಪುರ ಬಳಿ ವ್ಯಕ್ತಿಯೊಬ್ಬ ರಸ್ತೆ ಕಳಪೆ ಕಾಮಗಾರಿ ಕುರಿತು ಪ್ರಶ್ನಿಸಿ, ವಿಡಿಯೋ ಮಾಡಿದ್ದ ಯುವಕನ ಎದುರೇ ಅಶ್ಲೀಲ ಪದ ಪದ ಬಳಕೆ ಮಾಡುವ ಮೂಲಕ ಅಪಮಾನ ಮಾಡಿದ್ದಾರೆ. ಸ್ಥಳಕ್ಕೆ ವಿಡಿಯೋ ಮಾಡಿದ ರೈತ ಮುಖಂಡರನ್ನು ಕರೆಸಿ, ಅಶ್ಲೀಲ ಪದಗಳನ್ನೂ ಬಳಕೆ ಮಾಡಿ ಇಡೀ ಮಾನವ ಕುಲಕ್ಕೆ ಅಪಮಾನ ಮಾಡಿದ್ದಾರೆ. ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತ, ಬಿಜೆಪಿ ನಗರ ಘಟಕದ ಅಧ್ಯಕ್ಷ ಜಿ.ವೆಂಕಟರಮಣ, ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಎಸ್.ಗುರುಲಿಂಗನಗೌಡ, ರಾಜ್ಯ ಬಿಜೆಪಿ ಕಾರ್ಯದರ್ಶಿ ಕೆ.ಎಸ್.ದಿವಾಕರ್, ಪಾಲಿಕೆ ಸದಸ್ಯರಾದ ಸುರೇಖಾ ಮಲ್ಲನಗೌಡ, ಕೆ.ಹನುಮಂತಪ್ಪ, ಹನುಮಂತ ಗುಡಿಗಂಟೆ, ಕೆ.ಎಸ್.ಅಶೋಕ ಕುಮಾರ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಹಂಪಿ ರಮಣ, ಮುಖಂಡರಾದ ಡಾ.ಅರುಣಾ ಕಾಮಿನೇನಿ, ಸಿದ್ದೇಶ್ ಉಳುರ್, ಓಂ ಪ್ರಕಾಶ್, ಹನುಮೇಶ ಉಪ್ಪಾರ, ಸೋಮಶೇಖರ್ ಗೌಡ, ಸೇರಿದಂತೆ ಇತರರಿದ್ದರು.

ನಿವೃತ್ತ ಎಂಜಿನಿಯರ್ ನಿವಾಸಗಳ ಮೇಲೆ ಲೋಕಾ ದಾಳಿ

◆ **ಕಲಬುರಗಿ:** ಆದಾಯ ಮೀರಿದ ಆಸ್ತಿ ಗಳಿಕೆ ಆರೋಪದ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ಇಲಾಖೆಯ ನಿವೃತ್ತ ಎಂಜಿನಿಯರ್ ಸೂಪರಿಂಟೆಂಡೆಂಟ್ ಮಾಣಿಕ್ ಕನಕಟ್ಟಿ ಅವರಿಗೆ ಸೇರಿದ ಐದು ಪ್ರತ್ಯೇಕ ಸ್ಥಳಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಬೆಳ್ಳಂಬೆಳಗ್ಗೆ ಬೃಹತ್ ದಾಳಿ ನಡೆಸಿದ್ದಾರೆ.





ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ದರಾಜು ಸಿ.ಅವರ ನೇರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ. ಸೂರ್ಯೋದಯಕ್ಕೂ ಮುನ್ನವೇ ಅಖಾಡಕ್ಕಿಳಿದ ಅಧಿಕಾರಿಗಳ ಐದು ಪ್ರತ್ಯೇಕ ತಂಡಗಳು, ಆರೋಪಿತ ಅಧಿಕಾರಿಯ ಮನೆ ಹಾಗೂ ವಾಣಿಜ್ಯ ಸಂಕೀರ್ಣಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿ ಶಾಕ್ ನೀಡಿವೆ.

ದಾಳಿ ನಡೆದ ಸ್ಥಳಗಳ ವಿವರ: ಅಧಿಕಾರಿಗಳು ಕಲಬುರಗಿಯ ಗೋದುತಾಯಿ ನಗರದ 2ನೇ ಕ್ರಾಸ್‌ನಲ್ಲಿರುವ ಮಾಣಿಕ್ ಕನಕಟ್ಟಿ ಅವರ ಎರಡು ನಿವಾಸಗಳು, ಬೀದರ್ ಜಿಲ್ಲೆಯ ಹಳ್ಳಿಖೇಡ (ಬಿ) ಗ್ರಾಮದಲ್ಲಿರುವ ಸ್ವಗೃಹ ಮತ್ತು ತೋಟದ ಮನೆ ಹಾಗೂ ಹುಮ್ನಾಬಾದ್‌ನಲ್ಲಿರುವ ಎರಡು ಬೃಹತ್ ವಾಣಿಜ್ಯ ಕಾಂಪ್ಲೆಕ್ಸ್‌ಗಳ ಮೇಲೆ ದಾಳಿ ನಡೆಸಿ ಪರಿಶೀಲಿಸುತ್ತಿದ್ದಾರೆ.

ನಿವೃತ್ತ ಅಧಿಕಾರಿ ಮಾಣಿಕ್ ಕನಕಟ್ಟಿ ಅವರು ತಮ್ಮ ಸೇವಾ ಅವಧಿಯಲ್ಲಿ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳಿಸಿದ್ದಾರೆ ಎಂಬ ಖಚಿತ ದೂರಿನ ಮೇರೆಗೆ ನ್ಯಾಯಾಲಯದ ವಾರಂಟ್ ಪಡೆದು ಈ ಕ್ರಮ ಕೈಗೊಳ್ಳಲಾಗಿದೆ. ಸದ್ಯ ಸ್ಥಳದಲ್ಲಿ ಮೊಕ್ಕಾಂ ಹೂಡಿರುವ ಅಧಿಕಾರಿಗಳು ನಗದು, ಚಿನ್ನಾಭರಣ ಹಾಗೂ ಆಸ್ತಿಗೆ ಸಂಬಂಧಿಸಿದ ಪ್ರಮುಖ ದಾಖಲೆಗಳ ತೀವ್ರ ಶೋಧನೆ ನಡೆಸುತ್ತಿದ್ದು, ತನಿಖೆ ಮುಂದುವರಿದಿದೆ.

ಶೋಧನಾ ವೇಳೆ ಪತ್ತೆಯಾದ ಆಸ್ತಿ

ಮಾಣಿಕ್ ಎಸ್.ಕನಕಟ್ಟಿ, ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ ಅವರಿಗೆ ಸಂಬಂಧಿಸಿದಂತೆ ಒಟ್ಟು 05 ಸ್ಥಳಗಳಲ್ಲಿ ಶೋಧನಾ ಕಾರ್ಯ ನಡೆಸಿದ್ದು, ಶೋಧನಾ ವೇಳೆ ಕೆಳಕಂಡ ಆಸ್ತಿಗಳು ಪತ್ತೆಯಾಗಿವೆ. 5 ವೇಶನಗಳು, 3 ವಸತಿ ಮನೆಗಳು, 1 ವಾಣಿಜ್ಯ ಸಂಕೀರ್ಣ 70,00,000 ರೂ. ಮೌಲ್ಯದ ಕೃಷಿ ಜಮೀನು ಒಟ್ಟು ಸ್ಥಿರ ಆಸ್ತಿಯ ಮೌಲ್ಯ: 3,14,34,000 ರೂ. ಆಗಿದೆ. 1,26,810 ನಗದು, 37,92,250 ಮೌಲ್ಯದ ಚಿನ್ನಾಭರಣಗಳು 49,15,000 ಮೌಲ್ಯದ ವಾಹನಗಳು, 50,00,000 ಮೌಲ್ಯದ ಬ್ಯಾಂಕ್ ಠೇವಣಿಗಳು/ಉಳಿತಾಯ 16,00,050 ಮೌಲ್ಯದ ಇತರೆ ವಸ್ತುಗಳು ಒಟ್ಟು ಚರ ಆಸ್ತಿಯ ಮೌಲ್ಯ: 1,54,34,110 ರೂ. ಆಗಿದೆ. ಒಟ್ಟು 4.94 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಬಸ್-ಕ್ಯಾಂಟರ್ ನಡುವೆ ಭೀಕರ ಅಪಘಾತ

ಮೂವರ ಸಾವು: 27ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಾಯ

◆ **ಚಡಚಣ:** ಚಡಚಣ ತಾಲೂಕಿನಲ್ಲಿ ಒಂದೇ ದಿನದ ಅಂತರದಲ್ಲಿ ಮತ್ತೊಂದು ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಕೆಎಸ್‌ಆರ್ ಟಿಸಿ ಬಸ್ ಹಾಗೂ ಸಿಮೆಂಟ್ ಸಾಗಿಸುತ್ತಿದ್ದ ಕ್ಯಾಂಟರ್ ನಡುವೆ ನಡೆದ ಮುಖಾಮುಖಿ ಡಿಕ್ಕಿಯಲ್ಲಿ ಮೂವರು ಮೃತಪಟ್ಟಿದ್ದು, 27ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ.

ರಾಜ್ಯ ಹೆದ್ದಾರಿ 41ರ ಬರಡೋಲ ಗ್ರಾಮ ಹಾಗೂ ಲೋಣಿ ಕ್ರಾಸ್ ನಡುವೆ ಚಡಚಣ ಪೊಲೀಸ್ ಸರಹದ್ದಿನಲ್ಲಿ ಮಂಗಳವಾರ ಬೆಳಗ್ಗೆ ಈ ದುರ್ಘಟನೆ ನಡೆದಿದೆ. ವಿಜಯಪುರ ಡಿಪೋದ ಕೆಎ 28 ಎಫ್. 2468 ನಂಬರಿನ ಕೆಎಸ್‌ಆರ್‌ಟಿಸಿ ಬಸ್ ಚಡಚಣದಿಂದ ಬದಾಮಿ ಕಡೆಗೆ ಸುಮಾರು 50 ಪ್ರಯಾಣಿಕರನ್ನು ಹೊತ್ತು ಸಾಗುತ್ತಿತ್ತು. ಇದೇ ವೇಳೆ ಝಳಕಿ ಕಡೆಯಿಂದ ಚಡಚಣಕ್ಕೆ ಬರುತ್ತಿದ್ದ ಕೆಎ 28 ಎಬಿ 6792 ನಂಬರಿನ ಸಿಮೆಂಟ್ ತುಂಬಿದ ಕ್ಯಾಂಟರ್‌ನ ಟೈರ್ ಏಕಾಏಕಿ ಸ್ಫೋಟಗೊಂಡ ಪರಿಣಾಮ ಕ್ಯಾಂಟರ್ ಚಾಲಕನ ನಿಯಂತ್ರಣ ತಪ್ಪಿ ಎದುರಿಗೆ ಬರುತ್ತಿದ್ದ ಬಸ್‌ಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ.



ಅಪಘಾತದ ತೀವ್ರತೆಗೆ ಬಸ್ ಚಾಲಕ ಹಣಮಂತ ಚಲವಾದಿ(38) ನಿಡಗುಂದಿ, ಕ್ಯಾಂಟರ್ ಚಾಲಕ ಅಶೋಕ ಮಹಾದೇವ ಉಟಗಿ (32) ಹಾಗೂ ಅವರ ಪತ್ನಿ ರಾಧಾಬಾಯಿ ಅಶೋಕ ಉಟಗಿ (28), ಹಾವಿನಾಳ ಗ್ರಾಮದ ನಿವಾಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಘಟನೆಯಲ್ಲಿ ಬಸ್‌ನಲ್ಲಿದ್ದ ಎಲ್ಲ ಪ್ರಯಾಣಿಕರು ಗಾಯಗೊಂಡಿದ್ದು, ಅವರಲ್ಲಿ ಚಡಚಣ ಆರೋಗ್ಯ ಕೇಂದ್ರದಲ್ಲಿ 6 ಜನ ಪುರಷರು, 18 ಮಹಿಳೆಯರು ಹಾಗೂ 3 ಮಕ್ಕಳು ಸೇರಿದಂತೆ ಒಟ್ಟು 27 ಜನರಿಗೆ ಪ್ರಾಥಮಿಕ ಉಪಚಾರ ಮಾಡಲಾಯಿತು. ಅದರಲ್ಲಿ ಮೂರು ಜನರ ಸ್ಥಿತಿ ಗಂಭೀರವಾಗಿದ್ದು, ಗಂಭೀರ ಗಾಯಗೊಂಡವರನ್ನು ಹೆಚ್ಚಿನ ಚಿಕಿತ್ಸೆಗೆ ವಿಜಯಪುರ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ.

ಅಪಘಾತದ ಮಾಹಿತಿ ತಿಳಿಯುತ್ತಿದ್ದಂತೆ ಚಡಚಣ ಪೊಲೀಸ್ ಠಾಣೆಯ ಪಿಎಸ್‌ಐ ಸೋಮೇಶ ಗೆಜ್ಜಿ, ವೃತ್ತ ನಿರೀಕ್ಷಕ ಪರಶುರಾಮ ಮನಗೂಳಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಚಡಚಣ ಸಮುದಾಯ ಆರೋಗ್ಯ ಕೇಂದ್ರಕ್ಕೆ ರವಾನಿಸಲಾಗಿದ್ದು, ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.

ಜೂ. 15ರಂದು ಮರಗೂರ ಸಕ್ಕರೆ ಕಾರ್ಖಾನೆ ಸಮೀಪ ರಾಷ್ಟ್ರೀಯ ಹೆದ್ದಾರಿ ಯಲ್ಲಿ ನಡೆದ ಅಪಘಾತದಲ್ಲಿ ಇಬ್ಬರು ಮೃತ ಪಟ್ಟಿದ್ದ ಬೆನ್ನಲ್ಲೇ ಈ ದುರ್ಘಟನೆ ಸಂಭವಿಸಿರುವುದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಅಭಿವೃದ್ಧಿ ಕಾರ್ಯಗಳು ತೃಪ್ತಿ ತಂದಿವೆ

• ಶಿರಸಿ: ನಮ್ಮ ಆಡಳಿತದ ಅವಧಿಯಲ್ಲಿ ಮಾರಿಕಾಂಬಾ ದೇವಸ್ಥಾನದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದು, ಕೈಗೊಂಡ ಕಾರ್ಯಗಳು ನಮಗೆ ಸಂಪೂರ್ಣ ತೃಪ್ತಿ ತಂದಿವೆ ಎಂದು ಮಾರಿಕಾಂಬಾ ದೇವಸ್ಥಾನದ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.ದೇವಾಲಯದ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಅವಧಿಯಲ್ಲಿ ಅಂದಾಜು 10 ಕೋಟಿ ರೂ. ಮೊತ್ತದ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗಿದೆ ಎಂದರು. ಅನ್ನದಾಸೋಹ ಭವನಕ್ಕೆ ನೀರಿನ ಸಂಪ್ ಹಾಗೂ ಶೆಡ್ ನಿರ್ಮಾಣ, ಚಂದ್ರಶಾಲೆಯ ಸುತ್ತಲೂ ತಾಮ್ರದ ತಗಡಿನ ಹೊದಿಕೆ, ಕಾಯಿ ಅಂಗಡಿ ಜಾಗವನ್ನು ವಶಕ್ಕೆ ಪಡೆದು ವಾಣಿಜ್ಯ ಸಂಕೀರ್ಣ ನಿರ್ಮಾಣ ಹಾಗೂ ಪ್ರವೇಶದ್ವಾರದ ಬಳಿ ರಸ್ತೆ ವಿಸ್ತರಣೆ ಮಾಡಲಾಗಿದೆ. ನ್ಯಾಯಾಲಯದ ವ್ಯಾಜ್ಯಗಳ ಶೀಘ್ರ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ದೇವಾಲಯದ ವ್ಯವಸ್ಥೆಯನ್ನು ಗಣಕೀಕರಣಗೊಳಿಸಲಾಗಿದೆ. ಸುರಕ್ಷತೆಗಾಗಿ ಸಿಸಿಟಿವಿ, ಮೆಟಲ್ ಡಿಟೆಕ್ಟರ್ ಅಳವಡಿಕೆ ಹಾಗೂ ಭಕ್ತರಿಗಾಗಿ ಯಾತ್ರಿ ನಿವಾಸವನ್ನು ಹಸ್ತಾಂತರಿಸಿಕೊಳ್ಳಲಾಗಿದೆ ಎಂದು ಅವರು ವಿವರ ನೀಡಿದರು.ಸುದ್ದಿಗೋಷ್ಠಿಯಲ್ಲಿ ದೇವಸ್ಥಾನದ ಉಪಾಧ್ಯಕ್ಷ ಸುದೀಶ ಜೋಗಳೇಕರ್, ಧರ್ಮದರ್ಶಿಗಳಾದ ಸುಧೀರ್ ಹಂದ್ರಾಳ, ಶಿವಾನಂದ ಶೆಟ್ಟಿ ಹಾಗೂ ವತ್ಸಲಾ ಹೆಗಡೆ ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

• ಕಾರವಾರ: 110/33/11 ಕೆ.ವಿ ಗಣೇಶಗುಡಿ ಸಬ್ ಸ್ಟೇಷನ್‌ನಲ್ಲಿ ನಿರ್ವಹಣಾ ಕಾರ್ಯದ ನಿಮಿತ್ತ ಜೂ 18 ಬೆಳಗ್ಗೆ 9 ರಿಂದ ಸಂಜೆ 6ರ ವರೆಗೆ ಜೋಯಿಡಾ, ಪ್ರಧಾನಿ, ನಂದಿಗದ್ದಾ, ನಾಗೋಡಾ, ಕಾತೇಲಿ (ಕುಂಬಾರವಾಡ), ಗಂಗೋಡಾ, ಅಣಶಿ, ಉಳವಿ ಹಾಗೂ ಅವೇಡಾ (ಇಳವಾ) ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಎಲ್ಲ ಗ್ರಾಮಗಳು, ಅವೇಡಾ, ಜಗಲಪೇಟ ಹಾಗೂ ಶಿಂಗರಗಾಂವ್ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ ದಾಂಡೇಲಿಯ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಕಾಣೆ

• ಕಾರವಾರ: ಸಪ್ರರಾಜ ಅಲಿ ಅಹಮ್ಮದ (26) ಹಾಲಿ ಸಂಕೇತ ಹೋಟೆಲ್ ಬಿಲ್ಡಿಂಗ್, ಕಾಜುಭಾಗ, ಕಾರವಾರದಲ್ಲಿ ವಾಸವಾಗಿದ್ದು, ಜೂ.14ರಂದು ಸಂಜೆ 4 ಗಂಟೆಗೆ ಮನೆಯಿಂದ ಹೋದವನು ನಂತರ ಮನೆಗೆ ಬಾರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾನೆ. ಚಹರೆ: ಗೋಧಿ ವರ್ಣ, ಸಾಧಾರಣ ತೆಳ್ಳನೆಯ ಮೈಕಟ್ಟು, ದುಂಡನೆಯ ಮುಖ, 5.6 ಅಡಿ ಎತ್ತರ, ನೀಲಿ ಬಣ್ಣದ ಆಫ್ ತೋಳಿನ ಶರ್ಟ್ ಮತ್ತು ತಿಳಿ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾನೆ ಹಾಗೂ ಕನ್ನಡ, ಹಿಂದಿ, ಇಂಗ್ಲೀಷ್, ಅಸ್ಸಾಮಿ ಮತ್ತು ಕೊಂಕಣಿ ಭಾಷೆ ಮಾತನಾಡುತ್ತಾನೆ. ಈತನ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಇದ್ದಲ್ಲಿ ಕಾರವಾರ ಶಹರ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಕಾರವಾರ ಶಹರ ಪೊಲೀಸ್ ಠಾಣೆಯ ತನಿಖಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61199	68699
ಬಿಳಿಗೋಟು	23999	36099
ಕೆಂಪುಗೋಟು	24401	35299
ಬೆಟ್ಟೆ	32099	49099
ರಾಶಿ	50000	53001
ಚಾಲಿ	44009	48815

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	54399	57179
ರಾಶಿ	46406	53819
ಬೆಟ್ಟೆ	37400	48769
ಕೆಂಪುಗೋಟು	22899	37299
ಬಿಳಿಗೋಟು	16899	37411
ಚಾಲಿ	36199	48499
ಕೋಕಾ	16000	32699
ಕಾಳುಮೆಣಸು	50119	67299



ಕಾರವಾರ: ಮಂಗಳವಾರ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ನಡೆದ, ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಸಭೆಯಲ್ಲಿ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್,ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ, ಜಿ.ಪಂ. ಸಿಇಒ ಡಾ.ದಿಲೀಶ್ ಶಶಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಮತ್ತಿತರರಿದ್ದರು.

ಬಸ್ ಪಾಸ್: ವಿದ್ಯಾರ್ಥಿಗಳ ಪರದಾಟ

• ಗೋಕರ್ಣ: ಸರ್ಕಾರ ಈ ವರ್ಷದಿಂದ ಶಾಲಾ- ಕಾಲೇಜು ಮಕ್ಕಳಿಗೆ ಉಚಿತ ಬಸ್ ಪಾಸ್ ನೀಡುತ್ತಿದ್ದು ಆದರೆ ಈ ಭಾಗದ ವಿದ್ಯಾರ್ಥಿಗಳು ಪಾಸ್ ಪಡೆಯಲು ದೂರದ ಕುಮಟಾ ಅಥವಾ ಅಂಕೋಲಕ್ಕೆ ತೆರಳಬೇಕಿದ್ದು,ಇದರ ಬದಲು ಇಲ್ಲಿನ ಬಸ್ ನಿಲ್ದಾಣದ ಕಚೇರಿಯಲ್ಲಿ ವಿತರಿಸುವ ವ್ಯವಸ್ಥೆ ಆಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಪ್ರಸ್ತುತ ಆನ್‌ಲೈನ್ ಮೂಲಕ ಪಾಸ್‌ಗೆ ಅರ್ಜಿಸಲ್ಲಿಸಿ ಬೇಕಿದೆ. ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಹಾಕಿದ ಬಳಿಕ ಪಾಸ್‌ನ್ನು ವಿದ್ಯಾರ್ಥಿಗಳು ಖಾಸಗಿ ಸಹಭಾಗಿತ್ವದ ಕರ್ನಾಟಕ ಒನ್ ಕೇಂದ್ರದಲ್ಲಿ ಪಡೆಯಬೇಕಿದೆ. ತಾಲೂಕಿನಲ್ಲಿ ಮಾತ್ರ ಈ ಕೇಂದ್ರವಿರುವುದರಿಂದ ಇಲ್ಲಿನ ವಿದ್ಯಾರ್ಥಿಗಳು ಅಂಕೋಲಾ ಅಥವಾ ಕುಮಟಾಕ್ಕೆ ತೆರಳಬೇಕಾಗಿದೆ. ತಾಲೂಕಾ ಕೇಂದ್ರಗಳಲ್ಲಿ ಬೆಳಗ್ಗಿಯಿಂದ ಸಂಜೆವರೆಗೂ ನಿಂತು ಪಾಸ್ ಪಡೆಯಲು ಕಾಯಬೇಕಾಗುತ್ತಿದ್ದು ಇಲ್ಲಿನ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿದೆ. ಈ ಬಗ್ಗೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಚೇರಿ ಅಧಿಕಾರಿಗಳನ್ನು ವಿಚಾರಿಸಿದಾಗ ಜಿಲ್ಲಾಧಿಕಾರಿ ಕಚೇರಿಯ ಸೇವಾಸಿಂಧು ವಿಭಾಗದವರಿಗೆ ಗೋಕರ್ಣದಲ್ಲಿಕರ್ನಾಟಕ ಒನ್ ಕೇಂದ್ರ ತೆರೆದು ಪಾಸ್ ವಿತರಿಸುವಂತೆ ಪತ್ರ ಬರೆದಿದ್ದೇವೆ ಎಂದಿದ್ದಾರೆ. ಕಳೆದ ಹಲವು ದಿನಗಳಿಂದ ಸೇವಾ ಸಿಂಧು ಪೋರ್ಟಲ್ ಸರ್ವರ್ ಸಮಸ್ಯೆಯಿಂದ ಅರ್ಜಿ ಸಲ್ಲಿಸಲು ತೊಡಕಾಗುತ್ತಿದ್ದು ಕಳೆದ ನಾಲ್ಕು ದಿನಗಳಿಂದ ಸಂಪೂರ್ಣ ನಿಂತಿದ್ದು, ಮಂಗಳವಾರ ಒಂದಷ್ಟು ಅರ್ಜಿಗಳು ಅಪ್‌ಲೋಡ್ ಆಗಿವೆ. ಒಟ್ಟಾರೆ ಶೈಕ್ಷಣಿಕ ವರ್ಷ ಆರಂಭವಾದರೂ ಬಸ್‌ನಲ್ಲಿ ತೆರಳುವ ವಿದ್ಯಾರ್ಥಿಗಳಿಗೆ ಪಾಸ್‌ಗಾಗಿ ಪರದಾಟ ಮುಂದುವರಿದಿದೆ.



ಶಿರಸಿ:ದೇವಾಲಯದ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾರಿಕಾಂಬಾ ದೇವಸ್ಥಾನದ ಅಧ್ಯಕ್ಷ ರವೀಂದ್ರ ನಾಯ್ಕ ಮಾತನಾಡಿದರು.ಈ ವೇಳೆ ದೇವಸ್ಥಾನದ ಉಪಾಧ್ಯಕ್ಷ ಸುದೀಶ ಜೋಗಳೇಕರ್, ಧರ್ಮದರ್ಶಿಗಳಾದ ಸುಧೀರ್ ಹಂದ್ರಾಳ, ಶಿವಾನಂದ ಶೆಟ್ಟಿ ಹಾಗೂ ವತ್ಸಲಾ ಹೆಗಡೆ ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಹೇಳಿಕೆ

ಜೂ.20ರಿಂದ ಮತದಾರರ ಪಟ್ಟಿ ಪರಿಷ್ಕರಣೆ

• ಕಾರವಾರ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯು ಜೂನ್ 20 ರಿಂದ ನಡೆಯಲಿದ್ದು, ಜೂ.30 ರಿಂದ ಜು.29 ರವರೆಗೆ ಮತಗಟ್ಟೆ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮತದಾರರಿಗೆ ಪ್ರಿ ಫಿಲ್ಡ್ ಎನ್ಯುಮರೇಷನ್ ಫಾರ್ಮ್‌ಗಳನ್ನು ನೀಡಲಿದ್ದು, ನಿಗದಿತ ಅವಧಿಯಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲು ಸಾರ್ವಜನಿಕರು ಅಗತ್ಯ ಸಹಕಾರವನ್ನು ನೀಡುವಂತೆ ಜಿಲ್ಲಾ ಚುನಾವಣಾಧಿಕಾರಿ ಮತ್ತು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮತಗಟ್ಟ ಅಧಿಕಾರಿಗಳು ಪ್ರಿ-ಫಿಲ್ಡ್ ಎನ್ಯುಮರೇಷನ್ ಫಾರ್ಮ್‌ಗಳನ್ನು ನೀಡಲು ಒಂದು ಬಾರಿ ಮತ್ತು ಭರ್ತಿ ಮಾಡಿದ ಅರ್ಜಿಗಳನ್ನು ಸಂಗ್ರಹಿಸಲು ಮೂರು ಬಾರಿ ಮನೆಗೆ ಭೇಟಿ ನೀಡಲಿದ್ದು,ಬಿಎಲ್‌ಒಗಳು ತಮ್ಮ ಮನೆಗೆ ಬಂದಾಗ ಫಾರ್ಮ್‌ಗಳನ್ನು ಭರ್ತಿ ಮಾಡಿ ಅವರಿಗೆ ಮರಳಿ ನೀಡುವುದು ಅತ್ಯಂತ ಕಡ್ಡಾಯವಾಗಿದೆ. ಫಾರ್ಮ್‌ನ್ನು ಮರಳಿ ನೀಡದಿದ್ದರೆ, ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗುವುದಿಲ್ಲ. ಎರಡು ಫಾರ್ಮ್‌ಗಳಲ್ಲಿ ಒಂದನ್ನು ಬಿಎಲ್‌ಒಗೆ ನೀಡಿ, ಮತ್ತೊಂದನ್ನು ಸಾರ್ವಜನಿಕರು ತಮ್ಮ ರೆಫರೆನ್ಸ್‌ಗಾಗಿ ಇಟ್ಟುಕೊಳ್ಳಬಹುದು.

ಪ್ರಿ-ಫಿಲ್ಡ್ ಅರ್ಜಿಯಲ್ಲಿ ಮತದಾರರ ಹೆಸರು, ಎಪಿಕ್ ಸಂಖ್ಯೆ, ವಿಳಾಸ, ಭಾಗದ ಸಂಖ್ಯೆ, ಕ್ರಮ ಸಂಖ್ಯೆ ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಫೋಟೋ ಮುದ್ರಿತವಾಗಿದ್ದು,



- ಕರಡು ಮತದಾರರ ಪಟ್ಟಿಯನ್ನು ಆಗಸ್ಟ್ 5 ರಂದು ಪ್ರಕಟ
- ಅಕ್ಟೋಬರ್ 7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟ

ಈ ಎರಡು ಎನ್ಯುಮರೇಷನ್ ಪ್ರತಿಗಳಿಗೆ ಬಿಎಲ್‌ಒ ಮತ್ತು ಮತದಾರರು ಅಥವಾ ಅವರ ಕುಟುಂಬದ ಸದಸ್ಯರು ಕಡ್ಡಾಯವಾಗಿ ಸಹಿ ಮಾಡಬೇಕಾಗುತ್ತದೆ ಹಾಗೂ ತಮ್ಮ ಇತ್ತೀಚಿನ ಕಲರ್ ಭಾವಚಿತ್ರವನ್ನು ನೀಡಬೇಕು. ಎನ್ಯುಮರೇಷನ್ ಫಾರಂ ಜೊತೆಯಲ್ಲಿ ಯಾವುದೇ ದಾಖಲೆಗಳನ್ನು ನೀಡುವ ಅಗತ್ಯವಿಲ್ಲ ಎಂದರು.

ಅಲ್ಲದೇ ಸದರಿ ಪ್ರಕ್ರಿಯೆಗೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು, ವಿಧಾನಸಭಾ ಕ್ಷೇತ್ರವಾರು ನೋಡಲ್ ಅಧಿಕಾರಿಗಳನ್ನು ಹಾಗೂ ಹೋಬಳಿ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದರು.

ಈಗಾಗಲೇ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಇದುವರೆಗೆ ಬೂತ್ ಮಟ್ಟದ 2,822 ಏಜೆಂಟರನ್ನು ನೇಮಕ ಮಾಡಿರುತ್ತಾರೆ. ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಟ್ಟು 12,30,016 ಮತದಾರರಿದ್ದು, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು , ಪೂರ್ವ ತಯಾರಿಗಾಗಿ ಮತದಾರರ ವಿವರಗಳನ್ನು ಹೋಲಿಸಿ ಶೇ.93.47% (ಮ್ಯಾಪಿಂಗ್ ಮಾಡಿದ್ದು) ಖಚಿತಪಡಿಸಿಕೊಳ್ಳಲಾಗಿದೆ. ಮತದಾರರ ಪಟ್ಟಿ ವಿಶೇಷಸಮಗ್ರ ಪರಿಷ್ಕರಣೆ ಆರಂಭವಾಗುವವರೆಗೆ ಮ್ಯಾಪಿಂಗ್ ಪ್ರಕ್ರಿಯೆ ಮುಂದುವರೆಯಲಿದೆ ಎಂದರು.

ಅಧಿಕಾರಿಗಳ ನೇಮಕ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕಾಗಿ ಜಿಲ್ಲೆಯಲ್ಲಿ 6 ಮತದಾರರ ನೋಂದಣಾಧಿಕಾರಿಗಳು, 12 ಸಹಾಯಕ ಮತದಾರರ ನೋಂದಣಾಧಿಕಾರಿಗಳು, 1,445 ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಹಾಗೂ 144 ಬಿಎಲ್‌ಒ ಮೇಲ್ವಿಚಾರಕರನ್ನು ನೇಮಿಸಲಾಗಿದೆ.

ಕರಡು ಮತದಾರರ ಪಟ್ಟಿಯನ್ನು ಆಗಸ್ಟ್ 5 ರಂದು ಪ್ರಕಟಿಸಲಿದ್ದು, ಸೆಪ್ಟಂಬರ್ 4 ರ ವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದು, ಅಕ್ಟೋಬರ್ 3 ರವರೆಗೆ ಸೂಚನೆ/ಹಕ್ಕು ಮತ್ತು ಆಕ್ಷೇಪಣೆಗಳನ್ನು ವಿಲೇವಾರಿ ಮಾಡಿ, ಅಕ್ಟೋಬರ್ 7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದರು.

ಸಾರ್ವಜನಿಕರಿಗೆ ಎನ್ಯುಮರೇಷನ್ ಫಾರಂ ಭರ್ತಿ ಮಾಡುವುದು ಸೇರಿದಂತೆ ಮತದಾರರ ಪಟ್ಟಿಗಳ ಸಮಗ್ರ ಪರಿಷ್ಕರಣೆ ಕುರಿತಂತೆ ಯಾವುದೇ ಗೊಂದಲಗಳಿದ್ದರೆ ತಮ್ಮ ಮತಗಟ್ಟೆ ವ್ಯಾಪ್ತಿಯ ಬಿಎಲ್‌ಒ ಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಇದ್ದರು.

ಮರಗಳ ತೆರವಿಗೆ ಕ್ರಮ ಕೈಗೊಳ್ಳಲು ಆಗ್ರಹ


• ಅಂಕೋಲಾ: ತಾಲೂಕಿನ ಶಿರಕುಳಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡದ ಹಿಂಬದಿಯಲ್ಲಿ ಅಪಾಯಕಾರಿ ಸ್ಥಿತಿಯಲ್ಲಿರುವ ಮಣ್ಣಿನ ದಿಬ್ಬ ಮತ್ತು ಮರಗಳ ತೆರುವಿಗೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ಗುಡ್ಡದ ಮಣ್ಣಿನ ದಿಬ್ಬ ಇಳಿಜಾರು ಸ್ಥಿತಿಯಲ್ಲಿದ್ದು ಕುಸಿತವಾದರೆ ಶಾಲಾ ಕಟ್ಟಡಕ್ಕೆ ಅಪ್ಪಳಿಸುವ ಸಾಧ್ಯತೆಯಿದೆ ಅದೇ ರೀತಿ ಶಾಲಾ ಹಿಂಬಾಗದಲ್ಲಿ ಕೆಲವು ಮರಗಳು ಅಪಾಯಕಾರಿ ಸ್ಥಿತಿಯಲ್ಲಿದ್ದು ಅವುಗಳನ್ನು ಪರಿಶೀಲಿಸಿ ತೆರುವುಗೊಳಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಆಗ್ರಹ ಗ್ರಾಮಸ್ಥರಿಂದ ಕೇಳಿ ಬಂದಿದೆ.

ಶಾಲಾ ಆವರಣದ ಹಿಂಬದಿಯಲ್ಲಿ ದಟ್ಟ ಹಿಂಡು ಬೆಳೆದುಕೊಂಡಿದ್ದು ವಿಷಜಂತುಗಳು ಮತ್ತು ಪ್ರಾಣಿಗಳಿಗೆ ಆಶ್ರಯ ತಾಣವಾದಂತಾಗಿದೆ ಅಂಗನವಾಡಿಯ ಪುಟ್ಟ ಮಕ್ಕಳು ಸೇರಿದಂತೆ ಶಾಲಾ ವಿದ್ಯಾರ್ಥಿಗಳು ಆವರಣದಲ್ಲಿ ಶೈಕ್ಷಣಿಕ ಮತ್ತು ಆಟೋಟ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಅವರ ಸುರಕ್ಷತೆಗೆ ಗಮನ ಹರಿಸುವ ಅಗತ್ಯತೆ ಇದೆ ಎಂದು ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

- ಅನಾಹುತ ಸಂಭವಿಸದಂತೆ ಮುಂಜಾಗ್ರತಾ ವಹಿಸಿ

ಯಾವುದೇ ರೀತಿಯ ಅನಾಹುತಗಳು ಸಂಭವಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಿದ್ದು ಶಾಲಾ ಆವರಣ ಹಿಂದೆ ಅಪಾಯಕಾರಿ ಸ್ಥಿತಿಯಲ್ಲಿರುವ ಮಣ್ಣಿನ ದಿಬ್ಬ, ಮರಗಳು ಮತ್ತು ದಟ್ಟ ಹಿಂಡನ್ನು ಆದಷ್ಟು ಬೇಗನೆ ತೆರುವುಗೊಳಿಸಬೇಕು ಶಾಲಾ ಆವರಣದ ಸಮೀಪ ಅಪಾಯಕಾರಿ ಸ್ಥಿತಿಯಲ್ಲಿರುವ ಗುಡ್ಡ ಮತ್ತು ಮರಗಳನ್ನು ತೆರುವುಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳ ಸೂಚನೆಯಿದ್ದು, ಸಂಬಂಧಿಸಿದ ಅಧಿಕಾರಿಗಳು ಈ ದಿಶೆಯಲ್ಲಿ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



ಗಾಂಜಾ ಜಾಲ ನಿರ್ಮೂಲನೆಗೆ ಒತ್ತಾಯ

• ಶಿರಸಿ: ಹಳ್ಳಿಗಳಲ್ಲಿ ಹೆಚ್ಚುತ್ತಿರುವ ಅಕ್ರಮ ಸಾರಾಯಿ ಮಾರಾಟ ಹಾಗೂ ಅಪಾಯಕಾರಿ ಗಾಂಜಾ ಜಾಲವನ್ನು ಸಂಪೂರ್ಣವಾಗಿ ನಿರ್ಮೂಲನೆಗೊಳಿಸುವಂತೆ ಒತ್ತಾಯಿಸಿ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅನಂತಮೂರ್ತಿ ಹೆಗಡೆ ನೇತೃತ್ವದಲ್ಲಿ ಇಲ್ಲಿನ ಸಹಾಯಕ ಆಯುಕ್ತರ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಅನಂತಮೂರ್ತಿ ಹೆಗಡೆ, ಹಳ್ಳಿಗಳಲ್ಲಿ ಸಾರಾಯಿ ಹೆಸರಿನಲ್ಲಿ ವಿಷ ಕುಡಿಸುವ ಕೆಲಸವಾಗುತ್ತಿದ್ದು, ಯುವಕರು ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ. ಇನ್ನು ಒಂದು ತಿಂಗಳೊಳಗೆ ಅಕ್ರಮ ಚಟುವಟಿಕೆಗಳು ನಿಲ್ಲದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಸಾಂತ್ವನ ವೇದಿಕೆಯ ಜ್ಯೋತಿ ಭಟ್ ಮಾತನಾಡಿ, ಡ್ರಗ್ಸ್ ಮಾಫಿಯಾದ ಮೂಲ ಬೇರನ್ನೇ ಪೊಲೀಸ್ ಇಲಾಖೆ ಕಿತ್ತೆಯಬೇಕು ಎಂದರು. ಗಣೇಶ ಕ್ಷತ್ರೀಯ ಬದನಗೋಡ ಮಾತನಾಡಿ, ಆಡಳಿತ ವೈಫಲ್ಯದಿಂದ ಬನವಾಸಿ ಭಾಗದಲ್ಲಿ ಅಕ್ರಮ ಸಾರಾಯಿ ಮತ್ತು ಗಾಂಜಾ ಮಾರಾಟ ಮಿತಿಮೀರಿದೆ ಎಂದು ಆರೋಪಿಸಿದರು.

ಮುಖಂಡ ಮಹಾಂತೇಶ ಹಾದಿಮನೆ ಮಾತನಾಡಿ, ನಗರದ ಉದ್ಯಾನವನಗಳು ಗಾಂಜಾ ಅಡ್ಡೆಗಳಾಗುತ್ತಿದ್ದು, ಚಾಕಲೇಟ್ ಹಾಗೂ ವೈಟ್ನರ್‌ಗಳಲ್ಲಿ ಗಾಂಜಾ ಮಿಶ್ರಣ ಮಾಡುವ ಅಪಾಯಕಾರಿ ಪ್ರವೃತ್ತಿ ಹೆಚ್ಚಿದೆ ಎಂದರು. ತಿಮ್ಮಪ್ಪ ಮಡಿವಾಳ ಸಿದ್ದಾಪುರ ಮಾತನಾಡಿ, ಕಳೆದ ಮೂರು ವರ್ಷಗಳಿಂದ ಹಳ್ಳಿಗಳ ಅಂಗಡಿಗಳಲ್ಲಿ ಸಾರಾಯಿ ಸುಲಭವಾಗಿ ಸಿಗುತ್ತಿದ್ದು, ಕುಟುಂಬಗಳು ಬೀದಿಗೆ ಬರುತ್ತಿವೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯದ ಕಾರಣ ಶಾಸಕ ಭೀಮಣ್ಣ ನಾಯ್ಕ ಅವರ ಮೇಲೆಯೇ ಹೆಚ್ಚಿನ ಜವಾಬ್ದಾರಿಯಿದ್ದು, ಅವರು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದರು.

ಉಷಾ ಹೆಗಡೆ ಮಾತನಾಡಿ, ವಿದ್ಯಾರ್ಥಿಗಳು ವ್ಯಸನಕ್ಕೆ ಬಲಿಯಾಗುತ್ತಿರುವುದು ಆತಂಕಕಾರಿ ಎಂದರು.ಪ್ರತಿಭಟನೆಯಲ್ಲಿ ಪ್ರಮುಖರಾದ ಸುರೇಶ ನಾಯ್ಕ, ಜಿ.ಎಸ್. ಹೆಗಡೆ, ಅನಸೂಯಾ ಹೆಗಡೆ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.



ದೇಶಪಾಂಡೆಗೆ ಸಚಿವ ಸ್ಥಾನ ನೀಡಲು ಒತ್ತಾಯ

• ಯಲ್ಲಾಪುರ: ಈ ಹಿಂದೆ ರಾಜ್ಯ ಕೆಪಿಸಿಸಿ ಅಧ್ಯಕ್ಷರಾಗಿ ,ಸಚಿವರಾಗಿ ಅಪಾರ ಅನುಭವ ಹೊಂದಿರುವ ಉತ್ತರಕನ್ನಡದಿಂದ 9 ಬಾರಿ ಆಯ್ಕೆಯಾದ ಶಾಸಕರೆಂದು ಹೆಗ್ಗಳಿಕೆಯಿರುವ ಆರ್.ವಿ. ದೇಶಪಾಂಡೆಯವರಿಗೆ ನೂತನ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಬ್ಲಾಕ ಕಾಂಗ್ರೆಸ ಮಾಜಿ ಅಧ್ಯಕ್ಷ ಡಿ ಎನ್.ಗಾಂವಕರ ಆಗ್ರಹಿಸಿದರು.

ಅವರು ಮಂಗಳವಾರ ಪಟ್ಟಣದಲ್ಲಿ ಆರ್. ವಿ.ದೇಶಪಾಂಡೆ ಅಭಿಮಾನಿಗಳಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ನೂತನ ಮುಖ್ಯಮಂತ್ರಿಯವರು ಸಚಿವ ಸಂಪುಟದ ಪ್ರಥಮ ಹಂತದಲ್ಲಿಯೇ ದೇಶಪಾಂಡೆಯವರಿಗೆ ಉಪಮುಖ್ಯಮಂತ್ರಿಸ್ಥಾನ ನೀಡಬೇಕಿತ್ತು .ಈಗಲೂ ಕಾಲ ಮಿಂಚಿಲ್ಲ ಎರಡನೇ ಹಂತದಲ್ಲಿಯಾದರೂ ಅವರಿಗೆ ಮಂತ್ರಿಸ್ಥಾನ ನೀಡಬೇಕು ಎಂದು ಕೇಂದ್ರ ಹಾಗೂ ರಾಜ್ಯದ ನಾಯಕರಲ್ಲಿ ಕೇಳಿಕೊಳ್ಳುತ್ತೇವೆ ಎಂದರು. ಪ್ರಮುಖರಾದ ವಿಶ್ವೇಶ್ವರ ಜೋಶಿ ಮಾತನಾಡಿ, ಬಿಜೆಪಿ ಸರ್ಕಾರದಿಂದ ಅವಧಿಯಲ್ಲಿ ದೇಶಪಾಂಡೆಯವರು ಅತ್ಯುತ್ತಮ ಶಾಸಕರೆಂಬ ಪ್ರಶಸ್ತಿಗೆ ಭಾಜನರಾಗಿರುವದನ್ನು ಸ್ಮರಿಸಿಕೊಳ್ಳಲೇಬೇಕು. ಅಂತಹ ಪ್ರಭಾವಿ ಹಿರಿಯ ನಾಯಕರಿಗೆ ಮಂತ್ರಿಸ್ಥಾನ ನೀಡದಿರುವದು ಎಲ್ಲ ಅಭಿಮಾನಿಗಳಿಗೆ ತುಂಬಾ ಬೇಸರವನ್ನುಂಟುಮಾಡಿದೆ ಎಂದರು. ಇದೇ ವೇಳೆ ಶಾಸಕ ಆರ್‌ವಿ.ದೇಶಪಾಂಡೆ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಜಿಲ್ಲಾದ್ಯಾಂತ ಹೋರಾಟ ನಡೆಸುವದಾಗಿ ಅವರ ಅಭಿಮಾನಿಗಳು ಎಚ್ಚರಿಕೆ ನೀಡಿದರು.ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ನಂದನ ಬಾಳಿಗಿ, ಎನ್. ಎನ್. ಹೆಬ್ಬಾರ, ಜಿ.ವಿ ಭಟ್ಟ, ಬಾಬುಸಿದ್ದಿ, ಬಾಬಾಜಾನ ಶೇಖ, ಕೈಸರ ಅಲಿ, ಅಕ್ಷಯ ರೇವಣಕರ, ರಾಘವೇಂದ್ರ ಕುಣಬಿ, ಶೇಖರ ಗೋಸಾವಿ, ಅಸ್ಪಾಖ ಪಟೇಲ, ನವೀದಖಾಣ್, ಅಣ್ಣಪ್ಪ ನಾಯ್ಕ ಇದ್ದರು.



ಅಲ್ಪಸಂಖ್ಯಾತರ ಸೌಲಭ್ಯ ಸಮರ್ಪಕವಾಗಿ ತಲುಪಿಸಿ: ನಿಸಾರ್ ಅಹಮದ್

• ಕಾರವಾರ: ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳಲ್ಲಿರುವ ಕಾರ್ಯಕ್ರಮಗಳ ಸಂಪೂರ್ಣ ಪ್ರಯೋಜನವನ್ನು ಅಲ್ಪಸಂಖ್ಯಾತ ಸಮುದಾಯದ ಜನತೆಗೆ ಸಮರ್ಪಕವಾಗಿ ತಲುಪಿಸುವಂತೆ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ಹೇಳಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ನಡೆದ, ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಜಿಲ್ಲೆಯಲ್ಲಿನ ಅಲ್ಪ ಸಂಖ್ಯಾತ ಸಮುದಾಯಗಳಾದ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯ ಶಿಕ್ಷಣ ಪಡೆಯುವ ಕುರಿತಂತೆ ಮತ್ತು ಶಾಲೆಯಿಂದ ಹೊರಗುಳಿಯದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ನಿರಂತರವಾಗಿ ಪರಿಶೀಲನೆ ನಡೆಸಬೇಕು. ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗದಂತೆ ಎಚ್ಚರವಹಿಸಬೇಕು. ಅಲ್ಪ ಸಂಖ್ಯಾತ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಶಾಲೆಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಒದಗಿಸಬೇಕು. ಕಳೆದ 10 ವರ್ಷಗಳ ವಿದ್ಯಾರ್ಥಿಗಳ ದಾಖಲಾತಿ, ಶಾಲೆಬಿಟ್ಟವರ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾದವರ ವಿವರಗಳನ್ನೊಳಗೊಂಡ ವರದಿಯನ್ನು 10 ದಿನಗಳಲ್ಲಿ ಸಲ್ಲಿಸುವಂತೆ ನಿರ್ದೇಶನ ನೀಡಿದರು. ಬ್ಯಾಂಕ್ ಗಳಲ್ಲಿ ಶೈಕ್ಷಣಿಕ ಸಾಲ ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ 7.5 ಲಕ್ಷದವರೆಗೆ ಭದ್ರತೆ ಇಲ್ಲದೆ ಸಾಲ ನೀಡುತ್ತಿದ್ದು, ಇದರ ಸದುಪಯೋಗವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆದುಕೊಂಡು ಉನ್ನತ ಶಿಕ್ಷಣ ಪಡೆಯುವಂತಾಗಬೇಕು. ಬ್ಯಾಂಕ್ ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶೈಕ್ಷಣಿಕ ಸಾಲ ಮಂಜೂರು ಮಾಡುವಂತೆ ಲೀಡ್ ಬ್ಯಾಂಕ್ ಅಧಿಕಾರಿಗೆ ಸೂಚಿಸಿದದರು. ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ, ಜಿ.ಪಂ. ಸಿಇಓ ಡಾ.ದಿಲೀಶ್ ಶಶಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್, ವಿಶೇಷ ಕರ್ತವ್ಯಾಧಿಕಾರಿ ಮುಜಿಬುಲ್ಲಾ ಜಫಾರಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಸತೀಶ್ ಹಾಗೂ ವಿವಿಧ ಇಲಾಖೆಗಳ ಅನುಷ್ಠಾನಾಧಿಕಾರಿಗಳು, ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ ಅನುಷ್ಠಾನದ ನಾಮನಿರ್ದೇಶಿತ ಸದಸ್ಯರು ಇದ್ದರು.

ಯುವತಿಯರ ನಾಪತ್ತೆ ಪ್ರಕರಣ ಹೆಚ್ಚಳ: ಆತಂಕ

• ಮುಂಡಗೋಡ: ತಾಲೂಕಿನಲ್ಲಿ ಮಹಿಳೆಯರು ಹಾಗೂ ಯುವತಿಯರು ನಾಪತ್ತೆಯಾಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿದ್ದರೆ, ಮತ್ತೊಂದು ಬದಿ ಕಾಣೆಯಾದ ಜೋಡಿಗಳು ವಿವಾಹ ನೋಂದಣಿ ಮಾಡಿಕೊಂಡು ಪೊಲೀಸ ಠಾಣೆ ಮೆಟ್ಟಲು ಏರುತ್ತಿದ್ದಾರೆ ಇದರಿಂದ ಪಾಲಕರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಅಪ್ರಾಪ್ತ ವಯಸ್ಸಿನ ಯುವಕ- ಯುವತಿಯರು ವಿದ್ಯಾಭ್ಯಾಸ ಮಾಡುವ ವಯಸ್ಸಿನಲ್ಲಿ ಯಾವುದೋ ಮೊಹಕ್ಕೆ ಸಿಲುಕಿ ಪಾಲಕರ ಎದೆ ಬಡಿತ ಹೆಚ್ಚಿಸುವಂತಾ ಘಟನೆಗಳು ಇತ್ತೀಚೆಗೆ ತಾಲೂಕಿನಲ್ಲಿ ಹೆಚ್ಚುತ್ತಿವೆ. ಇನ್ನೊಂದು ಕಡೆ ಯುವತಿಯರು ಹಾಗೂ ಮಹಿಳೆಯರು ಯಾವುದೊ ಮೊಹಕ್ಕೆ ಸಿಲುಕಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ.

ತಾಲೂಕಿನಲ್ಲಿ ಈ ವರ್ಷದ ಮಾರ್ಚವರೆಗೆ 9 ಪ್ರಕರಣಗಳು ಯುವತಿಯರು ಹಾಗೂ ಮಹಿಳೆಯರು ಕಾಣೆಯಾದ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಅಲ್ಲದೆ ಕಳೆದ ವರ್ಷ ಅಂದರೆ 2025ರಲ್ಲಿ 27 ನಾಪತ್ತೆ ಪ್ರಕರಣ ದಾಖಲಾಗಿತ್ತು.

ಹದಿಹರೆಯದ ವಯಸ್ಸಿನ ಹೊಯಾಟದಲ್ಲಿ ವಿದ್ಯಾರ್ಥಿಗಳು ಮನೆಗಳಲ್ಲಿ ಶಾಲಾ ಕಾಲೇಜುಗಳಿಗೆ ಹೋಗಿ ಬರುತ್ತೇನೆಂದು ನಾಪತ್ತೆಯಾದರೆ ಇನ್ನೂ ಕೆಲವು ಪ್ರಕರಣಗಳಲ್ಲಿ ನೀರು, ಬಳೆ, ಬಟ್ಟೆ, ಆಸ್ಪತ್ರೆ ಹೀಗೆ ಬರುತ್ತೇನೆ ಎಂದು ಹೇಳಿ ನಾಪತ್ತೆಯಾಗುತ್ತಿದ್ದಾರೆ. ಇಂತಹಾ ಪ್ರಕರಣಗಳು ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡುವುದಿಲ್ಲಾ ಪಾಲಕರ ವೈಯಕ್ತಿಕ ಕಾರಣದ ಜೊತೆಗೆ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ಇತರೆ ಇಲಾಖೆ ಸೇರಿ ವಿದ್ಯಾರ್ಥಿಗಳಲ್ಲಿ ಜಾಗ್ರತೆ ಮೂಡಿಸಬೇಕು ಎಂಬುದು ಕೆಲವು ಮಕ್ಕಳ ಪಾಲಕರ ಅಭಿಪ್ರಾಯವಾಗಿದೆ.

> ಇಲಾಖೆ ಹಾಗೂ ಸಿಪಿಐ ರಂಗನಾಥ ನೀಲಮ್ಮನವರ ನಿರ್ದೇಶನದಂತೆ, ತಾಲೂಕಿನಾದ್ಯಂತ ಶಾಲಾ, ಕಾಲೇಜಗಳಿಗೆ ತೆರಳಿ ಕಾಣೆ, ಪೋಕ್ಸೊ, ಸೈಬರ್ ಕ್ರೈಂ ವಂಚನೆ, ಮಾಧಕ ವಸ್ತುಗಳಿಂದಾಗುವ ಪರಿಣಾಮಗಳ ಬಗ್ಗೆ ಯುವಕ-ಯುವತಿಯರಿಗೆ ಜಾಗೃತಿ ಮೂಡಿಸುತ್ತಿದ್ದೇವೆ. ಮನೆಯಲ್ಲಿ ವಿದ್ಯಾರ್ಥಿಗಳ ಬಗ್ಗೆ ಪಾಲಕರು ಹೆಚ್ಚು ಕಾಳಜಿ ವಹಿಸಬೇಕು. ಪ್ರಮುಖವಾಗಿ ಬೈಕ್ ಸವಾರರು ಹೆಲ್ಮೆಟ್ ಧರಿಸಿಕೊಂಡು ಸಂಚಾರ ನಿಯಮವನು ಪಾಲಿಸಿಕೊಳ್ಳುವ ಮೂಲಕ ರಸ್ತೆ ಅಪಘಾತ ಕಡಿಮೆ ಮಾಡಬೇಕು.
>
> ■ ಮಂಜುನಾಥ ಗೌಡರ, ಪಿಎಸ್‌ಐ ಮುಂಡಗೋಡ

ಆರು ವರ್ಷದಲ್ಲಿನ ಪ್ರಕರಣಗಳು

2020 ರಲ್ಲಿ ಪೋಕ್ಸೋ 3, 15ನಾಪತ್ತೆ, 2021ರಲ್ಲಿ 3 ಪೋಕ್ಸೋ, 20 ನಾಪತ್ತೆ ಪ್ರಕರಣಗಳು ಹಾಗೂ 2022 ರಲ್ಲಿ 4 ಪೋಕ್ಸೋ 10 ನಾಪತ್ತೆ ಪ್ರಕರಣಗಳು 2023 ರಲ್ಲಿ 3 ಪೋಕ್ಸೋ ಹಾಗೂ 43 ನಾಪತ್ತೆ, 2024ರಲ್ಲಿ 8 ಪೋಕ್ಸೋ, 36ನಾಪತ್ತೆ ಪ್ರಕರಣ, 2025ರ 27 ಮಹಿಳೆಯರು ನಾಪತ್ತೆ 2026 ಮಾರ್ಚ ವರೆಗೆ 9 ನಾಪತ್ತೆ ಪ್ರಕರಣ ದಾಖಲಾದ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇನ್ನು ಹಲವಾರು ನಾಪತ್ತೆ ಪ್ರಕರಣಗಳು ಪಾಲಕರು ದೂರು ದಾಖಲಿಸಿಕೊಳ್ಳುವ ಮುನ್ನವೇ ಯುವಕ-ಯುವತಿ ವಿವಾಹ ನೋಂದಣಿ ಮಾಡಕೊಂಡು ಪೊಲೀಸ್ ಮೆಟ್ಟಲೇರುತ್ತಿದ್ದಾರೆ.

ಸೂಕ್ತ ಕ್ರಮ ಕೈಗೊಳ್ಳಲು ವಿದ್ಯಾರ್ಥಿಗಳ ಒತ್ತಾಯ

• ಶಿರಸಿ: ಸಿದ್ದಾಪುರ ತಾಲೂಕಿನ ಕಾನಸೂರು ಹಾಸ್ಟೆಲ್‌ನಲ್ಲಿ ಇತ್ತೀಚೆಗೆ ವಿದ್ಯಾರ್ಥಿಯೊಬ್ಬರು ಸಂಶಯಾಸ್ಪದವಾಗಿ ಸಾವಿಗೀಡಾದ ಘಟನೆಯನ್ನು ಖಂಡಿಸಿ ಹಾಗೂ ಸೂಕ್ತ ತನಿಖೆ ನಡೆಸಿ, ಮೃತರ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನೇತೃತ್ವದಲ್ಲಿ ಮಂಗಳವಾರ ನಗರದ ಐದು ರಸ್ತೆ ಸರ್ಕಲ್ ಬಳಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಶಿವಾಜಿ ಚೌಕದಿಂದ 500ಕ್ಕೂ ಅಧಿಕ ವಿದ್ಯಾರ್ಥಿಗಳು ಸರ್ಕಾರಿ ಹಾಸ್ಟೆಲ್‌ಗಳ ದುಸ್ಥಿತಿಯನ್ನು ಖಂಡಿಸಿ ಶಾಂತಿಯುತ ಮೆರವಣಿಗೆ ಆರಂಭಿಸಿದರು. ಆದರೆ, ಮೆರವಣಿಗೆಯು ಐದು ರಸ್ತೆ ವೃತ್ತದ ಬಳಿ ತಲುಪುತ್ತಿದ್ದಂತೆ ಪೊಲೀಸರು ವಿದ್ಯಾರ್ಥಿಗಳನ್ನು ತಡೆದರು. ಈ ಸಂದರ್ಭದಲ್ಲಿ ಎಬಿವಿಪಿ ಪ್ರಮುಖರು ಮತ್ತು ಪೊಲೀಸರ ನಡುವೆ ತೀವ್ರ ವಾಗ್ವಾದ ನಡೆಯಿತು.

ಪೂರ್ವಾನುಮತಿ ಪಡೆಯದೇ ಪ್ರತಿಭಟನೆ ನಡೆಸುವಂತಿಲ್ಲ ಎಂದು ಪೊಲೀಸರು ತಾಕೀತು ಮಾಡಿದ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಒಂದು ದಿನ ಮುಂಚಿತವಾಗಿಯೇ ಅನುಮತಿ ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಆದರೆ ಸೂಕ್ತ ಪ್ರತಿಕ್ರಿಯೆ ನೀಡದೆ, ರಾತ್ರಿ 11 ಗಂಟೆಯವರೆಗೂ ಅಲೆದಾಡಿಸಿ ಕೊನೆಗೆ ಅನುಮತಿ ನಿರಾಕರಿಸಲಾಗಿದೆ. ಶಾಂತಿಯುತವಾಗಿ ನ್ಯಾಯ ಕೇಳಲು ಬಂದಿರುವ ವಿದ್ಯಾರ್ಥಿಗಳ ಧ್ವನಿ ಹತ್ತಿಕ್ಕಲು ಸರ್ಕಾರದಿಂದ ಏನಾದರೂ ಆದೇಶ ಬಂದಿದೆಯೇ? ಎಂದು ಪ್ರಶ್ನಿಸಿದರು. ನಾವು ಯಾವುದೇ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಮಾಡದೆ ಕೇವಲ ನ್ಯಾಯಕ್ಕಾಗಿ ಆಗ್ರಹಿಸುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದ ವಿದ್ಯಾರ್ಥಿ ಮುಖಂಡರು, ಸ್ಥಳಕ್ಕೆ ಉಪವಿಭಾಗಾಧಿಕಾರಿ, ಡಿಎಸ್ಪಿ ಅಥವಾ ತಹಶೀಲ್ದಾರ್ ಬಂದು ಮನವಿ ಸ್ವೀಕರಿಸುವವರೆಗೆ ರಸ್ತೆ ಮಧ್ಯದಲ್ಲೇ ಕುಳಿತುಕೊಳ್ಳುವುದಾಗಿ ಪಟ್ಟು ಹಿಡಿದರು.

ಬಳಿಕ ಸ್ಥಳಕ್ಕೆ ಆಗಮಿಸಿದ ಶಿರಸಿ ತಹಶೀಲ್ದಾರ್ ಪಟ್ಟರಾಜ್ ಗೌಡ ಅವರು ವಿದ್ಯಾರ್ಥಿಗಳಿಂದ ಮನವಿ ಸ್ವೀಕರಿಸಿ, ಸೂಕ್ತ ಕ್ರಮದ ಭರವಸೆ ನೀಡಿದರು.

ಈ ವೇಳೆ ಎಬಿವಿಪಿ ರಾಜ್ಯ ಕಾರ್ಯದರ್ಶಿ ದರ್ಶನ ಹೆಗಡೆ ಮಾತನಾಡಿದರು.

ಈ ವೇಳೆಯಲ್ಲಿ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಶಶಾಂಕ ನಾಯ್ಕ, ದರ್ಶನ್ ಮಡಿವಾಳ, ಯಶ್ ಬೆಣ್ಣೆ ಮತ್ತಿತರರು ಇದ್ದರು.



ಮೂವರ ವಿರುದ್ಧ ಎಫ್‌ಐಆರ್

• ಭಟ್ಕಳ: ಮುರ್ಡೇಶ್ವರದ ಮಡಿಕೇರಿಯ ಕುಂಬಾರಕೇರಿಯಲ್ಲಿನ ಗದ್ದೆಬಯಲು ಪ್ರದೇಶದಲ್ಲಿ ತಮ್ಮ ಲಾಭಕ್ಕೋಸ್ಕರ ಕೋಳಿ ಹುಂಜಗಳ ಮೇಲೆ ಹಣವನ್ನು ಪಂಥವನ್ನಾಗಿ ಕಟ್ಟಿ ಜೂಜಾಟ ಆಡುತ್ತಿದ್ದ ಮೂವರ ಮೇಲೆ ಮುರ್ಡೇಶ್ವರ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ.ಸುರೇಶ ಗಣಪತಿ ನಾಯ್ಕ, ಅಶ್ವಿನ್ ಬಿಳಿಯಾ ನಾಯ್ಕ, ಗಜಾನನ ನಾಯ್ಕ ಇವರು ಹಾಗೂ ಇತರೇ ಕೆಲವರು ಸೇರಿಕೊಂಡು ಮುರ್ಡೇಶ್ವರದ ಮಡಿಕೇರಿಯಲ್ಲಿನ ಕುಂಬಾರಕೇರಿಯ ಬಳಿಯ ಗದ್ದೆಬೈಲಿನಲ್ಲಿ ತಮ್ಮ ಲಾಭಗೋಸ್ಕರ ಕೋಳಿ ಅಂಕ ಆಡುತ್ತಿದ್ದ ವೇಳೆ ಮುರ್ಡೇಶ್ವರ ಪೊಲೀಸ್ ಠಾಣೆಯ ಸಬ್ ಇನ್ಸಪೆಕ್ಟರ್ ಹಣಮಂತ ಬಿರಾದಾರ ಸಿಬ್ಬಂದಿಗಳು ಹಾಗೂ ಪಂಚರೊಂದಿಗೆ ದಾಳಿ ಮಾಡಿ ಆಪಾದಿತರಿಂದ ರೂ.400/- 12 ಕೋಳಿ ಹುಂಜಗಳನ್ನು ವಶಕ್ಕೆ ಪಡೆದುಕೊಂಡಿದ್ದು ಈ ಸಮಯದಲ್ಲಿ ಕೆಲವು ಆರೋಪಿತರುತಪ್ಪಿಸಿಕೊಂಡಿದ್ದಾರೆ. ಸರ್ಕಾರದ ಪರವಾಗಿ ಹಣಮಂತ ಬೀರಾದಾರ ಅವರು ನೀಡಿದ ದೂರಿನ ಮೇರೆಗೆ ಎನ್.ಸಿ. ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯದ ಪರವಾನಿಗೆಯನ್ವಯ ಪ್ರಥಮ ವರ್ತಮಾನ ವರದಿ ದಾಖಲಿಸಿ ತನಿಖೆ ನಡೆಸಿದ್ದಾರೆ.

ಕಿರುಸುದ್ದಿ

ವಿದ್ಯಾಸಿರಿ ಸೌಲಭ್ಯಕ್ಕೆ ಅರ್ಜಿ

ಹಾವೇರಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪ್ರಸಕ್ತ 2026-27ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಅಲೆಮಾರಿ/ ಅರೆಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ ಹಾಗೂ ವಿದ್ಯಾಸಿರಿ- ಊಟ ಮತ್ತು ವಸತಿ ಸಹಾಯ ಯೋಜನೆಗೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ/ಅರೆಅಲೆಮಾರಿ ವಿದ್ಯಾರ್ಥಿಗಳು ದಿನಾಂಕ 31-08-2026 ರೊಳಗಾಗಿ ಆನ್‌ಲೈನ್‌ನಲ್ಲಿ https://ssp.postmatric.karnataka.gov.in ಅರ್ಜಿ ಸಲ್ಲಿಸಬೇಕು.

ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲಾತಿಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ವೆಬ್‌ಸೈಟ್ https://bcwd.karnataka.gov.in,ಇಲಾಖಾ ಸಹಾಯವಾಣಿ ಇಮೇಲ್ bcwdhelpline@gmail.com, ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ 1902, ಇಮೇಲ್ postmatrichelp@karnataka.gov.in ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಾಲೂಕಾ ಕಲ್ಯಾಣಾಧಿಕಾರಿಗಳ ಕಚೇರಿಯನ್ನು ಕೆಲಸ ಸಮಯದಲ್ಲಿ ಸಂಪರ್ಕಿಸಬಹುದೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಹಾವೇರಿ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಹಾಯಕ ಸಂಚಾರ ನಿರೀಕ್ಷಕ (ದರ್ಜೆ-3) ಮೆಲ್ಬಡ್ತಿಯೇತರ ನೇರ ನೇಮಕಾತಿ ಹುದ್ದೆಯ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಗೊಳಿಸಿದ್ದು ಸಂಸ್ಥೆಯ ವೆಬ್‌ಸೈಟ್ https://nwkrtc.karnataka.gov.in ನಲ್ಲಿ ಪ್ರಕಟಿಸಲಾಗಿದೆ. ಈ ತಾತ್ಕಾಲಿಕ ಆಯ್ಕೆಪಟ್ಟಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಅಭ್ಯರ್ಥಿಗಳು ಈ ಕುರಿತು ದಿನಾಂಕ ಜೂ.17ರೊಳಗಾಗಿ Online(https://nwkrtc.karnataka.gov.in) ಮೂಲಕ ಅಥವಾ ಖುದ್ದಾಗಿ ಲಿಖಿತ ರೂಪದಲ್ಲಿ ಆಕ್ಷೇಪಣೆಯನ್ನು ಸಲ್ಲಿಸಬೇಕು. ನಿಗದಿತ ದಿನಾಂಕ ಮತ್ತು ಸಮಯದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಲ್ವರು ನಾಪತ್ತೆ

ಹಾವೇರಿ: ಶಿಗ್ಗಾಂವ ತಾಲೂಕಿನ ವಿವಿಧ ಗ್ರಾಮಗಳಿಂದ ನಾಲ್ವರು ಜನ ಪುರುಷರು ಕಾಣೆಯಾಗಿರುವುದಾಗಿ ಶಿಗ್ಗಾಂವ ಪೊಲೀಸ್ ವೃತ್ತ ನಿರೀಕ್ಷಕ ಕಚೇರಿಯಲ್ಲಿ ದೂರು ದಾಖಲಿಸಲಾಗಿದೆ. ನೀರಲಗಿ ಗ್ರಾಮದ 43 ವರ್ಷದ ಬಸವರಾಜ ಕುಬೇರಪ್ಪ ಮಿಶ್ರಿಕೋಟಿ 10 ಮಾರ್ಚ್ 2025 ರಂದು, ಬಂಕಾಪುರ ಶಹಬಜಾರನ 48 ವರ್ಷದ ಮಂಜುನಾಥ ಸಿದ್ದಪ್ಪ ಬಳಿಗಾರ 28 ಏಪ್ರಿಲ್ 2025ರಂದು, ಹಳೇ ಬಂಕಾಪುರ ನಿವಾಸಿ 47 ವರ್ಷದ ಮಾಬೂಲಿ ಮರ್ದಾನಸಾಬ ಮುಲ್ಲಾನವರ 8 ಮಾರ್ಚ್ 2025 ರಂದು ಹಾಗೂ 46 ವರ್ಷದ ನಾಗಪ್ಪ ಬಸಪ್ಪ ಹಂಜಿಗಿ 30 ಮಾರ್ಚ್ 2023 ರಂದು ಮನೆಯಿಂದ ಹೋದವರು ಕಾಣೆಯಾಗಿರುವುದಾಗಿ ದೂರು ದಾಖಲಿಸಲಾಗಿದೆ. ಈ ಕಾಣೆಯಾದ ವ್ಯಕ್ತಿಗಳ ಮಾಹಿತಿ ದೊರೆತಲ್ಲಿ ಶಿಗ್ಗಾಂವ ವೃತ್ತ ಸರ್ಕಲ್ ಪೊಲೀಸ್ ಇನ್ಸಪೆಕ್ಟರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಆತ್ಮಹತ್ಯೆ

ರಾಣೇಬೆನ್ನೂರ: ಸಾಲಬಾಧೆಯಿಂದ ಮನನೊಂದು ಯುವಕನೊಬ್ಬ ಬಾರ್ ಅ್ಯಂಡ್ ರೆಸ್ಟೋರೆಂಟ್ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಮಂಗಳವಾರ ನಗರದ ಹಳೇ ಪಿ.ಬಿ.ರಸ್ತೆಯಲ್ಲಿ ನಡೆದಿದೆ. ತಾಲೂಕಿನ ಅಸುಂಡಿ ಗ್ರಾಮದ ಪ್ರವೀಣ ಚಂದ್ರಪ್ಪ ಹುಲಿಹಳ್ಳಿ (25) ಮೃತ ಯುವಕ. ಈತ 4.50 ಲಕ್ಷ ರೂ. ಸಾಲ ಮಾಡಿಕೊಂಡಿದ್ದ. ಆದರೆ, ಸಾಲ ತೀರಿಸಲಾಗದೆ ಮದ್ಯ ಸೇವನೆಗೆ ಅಂಟಿಕೊಂಡಿದ್ದ. ಅಲ್ಲದೆ ಸಾಲದ ಸಮಸ್ಯೆ ಹೆಚ್ಚಾಗಿದ್ದರಿಂದ ಆತ ಕೆಲ ದಿನಗಳಿಂದ ಮಾನಸಿಕವಾಗಿ ನೊಂದಿದ್ದ. ಇದೇ ಕಾರಣದಿಂದ ಬೆಳಿಗ್ಗೆ ಬಾರ್‌ಗೆ ಬಂದು ಮದ್ಯ ಸೇವಿಸಿ ಕಟ್ಟಡದ ಮೇಲಿನಿಂದ ಜಿಗಿದಿದ್ದಾನೆ ಎನ್ನಲಾಗಿದೆ. ಘಟನೆ ಶಹರ ಪೊಲೀಸರು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಶಹರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಯುವಕನ ಸಾವಿನಿಂದ ಕುಟುಂಬಸ್ಥರಲ್ಲಿ ಆಕ್ರಂದನ ಮುಗಿಲು ಮುಟ್ಟಿದ್ದು, ಘಟನೆ ಸ್ಥಳದಲ್ಲಿ ಶೋಕ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ರತ್ನವ್ವ ರೋಖಡೆ ನಿಧನ

ರಾಣೇಬೆನ್ನೂರ: ಸ್ಥಳೀಯ ಮಾರುತಿ ನಗರದ ನಿವಾಸಿ ರತ್ನವ್ವ ವಿರುಪಾಕ್ಷಪ್ಪ ರೋಖಡೆ (82) ನಿಧನರಾದರು. ಮೃತರು ಇಬ್ಬರು ಪುತ್ರರು, ನಾಲ್ಕು ಜನ ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಹೊಂದಿದೆ.





ಹಾನಗಲ್ಲ: ರಕ್ತ ಸೈನಿಕರ ತವರೂರು ಎಂದೇ ಹೆಸರುವಾಸಿಯಾದ ತಾಲೂಕಿನ ಅಕ್ಕಿಆಲೂರಿನಲ್ಲಿ ಅಕ್ಕಿಆಲೂರ ಪೊಲೀಸ್ ಕಾನ್ಸ್‌ಟೇಬಲ್ ರಕ್ತ ಸೈನಿಕ ಕರಬಸಪ್ಪ ಗೊಂದಿ ರವರು 200 ನೇ ಬಾರಿ ರಕ್ತದಾನ ಮಾಡಿದರು.

ವಿಶ್ವ ರಕ್ತದಾನಿಗಳ ದಿನಾಚರಣೆ

ಹಾನಗಲ್ಲ: ರಕ್ತ ಸೈನಿಕರ ತವರೂರು ಎಂದೇ ಹೆಸರುವಾಸಿಯಾದ ತಾಲೂಕಿನ ಅಕ್ಕಿಆಲೂರಿನಲ್ಲಿ ಅಕ್ಕಿಆಲೂರ ಪೊಲೀಸ್ ಕಾನ್ಸ್‌ಟೇಬಲ್ ರಕ್ತ ಸೈನಿಕ ಕರಬಸಪ್ಪ ಗೊಂದಿ ರವರು 200 ನೇ ಬಾರಿ ರಕ್ತದಾನ ಮಾಡಿದರು. ವಿಶ್ವ ರಕ್ತದಾನಿಗಳ ದಿನಾಚರಣೆ ದಿನದ ಅಂಗವಾಗಿ ಅಕ್ಕಿಆಲೂರಿನ ಶ್ರೀ ಕುಮಾರ ಶಿವಯೋಗಿಗಳ ಕಲ್ಯಾಣ ಮಂಟಪದಲ್ಲಿ ಲಿಂ. ಚನ್ನವೀರ ಮಹಾಸ್ವಾಮಿಗಳ ಪುಣ್ಯಸ್ಮರಣೆ ಮತ್ತು ಶಿವಬಸವ ಮಹಾಸ್ವಾಮಿಗಳ ಮೌನ ಅನುಷ್ಠಾನ ಮುಕ್ತಾಯ ಸಮಾರಂಭದಲ್ಲಿ ಹಮ್ಮಿಕೊಂಡ ಸ್ನೇಹಮೈತ್ರಿ ಬ್ಲಡ್ ಆರ್ಮಿ ರಕ್ತ ಸೈನಿಕರ ತವರೂರು ಅಕ್ಕಿಆಲೂರ, ಜಿಲ್ಲಾ ರಕ್ತಕೇಂದ್ರ ಹಿಮ್ಸ್ ಹಾವೇರಿ, ರಾಷ್ಟ್ರೋತ್ಥಾನ ರಕ್ತ ನಿಧಿ ಕೇಂದ್ರ ಹುಬ್ಬಳ್ಳಿ ಇವರ ಸಹಯೋಗದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆಯನ್ನು ಆಚರಿಸಲಾಯಿತು. 2010 ರಿಂದ ಈವರೆಗೂ 181 ಬಾರಿ ರಕ್ತದ ಕಣಗಳು, 18 ಬಾರಿ ಪೂರ್ಣ ಪ್ರಮಾಣದ ರಕ್ತ ಹಾಗೂ 01 ಬಾರಿ ಬಿಳಿ ರಕ್ತಕಣ ದಾನವನ್ನು ಕರಬಸಪ್ಪ ಗೊಂದಿ ಮಾಡಿದ್ದಾರೆ. ಕಾರ್ಯಕ್ರಮದಲ್ಲಿ 130 ಜನರು ರಕ್ತಸ್ನೇಹಿಕರಾದರು. ಈ ವೇಳೆ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಲ್. ವೈ. ಶಿರಕೋಳ್ ಇನ್ನೂರರ ಹೆಗ್ಗುರುತು ಫಲಕ ಅನಾವರಣ ಮಾಡಿದರು. ಕಾರ್ಯಕ್ರಮದಲ್ಲಿ ಧಾರವಾಡ ಪೊಲೀಸ್ ತರಬೇತಿ ಶಾಲೆಯ ಅಧೀಕ್ಷಕ ಎಂ.ಎಂ ಯಾದವಾಡ ಅಕ್ಕಿಆಲೂರಿನ ಶ್ರೀ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು, ಶಿವಬಸವ ಶ್ರೀಗಳು ವಿರಕ್ತಮಠ ರಕ್ತಸೈನಿಕ ಅಕ್ಕಿಆಲೂರ, ಡಾ ಬಸವರಾಜ ತಳವಾರ್, ಮನೋಹರ ಗೊಂದಿ, ಕುಸುಮಾ ಗೊಂದಿ ಹಾಗೂ ಪಿ.ಆರ್.ಮಠ, ವೈಷ್ಣವಿ ಇತರರಿದ್ದರು.



ರಾಣೇಬೆನ್ನೂರ: ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 12 ವರ್ಷಗಳಿಂದ ದೇಶವನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ತಾಲೂಕಿನ ದೇವರ ಗುಡ್ಡ ಗ್ರಾಮದ ಶ್ರೀ ಮಾಲತೇಶ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಮಾಜಿ ಸಚಿವ ಬಿ.ಸಿ.ಪಾಟೀಲ, ವಿಪ ಸದಸ್ಯ ವಿ.ಎಸ್.ಸಂಕನೂರು, ಮಾಜಿ ಶಾಸಕರಾದ ವಿರೂಪಾಕ್ಷಪ್ಪ ಬಳ್ಳಾರಿ, ಅರುಣಕುಮಾರ ಪೂಜಾರ, ಶಿವರಾಜ ಸಜ್ಜನರ, ವಿಭಾಗ ಪ್ರಭಾರಿ ಭೋಜರಾಜ ಕರೂದಿ, ಗವಿಸಿದ್ದಪ್ಪ ದ್ಯಾಮಣ್ಣನವರ ಮತ್ತಿತರರಿದ್ದರು.

ರಾಷ್ಟ್ರಮಟ್ಟದ ಒಂದು ದಿನದ ವಿಚಾರ ಸಂಕಿರಣ | ಪ್ರೊ. ಜಂಗಮಶೆಟ್ಟಿ ಹೇಳಿಕೆ

ಎಐನಿಂದ ಸುಸ್ಥಿರ ಭವಿಷ್ಯ ನಿರ್ಮಾಣ

ಹಾವೇರಿ: ಪ್ರಸ್ತುತ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಶಿಕ್ಷಣ, ಆರೋಗ್ಯ, ವಿಜ್ಞಾನ, ವ್ಯಾಪಾರ, ವ್ಯವಹಾರ ಹಾಗೂ ಕೈಗಾರಿಕಾ ಕ್ಷೇತ್ರಗಳನ್ನು ವ್ಯಾಪಕವಾಗಿ ಪ್ರವೇಶಿಸಿದ್ದು, ತನ್ನ ವಿಶಿಷ್ಟ ಕಾರ್ಯನಿರ್ವಹಣಾ ನೈಪುಣ್ಯದ ಮೂಲಕ ಹೊಸ ಸಾಧ್ಯತೆಗಳನ್ನು ತೆರೆದಿದೆ ಎಂದು ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸುರೇಶ ಜಂಗಮಶೆಟ್ಟಿ ಹೇಳಿದರು.

ನಗರದ ಗುದ್ಲೆಪ್ಪ ಹಳ್ಳಿಕೇರಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಐ.ಕ್ಯು.ಎ.ಸಿ. ನೇತೃತ್ವದ ವಾಣಿಜ್ಯ ಪದವಿ ವಿಭಾಗ ಹಾಗೂ ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗಗಳ ಸಂಯುಕ್ತ ಆಶ್ರಯದಲ್ಲಿ, ಹಾವೇರಿ ವಿಶ್ವವಿದ್ಯಾಲಯ ವಾಣಿಜ್ಯ ಅಧ್ಯಾಪಕರ ಸಂಘದ ಸಹಯೋಗದೊಂದಿಗೆ ಆಯೋಜಿಸಲಾದ 'ಕೃತಕ ಬುದ್ಧಿಮತ್ತೆ ಪರಿಸರ ವ್ಯವಸ್ಥೆಯಲ್ಲಿ ಡಿಜಿಟಲ್ ಪರಿವರ್ತನೆ ಮತ್ತು ಸಮಗ್ರ ಅಭಿವೃದ್ಧಿ : ಬಹುಶಿಸ್ತೀಯ ದೃಷ್ಟಿಕೋನ' ವಿಷಯದ ರಾಷ್ಟ್ರಮಟ್ಟದ ಒಂದು ದಿನದ ವಿಚಾರಸಂಕಿರಣವನ್ನು ಉದ್ಘಾಟಿಸಿ ಮಾತನಾಡಿ, ಇಂದಿನ ಎಐ ತಂತ್ರಜ್ಞಾನವು ಬಹುಶಿಸ್ತೀಯ ಡಿಜಿಟಲ್ ವ್ಯವಸ್ಥೆಗಳು, ಸುಸ್ಥಿರ ಅಭಿವೃದ್ಧಿ, ಸ್ಮಾರ್ಟ್ ಪೇಮೆಂಟ್ ವ್ಯವಸ್ಥೆ, ಆಡಳಿತ ಮತ್ತು ನಿರ್ವಹಣಾ ಕ್ಷೇತ್ರಗಳಲ್ಲಿ ಮಹತ್ವದ ಬದಲಾವಣೆಗಳನ್ನು ತರುತ್ತಿದೆ. ಜ್ಞಾನ ವಿನಿಮಯ ಮತ್ತು ಸಂವಾದಕ್ಕೆ ವೇದಿಕೆಯಾಗುವ ಮೂಲಕ ಶೈಕ್ಷಣಿಕ ಹಾಗೂ ಕೈಗಾರಿಕಾ ಕ್ಷೇತ್ರಗಳಿಗೆ ಮೌಲ್ಯಯುತ ಒಳನೋಟಗಳನ್ನು ಒದಗಿಸುತ್ತಿದೆ. ಡಿಜಿಟಲ್ ಸಬಲೀಕೃತ ಹಾಗೂ ಸುಸ್ಥಿರ ಭವಿಷ್ಯದ ನಿರ್ಮಾಣದಲ್ಲಿ ಎಐ ತಂತ್ರಜ್ಞಾನ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಅಭಿಪ್ರಾಯಪಟ್ಟರು.



ಮಹತ್ತರ ಬದಲಾವಣೆ

ವಿಶ್ವವು ಇಂದು ಡಿಜಿಟಲ್ ಕ್ರಾಂತಿಯ ಯುಗದಲ್ಲಿದ್ದು, ಕೃತಕ ಬುದ್ಧಿಮತ್ತೆ, ಡಿಜಿಟಲ್ ತಂತ್ರಜ್ಞಾನ, ಡೇಟಾ ವಿಶ್ಲೇಷಣೆ, ಫಿನ್‌ಟೆಕ್, ಇ-ಕಾಮರ್ಸ್ ಹಾಗೂ ಡಿಜಿಟಲ್ ಪಾವತಿ ವ್ಯವಸ್ಥೆಗಳು ಜೀವನದ ಪ್ರತಿಯೊಂದು ಕ್ಷೇತ್ರವನ್ನು ಸ್ಪರ್ಶಿಸುತ್ತಿವೆ. ಡಿಜಿಟಲ್ ಇಂಡಿಯಾ, ಸ್ಟಾರ್ಟ್‌ಅಪ್ ಇಂಡಿಯಾ ಸೇರಿದಂತೆ ವಿವಿಧ ತಂತ್ರಜ್ಞಾನ ಆಧಾರಿತ ಯೋಜನೆಗಳ ಮೂಲಕ ಭಾರತ ಅಭಿವೃದ್ಧಿಯ ಹೊಸ ಹಾದಿಯಲ್ಲಿ ಸಾಗುತ್ತಿದ್ದು, ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿಕೆ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಗಳು ಕಂಡುಬರುತ್ತಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಎಂ.ಸಿ. ಕೊಳ್ಳಿ ಮಾತನಾಡಿದರು.

ಮುಖ್ಯ ಭಾಷಣಕಾರರಾಗಿ ಬೆಂಗಳೂರಿನ ಬ್ಲೂಚಿಂಕ್ ಟೆಕ್ನಾಲಜೀಸ್ ಸಂಸ್ಥೆಯ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದೀಪಕ್ ನಾಯಕ್ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರಿನ ಫಿನ್‌ಟೆಕ್ ಶಾಲೆಯ ಸಂಸ್ಥಾಪಕ, ಡೆಲ್ಟಾಪೇ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಸಹ-ಸಂಸ್ಥಾಪಕ ಹಾಗೂ ಐಐಎಂ ಕೊಝಿಕ್ಕೋಡ್ ಮತ್ತು ಐಐಟಿ ಪಾಟ್ನಾದ ಸಂದರ್ಶಕ ಪ್ರಾಧ್ಯಾಪಕ ಡಾ. ಕಿರಣ್ ಕುಮಾರ್ ಕೆ. ವಿ. ಅವರು ಎ.ಐ., ಫಿನ್‌ಟೆಕ್ ಮತ್ತು ಡಿಜಿಟಲ್ ಪರಿವರ್ತನೆ ಕುರಿತ ವಿಶೇಷ ಉಪನ್ಯಾಸ ನೀಡಿದರು.

ಸ್ಥಾನಿಕ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಡಾ. ಎಸ್.ಎಲ್. ಬಾಲೆಹೊಸೂರ, ಹಾವೇರಿ ವಿವಿ ವಾಣಿಜ್ಯ ವಿಭಾಗದ ಡೀನ್ ಡಾ. ಎಂ.ಎನ್. ಕಡ್ಡಿಪುಡಿ, ಸ್ಥಾನಿಕ ಆಡಳಿತ ಮಂಡಳಿ ಸದಸ್ಯರಾದ ಜೆ.ಎಸ್. ಅರಣಿ, ಬಸವರಾಜ ಮಾಸೂರ ಉಪಸ್ಥಿತರಿದ್ದರು. ಅಂಜನಾ ಮತ್ತು ಪ್ರೀತಿ ಪ್ರಾರ್ಥಿಸಿದರು. ಪ್ರಾಚಾರ್ಯ ಪ್ರೊ. ಎಂ.ಎಂ. ಹೊಳ್ಳಿಯವರ ಸ್ವಾಗತಿಸಿದರು. ಚಿನ್ಮಯಿ ಹೆಗಡಾಳ ನಿರ್ವಹಿಸಿದರು. ವಿಭಾಗದ ಮುಖ್ಯಸ್ಥ ಹಾಗೂ ಸಂಘಟಕ ಪ್ರೊ. ಆರ್.ಬಿ. ಅಜರಡ್ಡಿ ವಂದಿಸಿದರು.

ವಿಚಾರ ಸಂಕಿರಣದಲ್ಲಿ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ ಸೇರಿದಂತೆ ವಿವಿಧ ರಾಜ್ಯಗಳ ಸಂಶೋಧಕರು, ವಿದ್ಯಾರ್ಥಿಗಳು ಹಾಗೂ ಕೈಗಾರಿಕಾ ವಲಯದ ತಜ್ಞರು ಭಾಗವಹಿಸಿ ತಮ್ಮ ಸಂಶೋಧನಾ ಪ್ರಬಂಧಗಳು ಮತ್ತು ನವೀನ ಆಲೋಚನೆಗಳನ್ನು ಮಂಡಿಸಿದರು.

ವಿದ್ಯುತ್ ಖಾಸಗೀಕರಣ ನಿರ್ಧಾರ ವಿರೋಧಿಸಿ ನೌಕರರ ಪ್ರತಿಭಟನೆ

ರಾಣೇಬೆನ್ನೂರ: ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಹೆಸ್ಕಾಂ) ಅನ್ನು ಖಾಸಗೀಕರಣ ಮಾಡುವ ಸರ್ಕಾರದ ನಿರ್ಧಾರ ಖಂಡಿಸಿ ಹೆಸ್ಕಾಂ ತಾಲೂಕು ಘಟಕದ ನೌಕರರು ಮಂಗಳವಾರ ನಗರದ ವಿಭಾಗೀಯ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿದರು.

ಬೆಳಗ್ಗೆ 11 ಗಂಟೆಗೆ ಕಚೇರಿ ಎದುರು ಜಮಾಯಿಸಿದ ನೂರಾರು ಖಾಯಂ, ಗುತ್ತಿಗೆ ನೌಕರರು ಕೈಯಲ್ಲಿ ಸರ್ಕಾರದ ವಿರುದ್ಧದ ಆಕ್ರೋಶ ಬರಹ ಬರೆದ ಬಾವುಟ ಹಿಡಿದು 'ಖಾಸಗೀಕರಣ ನಿಲ್ಲಿಸಿ', 'ನೌಕರರ ಬದುಕು ಬೀದಿಗೆ ಬೀಡಬೇಡಿ' ಎಂದು ಘೋಷಣೆ ಕೂಗಿದರು.

ವಿದ್ಯುತ್ ಸೇವೆ ಲಾಭದ ವಸ್ತುವಲ್ಲ, ಖಾಸಗಿಯವರ ಕೈಗೆ ಹೋದರೆ ಗ್ರಾಮೀಣ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ಹೆಚ್ಚಾಗುತ್ತದೆ. ರೈತರಿಗೆ, ಬಡವರಿಗೆ ವಿದ್ಯುತ್ ದರ ಏರಿಕೆಯಿಂದ ಬದುಕೇ ಕಷ್ಟವಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈಗಾಗಲೇ ಸಿಬ್ಬಂದಿ ಕೊರತೆ ಇದೆ. ಖಾಸಗೀಕರಣವಾದರೆ 10 ಸಾವಿರಕ್ಕೂ ಹೆಚ್ಚು ನೌಕರರ ಉದ್ಯೋಗಕ್ಕೆ ಕತ್ತರಿ ಬೀಳಲಿದೆ. 30-35 ವರ್ಷ ಸೇವೆ ಸಲ್ಲಿಸಿದವರನ್ನು ರಸ್ತೆಗೆ ಇಳಿಸುವುದು ಸರಿಯಲ್ಲ ಎಂದು ಅಳಲು ತೋಡಿಕೊಂಡರು.

ಹೆಸ್ಕಾಂಅನ್ನು ಖಾಸಗೀಕರಣ ನಿರ್ಧಾರ ಕೂಡಲೇ ವಾಪಸ್ ಪಡೆಯಬೇಕು. ಎಲ್ಲ ನೌಕರರ ಉದ್ಯೋಗ ಭದ್ರತೆ ಖಾತ್ರಿಪಡಿಸಬೇಕು. ವಿದ್ಯುತ್ ದರ ಏರಿಕೆ ಮಾಡದೇ ಸೇವೆ ಮುಂದುವರಿಸಬೇಕು. ಸರ್ಕಾರ ಒಂದು ವಾರದೊಳಗೆ ಮಾತುಕತೆಗೆ ಕರೆದಿಲ್ಲದಿದ್ದರೆ, ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರಮುಖರಾದ ಶಿವಾನಂದ ಹಾದಿಮನಿ, ಮಂಜು ಸಣ್ಣಲಿಂಗಮ್ಮನವರ, ಮಂಜುನಾಥ ಬಿ, ಪ್ರಭಾಕರ ಎಂ.ಎಚ್., ಬೀರಪ್ಪ ತಿಪ್ಪಣ್ಣನವರ, ಗೋಪಾಲ ಲಮಾಣಿ, ಎಸ್.ಜಿ. ಹೊಳೆಯಣ್ಣನವರ, ರೈತರಾದ ಸುರೇಶ ಎಣ್ಣಿ, ರಾಜು ಎನ್ .ಪಿ., ಪರಶುರಾಮ ಹಿರೇಬಿದರಿ, ಕೆ.ಎಂ. ನದಾಫ್ ಮತ್ತಿತರರು ಪಾಲ್ಗೊಂಡಿದ್ದರು.



ಶಾಸಕ ಶಿವಣ್ಣನವರಿಗೆ ಸಚಿವ ಸ್ಥಾನ ನೀಡಿ

ಹಾವೇರಿ: ಜಿಲ್ಲೆಯ ಹಿರಿಯ ಮುತ್ಸದ್ದಿ ರಾಜಕಾರಣಿ ಹಾಗೂ ಬ್ಯಾಡಗಿ ಕ್ಷೇತ್ರದ ಶಾಸಕ ಬಸವರಾಜ ಶಿವಣ್ಣನವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಬೇಕು ಎಂದು ರಾಜ್ಯ ಕುರಿ-ಮೇಕೆ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕ ಜಯಪ್ಪ ಜೋಗಿ ಒತ್ತಾಯಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವರಾಜ ಶಿವಣ್ಣನವರ ಹಲವು ವರ್ಷಗಳಿಂದ ಜನಪರವಾಗಿ ಕಾರ್ಯನಿರ್ವಹಿಸುತ್ತಿದ್ದು, ರೈತರು, ಕುರಿಗಾಹಿಗಳು ಹಾಗೂ ಗ್ರಾಮೀಣ ಜನರ ಅಭಿವೃದ್ಧಿಗೆ ವಿಶೇಷ ಕೊಡುಗೆ ನೀಡಿದ್ದಾರೆ. ಈ ಹಿಂದೆ ಜೆ.ಎಚ್. ಪಟೇಲ್ ನೇತೃತ್ವದ ಸರ್ಕಾರದಲ್ಲಿ ಪರಿಸರ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿ ಹಾಗೂ ಬಂಧೀಖಾನೆ ಸಚಿವರಾಗಿ ಸೇವೆ ಸಲ್ಲಿಸಿರುವ ಆಡಳಿತಾತ್ಮಕ ಅನುಭವವೂ ಅವರಿಗೆ ಇದೆ. ಇಂತಹ ಅನುಭವಿ ನಾಯಕರಿಗೆ ಸಚಿವ ಸ್ಥಾನ ನೀಡುವುದರಿಂದ ಹಾವೇರಿ ಜಿಲ್ಲೆ ಸೇರಿದಂತೆ ರಾಜ್ಯದ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗಲಿದೆ ಎಂದು ಅಭಿಪ್ರಾಯಪಟ್ಟರು.

ಹೈಕಮಾಂಡ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಮಾಜಿ ಸಿಎಂ ಸಿದ್ದರಾಮಯ್ಯ ಅವರು ಬಸವರಾಜ ಶಿವಣ್ಣನವರಿಗೆ ಅನುಭವ ಹಾಗೂ ಜನಪರ ಸೇವೆಯನ್ನು ಪರಿಗಣಿಸಿ ಸಚಿವ ಸ್ಥಾನ ನೀಡುವಂತೆ ಮನವಿ ಮಾಡಿದರು.

ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಹಿರಿಯ ಹಾಗೂ ಅನುಭವಿ ನಾಯಕರಿಗೆ ಸಚಿವ ಸಂಪುಟದಲ್ಲಿ ಅವಕಾಶ ಕಲ್ಪಿಸುವುದು ಅಗತ್ಯವಾಗಿದ್ದು, ಬಸವರಾಜ ಶಿವಣ್ಣನವರಿಗೆ ಸಚಿವ ಸ್ಥಾನ ನೀಡುವ ಮೂಲಕ ಉತ್ತರ ಕರ್ನಾಟಕ ಭಾಗಕ್ಕೆ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜನರು ತಕ್ಕಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದ ಅವರು ಚುನಾವಣೆ ದೃಷ್ಟಿಯಿಂದ ಶಿವಣ್ಣನವರಿಗೆ ಸಚಿವ ಸ್ಥಾನ ನೀಡುವ ಜೊತೆಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಮಚಂದ್ರ ಹೆಗಡೆ, ಸುರೇಶ ಮೋಟೇಬೆನ್ನೂರ, ತಿರಕಪ್ಪ ಹುಳಕೆಲ್ಲಪ್ಪನವರ, ಹುಚ್ಚಪ್ಪ ಗೊರವರ, ಜಗದೀಶ ಹರಮಗಟ್ಟಿ, ಕಲ್ಲಪ್ಪ ಯಲಗಚ್ಚಿನ್, ದುರ್ಗಪ್ಪ ದೇವರಗುಡ್ಡ ಸೇರಿದಂತೆ ಇತರರು ಇದ್ದರು.



ಪರಿಸರ ಬೆಳೆಸದಿದ್ದರೆ ಪ್ರಕೃತಿ ವಿಕೋಪ : ಸುರೇಶಗೌಡ ಪಾಟೀಲ

ಬ್ಯಾಡಗಿ: ಸಸಿಗಳನ್ನು ನೆಟ್ಟರೇ ಜವಾಬ್ದಾರಿ ಮುಗಿಯುವುದಿಲ್ಲ ಅವುಗಳನ್ನು ಬೆಳೆಸಿ ಸಂರಕ್ಷಿಸಿ ಜನ ಹಾಗೂ ಜಾನುವಾರುಗಳಿಂದ ರಕ್ಷಿಸಿದಾಗ ಮಾತ್ರ ನಿಜವಾದ ಪರಿಸರ ಸಂರಕ್ಷಣೆ ಸಾಧ್ಯ ಎಂದು ಮಾಜಿ ಶಾಸಕ ಸುರೇಶ್ ಗೌಡ ಪಾಟೀಲ್ ಹೇಳಿದರು.

ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ತಾಲೂಕು ಆಸ್ಪತ್ರೆ ಹಾಗೂ ಪರಿಸರಸ್ನೇಹಿ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ಮನುಷ್ಯನು ಸ್ವಾರ್ಥದಿಂದ ಮರಗಳನ್ನು ನಾಶಹೆಚ್ಚುತ್ತಿದೆ ಪರಿಸರ ಸಮತೋಲನಕ್ಕೆ ಧಕ್ಕೆ ಉಂಟಾಗುತ್ತಿದೆ ಪರಿಸರ ಸಂರಕ್ಷಣೆಯತ್ತ ಎಲ್ಲರೂ ಗಮನಹರಿಸದಿದ್ದರೆ ಭವಿಷ್ಯದಲ್ಲಿ ಇನ್ನಷ್ಟು ಪ್ರಕೃತಿ ವಿಕೋಪಗಳನ್ನು ಎದುರಿಸಬೇಕಾಗುತ್ತದೆ ಎಂದರು.

ತಾಲೂಕು ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ರಾಘವೇಂದ್ರ ಮಾತನಾಡಿ, ನಾವು ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸಿಕೊಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಪ್ರಕೃತಿಯಿಂದ ಪ್ರೇರಿತವಾಗಿ ಹವಾಮಾನಕ್ಕಾಗಿ ನಮ್ಮ ಭವಿಷ್ಯಕ್ಕಾಗಿ ಎಂಬುದು 2026 ವಿಶ್ವ ಪರಿಸರ ದಿನದ ಕೋಶ ವಾಕ್ಯ ಆಗಿದ್ದು ನಮ್ಮ ಭಾಗದಲ್ಲಿ ಹಸಿರು ಪ್ರಮಾಣ ಹೆಚ್ಚಿಸಲು ಮಳೆಗಾಲದಲ್ಲಿ ಹೆಚ್ಚಿನ ಸಸಿ ನೆಡುವ ಕಾರ್ಯ ಅಗತ್ಯವಾಗಿದೆ ಎಂದು ಹೇಳಿದರು.

ಈ ಸಂಧರ್ಭದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಡಾ.ಕಾಂತೇಶ ಭಜಂತ್ರಿ, ಪರಿಸರ ಸ್ನೇಹಿ ಬಳಗದ ಅಧ್ಯಕ್ಷರಾದ ಮೋಹನಕುಮಾರ ಸಿ.ಎಚ್, ವಿಜಯಕುಮಾರ್, ಡಾ. ವೀರೇಶ, ಡಾ.ಮಹೇಶ್, ಪ್ರಕಾಶ, ಸಂತೋಷ, ಚಂದ್ರಶೇಖರ, ಖಾದರ ಬಳಿಗಾರ ಅನೇಕರು ಉಪಸ್ಥಿತರಿದ್ದರು.

ನನ್ನ ತೇಜೋವಧೆ ಮಾಡಲು ಯತ್ನ: ಶಾಸಕ ಶ್ರೀನಿವಾಸ ಮಾನೆ

ಹಾನಗಲ್ಲ: ತಾಲೂಕಿನ ಜನತೆ ಅತಿವೃಷ್ಟಿ ಕೊರೊನಾ ಸಂದರ್ಭದಲ್ಲಿ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾಗ ಸ್ಪಂದಿಸದೇ ಬೆಂಗಳೂರಿನಲ್ಲಿ ಹಾಯಾಗಿದ್ದ ನಮ್ಮೂರು ನಮ್ಮವರು ನಕಲಿ ಹೋರಾಟ ತಂಡದ ರೂವಾರಿಯೊಬ್ಬರು ಇದೀಗ ತಾಲೂಕಿಗೆ ಬಂದು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ತಮ್ಮನ್ನು ತೇಜೋವಧೆ ಮಾಡಲು ಯತ್ನಿಸುತ್ತಿದ್ದಾರೆ. ಪ್ರೀತಿ ಇಟ್ಟಿರುವ ಹಾನಗಲ್ಲ ಜನರ ಋಣ ತೀರಿಸಲು ಬದ್ಧನಿದ್ದೇನೆ. ಅವರ ಬಳಿ ಬರ್ತ್ ಸರ್ಟಿಫಿಕೇಟ್ ಇರಬಹುದು, ನನ್ನ ಬಳಿ ಜನರ ಸರ್ಟಿಫಿಕೇಟ್ ಇದೆ ಎಂದು ಶಾಸಕ ಶ್ರೀನಿವಾಸ ಮಾನೆ ಗುಡುಗಿದರು.

ಮಂಗಳವಾರ ಇಲ್ಲಿನ ತಮ್ಮ ಜನಸಂಪರ್ಕ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂದೀಪ ಪಾಟೀಲ ಹೆಸರು ಎಲ್ಲೂ ಉಲ್ಲೇಖಿಸದೇ ಕಾನೂನು ಪಂಡಿತರು, ಅತೀ ವಿದ್ಯಾವಂತ ಅಪ್ರಬುದ್ಧ ಎನ್ನುತ್ತಾ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡರು. ನಾನು ಬರುವ ಮೊದಲು ಇಲ್ಲಿ ಎಫ್‌ಐಆರ್ ರಾಜಕಾರಣ ಇತ್ತು. ಜನಸಂಖ್ಯೆಗೆ ಅನುಗುಣವಾಗಿ ಎಫ್‌ಐಆರ್ ದಾಖಲಾದ ಅಂಕಿ, ಅಂಶಗಳನ್ನು ಗಮನಿಸಿದರೆ ನಮ್ಮ ಹಾನಗಲ್ಲ ಕೊನೆಯ ಸ್ಥಾನದಲ್ಲಿದೆ. ಆರೋಪ ಮಾಡುವ ಬದಲು ಪರಿಶೀಲನೆ ಮಾಡಬೇಕು ಎನ್ನುವುದನ್ನು ಅತೀ ವಿದ್ಯಾವಂತ ಅಪ್ರಬುದ್ಧ ನಕಲಿ ಹೋರಾಟಗಾರರು ಅರಿಯಬೇಕಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ರಾತ್ರಿ ಹೊತ್ತಿನಲ್ಲಿ ಒಂದು ಹಾಡಿನ ಚಿತ್ರೀಕರಣ ಮಾಡಿರುವುದು ಸರಿಯೇ? ಯಾವ ಪುರಷಾರ್ಥಕ್ಕೆ ವಿಡಿಯೋ ಮಾಡಲಾಯಿತು. ಆಸ್ಪತ್ರೆಯ ಬೆಡ್, ಆಕ್ಸಿಜನ್, ವೈದ್ಯರ ಆಸನ ಹೀಗೆ ಎಲ್ಲವನ್ನೂ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಹಾಗಾಗಿ ಆರೋಗ್ಯ ಇಲಾಖೆ ಅಧಿಕಾರಿಗಳು ತನಿಖೆಗೆ ಪೊಲೀಸರಿಗೆ ದೂರು ನೀಡಿದ್ದಾರೆ. ಚಿತ್ರೀಕರಣದ ಸಂದೇಶ ಯಾರಿಗೂ ಭಯ ಹುಟ್ಟಿಸುವ ಸಂದೇಶವಾಗುವುದು ಬೇಡ. ಜಾಗೃತಿ ಮೂಡಿಸಲಿ. ವೈದ್ಯರನ್ನು ವಿಲನ್ ಆಗಿ ಬಿಂಬಿಸಿರುವುದು ಸರಿಯೇ? ಎಂದು ಖಾರವಾಗಿ ಪ್ರಶ್ನಿಸಿದರು. ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಇದ್ದರು.



ವಿದ್ಯಾರ್ಥಿಗಳ ಉತ್ತಮ ಸಾಧನೆ



ರಾಣೇಬೆನ್ನೂರ: ಬೆಂಗಳೂರುದಲ್ಲಿ ಜೂನ್ 12 ರಿಂದ ಜೂ.14ರವರೆಗೆ ನಡೆದ ಕರ್ನಾಟಕ ರಾಜ್ಯ ಅಂಡರ್-9 ಚೆಸ್ ಚಾಂಪಿಯನ್‌ಶಿಪ್-2026ರಲ್ಲಿ ಸ್ಥಳೀಯ ಖನ್ನೂರ ವಿದ್ಯಾನಿಕೇತನ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ.

ಶಾಲೆಯ ವಿದ್ಯಾರ್ಥಿ ಶ್ರೇಯಾಂಶ್ ದಾಸ್ ಸತತ ಎರಡನೇ ಬಾರಿಗೆ ಕರ್ನಾಟಕ ರಾಜ್ಯ ಅಂಡರ್-9 ಓಪನ್ ಚೆಸ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಒಂಬತ್ತು ಸುತ್ತುಗಳಲ್ಲಿ 8 ಗೆಲುವು ಮತ್ತು 1 ಡ್ರಾ ದಾಖಲಿಸಿ ಒಟ್ಟು 8.5 ಅಂಕಗಳನ್ನು ಗಳಿಸಿದ ಅವರು ಟೂರ್ನಿಯುದ್ದಕ್ಕೂ ಅಜೇಯರಾಗಿದ್ದು ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಬಾಲಕಿಯರ ವಿಭಾಗದಲ್ಲಿ ಶಾಲೆಯ ವಿದ್ಯಾರ್ಥಿನಿ ದಿಶಾನಿ ಅತ್ಯುತ್ತಮ ಪ್ರದರ್ಶನ ನೀಡಿ ರನ್ನರ್-ಅಪ್ ಸ್ಥಾನವನ್ನು ಪಡೆದಿದ್ದಾರೆ. ಅವರು 9 ಸುತ್ತುಗಳಲ್ಲಿ 7 ಗೆಲುವು ಹಾಗೂ 2 ಸೋಲುಗಳೊಂದಿಗೆ 7 ಅಂಕಗಳನ್ನು ಗಳಿಸಿ ತಮ್ಮ ಪ್ರತಿಭೆ ಮತ್ತು ಹೋರಾಟದ ಮನೋಭಾವವನ್ನು ಪ್ರದರ್ಶಿಸಿದ್ದಾರೆ.

ಸಾಧನೆಗೈದ ಮಕ್ಕಳಿಗೆ ಶಾಲೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ಶಾಸಕ ಲಮಾಣಿಗೆ ಮಂತ್ರಿ ಸ್ಥಾನ ನೀಡಲು ಒತ್ತಾಯ

ಗುತ್ತಲ: ಮೂರು ಬಾರೀ ಶಾಸಕರಾಗಿ, ಮುಜರಾಯಿ ಹಾಗೂ ಜವಳಿ ಖಾತೆ ಸಚಿವರಾಗಿ ಉತ್ತಮವಾಗಿ ಕಳಂಕ ರಹಿತರಾಗಿ ಕಾರ್ಯನಿರ್ವಹಿಸಿ ಸಮಾಜದ ಎಲ್ಲ ವರ್ಗದವರ ಪ್ರೀತಿ ವಿಶ್ವಾಸಗಳಿಸಿರುವ ರುದ್ರಪ್ಪ ಲಮಾಣಿ ಅವರಿಗೆ ಮುಖ್ಯ ಮಂತ್ರಿ ಡಿ.ಕೆ ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಮಂತ್ರಿ ಸ್ಥಾನ ನೀಡಲೇ ಬೇಕೆಂದು ಕಾಂಗ್ರೆಸ್ ಹಿರಿಯ ಮುಖಂಡ ಹಾಗೂ ಜಿಪಂ ಮಾಜಿ ಸದಸ್ಯ ಸಿ.ಬಿ.ಕುರವತ್ತಿಗೌಡರ ಆಗ್ರಹಿಸಿದರು.

ಮಂಗಳವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಪ್ರಸ್ತುತ ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿರುವ ಏಕೈಕ ಬಂಜಾರ ಸಮಾಜದ ಶಾಸಕರಾಗಿದ್ದು, ಮುಜರಾಯಿ ಹಾಗೂ ಜವಳಿ ಸಚಿವರಾಗಿದ್ದ ಸಮಯದಲ್ಲಿ ಉತ್ತಮ ಕಾರ್ಯದಕ್ಷತೆಯಿಂದ ಕೆಲಸ ನಿರ್ವಹಿಸಿದ್ದು, ಅನೇಕ ದೇವಸ್ಥಾನಗಳ ಅಭಿವೃದ್ಧಿಗೆ ಸಾಕಷ್ಟು ಹಣ ನೀಡಿದ್ದರು. ಸಮಾಜದ ಎಲ್ಲ ವರ್ಗದವರಿಗೂ ನ್ಯಾಯ ಕೊಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.



ಪ್ರಸ್ತುತ ಮಂತ್ರಿ ಮಂಡಲದ ವಿಸ್ತರಣೆ ವೇಳೆ ರುದ್ರಪ್ಪ ಲಮಾಣಿ ಅವರಿಗೆ ಮಂತ್ರಿ ಸ್ಥಾನ ನೀಡಬೇಕೆಂದು ಮುಖ್ಯ ಮಂತ್ರಿ ಡಿ.ಕೆ ಶಿವಕುಮಾರ, ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ ಅವರಿಗೆ ಒತ್ತಾಯಿಸಿದ ಸಿ.ಬಿ ಕುರವತ್ತಿಗೌಡರ, ರುದ್ರಪ್ಪ ಲಮಾಣಿ ಅವರಿಗೆ ಮಂತ್ರಿ ಸ್ಥಾನ ನೀಡದಿದ್ದರೇ ಹಿಂದುಳಿದ ಬಂಜಾರ ಸಮಾಜಕ್ಕೆ ಅನ್ಯಾಯ ಮಾಡಿದಂತಾಗುತ್ತದೆ ಎಂದರು.

ಆಶ್ರಯ ಸಮಿತಿ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಶಹಜಾನಸಾಬ ಅಗಡಿ ಮಾತನಾಡಿದರು.

ಪಪಂ ಅಧ್ಯಕ್ಷೆ ದೀಪಾ ಭರಡಿ, ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರದೀಪ ಸಾಲಗೇರಿ, ಸದಸ್ಯರಾದ ಖಲೀಲಸಾಬ ಖಾಜಿ, ಮಹ್ಮದಹನೀಫ ರಿತ್ತಿ, ಅಜ್ಜಯ್ಯ ಬಂಡಿವಡ್ಡರ, ನಾಮ ನಿರ್ದೇಶಿತ ಸದಸ್ಯರಾದ ನಿಂಗಪ್ಪ ನಾಯಕ, ಪಿ.ಎನ್ ಹೇಮಗಿರಿಮಠ, ಚನ್ನಪ್ಪ ಕಲಾಲ, ತಾಲೂಕಾ ಭೂ ನ್ಯಾಯಮಂಡಳಿ ಸದಸ್ಯರಾದ ಮಂಜುನಾಥ ದಪ್ಪೇರ, ಮಾಜಿ ಸದಸ್ಯರಾದ ಗುಡ್ಡಪ್ಪ ಗೊರವರ, ಲಿಂಗೇಶ ಬೆನ್ನೂರ, ಆಶ್ರಯ ಸಮಿತಿ ಸದಸ್ಯರಾದ ವಿಜಯ ಚಲವಾದಿ, ಮಾಲತೇಶ ಬನ್ನಿಮಟ್ಟಿ, ದುರ್ಗಪ್ಪ ಬಾರ್ಕಿ, ಅರ್ಬನ್ ಬ್ಯಾಂಕ್ ನಿರ್ದೇಶಕ ಮಾಲತೇಶ ಕಿತ್ತೂರ, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಹನುಮಂತ ಅಗಸಿಬಾಗಿಲದ, ಗುರುರಾಜ ನೆಗಳೂರ, ಬಂಜಾರ ಸಮಾಜದ ಮುಖಂಡರಾದ ರಾಮಣ್ಣ ಲಮಾಣಿ, ಸಂತೋಷ ಲಮಾಣಿ, ಪೀರಸಾಬ ಹಾನಗಲ್, ಶಂಕ್ರಪ್ಪ ಗೌಳಿ ಸೇರಿದಂತೆ ಮತ್ತಿತರರು ಇದ್ದರು.

ಜ್ಞಾನಕ್ಕಾಗಿ ಮಾತ್ರ ಮೊಬೈಲ್ ಬಳಸಿ: ತಳಕಟ್ಟಿ

ಹಾವೇರಿ: ಬಸವೇಶ್ವರ ನಗರದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಹಿಳಾ ಪೋಲಿಸ್ ಠಾಣೆ ವಿಭಾಗ ಹಾಗೂ ಎನ್‌ಎಸ್‌ಎಸ್ ಘಟಕದ ವತಿಯಿಂದ ಮಂಗಳವಾರ ಪೋಕ್ಸೋ ಹಾಗೂ ಮಾಹಿತಿ ತಂತ್ರಜ್ಞಾನ ಕಾನೂನು ಅರಿವು ಕಾರ್ಯಾಗಾರ ಜರುಗಿತು.

ಕಾರ್ಯಕ್ರಮದಲ್ಲಿ ಮಹಿಳಾ ಪೋಲಿಸ್ ಠಾಣೆಯ ಉಪವಿಭಾಗದ ಡಿಎಸ್‌ಪಿ ಜೆ.ಎಚ್. ತಳಕಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನ ಯುಗದಲ್ಲಿ ಮೊಬೈಲ್ ಹಾವಳಿಯಿಂದ ವಿದ್ಯಾರ್ಥಿಗಳು ತಮಗೆ ಅರಿವಿಲ್ಲದೆ ಹಾಳಾಗುತ್ತಿದ್ದು, ನಮ್ಮ ಹತ್ತಿರವಿರುವ ನಮಗೆ ಅರಿವಿಲ್ಲದ ಹಾಗೆ ನಮ್ಮ ಮೊಬೈಲ್ ನಮಗೆ ಶತ್ರುವಾಗಿದೆ. ಮೊಬೈಲ್‌ನ್ನು ನಮ್ಮ ಜ್ಞಾನಕ್ಕಾಗಿ ಬಳಸಿ ಎಂದು ಕಿವಿ ಮಾತು ಹೇಳಿದರು.

ನಂತರ ಮಹಿಳಾ ಪೊಲೀಸ್ ಠಾಣೆಯ ಪಿಎಸ್‌ಐ ಕುಮಾರ ಕುರಗುಂದ ವಿದ್ಯಾರ್ಥಿಗಳಿಗೆ ಪೋಕ್ಸೋ ಕಾಯ್ದೆಗಳ ಬಗ್ಗೆ ಇಂದಿನ ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿ ಇರಬೇಕು. ವಿದ್ಯಾರ್ಥಿಗಳು ಓದುದರ ಕಡೆ ಹೆಚ್ಚು ಗಮನಹರಿಸಬೇಕೆಂದು ಸಲಹೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯರಾದ ರವಿಕುಮಾರ ಅಂಬೋರೆ ಮಾತನಾಡಿದರು.


ಈ ಸಂದರ್ಭದಲ್ಲಿ ಹಾವೇರಿ ಮಹಿಳಾ ಪೊಲೀಸ್ ಠಾಣೆ ಇನ್ಸಪೆಕ್ಟರ್ ಮಂಜುನಾಥ್, ಕುಮಾರ ಕೋರಿ, ಉಪನ್ಯಾಸಕರುಗಳಾದ ಐ.ಡಿ. ಕೊರಗರ, ಎಸ್.ಬಿ. ದೊಡ್ಡಮನಿ, ಖಾದರಭಾಷಾ, ಬಸವರಾಜ ಕರಿಸಣ್ಣವರ ಮುಂತಾದವರು ಉಪಸ್ಥಿತರಿದ್ದರು. ಉಪನ್ಯಾಸಕಿ ಸರಸ್ವತಿ ತಗಡಿನಮನಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಕಿರುಸುದ್ದಿ

ಸಂವಾದ ಇಂದು

ಬೆಳಗಾವಿ: ಸರ್ವೋನ್ನತ ನ್ಯಾಯಾಲಯದ ಖ್ಯಾತ ನ್ಯಾಯವಾದಿ ಮೋಹನ ಕಾತರಕಿ ಅವರು ಜೂ.17ರಂದು ಬೆಳಗಾವಿಗೆ ಆಗಮಿಸಿದ್ದು, ಬೆಳಗ್ಗೆ 11ಕ್ಕೆ ನಗರದ ಸರ್ಕಿಟ್ ಹೌಸ್‌ನಲ್ಲಿ ಕನ್ನಡ ಸಂಘಟನೆಗಳ ಮುಖಂಡರೊಂದಿಗೆ ಮಹತ್ವದ ಸಂವಾದ ಕಾರ್ಯಕ್ರಮ ನಡೆಸಲಿದ್ದಾರೆ. ಸಂವಾದದಲ್ಲಿ ನೆಲ, ಜಲ, ಭಾಷೆ ಹಾಗೂ ಬೆಳಗಾವಿ ಮಹಾನಗರ ಪಾಲಿಕೆಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ಕನ್ನಡ ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು, ಹೋರಾಟಗಾರರು ಭಾಗವಹಿಸಲಿದ್ದಾರೆ. ಜಿಲ್ಲೆಯ ರಾಮದುರ್ಗ ತಾಲೂಕಿನ ಹುಲಕುಂದ ಗ್ರಾಮದ ಮೂಲದವರಾದ ಮೋಹನ ಕಾತರಕಿ ಅವರು ಮಹಾದಾಯಿ, ಕೃಷ್ಣ ಹಾಗೂ ಕಾವೇರಿ ಜಲವಿವಾದಗಳ ಪ್ರಕರಣಗಳಲ್ಲಿ ಕರ್ನಾಟಕದ ಪರವಾಗಿ ಸಮರ್ಥವಾಗಿ ವಾದ ಮಂಡಿಸಿ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಸಂವಾದ ಕಾರ್ಯಕ್ರಮಕ್ಕೆ ಪತ್ರಕರ್ತರನ್ನೂ ಆಹ್ವಾನಿಸಲಾಗಿದ್ದು, ಅವರು ಸಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂವಾದದ ಪ್ರಯೋಜನ ಪಡೆಯುವಂತೆ ಕೋರಲಾಗಿದೆ. ಕನ್ನಡ ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಮನವಿ ಮಾಡಿದ್ದಾರೆ.



ವಿದ್ಯುತ್ ವ್ಯತ್ಯಯ ಇಂದು

ಮೂಡಲಗಿ: ಸಮೀಪದ ಹಳ್ಳೂರ 110ಕೆವಿ ವಿದ್ಯುತ್ ಕೇಂದ್ರದಲ್ಲಿ ಮೊದಲನೇ ತ್ರೈಮಾಸಿಕ ನಿರ್ವಹಣಾ ಕೆಲಸವು ಜೂ.17ರಂದು ನಡೆಯಲಿದ್ದು, ಹಳ್ಳೂರ ಎನ್.ಜೆ.ವಾಯ್ ಮಾರ್ಗದ ಮೇಲೆ ಬರುವ ಹಳ್ಳೂರ, ಶಿವಾಪುರ, ಕಮಲದಿನ್ನಿ, ಖಾನಾಟ್ಟಿ, ಮುನ್ಯಾಳ್, ರಂಗಾಪುರ ಗ್ರಾಮಗಳಲ್ಲಿ ಹಾಗೂ ಎಲ್ಲ ನೀರಾವರಿ ಪಂಪಸೆಟ್ಟ ಮಾರ್ಗಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಆಗಲಿದೆ. ಗ್ರಾಹಕರು ಸಹಕರಿಸಬೇಕು ಎಂದು ಮೂಡಲಗಿ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂಜಾಟ: 8 ಜನರ ಬಂಧನ

ಬೆಳಗಾವಿ: ತಾಲೂಕಿನ ಬೋಕನೂರ ಗ್ರಾಮದ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಜೂಜಾಟ ಅಡ್ಡದ ಮೇಲೆ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆ ಪೊಲೀಸರು ಯಶಸ್ವಿ ದಾಳಿ ನಡೆಸಿ ಎಂಟು ಜನರನ್ನು ಬಂಧಿಸಿದ್ದಾರೆ. ಮಾಹಿತಿ ಆಧರಿಸಿ ಪೊಲೀಸ್ ಇನ್ಸ್ಪೆಕ್ಟರ್ ನಾಗನಗೌಡ ಕಟ್ಟಿಮನಿಗೌಡ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ದಿಢೀರ್ ದಾಳಿ ನಡೆಸಿದರು. ದಾಳಿಯ ವೇಳೆ ಜೂಜಾಟದಲ್ಲಿ ತೊಡಗಿದ್ದ ವಿಜಯ ಶ್ರೀನಿವಾಸ ನಾಯ್ಡು(54), ಏಕನಾಥ ಸದಾಶಿವ ಹಾವಳೆ(37), ಹರುನ ಮೆಹಬೂಬ ಮುಲ್ಲಾ(60), ಸ್ವಪ್ನಾಲ ಉಮಾಕಾಂತ ಹುಂದಿ(30), ಕಲ್ಲಪ್ಪಾ ತಮ್ಮಣ್ಣಾ ಅಷ್ಟೇಕರ(62), ಸುನಿಲ ಬಾಬು ಬುವಾ(43), ಬಾಳು ಸುಬ್ಬಣ್ಣ ನಾಯಕ(40) ಹಾಗೂ ಅಜಯ ಮಧು ಮಾಂಡಳಿಕ (23) ಎಂಬ ಎಂಟು ಜನರನ್ನು ಬಂಧಿಸಿದ್ದಾರೆ. ಆರೋಪಿಗಳಿಂದ ಜೂಜಾಟಕ್ಕೆ ಬಳಸಲಾಗುತ್ತಿದ್ದ 23,500 ರೂ.ನಗದು ಹಣ ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಳ್ಳಲಾಗಿದೆ. ಈ ಯಶಸ್ವಿ ಕಾರ್ಯಾಚರಣೆಗೆ ಬೆಳಗಾವಿ ನಗರ ಪೊಲೀಸ್ ಆಯುಕ್ತರು ಹಾಗೂ ಉಪ ಪೊಲೀಸ್ ಆಯುಕ್ತರು (ಡಿಸಿಪಿ) ಅಭಿನಂದನೆ ಸಲ್ಲಿಸಿ, ದಾಳಿ ನಡೆಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯವನ್ನು ಶ್ಲಾಘಿಸಿದ್ದಾರೆ.

ನಿಧನ ಸುದ್ದಿ

ಸುಭಾಸ ಕಾಂಬಳೆ

ಹಲ್ಯಾಳ: ಸುಭಾಸ ಕಾಂಬಳೆ(57) ಹೃದಯಾಘಾತದಿಂದ ನಿಧನರಾದರು. ಮೃತರಿಗೆ ಸಹೋದರರು, ಸಹೋದರಿಯರು, ಇಬ್ಬರು ಪುತ್ರರು, ಓರ್ವ ಪುತ್ರಿ, ಪತ್ನಿ ಹಾಗೂ ಅಪಾರ ಬಂಧು ಬಳಗ ಇದ್ದಾರೆ.



ಲಕ್ಷ್ಮಣ ಮಹಾರಾಜರು

ಕಕಮರಿ: ಗ್ರಾಮದ ನಿವಾಸಿ ಲಕ್ಷ್ಮಣ ಜನಗೌಡ ಮಹಾರಾಜರು(85)ನಿಧನರಾದರು. ಮೃತರಿಗೆ ಕನ್ನೂರಿನ ಶಾಂತಿ ಕುಟೀರದ ಗಣಪತರಾವ್ ಮಹಾರಾಜರ ಪರಮ ಶಿಷ್ಯರಾಗಿದ್ದರು. ಸಕಲ ಗುರುಬಂದುಗಳನ್ನು ಅಗಲಿದ್ದಾರೆ.





ಹುಕ್ಕೇರಿ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮಾರ್ಗದರ್ಶನದಲ್ಲಿ ಹುಕ್ಕೇರಿ ಪೊಲೀಸರು ಕಾರ್ಯಾಚರಣೆ ನಡೆಸಿ, ವಿವಿಧ ಪ್ರಕರಣಗಳಲ್ಲಿ ಕಳೆದುಹೋಗಿದ್ದ ಒಟ್ಟು22 ಮೊಬೈಲ್‌ಗಳನ್ನು ಪತ್ತೆ ಹಚ್ಚಿದರು. ಸುಮಾರು 4.85ಲಕ್ಷಮೌಲ್ಯದ ಮೊಬೈಲ್ ಗಳನ್ನು ಮಾಲೀಕರಿಗೆ ಹಸ್ತಾಂತರಿಸಿದರು. ಡಿವೈಎಸ್ಪಿ ರವಿನಾಯಿಕ ಮಾತನಾಡಿದರು. ಸಿಪಿಐ ಶಿವಶಂಕರ ಗಣಾಚಾರಿ, ಪಿಎಸ್ಐ ಸತೀಶ ಎಸ್., ಪೊಲೀಸ್ ಸಿಬ್ಬಂದಿಗಳಾದ ಮುಂಜುನಾಥ ಕಬ್ಬೂರ, ಅರ್ಜುನ ಮಸರಗುಪ್ಪಿ ಸೇರಿದಂತೆ ಅನೇಕರು ಇದ್ದರು.

ಹೆಲ್ಮೆಟ್ ಕಡ್ಡಾಯ ಜಾಗೃತಿ ಅಭಿಯಾನ

ಬೆಳಗಾವಿ: ರಸ್ತೆ ಅಪಘಾತಗಳಲ್ಲಿ ಸಂಭವಿಸುತ್ತಿರುವ ಸಾವು-ನೋವುಗಳನ್ನು ತಡೆಗಟ್ಟುವ ಉದ್ದೇಶದಿಂದ ಬೆಳಗಾವಿ ಜಿಲ್ಲಾ ಪೊಲೀಸ್ ಇಲಾಖೆ ಹೆಲ್ಮೆಟ್ ಕಡ್ಡಾಯ ಜಾಗೃತಿ ಅಭಿಯಾನವನ್ನು ಜಿಲ್ಲಾದ್ಯಂತ ಹಮ್ಮಿಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಬೈಕ್ ಸವಾರರು ರಸ್ತೆ ಅಪಘಾತಗಳಲ್ಲಿ ಪ್ರಾಣ ಕಳೆದುಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆ, ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕೆಂದು ಪೊಲೀಸರು ಮನವಿ ಮಾಡಿದ್ದಾರೆ. ಮಂಗಳವಾರ ನಗರದ ಚೆನ್ನಮ್ಮ ವೃತ್ತದಲ್ಲಿ ಪೊಲೀಸ್ ಇಲಾಖೆಯ ನೇತೃತ್ವದಲ್ಲಿ ವಿಶೇಷ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ವೇಳೆ ಸವಾರರಿಗೆ ಹೆಲ್ಮೆಟ್ ಧರಿಸುವುದರಿಂದ ಆಗುವ ಸುರಕ್ಷತಾ ಪ್ರಯೋಜನಗಳ ಕುರಿತು ಅರಿವು ಮೂಡಿಸಲಾಯಿತು. ಚೆನ್ನಮ್ಮ ವೃತ್ತದಲ್ಲಿ ಸಂಚರಿಸುತ್ತಿದ್ದ ದ್ವಿಚಕ್ರ ವಾಹನ ಸವಾರರನ್ನು ತಡೆದು, ಹೆಲ್ಮೆಟ್ ಧರಿಸುವಂತೆ ಪೊಲೀಸರು ಮನವಿ ಮಾಡಿದರು. ಅಲ್ಲದೆ, ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಿದ್ದ ಸವಾರರ ವಿರುದ್ಧ ಸಂಚಾರ ನಿಯಮಗಳ ಪ್ರಕಾರ ದಂಡ ವಿಧಿಸಲಾಯಿತು. ರಸ್ತೆ ಸುರಕ್ಷತೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದ್ದು, ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಹೆಲ್ಮೆಟ್ ಜೀವ ರಕ್ಷಕ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದರು. ಈ ಕಾರ್ಯಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ರಸ್ತೆ ಸುರಕ್ಷತೆ ಕುರಿತು ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ನಾಗರಿಕರು ಅಭಿಪ್ರಾಯಪಟ್ಟರು.



ಬೆಳಗಾವಿ: ರಸ್ತೆ ಅಪಘಾತಗಳಲ್ಲಿ ಸಂಭವಿಸುತ್ತಿರುವ ಸಾವು-ನೋವುಗಳನ್ನು ತಡೆಗಟ್ಟುವ ಉದ್ದೇಶದಿಂದ ಬೆಳಗಾವಿ ಜಿಲ್ಲಾ ಪೊಲೀಸ್ ಇಲಾಖೆ ಹೆಲ್ಮೆಟ್ ಕಡ್ಡಾಯ ಜಾಗೃತಿ ಅಭಿಯಾನವನ್ನು ಜಿಲ್ಲಾದ್ಯಂತ ಹಮ್ಮಿಕೊಂಡಿದೆ.

ಜೈನ ಸಮುದಾಯದ ಧರ್ಮಸಭೆ | ಮುನಿಗಳ ಒತ್ತಾಯ


ಜೈನ ಅಭಿವೃದ್ಧಿ ನಿಗಮ ಸ್ಥಾಪಿಸಿ

ಚಿಕ್ಕೋಡಿ: ಕರ್ನಾಟಕ ರಾಜ್ಯದಲ್ಲಿ ಜೈನ ಸಮುದಾಯದ ಜನರ ಅಭಿವೃದ್ಧಿಯಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ದಿಟ್ಟ ಹೆಜ್ಜೆಯನ್ನು ಇರಿಸಿ ಜೈನಸಮಾಜದ ಏಳ್ಗೆಗೆ ಅಭಿವೃದ್ಧಿ ನಿಗಮ ಸ್ಥಾಪಿಸಿ, ಪ್ರತಿ ವರ್ಷ ಅನುದಾನ ಮೀಸಲಿಡಬೇಕು ಎಂದು ಹುಬ್ಬಳ್ಳಿ-ವರೂರಿನ ಆಚಾರ್ಯ ಗುಣಧರನಂದಿ ಮುನಿ ಮಹಾರಾಜರು ಹೇಳಿದರು.

ತಾಲೂಕಿನ ಕೋಥಳಿ ಶಾಂತಿಗಿರಿ ಕ್ಷೇತ್ರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಬೆಳಗಾವಿ ಜಿಲ್ಲಾ ಮಟ್ಟದ ಜೈನ ಸಮುದಾಯದ ಧರ್ಮಸಭೆಯ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, ಬಹಳ ದಿನಗಳಿಂದ ನನ್ನ ಎರಡು ಆಶಯಗಳು ಇದ್ದವು. ಮೊದಲನೆಯದ್ದು ರಾಜ್ಯ ಮುಖ್ಯಮಂತ್ರಿಯಾಗಿ ಡಿ ಕೆ ಶಿವಕುಮಾರ ಅಧಿಕಾರವಹಿಸಿಕೊಳ್ಳಬೇಕು. ಎರಡನೇಯದ್ದು, ಜೈನ ಸಮುದಾಯದ ಅಭಿವೃದ್ಧಿ ನಿಗಮ ಸ್ಥಾಪಿಸಬೇಕೆಂಬುವುದು. ಒಂದನೆಯ ಆಶಯ ಈಡೇರಿದ್ದು, ಎರಡನೇಯದ್ದನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಶೀಘ್ರ ಈಡೇರಿಸಬೇಕೆಂದು ಒತ್ತಾಯಿಸಿದರು.

ಮಾಜಿ ಸಚಿವ ವೀರಕುಮಾರ ಪಾಟೀಲ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಜೈನ ಸಮುದಾಯದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಸೌಲಭ್ಯಗಳು ಸಿಗಬೇಕು. ಜೈನ ಬಸದಿಗಳ ರಕ್ಷಣೆಯಾಗಬೇಕು.

ಜೈನ ವಿದ್ಯಾರ್ಥಿಗಳಿಗೆ ವಸತಿ ನಿಲಯ ಸ್ಥಾಪಿಸಬೇಕೆಂಬುವುದು ಸೇರಿದಂತೆ ಹಲವು ಬೇಡಿಕೆಗಳು ಬೇಡಿಕೆಗಳಾಗಿಯೇ ಉಳಿದಿವೆ. ಸರ್ಕಾರ ಜೈನ ಅಭಿವೃದ್ಧಿ ನಿಗಮ ಸ್ಥಾಪನೆಗೆ ಮುಂದಾಗಬೇ ಇದ್ದಲ್ಲಿ ಶೀಘ್ರದಲ್ಲಿಯೇ ಬೆಂಗಳೂರಿಗೆ ನಿಯೋಗ ತೆರಳಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಮನವಿ ನೀಡಲಾಗುವುದು ಎಂದರು.



ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅಣ್ಣಾಸಾಹೇಬ ಹವಲೆ ಮಾತನಾಡಿ, ಜೈನ ಸಮುದಾಯ ಸರ್ಕಾರಿ ಸೌಲಭ್ಯಗಳಿಂದ ವಂಚಿತವಾಗಿದೆ. ಅದರಲ್ಲೂ ವಿದ್ಯಾರ್ಥಿಗಳಿಗೆ ದೊರೆಯಬೇಕಾದ ಸೌಕರ್ಯಗಳು ದೊರೆಯುತ್ತಿಲ್ಲ. ಜೈನ ಸಮಾಜದ ಅಭಿವೃದ್ಧಿ ನಿಗಮ ಸ್ಥಾಪಿಸುವದೊಂದೇ ಇದಕ್ಕಿರುವ ಪರಿಹಾರ'' ಎಂದು ಹೇಳಿದರು.

ಈ ಸಂದರ್ಭದಲ್ಲಿ ಆಚಾರ್ಯ ದೇಶಭೂಷಣ ದಿಗಂಬರ ಜೈನ ಟ್ರಸ್ಟ್ ವತಿಯಿಂದ ಆಚರ್ಯ ದೇಷಭೂಷಣ ಮಹಾರಾಜರ 39ನೇ ಪುಣ್ಯತಿಥಿ, ಆಚರ್ಯ ವರದತ್ತಸಾಗರ ಮುನಿಮಹಾರಾಜರ 20ನೇ ಪುಣ್ಯತಿಥಿ, ಚಂದ್ರಪ್ರಭ, ಶಾಂತಿನಾಥ ಮತ್ತು ಭಗವಾನ ಮಹಾವೀರರ ಮೂರ್ತಿಗಳಿಗೆ ಮಹಾಮಸ್ತಕಾಭಿಷೇಕ ನೆರವೇರಿಸಲಾಯಿತು.

ಸಭೆಯಲ್ಲಿ ಜೈನ ಸಮಾಜದ ಮುಖಂಡರಾದ ಮಹಾವೀರ ನಿಲಜಗಿ, ಅರುಣ ಯಲಗುದ್ರಿ, ಭರತೇಶ ಬಣವಣೆ, ಧುಳಗೌಡ ಪಾಟೀಲ, ಎಸ್ ಟಿ ಮುನವಳ್ಳಿ, ಭೋಜಕರ, ಸುನೀಲ ಹನುಮನ್ನವರ, ವಿದ್ಯಾಧರ ಪಾಟೀಲ, ಅನಂತಮತಿ ಅಗ್ರೆ, ಶೀತಲ ಪಾಟೀಲ, ದಾದಾ ಪಾಟೀಲ, ಟ್ರಸ್ಟ್ ಅಧ್ಯಕ್ಷ ಪದ್ಮಾಕರ ಪಾಟೀಲ, ಪಾಸಗೌಡ ಪಾಟೀಲ, ಪಾಯಗೌಡ ಖೋತ ಮುಂತಾದವರು ಇದ್ದರು.

ರಕ್ತದಾನಕ್ಕೆ ಯುವಜನತೆ ಮುಂದಾಗಿ

ಬೆಳಗಾವಿ: ಯುವಜನರು ರಕ್ತದಾನ ಮಾಡುವ ಮೂಲಕ ಜೀವಗಳನ್ನು ಉಳಿಸಲು ಮುಂದಾಗಬೇಕು. ರಕ್ತದಾನವು ಒಂದು ಮಹತ್ತರ ಮಾನವೀಯ ಸೇವೆಯಾಗಿದ್ದು, ಪ್ರತಿಯೊಬ್ಬರ ಸಾಮಾಜಿಕ ಜವಾಬ್ದಾರಿಯಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಕೆ.ಎನ್.ಶಿವಕುಮಾರ, ತಿಳಿಸಿದರು.

ವಿಶ್ವ ರಕ್ತದಾನಿಗಳ ದಿನಾಚರಣೆಯ ಅಂಗವಾಗಿ, ಎಸ್ಜಿಬಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಳಗಾವಿಯ ರೋಗನಿದಾನ ವಿಭಾಗ ಹಾಗೂ ಎನ್‌ಎಸ್‌ಎಸ್ ಘಟಕವು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಳಗಾವಿ, ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ, ಕೆಎಸ್‌ಎಪಿಎಸ್ ಹಾಗೂ ಬೆಳಗಾವಿ ರಕ್ತ ಕೇಂದ್ರದ ಸಹಯೋಗದಲ್ಲಿಎಸ್ಜಿಬಿ ಆಯುರ್ವೇದ ಆಸ್ಪತ್ರೆ, ಬೆಳಗಾವಿಯಲ್ಲಿ ಮೆಗಾ ರಕ್ತದಾನ ಶಿಬಿರ ಹಾಗೂ ಜಾಗೃತಿ ರ್‍ಯಾಲಿ ಆಯೋಜಿಸಿತು. ಸ್ವಯಂ ಪ್ರೇರಿತ ರಕ್ತದಾನದ ಮಹತ್ವ, ಸುರಕ್ಷಿತ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯತೆ ಹಾಗೂ ಯುವಜನರನ್ನು ಮಾನವೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವ ಕುರಿತು ಡಾ.ಚಾಂದಿನಿ ದೇವಾಡಿ ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷ ಡಾ.ಅಡಿವೇಶ ಅರಕೇರಿ ಮಾತನಾಡಿ,ರಕ್ತದಾನ ಶಿಬಿರದಲ್ಲಿ ರಕ್ತದಾನಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅವರ ದಾನವು ಅಗತ್ಯವಿರುವ ರೋಗಿಗಳ ಜೀವ ಉಳಿಸಲು ಸಹಕಾರಿಯಾಗುತ್ತದೆ ಎಂದರು.

ಬೆಳಗಾವಿ ನಗರದಲ್ಲಿ ಅನೇಕ ಬಾರಿ ರಕ್ತದಾನ ಮಾಡಿದ ದಾನಿಗಳನ್ನು ಸಮಾಜಕ್ಕೆ ನೀಡಿದ ಅಮೂಲ್ಯ ಕೊಡುಗೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ರೋಗನಿದಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಸಾಗರ ಎಸ್.ಕೆ. ಕಾರ್ಯಕ್ರಮದ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ನವೀನ್ .ಎ. ಎಂ. ಕಾರ್ಯಕ್ರಮದ ಸಮನ್ವಯ ವಹಿಸಿಕೊಂಡಿದ್ದರು. ರಕ್ತದಾನದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ರ್‍ಯಾಲಿ ನಡೆಸಲಾಯಿತು.ಈ ವೇಳೆ 500 ಜನರು ಭಾಗವಹಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಪನಿರ್ದೇಶಕ ಡಾ.ಎಂ.ಎಸ್.ಪಲ್ಲೇದ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಐ.ಪಿ.ಗಡಾದ, ಜಿಲ್ಲಾ ಕಾರ್ಯಕ್ರಮಾಧಿಕಾರಿ ಡಾ.ಚಾಂದಿನಿ ದೇವಡಿ, ಕ್ಷಯರೋಗ ವೈದ್ಯಾಧಿಕಾರಿ ಡಾ.ಬಿ.ಎನ್.ತುಕ್ಕಾರ್, ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ವಿವೇಕ ಹೊನ್ನಳ್ಳಿ, ಬೆಳಗಾವಿ ರಕ್ತ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಗಿರೀಶ.ಸಿ.ಬಿ ಉಪಸ್ಥಿತರಿದ್ದರು.



ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸಿ

ರಾಮದುರ್ಗ: ಸ್ವಾಮಿಗಳಾದವರು ಮೂಢ ನಂಬಿಕೆ, ಮೌಢ್ಯ, ಅಜ್ಞಾನ ತೊಲಗಿಸಿ ಸುಜ್ಞಾನದ ಹಾದಿಯಲ್ಲಿ ಭಕ್ತರು ನಡೆಯುವಂತೆ ಶ್ರಮಿಸುವ ಮೂಲಕ ಸಮಾಜದ ಕಲ್ಯಾಣ ಮಾಡಲು ಸ್ವಾಮಿಗಳಾದವರು ಮುಂದಾಗಬೇಕೆಂದು ಗದಗ ಡಂಬಳದ ಡಾ. ತೋಂಟದ ಸಿದ್ಧರಾಮ ಶ್ರೀಗಳು ಹೇಳಿದರು.

ಮಂಗಳವಾರ ತಾಲೂಕಿನ ಕಲ್ಲೂರ ಸಿದ್ದೇಶ್ವರ ದೇವಸ್ಥಾನದಲ್ಲಿ ಶಿರೋಳ ಮತ್ತು ಬೈರನಟ್ಟಿಯ ಶಾಂತಲಿಂಗ ಶ್ರೀಗಳು ಒಂದು ತಿಂಗಳು ಮೌನಲಿಂಗಾನಷ್ಠಾನದ ಮಂಗಲೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಸಮಾಜ ಕಲ್ಯಾಣ ಮಾಡಲು ಆತ್ಮಶಕ್ತಿ ಬೇಕಾಗುತ್ತದೆ. ಇದೆಲ್ಲ ಮೌನ ಅನುಷ್ಠಾನದಿಂದ ಮಾತ್ರ ಸಾಧ್ಯವೆಂದು ನುಡಿದ ಸ್ವಾಮೀಜಿಯವರು ಮೌನ ಅನುಷ್ಠಾನದ ಸಮಯದಲ್ಲಿ ಪಠಿಸುವ ಮಹಾಮಂತ್ರದಿಂದ ಆತ್ಮಬಲ ಹೆಚ್ಚುವದು ಪರಿಣಾಮ ಬ್ರಹ್ಮಬಲವು ಜಗತ್ತಿನ ಅತಿ ಹೆಚ್ಚಿನ ಶ್ರೇಷ್ಠಶಕ್ತಿಯಾಗಿದೆ ಎಂದರು.

ಚಿಪ್ಪಲಕಟ್ಟಿಯ ಸಿದ್ದಲಿಂಗ ಶ್ರೀಗಳು ಮಾತನಾಡಿ, ಗದಗದ ತೊಂಟದ ಸಿದ್ದಲಿಂಗ ಶ್ರೀಗಳ ಶಿಷ್ಯರಾಗಿರುವ ಶಾಂತಲಿಂಗ ಶ್ರೀಗಳು ಮೌನಲಿಂಗಾನುಷ್ಠಾನ ಮಾಡುವ ಮೂಲಕ ಸಮಾಜದ ಒಳಿತಿಗೆ ತಮ್ಮನ್ನು ತೊಡಗಿಕೊಂಡಿದ್ದು ತಪಸ್ಸು ಮಾಡುವ ಸ್ವಾಮೀಗಳು ಅಪರೂಪವಾಗಿದ್ದಾರೆ. ಶಾಂತಲಿಂಗ ಸ್ವಾಮಿಗಳನ್ನು ಪಡೆದ ನಾವೆಲ್ಲ ಪುಣ್ಯವಂತರು ಎಂದರು.

ಮೌನಲಿಂಗಾನುಷ್ಠಾನ ಕೈಗೊಂಡಿದ್ದ ಶಾಂತಲಿಂಗ ಸ್ವಾಮಿಗಳು ನಮಗೆ ಕಾವಿ ದೀಕ್ಷೆ ನೀಡಿರುವ ಗದಗನ ತೋಂಟದಾರ್ಯಶ್ರೀಗಳು ಮಾರ್ಗದರ್ಶನದಲ್ಲಿ ಮೊದಲಿಗೆ ಯಡಿಯೂರ ಸಿದ್ಧಲಿಂಗೇಶ್ವರ ಕ್ಷೇತ್ರದಲ್ಲಿ 111 ದಿನಗಳ ಕಾಲ ಮೌನಾನುಷ್ಠಾನ ಕೈಗೊಂಡಿದ್ದು, ಇಲ್ಲಿಯವರೆಗೆ ಪೂಜ್ಯರ ಆಶಿರ್ವಾದದಿಂದ ಸಮಾಜದಲ್ಲಿ ಭಕ್ತರು ಮತ್ತು ಸ್ವಾಮೀಗಳ ಸಂಬಂಧ ನೀರು ಮತ್ತು ಮೀನು ಸಂಬಂಧದಂತೆ ಇರಬೇಕು ಎಂದು ತಿಳಿಸಿದಂತೆ ನಾನು ನಡೆಯುತ್ತಿದ್ದೇನೆ ಎಂದರು.

ದೇವಸ್ಥಾನದ ಟ್ರಸ್ಟ್ ಕಮೀಟಿ ಅಧ್ಯಕ್ಷ ಚಂದ್ರಶೇಖರ ಮಟ್ಟಿ ಅಧ್ಯಕ್ಷತೆ ವಹಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಸದಸ್ಯ ಪ್ರೊ. ಶಶಿಧರ ತೋಡಕರ ಮಾತನಾಡಿದರು.

ಮುಳ್ಳೂರ ಅನ್ನದಾನೇಶ್ವರ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ರಾಮದುರ್ಗ ಶಿವಮೂರ್ತೇಶ್ವರ ಮಠದ ಶಾಂತವೀರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಬಸವರಾಜ ಚಿಕ್ಕಮಠ, ಸಿದ್ದಪ್ಪ ಪೂಜಾರ ಸೇರಿದಂತೆ ಸ್ಥಳೀಯರು ಮುಖಂಡರು ಇದ್ದರು.

ಅಡಿವೆಪ್ಪ ಮನವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಲ್ಲೂರ ಸಿದ್ದೇಶ್ವರ ದೇವಸ್ಥಾನ ಟ್ರಸ್ಟ್ ಕಮೀಟಿಯ ಕಾನೂನು ಸಲಹೆಗಾರ ಎಸ್.ಎ.ಜಾಮದಾರ ಸ್ವಾಗತಿಸಿದರು. ಚಂದ್ರಶೇಖರ ಸೊಬರದ ನಿರೂಪಿಸಿದರು.



ಬಸ್ ವ್ಯವಸ್ಥೆ ಕಲ್ಪಿಸಲು ಜೂ.25ರಂದು ಪ್ರತಿಭಟನೆ

ಖಾನಾಪುರ: ತಾಲೂಕಿನ ಬಿಜಗರ್ಣಿ, ಅನಗಡಿ, ಹಲಸಾಲ, ಪಡಲವಾಡಿ, ಕರಂಜಾಳ ಹಾಗೂ ಅಕ್ಕಪಕ್ಕದ ಗ್ರಾಮಗಳಿಗೆ ಖಾನಾಪುರ ಪಟ್ಟಣ, ನಂದಗಡ-ಹಲಸಿಯಿಂದ ಸರಿಯಾದ ಸಮಯಕ್ಕೆ ಬಸ್ ವ್ಯವಸ್ಥೆ ಇಲ್ಲದಿರುವುದನ್ನು ಖಂಡಿಸಿ ಜೂ.25ರಂದು ಬಿಜಗರ್ಣಿ ಹಾಗೂ ಸುತ್ತಲಿನ ಗ್ರಾಮಸ್ಥರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಖಾನಾಪುರ ಬಸ್ ನಿಲ್ದಾಣಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ ಎಂದು ಬಿಜಗರ್ಣಿ ಗ್ರಾಮಸ್ಥರಾದ ಶ್ರೀಕಾಂತ ಮಾದಾರ, ತಾನಾಜಿ ತಾಂಬೂಳಕರ, ಮಾರುತಿ ಕಾಂಬಳೆ, ಅನೀಲ ಚೌರಿ ತಿಳಿಸಿದ್ದಾರೆ.

ಮಂಗಳವಾರ ಪಟ್ಟಣದಲ್ಲಿ ಈ ವಿಷಯ ತಿಳಿಸಿದ ಅವರು, ಬಿಜಗರ್ಣಿ, ಅನಗಡಿ, ಹಲಸಾಲ, ಪಡಲವಾಡಿ, ಕರಂಜಾಳ ಗ್ರಾಮಗಳಿಗೆ ಸರಿಯಾದ ಸಮಯಕ್ಕೆ ಬಸ್ ವ್ಯವಸ್ಥೆ ಇಲ್ಲದ್ದರಿಂದ ಈ ಭಾಗದ ಜನರಿಗೆ ಮತ್ತು ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು, ಈ ಗ್ರಾಮಗಳಿಗೆ ಸಮರ್ಪಕ ಬಸ್ ಸೌಲಭ್ಯ ಒದಗಿಸಬೇಕೆಂದು ಸಾರಿಗೆ ಸಂಸ್ಥೆ ಬೆಳಗಾವಿ ವಿಭಾಗೀಯ ವ್ಯವಸ್ಥಾಪಕರು ಮತ್ತು ಖಾನಾಪುರ ಘಟಕ ವ್ಯವಸ್ಥಾಪಕರಿಗೆ ಲಿಖಿತ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ ಎಂದರು.



ಬಸ್ ಸರಿಯಾಗಿ ಸಮಯಪಾಲನೆ ಮಾಡಬೇಕು ಎಂದು ಆಗ್ರಹಿಸಲಾಗಿತ್ತು. ಆದರೆ ಮನವಿ ಸಲ್ಲಿಸಿ ಹದಿನೈದು ದಿನಗಳಾದರೂ ನಮ್ಮೂರುಗಳಿಗೆ ಬಸ್ ಬರಲಿಲ್ಲ, ಹೀಗಾಗಿ ಶಾಲಾ ಮಕ್ಕಳು ನಿತ್ಯ ಐದಾರು ಕಿಮೀ ದೂರವನ್ನು ಕಾಲ್ನಡಿಗೆಯಿಂದಲೇ ಕ್ರಮಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಪರಿಸ್ಥಿತಿಯನ್ನು ವಿವರಿಸಿದರು.

ಈ ಸಂದರ್ಭದಲ್ಲಿ ದೀಪಕ ಚೌರಿ, ರಾಮಚಂದ್ರ ದೇಸಾಯಿ, ನಾಮದೇವ ಕಾಂಬಳೆ, ಸುಧೀರ ಗುಂಜಿಕರ, ವಿಕಾಸ ದೇಸಾಯಿ ಹಾಗೂ ಇತರರು ಇದ್ದರು.

ಕುಂದುಕೊರತೆಗಳ ಸಭೆ

ಯರಗಟ್ಟಿ: ತಾಲೂಕಿನ ಇಟ್ನಾಳ, ಗುಡಮಕೇರಿ, ಸತ್ತಿಗೇರಿ ಗ್ರಾಮಗಳಲ್ಲಿ ಗ್ರಾಮಮಟ್ಟದ ಪಕ್ಷದ ಹಿರಿಯ ಕಾರ್ಯಕರ್ತರನ್ನು ಕುಂದು ಕೊರತೆಗಳ ಸಭೆ ಹಾಗೂ ಅಮೂಲ್ಯ ಸಲಹೆ ಮತ್ತು ಮಾರ್ಗದರ್ಶನವನ್ನು ಪಡೆಯಲಾಯಿತು. ಈ ಸಂದರ್ಭದಲ್ಲಿ ಪಕ್ಷದ ಸಂಘಟನಾ ಬಲವರ್ಧನೆ, ಕಾರ್ಯಕರ್ತರ ಸಕ್ರಿಯ ಭಾಗವಹಿಸುವಿಕೆ ಹಾಗೂ ಮುಂಬರುವ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದ ಕುರಿತು ಹಿರಿಯ ಕಾರ್ಯಕರ್ತರೊಂದಿಗೆ ಸುದೀರ್ಘವಾಗಿ ಚರ್ಚೆ ನಡೆಸಲಾಯಿತು.

ಸಭೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಎಸ್‌ಐಆರ್ ಪ್ರಕ್ರಿಯೆಯ ಮಹತ್ವವನ್ನು ವಿವರಿಸಿ, ಅರ್ಹ ಮತದಾರರ ಹೆಸರು ಸೇರ್ಪಡೆ, ಅಗತ್ಯ ತಿದ್ದುಪಡಿ ಹಾಗೂ ಮತದಾರರ ಪಟ್ಟಿಯ ನಿಖರತೆ ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಕರ್ತರು ಸಕ್ರಿಯವಾಗಿ ಕಾರ್ಯನಿರ್ವಹಿಸುವಂತೆ ಕರೆ ನೀಡಲಾಯಿತು.

ಈ ವೇಳೆ ಮಾಜಿ ಎಪಿಎಂಸಿ ಅಧ್ಯಕ್ಷ ಬಸಯ್ಯಜ್ಜ ಹಿರೇಮಠ, ಮಾಜಿ ತಾಪಂ ಅಧ್ಯಕ್ಷ ಜಗದೀಶ ಕೌಜಗೇರಿ, ಬಿಎಲ್ ಎ ಈರಣ್ಣಾ ಚಂದರಗಿ, ಮಂಡಲ ಉಪಾಧ್ಯಕ್ಷ ಮಹಾಂತೇಶ ಗೋಡಿ, ಸಂಜೀವಕುಮಾರ ನವಲಗುಂದ, ಯುವ ಮೋರ್ಚಾ ಅಧ್ಯಕ್ಷ ಕೃಷ್ಣಮೂರ್ತಿ ತೊರಗಲ್, ಮುಖಂಡರಾದ ಬಸವರಾಜ ಪೂಜೇರ, ಮಲ್ಲಿಕಾರ್ಜುನ ಯರಗಟ್ಟಿ, ಮಲ್ಲಿಕಾರ್ಜುನ ಸವದತ್ತಿ, ಮೋಹನ ಪಾಟೀಲ, ರುದ್ರಪ್ಪ ಚಂದರಗಿ, ನಿಂಗಪ್ಪ ವಗ್ಗರ, ಸಿದ್ದನಗೌಡ ಪಾಟೀಲ, ಬೀರಪ್ಪ ಜಂಗಟಿ, ಆನಂದ ಲಮಾಣಿ, ಈರಣ್ಣ ವೀರಶೆಟ್ಟಿ, ವೆಂಕಟೇಶ ದೇವರಡ್ಡಿ, ಚೇತನ ಜಕಾತಿ, ಬಸನಗೌಡ ಪಾಟೀಲ, ಪರ್ವತಗೌಡ ಪಾಟೀಲ, ಗೌಡಪ್ಪ ಸವದತ್ತಿ, ಶಿವಪ್ಪ ಬಳಿಗೇರ, ನಾಗಪ್ಪ ಹೊಸಮನಿ, ಮಲ್ಲಿಕಾರ್ಜುನ ಚಿಪ್ಪಲಕಟ್ಟಿ, ಶ್ರೀಕಾಂತ ಡಾಂಗಿಮಠ, ಬಸಯ್ಯಾ ಹಿರೇಮಠ, ಯಲ್ಲಪ್ಪ ಪಟಿಪ್ಪನವರ, ಚಂದ್ರಪ್ಪ ಯಡಳ್ಳಿ, ಶಿವಲಿಂಗಪ್ಪ ನುಗ್ಗಾನಟ್ಟಿ, ಮಹೇಶ ಮಿರ್ಜಿ, ಈರಣ್ಣ ಹೊಸಮನಿ, ರಾಜು ಕರಲಿಂಗಪ್ಪನವರ, ಶಾನೂರ ಮುಲ್ಲಾ, ಮಹಿಳಾ ಮೋರ್ಚಾದ ಮೈತ್ರಾ ಹೊಂಗಲ, ಜಯಶ್ರೀ ಗಾಣಗಿ, ಸೇರಿದಂತೆ ಪಕ್ಷದ ಪದಾಧಿಕಾರಿಗಳು, ಮುಖಂಡರು, ಹಿರಿಯ ಕಾರ್ಯಕರ್ತರು ಹಾಗೂ ಬೂತ್ ಮಟ್ಟದ ಕಾರ್ಯಕರ್ತರು ಉಪಸ್ಥಿತರಿದ್ದರು.



ನೆಟ್ಟ ಸಸಿ ಪೋಷಿಸಲು ಮುಂದಾಗಿ: ಮಹಾಂತೇಶ ಹಿಪ್ಪರಗಿ

ಮೂಡಲಗಿ: ಪ್ರಕೃತಿಯಿಂದ ಪ್ರೇರಿತ. ಹವಾಮಾನಕ್ಕಾಗಿ ನಮ್ಮ ಭವಿಷ್ಯಕ್ಕಾಗಿ ಎಂದ ವಾಕ್ಯದೊಂದಿಗೆ ಈ ಸಾರಿಯ ವಿಶ್ವ ಪರಿಸರ ದಿನಾಚರಣೆ ಆತಿಥೇಯ ರಾಷ್ಟ್ರ ಅಜೆರ್ಬೈಜಾನ್ ಗಣರಾಜ್ಯದ ಐತಿಹಾಸಿಕ ರಾಜಧಾನಿ ಬಾಕುದಲ್ಲಿ ನಡೆಯಿತು. ಇಂದು ಪರಿಸರ ದಿನಾಚರಣೆಯನ್ನು ಸಸಿ ನಡುವದರೊಂದಿಗೆ ಅಲ್ಲ ನೆಟ್ಟ ಸಸಿಯನ್ನು ಹೆಮ್ಮರವಾಗಿಸುವಲ್ಲಿ ಯಶಸ್ವಿಯಾಗಬೇಕಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿ ಮಹಾಂತೇಶ ಹಿಪ್ಪರಗಿ ಹೇಳಿದರು.

ಮಂಗಳವಾರ ಜ್ಯೋತಿ ಅರ್ಬನ್ ಕೋ ಅಪ್ ಕ್ರೆಡಿಟ್ ಸೊಸೈಟಿ ಆವರಣದಲ್ಲಿ ನಡೆದ 100 ಸಸಿ ನೆಡುವ ಕಾರ್ಯಕ್ರಮದಲ್ಲಿ ಮಾತನಾಡಿದರು, ಹಿಂದಿನ ಹಿರಿಯರು ತಮ್ಮ ತೋಟ, ಹೊಲ,ಗದ್ದೆಗಳ ಬದುವಿನಲ್ಲಿ ಒಡ್ಡಿನಲ್ಲಿ ಮರ ಬೆಳೆಸುತ್ತಿದ್ದರು. ಇಂದು ಅವುಗಳನ್ನು ಕಿರಿಯರು ಕತ್ತರಿಸುತ್ತಿದ್ದಾರೆ. ಇದರಿಂದ ಏನು ಹಾನಿಯಾಗುತ್ತಿದೆ ಎಂದು ನಮಗೆ ಅರಿವಾಗಬೇಕಾಗಿದೆ.

ತಹಶೀಲ್ದಾರ್ ಶ್ರೀಶೈಲ ಗುಡಮೆ ಮಾತನಾಡಿ, ನೂರು ಸಸಿಗಳನ್ನು ನೆಟ್ಟು ಪರಿಸರ ಕಾಳಜಿ ವಹಿಸಿದ ಜ್ಯೋತಿ ಸೊಸೈಟಿ ಕಾರ್ಯ ಶ್ಲಾಘನೀಯ ಎಂದ ಅವರು ಪರಿಸರ ಉಳಿದರೆ ಮಾತ್ರ ಮಾನವ ಉಳಿಯುತ್ತಾನೆ ಎಂದರು.

ಜ್ಯೋತಿ ಅರ್ಬನ್ ಕೋ ಅಪ್ ಕ್ರೆಡಿಟ್ ಸೊಸೈಟಿ ಅಧ್ಯಕ್ಷ ಮಲ್ಲಪ್ಪ ಮದಗುಣಕಿ ಅಧ್ಯಕ್ಷತೆ ವಹಿಸಿ ಮಾತನಾಡಿ. ಪರಿಸರ ದಿನಾಚರಣೆ ಜೂ.5ಅಷ್ಟೇ ಅಲ್ಲ, ನಿತ್ಯ ಪರಿಸರ ದಿನಾಚರಣೆ ಮಾಡಬೇಕಾದ ಅವಶ್ಯಕತೆ ಇದೆ ಎಂದರು.



ಪುರಸಭೆ ಮುಖ್ಯಾಧಿಕಾರಿ ತುಕಾರಾಮ ಮಾದರ, ಅರಣ್ಯ ಅಧಿಕಾರಿ ರಾಜು ಅಮರಾಗೋಳ, ಪುರಸಭೆ ಮಾಜಿ ಸದಸ್ಯ ಈರಣ್ಣ ಕೊಣ್ಣೂರ, ರಮೇಶ ಹಂದಿಗುಂದ, ಪರಿಸರ ಸ್ನೇಹಿ ಈರಪ್ಪ ಢವಳೇಶ್ವರ, ಸುಭಾಶಚಂದ್ರ ಕಮದಾಳ ವೇದಿಕೆಯ ಮೇಲಿದ್ದರು.

ಪ್ರಮುಖರಾದ ಈರಪ್ಪ ಬನ್ನೂರ, ಮಲ್ಲಪ್ಪ ಗಾಣಿಗೇರ, ಬಸವರಾಜ ಪಾಟೀಲ, ಸಿ.ಬಿ.ಪಾಟೀಲ, ಚನ್ನಪ್ಪ ಅಥಣಿ, ಮಲ್ಲಪ್ಪ ತೇರದಾಳ, ಸಂಘದ ಉಪಾಧ್ಯಕ್ಷ ಬಸವರಾಜ ನೇಮಗೌಡರ, ಆಡಳಿತ ಮಂಡಳಿ ಶ್ರೀಶೈಲ ಜೈನಾಪೂರ, ಅಪ್ಪಯ್ಯಪ್ಪ ನೇಮಗೌಡರ, ಶ್ರೀಶೈಲ ಗಾಣಿಗೇರ, ಮಲ್ಲಪ್ಪ ಗಾಣಿಗೇರ, ಸಂಗಪ್ಪ ಕಾಳಪ್ಪಗೋಳ, ಚಂದ್ರು ಗಾಣಿಗ, ಸಾವಿತ್ರಿ ತೇಲಿ, ಆಶಾ ಗಾಣಿಗೇರ, ಮಂಜುಳಾ ನೇಮಗೌಡರ, ಮುತ್ತಪ್ಪಾ ವರ್ಗಿ ಇದ್ದರು.

ಮುಖ್ಯ ಕಾರ್ಯನಿರ್ವಹಕ ಪ್ರಕಾಶ ರಡರಟ್ಟಿ ಸ್ವಾಗತಿಸಿದರು. ಮಲ್ಲಪ್ಪ ಜಾಡರ ನಿರೂಪಿಸಿದರು. ವಿನೋದ ಶಿವಶಿಂಪರ ವಂದಿಸಿದರು.

ಬೆಳಗಾವಿ ಒನ್ ಕೇಂದ್ರದಲ್ಲಿ ಜನರ ಪರದಾಟ

ಬೆಳಗಾವಿ: ನಗರದ ಬೆಳಗಾವಿ ಒನ್ ಕೇಂದ್ರದಲ್ಲಿ ವಿವಿಧ ಸರ್ಕಾರಿ ಸೇವೆಗಳನ್ನು ಪಡೆಯಲು ಆಗಮಿಸಿದ ಸಾರ್ವಜನಿಕರು ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಕೇಂದ್ರದ ಅವ್ಯವಸ್ಥೆ ಹಾಗೂ ನಿಧಾನಗತಿಯ ಕಾರ್ಯನಿರ್ವಹಣೆಗೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೇಂದ್ರದಲ್ಲಿ ಆಧಾರ್ ತಿದ್ದುಪಡಿ, ಆದಾಯ ಮತ್ತು ಜಾತಿ ಪ್ರಮಾಣಪತ್ರ, ಪಿಂಚಣಿ, ವಿವಿಧ ಸರ್ಕಾರಿ ಯೋಜನೆಗಳ ಅರ್ಜಿ ಸೇರಿದಂತೆ ಅನೇಕ ಸೇವೆಗಳಿಗಾಗಿ ನಿತ್ಯ ನೂರಾರು ಜನರು ಆಗಮಿಸುತ್ತಿದ್ದಾರೆ. ಆದರೆ ಸಿಬ್ಬಂದಿ ಕೊರತೆ ಹಾಗೂ ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಕೆಲಸಗಳು ವಿಳಂಬವಾಗುತ್ತಿದ್ದು, ಸಾರ್ವಜನಿಕರು ಪರದಾಡುವಂತಾಗಿದೆ ಎಂದು ದೂರಿದ್ದಾರೆ.

ಇನ್ನೊಂದೆಡೆ, ಕೇಂದ್ರದ ಸುತ್ತಮುತ್ತ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವುದರಿಂದ ಜನರಿಗೆ ತೊಂದರೆ ಮತ್ತಷ್ಟು ಹೆಚ್ಚಾಗಿದೆ. ರಸ್ತೆ ಕಾಮಗಾರಿ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕೆಲಸಗಳು ದೀರ್ಘಕಾಲದಿಂದ ಪೂರ್ಣಗೊಳ್ಳದೆ ಇರುವುದರಿಂದ ವಾಹನ ಸಂಚಾರಕ್ಕೂ ಅಡಚಣೆ ಉಂಟಾಗುತ್ತಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಣ್ಣ ಕೆಲಸಕ್ಕೂ ಹಲವು ಗಂಟೆಗಳ ಕಾಲ ಸರದಿಯಲ್ಲಿ ನಿಲ್ಲಬೇಕಾಗಿದೆ. ಹಿರಿಯ ನಾಗರಿಕರು, ಮಹಿಳೆಯರು ಮತ್ತು ಗ್ರಾಮೀಣ ಭಾಗದಿಂದ ಬರುವ ಜನರು ಹೆಚ್ಚು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಸಾರ್ವಜನಿಕರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಸಂಬಂಧಿಸಿದ ಅಧಿಕಾರಿಗಳು ಬೆಳಗಾವಿ ಒನ್ ಕೇಂದ್ರದ ಕಾರ್ಯವೈಖರಿಯನ್ನು ಸುಧಾರಿಸಿ, ಅಗತ್ಯ ಸಿಬ್ಬಂದಿ ನಿಯೋಜಿಸುವ ಮೂಲಕ ಸಾರ್ವಜನಿಕರಿಗೆ ತ್ವರಿತ ಸೇವೆ ಒದಗಿಸಬೇಕು. ಜೊತೆಗೆ, ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕೆಂದು ಸಾರ್ಜಜನಿಕರು ಆಗ್ರಹಿಸಿದ್ದಾರೆ.

ಭಾರಿ ಮಳೆ, ರೈತರ ಮುಖದಲ್ಲಿ ಮಂದಹಾಸ!

ತೆಲಸಂಗ: ಸುಡುಬಿಸಿಲಿನ ಬೇಗೆಯಿಂದ ಕಂಗಾಲಾಗಿದ್ದ ತೆಲಸಂಗ ಗ್ರಾಮ ಹಾಗೂ ಸುತ್ತಮುತ್ತಲಿನ ಪರಿಸರದಲ್ಲಿ ವರ್ಷದ ಆರಂಭದಲ್ಲೇ ಭಾರಿ ಮಳೆ ಸುರಿದಿದ್ದು, ಬರಡಾಗಿದ್ದ ಭೂಮಿಗೆ ವರುಣದೇವ ತಂಪೆರೆದಿದ್ದಾನೆ. ಕಳೆದ ಹತ್ತಾರು ವರ್ಷಗಳ ಭೀಕರ ಬರಗಾಲದ ನೆನಪುಗಳನ್ನು ಮರೆಸುವಂತೆ ಪ್ರಸಕ್ತ ವರ್ಷದ ಆರಂಭಿಕ ದಿನಗಳಲ್ಲೇ ಉತ್ತಮ ಮಳೆಯಾಗುತ್ತಿರುವುದು ಸ್ಥಳೀಯ ರೈತರಲ್ಲಿ ಹೊಸ ಆಶಾಕಿರಣ ಮೂಡಿಸಿದೆ.

ಭಾನುವಾರ ಸಂಜೆ ಮಳೆ ಅಬ್ಬರಿಸಿದ್ದು, 34.13 ಮಿಲಿ ಮೀಟರ್ ಮಳೆ ದಾಖಲಾಗಿದೆ. ಸೋಮವಾರ ರಾತ್ರಿ ಸುರಿದ ಮಳೆಗೆ 13.2 ಮಿಲಿ ಮೀಟರ್ ಮಳೆಯಾಗಿರುವುದು ವರದಿಯಾಗಿದೆ.

ಕಳೆದ ಕೆಲವು ವರ್ಷಗಳಿಂದ ಮಳೆಯಿಲ್ಲದೆ ಗ್ರಾಮದ ಕೆರೆ, ಬಾವಿ, ಹಳ್ಳ-ಕೊಳ್ಳಗಳು ಹಾಗೂ ಬೋರ್‌ವೆಲ್‌ಗಳು ಸಂಪೂರ್ಣವಾಗಿ ಬತ್ತಿ ಹೋಗಿದ್ದವು. ಆದರೆ, ಈ ಎರಡು ದಿನಗಳ ನಿರಂತರ ಮಳೆಯಿಂದಾಗಿ ಅಂತರ್ಜಲ ಮಟ್ಟ ಹೆಚ್ಚಾಗುವ ಮುನ್ಸೂಚನೆ ಸಿಕ್ಕಿದ್ದು, ಬತ್ತಿದ ಜಲಮೂಲಗಳು ಮತ್ತೆ ನೀರು ಚಿಮ್ಮುವ ವಿಶ್ವಾಸವನ್ನು ಜನರಲ್ಲಿ ಮೂಡಿಸಿದೆ. ಮಳೆಯ ಅಬ್ಬರ ಜೋರಾಗಿದ್ದರೂ ಯಾವುದೇ ರೀತಿಯ ಅನಾಹುತಗಳು ಸಂಭವಿಸಿಲ್ಲ ಎಂದು ಗ್ರಾಮಸ್ಥರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಒಟ್ಟಾರೆಯಾಗಿ, ಈ ವರ್ಷದ ಆರಂಭಿಕ ಮಳೆಯು ತೆಲಸಂಗ ಗ್ರಾಮದ ರೈತಾಪಿ ವರ್ಗಕ್ಕೆ ಹಸಿರು ಸಮೃದ್ಧಿಯ ಭರವಸೆ ನೀಡಿದೆ.



ಆರಂಭದಲ್ಲಿ ಸುರಿದ ಅಲ್ಪ ಮಳೆಯಿಂದಲೇ ಸಂತೃಪ್ತರಾಗಿ ಧೈರ್ಯ ಮಾಡಿ ಬಿತ್ತನೆ ಕಾರ್ಯ ಕೈಗೊಂಡಿದ್ದೆವು. ಈಗ ಸುರಿದಿರುವ ಭಾರಿ ಮಳೆ ನಮ್ಮ ಬೆಳೆಗಳಿಗೆ ಅಮೃತ ಸಿಂಚನದಂತಾಗಿದೆ.

■ ಸಂಗಮೇಶ ಉಂಡೋಡಿ, ಸ್ಥಳೀಯ ರೈತ

ಕಿರುಸುದ್ದಿ

ಶ್ರೀ ಹನುಮಾನ ದೇವರ ಜಾತ್ರೆ ಜೂ.20ರಿಂದ

• **ಕಬ್ಬೂರು:** ಪಟ್ಟಣದ ಶ್ರೀಹನುಮಾನ ದೇವರ ಜಾತ್ರಾ ಮಹೋತ್ಸವ ಜೂ.20ರಿಂದ 22ರವರೆಗೆ ಹನುಮಾನ ದೇವಸ್ಥಾನದ ಶತಮಾನೋತ್ಸವ ಹಾಗೂ ಜಾತ್ರಾ ಮಹೋತ್ಸವ, ಓಕಳಿ ವಿಜೃಂಭಣೆಯಿಂದ ಜರುಗಲಿವೆ. ಜೂ.20ರಂದು ಬೆಳಗ್ಗೆ 8ಕ್ಕೆ ಊರಿನ ಪ್ರಮುಖರಾದ ಸುಭಾಷಗೌಡ ಸಿದ್ದಗೌಡ ಪಾಟೀಲ ಮಾರ್ಗದರ್ಶನದಂತೆ ಮುಖಂಡ ಮಿಲನಗೌಡ ಪ್ರಭಾಕರಗೌಡ ಪಾಟೀಲ ದಂಪತಿಗಳು ಮತ್ತು ವಾಮನ ಗೋವಿಂದ ದೇಶಪಾಂಡೆ ದಂಪತಿಗಳು ಹಾಗೂ ಇತರ ಗಣ್ಯ ವ್ಯಕ್ತಿಗಳ ಸಮ್ಮುಖದಲ್ಲಿ ಹನುಮಾನ (ಮಾರುತಿ) ದೇವರ ಅಭಿಷೇಕ, ಪವಮಾನ ಹೋಮ ದೀಪಕ ಚಿದಂಬರ ಜೋಷಿ ಅವರಿಂದ ನಡೆಯುತ್ತದೆ. ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಲಿದೆ. ಬೆಳಗ್ಗೆ 11ಕ್ಕೆ ಡಾ.ಮಹೇಶ ಬಸಲಿಂಗಪ್ಪಾ ಬೆಲ್ಲದಗೆ ಸತ್ಕಾರ ಸಮಾರಂಭ ನಡೆಯಲಿದೆ. ಗೌರಿಶಂಕರಮಠದ ಪೀಠಾಧ್ಯಕ್ಷ ರೇವಣಸಿದ್ದ ಶಿವಾಚಾರ್ಯ ಶ್ರೀಗಳು, ಮುಮ್ಮೆಟಗುಡ್ಡದ ಬಸಲಿದ್ದೇಶ್ವರ ಮಹಾರಾಜರ ಸಿದ್ದಾಶ್ರಮದ ಉತ್ತರಾಧಿಕಾರಿ ಸಿದ್ದರತ್ನ ಮದಗೊಂಡೇಶ್ವರ ಮಹಾರಾಜರು ದಿವ್ಯ ಸಾನ್ನಿಧ್ಯ ವಹಿಸುವರು. ಮಿಲನಗೌಡ ಪ್ರಭಾಕರಗೌಡ ಪಾಟೀಲ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಸುರೇಶ ಬೆಲ್ಲದ, ಮಹಾಲಿಂಗ ಹಂಜಿ, ಡಾ.ಎಂಬಿ ಕುಂಬಾರ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3ಕ್ಕೆ ಕುಂಭಮೇಳ ಹಾಗೂ ವಾದ್ಯ ಮೇಳದೊಂದಿಗೆ ದೇವರ ಭವ್ಯ ಮೆರವಣಿಗೆ. ಶಿವಪ್ಪಾ ತು. ನೇರ್ಲಿ ಇವರ ಸ್ಮರಣಾರ್ಥ ಅವರ ಸುಪುತ್ರರಿಂದ ಪ್ರಸಾದ ಸೇವೆ ಜರುಗಲಿದೆ.

ಜೂ.21ರಂದು ಬೆಳಗ್ಗೆ 9ಕ್ಕೆ ಜೋಡು ಕುದುರೆ ಗಾಡಿ ಶರ್ಯತ್ತು, ಕುಳಿತು ಕುದುರೆ ಓಡಿಸುವ ಶರ್ಯತ್ತು, ಸ್ಲೋ ಮೋಟಾರ ಸೈಕಲ್ ಶರ್ಯತ್ತು ಜರುಗಲಿದೆ. ಮಹಾಂತೇಶ ಕಾಡೇಶಗೋಳ, ಮಹಾಲಕ್ಷ್ಮೀ ಜ್ಯುವೇಲರ್ಸ್ ಇವರಿಂದ ಮಹಾಪ್ರಸಾದವಿರುತ್ತದೆ.

ಜೂ.22ರಂದು ಶ್ರೀ ದುರ್ಗಾದೇವಿ ಗಾಯನ ಸಂಘ ಹೊಸೂರು ಹಾಗೂ ಕಾಶಿಲಿಂಗೇಶ್ವರ ಗಾಯನ ಸಂಘ ಮೆಮ್ಮಟಗುಡ್ಡ ಇವರಿಂದ ತುರ್ಸಾತುರ್ಸಿ ಚೌಡಕಿಪದಗಳು ಜರುಗಲಿದೆ ಎಂದು ಜಾತ್ರಾ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಜೂ.21ಕ್ಕೆ



• **ಬೆಳಗಾವಿ:** ಜಿಲ್ಲೆಯ ಎಲ್ಲಾ ಸಿಎಸ್‌ಸಿ ವಿಲೇಜ್ ಲೆವೆಲ್ ಎಂಟ್ರಪ್ರಿನಿಯರ್‌ಗಳು ಜೂ.21ರಂದು ಆಚರಿಸಲಾಗುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಸಕ್ರಿಯವಾಗಿ ಭಾಗವಹಿಸಿ ಯೋಗದ ಮಹತ್ವವನ್ನು ಸಾರ್ವಜನಿಕರಿಗೆ ತಲುಪಿಸುವಂತೆ ಸಿಎಸ್‌ಸಿ ಜಿಲ್ಲಾ ವ್ಯವಸ್ಥಾಪಕರಾದ ಮಲ್ಲಿಕಾರ್ಜುನ ಕರೆರುದ್ರಣ್ಣವರ ತಿಳಿಸಿದ್ದಾರೆ. ಸಿಎಸ್‌ಸಿ ಕೇಂದ್ರಗಳು ಗ್ರಾಮೀಣ ಭಾಗದಲ್ಲಿ ಸರ್ಕಾರಿ ಸೇವೆಗಳನ್ನು ಜನರಿಗೆ ತಲುಪಿಸುವುದರ ಜೊತೆಗೆ ಸಾಮಾಜಿಕ ಜಾಗೃತಿ ಮೂಡಿಸುವ ಪ್ರಮುಖ ಕೇಂದ್ರಗಳಾಗಿದ್ದು, ಆರೋಗ್ಯಕರ ಸಮಾಜ ನಿರ್ಮಾಣದಲ್ಲಿಯೂ ಮಹತ್ವದ ಪಾತ್ರವಹಿಸುತ್ತಿವೆ. ಆದ್ದರಿಂದ ಜಿಲ್ಲೆಯ ಎಲ್ಲಾ ಗಿಇಐ ಗಳು ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ರೈತರು ಹಾಗೂ ಸಾರ್ವಜನಿಕರಲ್ಲಿ ಯೋಗದ ಕುರಿತು ಅರಿವು ಮೂಡಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಯೋಗ ದಿನಾಚರಣೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು ಎಂದು ತಿಳಿಸಿದ್ದಾರೆ. ಯೋಗದ ಮೂಲಕ ಆರೋಗ್ಯಕರ ಮತ್ತು ಸದೃಢ ಸಮಾಜ ನಿರ್ಮಾಣ ಸಾಧ್ಯವಾಗಿದ್ದು, ಪ್ರತಿಯೊಬ್ಬ ಆಖಇ ಗಿಇಐ ತಮ್ಮ ವ್ಯಾಪ್ತಿಯಲ್ಲಿ ಯೋಗದ ಸಂದೇಶವನ್ನು ಮನೆಮನೆಗೆ ತಲುಪಿಸುವ ಕಾರ್ಯ ಮಾಡಬೇಕು ಎಂದು ಸಲಹೆ ನೀಡಿದ್ದಾರೆ. ಆರೋಗ್ಯಕರ ಸಮಾಜ ನಿರ್ಮಾಣದ ಈ ರಾಷ್ಟ್ರೀಯ ಅಭಿಯಾನದಲ್ಲಿ ಜಿಲ್ಲೆಯ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಅರ್ಜಿ ಆಹ್ವಾನ

• **ಬೆಳಗಾವಿ:** 2026–27 ನೇ ಸಾಲಿನ ಶೈಕ್ಷಣಿಕ ವರ್ಷಕ್ಕಾಗಿ ಕೋಥಳಿಯಲ್ಲಿರುವ ಜವಾಹರ ನವೋದಯ ವಿದ್ಯಾಲಯದ 11ನೇ ತರಗತಿಯಲ್ಲಿ ಖಾಲಿ ಇರುವ ಸೀಟ್‌ಗಳ ನೇರ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು 10ನೇ ತರಗತಿಯಲ್ಲಿ ತೇರ್ಗಡೆ ಹೊಂದಿರುವ ಅಂಕಪಟ್ಟಿ ಮತ್ತು ಜಾತಿ ಪ್ರಮಾಣಪತ್ರ ಹಾಗೂ ಅಭ್ಯರ್ಥಿಯ ಭಾವಚಿತ್ರಗಳೊಂದಿಗೆ ನೇರವಾಗಿ ಜೂ.25ರೊಳಗಾಗಿ ವಿದ್ಯಾಲಯದ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 6361298224, 9972892950 ಗೆ ಸಂಪರ್ಕಿಸಲು ಪ್ರಾಚಾರ್ಯರು ಜವಾಹರ ನವೋದಯ ವಿದ್ಯಾಲಯ ಕೋಥಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ: ಎಸ್‌ಐಆರ್ ವಿರೋಧಿಸಿ ಕರ್ನಾಟಕ ಮಾರ್ಗ–2 ವ್ಯಾಪ್ತಿಯ ವಿಜಯಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಜನಜಾಗೃತಿ ಜಾಥಾ ಕಾರ್ಯಕ್ರಮ ನಡೆಯಿತು. ನಗರದ ಚೆನ್ನಮ್ಮ ವೃತ್ತದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಹಾಗೂ ನಾಗರಿಕರು ಪ್ರತಿಭಟನೆ ನಡೆಸಿ, ಬಳಿಕ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ರ‍್ಯಾಲಿ ಮೂಲಕ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ರಾಜ್ಯ, ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬೃಹತ್ ಲೋಕ ಅದಾಲತ್ ಜು.11ರಂದು

• **ಕಾಗವಾಡ:** ಜುಲೈ 11ರಂದು ತಾಲೂಕಿನ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಲಯದಲ್ಲಿ ಬೃಹತ್ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ಕಕ್ಷಿದಾರರು ಮತ್ತು ಸಾರ್ವಜನಿಕರು ಇದರ ಲಾಭ ಪಡದುಕೊಳ್ಳಬೇಕು ಎಂದು ನ್ಯಾಯಾಧೀಶರಾದ ರೂಪಾ ಚಿನಿವಾರ ತಿಳಿಸಿದ್ದಾರೆ. ಅವರು ಇತ್ತೀಚಿಗೆ ಪಟ್ಟಣದ ತಾಲೂಕಾ ನ್ಯಾಯಲಯದ ಆವರಣದಲ್ಲಿ ನಡೆದ ಲೋಕ ಅದಾಲತ್ ಕುರಿತು ತಾಲೂಕಾಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಲೋಕ ಅದಾಲತ್‌ನಲ್ಲಿ ನಮ್ಮ ನ್ಯಾಯಾಲಯದಲ್ಲಿ 1040 ಸಿವಿಲ್ ಮತ್ತು ಸುಮಾರು 1600 ಕ್ರಿಮಿನಲ್ ದಾವೆಗಳಿವೆ. ಕಕ್ಷಿದಾರರಿಗೆ ಇತರೆ ಎಲ್ಲ ರೀತಿಯ ದಾವೆಗಳ ಕುರಿತು ರಾಜಿ ಸಂಧಾನ ಮಾಡಿಕೊಳ್ಳಲು ಒಳ್ಳೆಯ ಅವಕಾಶವಿದ್ದು, ಕಕ್ಷಿದಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ವೇಳೆ ಉಪ ತಹಶೀಲ್ದಾರ್ ವಿಜಯಕುಮಾರ ಚೌಗುಲೆ, ಎಎಸ್‌ಐ ಎಸ್.ವಿ.ಹಂಜಿ, ಉಗಾರ ಪುರಸಭೆ ಮತ್ತು ಐನಾಪುರ ಪಪಂ ಮುಖ್ಯಾಧಿಕಾರಿ ಮಹಾಂತೇಶ ಕವಲಾಪೂರ, ಸಿಡಿಪಿಒ ರವೀಂದ್ರ ಗುದಿಗೆಣ್ಣವರ, ಶಿಕ್ಷಣ ಇಲಾಖೆ ಆರ್.ಬಿ.ದರೂರ, ಕೆನರಾ ಬ್ಯಾಂಕ್ ಬಿ.ವಿಜಯಕುಮಾರ, ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷ ಎಸ್.ವಿ.ನಾಂದ್ರೆ, ಕಾರ್ಯದರ್ಶಿ ಎಂ.ಜಿ.ವಡ್ಡರ, ವಕೀಲಾದ ಬಿ.ಜೆ. ಮೋಳೆ, ವೈ.ಎ.ಡಾಂಗೆ, ಎ.ಬಿ.ಪಾಟೀಲ, ಎಸ್.ಜೆ.ಚೌಗುಲೆ, ಪೊಲೀಸ್ ಸಿಬ್ಬಂದಿ ಪಿ.ಎಂ.ಮಕಾನದಾರ ಸೇರಿದಂತೆ ತಾಲೂಕಿನ ಅಧಿಕಾರಿಗಳು, ನ್ಯಾಯವಾದಿಗಳು, ನ್ಯಾಯಾಲಯದ ಸಿಬ್ಬಂದಿಗಳ ಇತರರು ಇದ್ದರು.



ಯಮಕನಮರಡಿ: ಸಮೀಪದ ಜೀನರಾಳ ಗ್ರಾಮದ ಶ್ರೀ ಲಕ್ಷ್ಮಿ ದೇವಿ ಜಾತ್ರೆ ಅಂಗವಾಗಿ ಗ್ರಾಮಸ್ಥರ ಹಾಗೂ ಪಂಚ್ ಕಮಿಟಿ ಸಹಯೋಗದಲ್ಲಿ ಮಂಗಳವಾರ ಸಕಲ ವಾದ್ಯಗಳ ಮೇಳದೊಂದಿಗೆ ಕೋಣ ಬಿಡುವ ಕಾರ್ಯಕ್ರಮ ಜರುಗಿತು. ನೂತನ ಲಕ್ಷ್ಮಿ ಮಂದಿರ ನಿರ್ಮಾಣ ಹಾಗೂ ಜಾತ್ರಾ ಕಾರ್ಯಕ್ರಮ ದಿನಾಂಕ ಗೊತ್ತು ಪಡಿಸಿ ಅದರ ಅಂಗವಾಗಿ ಮುಂಚಿತ ಕೋಣ ಬಿಡುವ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು.

ನಕಲಿ ಮತದಾರರನ್ನು ಪಟ್ಟಿಯಿಂದ ಕೈಬಿಡಿ

• **ಗೋಕಾಕ:** ಮತದಾರರ ಪಟ್ಟಿಯಿಂದ ಮೃತಪಟ್ಟ, ನಕಲಿ ಮತ್ತು ತಪ್ಪಾಗಿ ನಮೂದಿಸಲಾದ ಹೆಸರುಗಳನ್ನು ತೆಗೆದುಹಾಕಲು ಪ್ರತಿಯೊಬ್ಬ ಅರ್ಹ ನಾಗರಿಕರನ್ನು ಮತದಾರ ಪಟ್ಟಿಯಲ್ಲಿ ಸೇರ್ಪಡೆ ಮಾಡುವಲ್ಲಿ ಬಿಎಲ್‌ಎ–2 ಪಾತ್ರ ಮಹತ್ವದ್ದಾಗಿದ್ದು, ಮತದಾರರ ಪಟ್ಟಿಯನ್ನು ಪರೀಕ್ಷಿಸಲು ಹಾಗೂ ನವೀಕರಣ ನಡೆಸುವ ಅಭಿಯಾನವನ್ನು ಯಶಸ್ವಿಯಾಗಿ ನಡೆಸುವಂತೆ ಅರಭಾವಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಪ್ರತಿನಿಧಿಗಳಿಗೆ ಸೂಚಿಸಿದರು.

ಮಂಗಳವಾರ, ಇಲ್ಲಿನ ಎನ್‌ಎಸ್‌ಎಫ್ ಕಚೇರಿಯಲ್ಲಿ ಅರಭಾವಿ ಬಿಜೆಪಿ ಮಂಡಲದಿಂದ ಹಮ್ಮಿಕೊಳ್ಳಲಾಗಿದ್ದ ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಕರೆಯಲಾಗಿದ್ದ ಎಸ್‌ಐಆರ್ ವಿಶೇಷ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಯಾವ ಮುಲಾಜು ಇಲ್ಲದೇ ನಕಲಿ ಮತದಾರರನ್ನು ಗುರುತಿಸಿ ಪಟ್ಟಿಯಿಂದ ಡಿಲಿಟ್ ಮಾಡಲು ಅವರು ಸೂಚಿಸಿದರು.



ಮತದಾರರ ಪರಿಷ್ಕರಣೆಯು ಆರಂಭವಾಗಲಿದ್ದು, ಆಗಸ್ಟ್ ತಿಂಗಳ ತನಕ ನಡೆಯಲಿದೆ. ಚುನಾವಣಾಧಿಕಾರಿಗಳು ಕರೆಯುವ ಪ್ರತಿ ಸಭೆಯಲ್ಲಿ ಬಿಎಲ್‌ಎ–2 ಕಾರ್ಯಕರ್ತರು ಭಾಗಿಯಾಗಬೇಕು. ಒಂದಕ್ಕಿಂತ ಹೆಚ್ಚು ಮತಗಟ್ಟೆಗಳಲ್ಲಿ ಮತದಾನ ಮಾಡುವವರ ಹೆಸರುಗಳು ಕಂಡು ಬಂದಲ್ಲಿ ಅಂತಹವರನ್ನು ನಕಲಿ ಮತದಾರರೆಂದು ಗುರುತಿಸಿ ಕೇವಲ ಒಂದು ಮತಗಟ್ಟೆಗೆ ಅವರನ್ನು ಪರಿಗಣಿಸಬೇಕು. ಎಷ್ಟೆಷ್ಟು ನಕಲಿ ಮತದಾರರನ್ನು ನಾವು ಡಿಲಿಟ್ ಮಾಡಿಸುತ್ತೇವೆಯೋ ಅದು ನಮ್ಮ ಪಕ್ಷಕ್ಕೆ ಮತ್ತಷ್ಟು ಅನುಕೂಲವಾಗಲಿದೆ. ನಕಲಿ ಮತದಾರರನ್ನು ಗುರುತಿಸುವಲ್ಲಿ ಬಿಎಲ್‌ಎ–2 ಕಾರ್ಯಕರ್ತರು ಯಾವುದಕ್ಕೂ ಹಿಂಜರಿಯಬಾರದು ಎಂದು ಅವರು ತಿಳಿಸಿದರು.

ಅರಭಾವಿ ಮತಕ್ಷೇತ್ರದಲ್ಲಿ ಸುಮಾರು 2.45 ಲಕ್ಷ ಮತದಾರರಿದ್ದು, ಅರ್ಹರನ್ನು ಗುರುತಿಸಿದರೆ ಅಂತಹ ಮತಗಳು ನಮ್ಮ ಪಾಲಾಗಲಿವೆ ಎಂದರು. ಮೃತಪಟ್ಟ, ನಕಲು ಮತ್ತು ಸ್ಥಳಾಂತರಗೊಂಡ ಮತದಾರರನ್ನು ತೆಗೆದುಹಾಕುವಂತೆ ಅವರು ಕಾರ್ಯಕರ್ತರಿಗೆ ಸೂಚಿಸಿದರು. ಅರಭಾವಿ ಮಂಡಲದ ಬಿಎಲ್‌ಎ–1 ಗೋವಿಂದ ಕೊಪ್ಪದ ಪ್ರಾಸ್ತಾವಿಕವಾಗಿ ಮಾತನಾಡಿ, ಎಸ್‌ಐಆರ್ ಮಹತ್ವವನ್ನು ವಿವರಿಸಿದರು.

ಅರಭಾವಿ ಮಂಡಲ ಅಧ್ಯಕ್ಷ ಮಹಾದೇವ ಶೆಕ್ಕಿ, ಮಂಡಲ ಪ್ರ.ಕಾರ್ಯದರ್ಶಿಗಳಾದ ಪರಸಪ್ಪ ಬಬಲಿ, ಪ್ರಮೋದ ನುಗ್ಗಾನಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅರಭಾವಿ ಮಂಡಲದ ಎಲ್ಲ 281 ಮತಗಟ್ಟೆಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗಿಯಾಗಿದ್ದರು.

ಸರ್ಕಾರಿ ಶಾಲೆಯಲ್ಲೂ ಸಕಲ ಸೌಲಭ್ಯ

• **ಯರಗಟ್ಟಿ:** ಸ್ಥಳೀಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಮೊದಲ ಬಾರಿಗೆ ಶಾಲೆಯಲ್ಲಿ ಎಲ್‌ಕೆಜಿ ತರಗತಿ ಆರಂಭಿಸಲಾಗಿದ್ದು, ಈಗಾಗಲೇ ವಿದ್ಯಾರ್ಥಿಗಳ ದಾಖಲಾತಿ ಪ್ರಕ್ರಿಯೆ ಆರಂಭವಾಗಿದೆ. ಅಲ್ಲದೇ, ಸುತ್ತಮುತ್ತಲ ಬಡಾವಣೆ ಮತ್ತು ಸ್ಥಳೀಯ ನಿವಾಸಿಗಳು ತಮ್ಮ ಮಕ್ಕಳನ್ನು ಇಲ್ಲಿ ದಾಖಲಿಸುತ್ತಿದ್ದಾರೆ ಎಂದು ಶಾಲೆಯ ಪ್ರಧಾನ ಗುರುಗಳಾದ ಎ.ಎ.ಮಕ್ತುಮನವರ ಹೇಳಿದರು.

ಶಾಲೆಯಲ್ಲಿ ಆಯೋಜಿಸಿದ್ದ ಸ್ವಾಗತ ಕಾರ್ಯಕ್ರಮದಲ್ಲಿ ಮಾತನಾಡಿ, ಬಾಸ್ ಪ್ರೈವೇಟ್ ಲಿಮಿಟೆಡ್ ಇವರ ಆರ್ಥಿಕ ನೆರವಿನಿಂದ ಯರಗಟ್ಟಿ ಶಾಲೆಯು ಸಾಕಷ್ಟು ಅಭಿವೃದ್ಧಿ ಹೊಂದಿದೆ ಸ್ಮಾರ್ಟ್ ಕ್ಲಾಸ್‌ಗಳು ಪ್ರಯೋಗಾಲಯ ಕಂಪ್ಯೂಟರ್ ಲ್ಯಾಬ್ ಮಕ್ಕಳಿಗೆ ಕುಡಿಯಲು ಶುದ್ಧ ನೀರಿನ ಘಟಕ ಹಾಗೂ ಸಭಾಭವನ ಈ ಎಲ್ಲ ಕಾರ್ಯಗಳನ್ನು ಬಾಸ್ ಫೌಂಡೇಶನ್ ಇಂಡಿಯಾ ಲಿಮಿಟೆಡ್ ಇವರ ಸಹಯೋಗದಲ್ಲಿ ಅಭಿವೃದ್ಧಿ ಹೊಂದಿದೆ ಎಂದರು.

ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯಪುಸ್ತಕ, ಶೂ ಮತ್ತು ಸಾಕ್ಸ್ ಒದಗಿಸಲಾಗುತ್ತದೆ. ಬಿಸಿಯೂಟ, ಕ್ಷೀರಭಾಗ್ಯ, ಮೊಟ್ಟೆ, ಬಾಳೆಹಣ್ಣು ಮುಂತಾದವು ವಿತರಿಸುತ್ತೇವೆ ಎಂದು ರಾಜ್ಯ ಸಂಪನ್ಮೂಲ ವ್ಯಕ್ತಿ ಎಂ.ಎಂ.ಚೀಲದವರು ಪ್ರಾಸ್ತಾವಿಕವಾಗಿ ನುಡಿದರು.

ತಹಶೀಲ್ದಾರ್ ಎಂ.ವಿ.ಗುಂಡಪ್ಪಗೋಳ, ಪಪಂ ಸಿಬ್ಬಂದಿ, ಶಾಲೆ ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು, ನೂತನ ತರಗತಿ ಕೊಠಡಿಯಲ್ಲಿ ಶಾರದಾ ಪೂಜೆ ನೇರವೇರಿಸಿ ತರಗತಿಗೆ ಚಾಲನೆ ನೀಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಲಕ್ಕಪ್ಪ ಜಗದಾರ ಎಲ್‌ಕೆಜಿ, ಮಕ್ಕಳಿಗೆ 100 ಶಾಲಾ ಬ್ಯಾಗ್ ವಿತರಿಸಿದರು. ಈ ವೇಳೆ ಎಸ್‌ಡಿಎಂಸಿ ಉಪಾಧ್ಯಕ್ಷೆ ಸುನಿತಾ ಹಿರೇಮಠ, ಎಸ್‌ಡಿಎಂಸಿ ಫಿರೋಜ ಖಾದ್ರಿ, ದುಂಡಯ್ಯ ಹಿರೇಮಠ, ಮೌನೇಶ ಹಳ್ಳಂಡಿ, ನಿಂಗಪ್ಪ ಗಂರಡ್ಡಿ, ಲಕ್ಷ್ಮಣ ಹಣಬರ, ಮೀನಾಕ್ಷಿ ಮದ್ದಾನಿ, ಶಕುಂತಲಾ ಹಡಪದ, ಪ್ರೇಮಾ ಹೂಲಿಕಟ್ಟಿ, ಲಕ್ಷ್ಮೀ ಸುರೇಬಾನ, ಸುಹಾನಾ ಉಗರಗೋಲ, ಶಾಹೀನ ಹುಕ್ಕೇರಿ, ಸಿಆರ್‌ಪಿ ವಸಂತ ಬಡಿಗೇರ, ಬಿಇಒ ಕಾರ್ಯಾಲಯದ ಶಿಕ್ಷಣ ಸಂಯೋಜಕ ಎಂ.ಬಿ.ಕಡಕೋಳ, ಬಿಆರ್‌ಪಿಗಳಾದ ಸಿದ್ರಾಮ ಪಟ್ಟಣಶೆಟ್ಟಿ ಶಾಲೆಯ ಸರ್ವ ಸಿಬ್ಬಂದಿ, ಪೋಷಕರು ಹಾಜರಿದ್ದರು. ರಮೇಶ ಹುಣಸಿಕಟ್ಟಿ ನಿರೂಪಿಸಿದರು. ಎಸ್.ಬಿ.ಮಿಕಲಿ ವಂದಿಸಿದರು.



ಶಿಕ್ಷಣದ ಜೊತೆಗೆ ಸಂಸ್ಕಾರ ಮುಖ್ಯ

• **ತೆಲಸಂಗ:** ಇಂದು ನಮಗೆ ಕೇವಲ ಅಕ್ಷರ ಜ್ಞಾನವಿದ್ದರೆ ಸಾಲದು, ಜಗತ್ತಿನ ಜ್ಞಾನ ಅತ್ಯಗತ್ಯ. ಈ ಜಗತ್ತಿನ ನೈಜ ಜ್ಞಾನ ಮತ್ತು ಜೀವನ ಎದುರಿಸುವ ಕಠಿಣ ಮನೋಭಾವ ಕೇವಲ ಗ್ರಾಮೀಣ ಭಾಗದಲ್ಲಿ ಅಕ್ಷರ ಕಲಿತು ಬೆಳೆದ ಮಕ್ಕಳಲ್ಲಿ ಮಾತ್ರ ಸಾಧ್ಯ ಎಂದು ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಗ್ರಾಮದ ಎಸ್‌ಎಸ್‌ಎಂಕೆ ಶಿಕ್ಷಣ ಸಂಸ್ಥೆಯ ಬಸವ ಅಂತಾರಾಷ್ಟ್ರೀಯ ಶಾಲೆಯ ಪ್ರಾರಂಭೋತ್ಸವವನ್ನು ಉದ್ಘಾಟಿಸಿ ಮಾತನಾಡಿ, ಇಂದು ಆಧುನಿಕತೆಯ ಹೆಸರಿನಲ್ಲಿ ಗ್ರಾಮೀಣ ಮಕ್ಕಳಿಗೆ ಆಗುತ್ತಿರುವ ಶೈಕ್ಷಣಿಕ ಅನ್ಯಾಯವನ್ನು ತಡೆಯಲು ಗ್ರಾಮೀಣ ಮಟ್ಟದಲ್ಲಿನ ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಶ್ರಮಿಸುತ್ತಿವೆ. ಈ ಗ್ರಾಮೀಣ ಶಿಕ್ಷಣ ಸಂಸ್ಥೆಗಳು ಕೇವಲ ಪಾಠ ಹೇಳಿಕೊಡುತ್ತಿಲ್ಲ, ಬದಲಾಗಿ ಜಾಗತಿಕ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಮ್ಮ ವಿದ್ಯಾರ್ಥಿಗಳು ಗಟ್ಟಿಯಾಗಿ ನಿಲ್ಲುವಂತೆ ನೆಲೆ ಒದಗಿಸುತ್ತಿವೆ. ಶಿಕ್ಷಣದ ಜೊತೆಗೆ ಸಂಸ್ಕಾರ ಮುಖ್ಯ ಎಂದರು.

ಅಥಣಿಯ ಶಿವಬಸವ ಸ್ವಾಮೀಜಿ ಮಾತನಾಡಿ, ಗ್ರಾಮೀಣ ಮಕ್ಕಳಿಗೆ ಕೇವಲ ಪುಸ್ತಕದ ವಿದ್ಯೆ ಸಿಗುವುದಿಲ್ಲ. ಬದಲಿಗೆ ಅವರಿಗೆ ವ್ಯವಹಾರಿಕ ಮತ್ತು ಸಾಮಾಜಿಕ ಪರಿಜ್ಞಾನ ನೈಸರ್ಗಿಕವಾಗಿಯೇ ಲಭ್ಯವಿರುತ್ತದೆ. ಇಲ್ಲಿನ ವಿದ್ಯಾರ್ಥಿಗಳು ಧೈರ್ಯಶಾಲಿಗಳು ಮತ್ತು ಅಪಾರ ಪ್ರತಿಭಾವಂತರಾಗಿರುತ್ತಾರೆ ಎಂದರು.

ಹಿರೇಮಠದ ವೀರೇಶ್ವರ ದೇವರು ಮಾತನಾಡಿ, ತಂದೆ–ತಾಯಿಯ ಪ್ರೀತಿ, ಹಳ್ಳಿಯ ಸಂಸ್ಕೃತಿಯ ಮಧ್ಯೆ ಬೆಳೆದಾಗ ಮಾತ್ರ ಮಗುವಿನ ಸರ್ವಾಂಗೀಣ ವಿಕಸನ ಸಾಧ್ಯ. ನೀವು ಕಲಿತಿರುವ ವಿದ್ಯೆಯನ್ನು ಸದ್ಬಳಕೆ ಮಾಡಿಕೊಳ್ಳಿ. ನಿಮ್ಮಲ್ಲಿರುವ ಜ್ಞಾನ ಸಮಾಜದ ಏಳಿಗೆಗೆ ಬಳಕೆಯಾಗಲಿ. ಹಳ್ಳಿಯ ಮಣ್ಣಿನ ಶಕ್ತಿ ಮತ್ತು ನಿಮ್ಮ ಹೆತ್ತವರ ಕಷ್ಟವನ್ನು ನೆನಪಿನಲ್ಲಿಟ್ಟುಕೊಂಡು ಮುನ್ನಡೆಯಿರಿ ಎಂದರು.

ಈ ವೇಳೆ ಸಮುದಾಯದ ಅಧ್ಯಕ್ಷ ಬಿ.ಬಿ.ಕಳಗೇರಿ, ಆರ್.ಎಂ.ಡಾಂಗೆ, ವಿವೇಕ ನಾರಗೊಂಡ, ಜಗದೀಶ ಹವಾಲ್ದಾರ, ಸಂತೋಷ ಕದಮ, ಪ್ರತಿಷ್ಠಾನದ ಅಧ್ಯಕ್ಷ ಎ.ಎಂ.ಖೋಬ್ರಿ ಸೇರಿದಂತೆ ಅನೇಕ ಗಣ್ಯರು ಭಾಗವಹಿದ್ದರು.



ಜೀವನದಲ್ಲಿ ಶಿಕ್ಷಕರ ಪಾತ್ರ ಅಪಾರ

• **ಕಕಮರಿ:** ವೃತ್ತಿ ಪಾವಿತ್ರ್ಯ ಕಾಪಾಡಿಕೊಂಡು ಹೋಗುವ ಶಿಕ್ಷಕರು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತಾರೆ ಎಂದು ಗುರುದೇವಾಶ್ರಮ ಪ.ಪೂ.ಆತ್ಮಾರಾಮ್ ಸ್ವಾಮೀಜಿ ಹೇಳಿದರು.

ಅವರು ಅಮ್ಮಾಜೇಶ್ವರಿ ದೇವಸ್ಥಾನ ಸಭಾಭವನದಲ್ಲಿ ಶ್ರೀ ಅಮ್ಮಾಜೇಶ್ವರಿ ಪ್ರೌಢಶಾಲೆಯ ಶಿಕ್ಷಕ ಎಸ್.ಬಿ.ಬಡವಗೋಳ ಅವರ ಸೇವಾ ನಿವೃತ್ತಿ ನಿಮಿತ್ತ ಸತ್ಕಾರ ಸಮಾರಂಭದಲ್ಲಿ ದಂಪತಿಗಳನ್ನು ಸತ್ಕರಿಸಿ ಮಾತನಾಡಿದ ಅವರು, ಕಳೆದ 30 ವರ್ಷಗಳಲ್ಲಿ ಬಡವಗೋಳ ಗುರುಗಳ ಬೋಧನೆಯಿಂದ ಸಾವಿರಾರು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ನೆಲೆ ಕಂಡಿಕೊಂಡಿದ್ದಾರೆ ಎಂದರು.

ಅಮ್ಮಾಜೇಶ್ವರಿ ದೇವಸ್ಥಾನ ಅಧ್ಯಕ್ಷ ಅಪ್ಪುಗೌಡ ಪಾಟೀಲ ಮಾತನಾಡಿ, ನಾವು ಜೀವನದಲ್ಲಿ ಶಿಕ್ಷಣ ಪಡೆದರೆ ಮಾತ್ರ ಸಮಾಜದಲ್ಲಿ ಒಳ್ಳೆಯ ಸ್ಥಾನ ಗಳಿಸಲು ಸಾಧ್ಯವಿಲ್ಲ. ಎಲ್ಲ ರಂಗದಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡಾಗ ಮಾತ್ರ ನಾವು ಯಾವುದಾದರೂ ಸಾಧನೆ ಮಾಡಲು ಸಾಧ್ಯ ಎಂದರು.

ಅಪ್ಪಾಸಾಬ ಈರಗೌಡ ಅಧ್ಯಕ್ಷತೆ ವಹಿಸಿದ್ದರು. ಗಂಗಣ್ಣ ಮಹಾರಾಜರು, ವಿಜಯಪುರ ಶೇಖರ ಲೋಣಿ, ರಾಯಬಾಗ ಬಿ.ಎ.ಸನದಿ, ಎಸ್.ಎಲ್.ಜಾದವ, ಕೊಟ್ಟಲಗಿ ಭಾವುಸಾಬ ಬಡವಗೋಳ, ಗಿರಮಲ್ಲ ಜನಗೌಡ, ಲಕ್ಷ್ಮಣ ಗುರ್ಕಿ, ಕಾಡಪ್ಪ ಬಸರಗಿ, ಮಲ್ಲಿಕಾರ್ಜುನ ಹಿರೇಮಠ, ವಿ.ಎಸ್.ಶಿರೋಳ, ವೆಂಕನಗೌಡ ಪಾಟೀಲ, ಮಹಾದೇವ ಜನಗೌಡ, ಬಸಪ್ಪ ದುಂಡಿ, ವಾಯ್.ಜಿ.ದೀಕ್ಷಿತ್, ಕಲ್ಲಪ್ಪ ತಂಗಡಿ, ಶಾಲೆಯ ದಿಗ್ದರ್ಶಕ ಮಂಡಳಿ, ಇತರರಿದ್ದರು, ಶಿಕ್ಷಕ ಮಹಾಂತೇಶ ಮಠಪತಿ ಸ್ವಾಗತಿಸಿದರು, ಶಿಕ್ಷಕ ಎಮ್.ಬಿ.ಕರಡಿ ನಿರೂಪಿಸಿ ವಂದಿಸಿದರು.



ನಿಷ್ಠೆಯಿಂದ ಉನ್ನತ ಶಿಖರ ಏರಲು ಸಾಧ್ಯ: ನ್ಯಾ.ಆದಿತ್ಯ

• **ಹುಕ್ಕೇರಿ:** ಕಠಿಣ ಪರೀಕ್ಷೆಗಳು, ಅವಿರತ ಸಾಧನೆ ಮತ್ತುರಾಷ್ಟ್ರ ನಿಷ್ಠೆಯಿಂದ ಮಾತ್ರ ಈ ಉನ್ನತ ಶಿಖರವನ್ನು ಏರಲು ಸಾಧ್ಯ ಎಂದು ಸಿವಿಲ್ ನ್ಯಾಯಾಧೀಶರಾದ ಆದಿತ್ಯ ಕಲಾಲ ಅವರು ಹೇಳಿದರು.

ಇಲ್ಲಿನ ವಕೀಲರ ಸಂಘದ ಸಭಾಭವನದಲ್ಲಿ ನ್ಯಾಯವಾದಿಗಳ ಸಂಘ ಮತ್ತು ಅಭಿಮಾನಿಗಳ ವತಿಯಿಂದ, ಅರ್ಥವ್ ಶೆಟ್ಟಿ ಅವರು ರಾಷ್ಟ್ರೀಯ ರಕ್ಷಣಾ ಪದಾಧಿಕಾರ ಪರೀಕ್ಷೆ ಮೂಲಕ ಆಯ್ಕೆಯಾಗಿ (ಚಿಕ್ಕವಸ್ಸಿನಲ್ಲಿ ಲೇಫ್ ನೇಟ್) ಕ್ಯಾಪ್ಟನ್ ಹುದ್ದೆಗೆ ಪದೋನ್ನತಿ ಹೊಂದಿದ ಪ್ರಯುಕ್ತ ಹಮ್ಮಿಕೊಂಡಿದ್ದ ಗೌರವ ಸತ್ಕಾರ ಸಮಾರಂಭದಲ್ಲಿ ಮಾತನಾಡಿದರು.

ನ್ಯಾಯವಾದಿಗಳ ಸಂಘದ ಅಧ್ಯಕ್ಷ ಕೆ.ಬಿ.ಕುರಬೇಟ ಮಾತನಾಡಿದರು.

ಕ್ಯಾಪ್ಟನ್‌ಅರ್ಥವ್ ಶೆಟ್ಟಿ ಮಾತನಾಡಿ, ತಂದೆ–ತಾಯಿಯರ ಮಾರ್ಗದರ್ಶನದಿಂದ ಮತ್ತು ನನ್ನ ಸತ ಪ್ರಯತ್ನದ ಫಲವಾಗಿ ಈ ಜಯ ನನಗೆ ಸಿಕ್ಕಿದೆ. ಆರ್ಮಿ ಹುದ್ದೆ ಬಹಳ ಜವಾಬ್ದಾರಿಯುತ ಹುದ್ದೆಯಾಗಿದೆ ಎಂದರು.

ವಕೀಲರ ಸಂಘದ ಪದಾಧಿಕಾರಿಗಳು, ಕ್ಯಾಪ್ಟನ್‌ಅರ್ಥವ್ ಶೆಟ್ಟಿಅವರ ವಕೀಲ ಅನೀಲ್ ಶೆಟ್ಟಿ, ತಾಯಿ ಸೀಮಾ ಅನೀಲ ಶೆಟ್ಟಿ, ಮಹಿಳಾ ನ್ಯಾವಾದಿ ಆಶಾ ಸಿಂಗಾಡಿ, ಸೇರಿದಂತೆ ಅಭಿಮಾನಿಗಳು ಅವರನ್ನು ಸತ್ಕರಿಸಿ ಅಭಿನಂದಿಸಿದರು.

ಈ ವೇಳೆ ಹಿರಿಯ ನ್ಯಾಯಾಧೀಶರಾದ ರಾಜಣ್ಣ ಸಂಕಣ್ಣವರ, ಸಿಪಿಐ ಶಿವಶಂಕರ ಗಣಾಚಾರಿ, ಸರ್ಕಾರಿ ಸಹಾಯಕ ಅಭಿಯೋಜಕ ಶೇಖರ ಬಡಗಾಂವಿ, ಸರ್ಕಾರಿ ವಕೀಲ ಅನೀಲ್ ಕರೋಶಿ, ಕಾರ್ಯದರ್ಶಿ ಬಿ.ಎಂ. ಜಿನರಾಳೆ, ನ್ಯೂಟರಿ ವಕೀಲರಾದ ಎಂ.ಎಂ.ಪಾಟೀಲ, ಶಿವಾನಂದ ಮರಿನಾಯಿಕ, ಬಸವರಾಜ ಶಿಂಧೆ ಹಟ್ಟಿ ಸಂಜೀವ ನಾಗನೂರಿ, ಬಸವರಾಜ ಶಿಂಧೆಹಟ್ಟಿ, ನ್ಯಾಯವಾದಿಗಳಾದ ಎಸ್.ಕೆ. ಹಲಕರ್ಣಿ, ಭೀಮಸೇನ ಬಾಗಿ, ಬಸವರಾಜ ಹುಂಡೇಕಾರ, ನ್ಯಾಯವಾದಿಗಳ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ನವಭಾರತ ನಿರ್ಮಾಣಕ್ಕೆ ಕೌಶಲ್ಯಾಧಾರಿತ ಶಿಕ್ಷಣ ಅಗತ್ಯ

• **ಬೆಳಗಾವಿ:** ನಗರದ ಕೆಎಲ್‌ಇ ಸಂಸ್ಥೆಯ ರಾಜಾ ಲಖಮಗೌಡ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಮಂಗಳವಾರ 'ಸತ್ಕಾರ ಸಮಾರಂಭ' ಆಯೋಜಿಸಲಾಯಿತು.



ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕ ಸರ್ಕಾರದ ಮಾಜಿ ಮುಖ್ಯ ಸಚೇತಕರಾದ ಮಹಾಂತೇಶ ಎಂ. ಕವಟಗಿಮಠ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಕೇವಲ ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗಳಿಗೆ ಮಾತ್ರ ಸೀಮಿತವಾಗದೆ, ಸಿವಿಲ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಮುಂತಾದ ಮೂಲ ಎಂಜಿನಿಯರಿಂಗ್ ಕೋರ್ಸ್‌ಗಳಿಗೂ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಭವಿಷ್ಯದಲ್ಲಿ ಕೇವಲ ಸಂಬಳಕ್ಕಾಗಿ ಉದ್ಯೋಗವನ್ನು ಅರಿಸದೆ, ಹೋಮಿ ಜಹಾಂಗೀರ್ ಬಾಬಾ, ರಾಜಾ ರಾಮಣ್ಣ ಹಾಗೂ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರಂತೆ ವೈಜ್ಞಾನಿಕ ಸಂಶೋಧನಾ ಕ್ಷೇತ್ರದಲ್ಲಿ ಸಾಧನೆ ಮಾಡಿ ದೇಶವನ್ನು ವಿಶ್ವದ ಮುಂಚೂಣಿಗೆ ಕೊಂಡೊಯ್ಯುವ ಸಂಕಲ್ಪ ಹೊಂದಬೇಕು ಎಂದು ಕರೆ ಕೊಟ್ಟರು.

ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಿದರೂ ಮಾನವೀಯ ಮೌಲ್ಯಗಳು, ಸಂಬಂಧಗಳು ಹಾಗೂ ಪೋಷಕರ ತ್ಯಾಗವನ್ನು ಮರೆಯಬಾರದು ಎಂದು ಹೇಳಿದ ಅವರು, ನವಭಾರತ ನಿರ್ಮಾಣಕ್ಕೆ ಪೂರಕವಾಗುವ ಕೌಶಲ್ಯಾಧಾರಿತ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಲಿಂಗೌಡ ವಿ.ದೇಸಾಯಿ ಮಾತನಾಡಿ, ಕೃತಕ ಬುದ್ಧಿಮತ್ತೆ (ಎಐ) ಎಲ್ಲ ಕ್ಷೇತ್ರಗಳಲ್ಲೂ ವೇಗವಾಗಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ತಾಂತ್ರಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಕೌಶಲ್ಯಗಳಲ್ಲಿ ಪರಿಣತಿ ಪಡೆದರೆ ವೃತ್ತಿಜೀವನದಲ್ಲಿ ಹೆಚ್ಚಿನ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ರಾಜಾ ಲಖಮಗೌಡ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಜೆ.ಎಸ್.ಕವಳೇಕರ, ಉಪಪ್ರಾಚಾರ್ಯ ಡಾ.ಎಸ್.ಎ.ಜವಳಿ ಉಪಸ್ಥಿತರಿದ್ದರು.

ಪ್ರಾಚಾರ್ಯ ವಿ.ಸಿ. ಕಾಮಗೋಳ ಸ್ವಾಗತಿಸಿದರು. ಕೃತಿಕಾ ಮತ್ತು ಸಂಗಡಿಗರು ಪ್ರಾರ್ಥನಾ ಗೀತೆ ಹಾಡಿದರು. ಎಂ.ಎಂ.ಕುಂಬಾರ ವಂದಿಸಿದರು. ಆರ್.ವಿ.ಗುಡಿ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಎಸ್.ಬಿ.ಬನ್ನಿಮಟ್ಟಿ ಮತ್ತು ಸ್ಟೆಫಿ ರೊಡ್ರಿಕ್ಸ್ ನಿರೂಪಿಸಿದರು.

ಉಚಿತ ಬಸ್‌ಪಾಸ್ ವಿತರಣೆ

• **ಚಿಕ್ಕೋಡಿ:** ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಚಿಕ್ಕೋಡಿ ವಿಭಾಗಕ್ಕೆ ಮಂಗಳವಾರ ವಾ.ಕ.ರ.ಸಾ.ಸಂಸ್ಥೆ ಕೇಂದ್ರ ಕಛೇರಿ ಹುಬ್ಬಳ್ಳಿ ಉಪಾಧ್ಯಕ್ಷರು ಸುನೀಲ.ಹಣಮಣ್ಣವರ ರವರು ಚಿಕ್ಕೋಡಿ ಬಸ್ ನಿಲ್ದಾಣ, ವಿಭಾಗೀಯ ಕಛೇರಿ ಹಾಗೂ ಕಾರ್ಯಾಗಾರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಘಟಕದ ನವೀಕರಣ ಕುರಿತು ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಸೂಚಿಸಿ ಬಸ್ ನಿಲ್ದಾಣದಲ್ಲಿ ಶಾಲಾ–ಕಾಲೇಜ್ ಮಕ್ಕಳಿಗೆ ಮಾತನಾಡಿಸಿ ಉಚಿತ ಬಸ್ ಪಾಸ್ ಕುರಿತು, ಸೌಲಭ್ಯ ಪಡಯಲು ತಿಳಿಸಿ ಶಾಲಾ ಮಕ್ಕಳಿಗೆ ಉಚಿತ ಬಸ್ ಪಾಸ್ ವಿತರಿಸಿದರು. ವಿಭಾಗದ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿಗಳು ಎಂ.ಆರ್. ಮುಂಜಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನಾರಾಯಣ ತಿಮ್ಮಾರಡ್ಡಿ, ಚಿಕ್ಕೋಡಿ ಘಟಕ ವ್ಯವಸ್ಥಾಪಕ ರಾಜು.ಎಸ್.ಪಾಟೀಲ, ವಿಭಾಗೀಯ ಸಿಬ್ಬಂದಿಗಳು ಹಾಜರಿದ್ದರು.



ಅಂಗವಿಕಲತೆ ದೇವರ ಶಾಪವಲ್ಲ: ಸುರೇಖಾ



• **ರಾಯಬಾಗ:** ಅಂಗವಿಕಲತೆ ಯಾವದೇವರ ಶಾಪವಲ್ಲ. ಕೆಲವು ನ್ಯೂನ್ಯತೆಗಳು ಭಗವಂತನ ಸೃಷ್ಠಿಯ ವೈಚಿತ್ರದಿಂದಾದರೆ. ಇನ್ನು ಕೆಲವು ಅಪಘಾತಗಳಿಂದಲೋ ಅಥವಾ ಆಕಸ್ಮಿಕವಾಗಿ ಶರೀರ ವಿಕಲತೆಗೆ ಉಂಟಾಗುತ್ತದೆ. ಅಂಥವರಿಗೆ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿದೆ ಎಂದು ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸುರೇಖಾ ಹೆಬ್ಬಳ್ಳಿ ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ವತಿಯಿಂದ ಮಂಗಳ ಕಾರ್ಯಕ್ರಮದಡಿ ತಾಲೂಕಿನ ಬ್ಯಾಕೂಡ ಗ್ರಾಮದ ವಿಕಲ ಚೇತನ ಮಗು ಅನಿಲ ಈತನಿಗೆ ವೀಲ್‌ಚೇರ್ ವಿತರಸಿ ಮಾತನಾಡಿದರು.

ಈ ವೇಳೆ ವಲಯ ಮೇಲ್ವಿಚಾರಿಕೆ ಸಾವಿತ್ರಿ ಜಾಡರ, ಸೇವಾ ಪ್ರತಿನಿಧಿಗಳಾದ ಸವಿತಾ, ಶ್ರೀಕಾಂತ, ಸಂಘದ ಸದಸ್ಯರು ಇದ್ದರು.

ರೈತರಿಗೆ ತರಬೇತಿ ಕಾರ್ಯಾಗಾರ

• **ಖಾನಾಪುರ:** ತಾಲೂಕಿನ ಜಾಂಬೋಟಿ ಗ್ರಾಮದ ತೋಟಗಾರಿಕೆ ಇಲಾಖೆ ಜೇನು ಕೃಷಿ ತರಬೇತಿ ಕೇಂದ್ರದಲ್ಲಿ ಈಚೆಗೆ ನೈಸರ್ಗಿಕ ಕೃಷಿ ಮತ್ತು ಸುಸ್ಥಿರ ಪದ್ಧತಿಗಳ ಮೂಲಕ ಲಾಭದಾಯಕ ಹಾಗೂ ಸಮೃದ್ಧ ಗೋಡಂಬಿ ಕೃಷಿ ವಿಷಯ ಆಧರಿತ ಜಿಲ್ಲಾ ಮಟ್ಟದ ತರಬೇತಿ ಕಾರ್ಯಕ್ರಮ ಜರುಗಿತು.

ತೋಟಗಾರಿಕಾ ವಿಜ್ಞಾನಿ ಪ್ರವೀಣ ಯಡಹಳ್ಳಿ, ಗೋಡಂಬಿ ಮತ್ತು ಕೋಕೋ ಅಭಿವೃದ್ಧಿ ನಿರ್ದೇಶನಾಲಯದ ಉಪ ನಿರ್ದೇಶಕ ದಾದಾಸಾಹೇಬ ದೇಸಾಯಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಪ್ರವೀಣ ಮಹೇಂದ್ರಕರ, ರಾಜಶೇಖರ ಪಾಟೀಲ, ಹಿರಿಯ ವಿಜ್ಞಾನಿ ಡಾ.ಮಂಜುನಾಥ ಚೌರಡ್ಡಿ, ಅನುಸೂಯಾ ಹೊಸಗೌಡರ, ಭಾಮಿನಿ ಪಾಟೀಲ ಮತ್ತಿತರರು ಮಾತನಾಡಿ, ಗೋಡಂಬಿ ಬೆಳೆಯ ಸುಧಾರಿತ ಉತ್ಪಾದನಾ ತಂತ್ರಜ್ಞಾನ, ನೈಸರ್ಗಿಕ ಕೃಷಿ ಮೂಲಕ ಲಾಭದಾಯಕ ಗೋಡಂಬಿ ಬೇಸಾಯ, ಗೋಡಂಬಿ ಮತ್ತು ಗೋಡಂಬಿ ಹಣ್ಣಿನ ಮೌಲ್ಯವರ್ಧನೆ ಮತ್ತಿತರ ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಕಿರಣಕುಮಾರ ಉಪಾಳೆ ಉದ್ಘಾಟಿಸಿ, ಮಾತನಾಡಿದರು. ಮತ್ತಿಕೊಪ್ಪದ ಕೆಎಲ್‌ಇ ಕೃಷಿ ವಿಜ್ಞಾನ ಕೇಂದ್ರ, ಕೇರಳ ರಾಜ್ಯದ ಕೊಚ್ಚಿಯ ಗೋಡಂಬಿ, ಕೋಕೋ ಅಭಿವೃದ್ಧಿ ನಿರ್ದೇಶನಾಲಯ ಹಾಗೂ ಜಿಪಂ, ತೋಟಗಾರಿಕೆ ಇಲಾಖೆಯ ಆಶ್ರಯದಲ್ಲಿ ಜರುಗಿದ ಕಾರ್ಯಾಗಾರದಲ್ಲಿ ಜಿಲ್ಲೆಯ ವಿವಿಧ ಭಾಗಗಳ ಗೋಡಂಬಿ ಕೃಷಿಕರು ಭಾಗವಹಿಸಿದ್ದರು.



ಕಿರುಸುದ್ದಿ

ಇಂದಿನಿಂದ ಜಾತ್ರೆ

ಬಾದಾಮಿ: ತಾಲೂಕಿನ ಕೆಂದೂರ ಗ್ರಾಮದ ಗ್ರಾಮ ದೇವತೆ ಜಾತ್ರಾ ಮಹೋತ್ಸವದ ಅಂಗವಾಗಿ ಜೂ.17ರಂದು ಬುಧವಾರ ಗ್ರಾಮ ದೇವತೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ. ಅಮದು ಬೆಳಗ್ಗೆ 8 ಗಂಟೆಗೆ ಹಂದರ ಹಾಕುವುದು, ಮಧ್ಯಾಹ್ನ 3 ಗಂಟೆಗೆ ಗ್ರಾಮದ ಹೆಣ್ಣುಮಕ್ಕಳಿಂದ ಹಂದರಬುತ್ತಿ ತರುವ ಕಾರ್ಯಕ್ರಮ ಜರುಗುವುದು. ಜೂ.18ರಂದು ಗುರುವಾರ ಬೆಳಗ್ಗೆ 8 ಗಂಟೆಗೆ ಮೂರ್ತಿಗಳ ಪ್ರತಿಷ್ಠಾಪನೆ, ಹೋಮ ಮಾಡುವ ಕಾರ್ಯಕ್ರಮಗಳು ಜರುಗಲಿವೆ. ಜೂ.19ರಂದು ಶುಕ್ರವಾರ ಬ್ರಾಡ್ಮಿ ಮೂಹೂರ್ತದಲ್ಲಿ ಮೂರ್ತಿಗಳ ಪ್ರತಿಸ್ಥಾಪನೆ, ಜೂ.20ರಂದು ಶನಿವಾರ ಬೆಳಗ್ಗೆ 8 ಗಂಟೆಗೆ ಮಾರುತೇಶ್ವರ ಅಭಿಷೇಕ ಮಾಡುವ ಕಾರ್ಯಕ್ರಮ, ಜೂ.21ರಂದು ಭಾನುವಾರ ಬೆಳಗ್ಗೆ 7.30ಗಂಟೆಗೆ ಗ್ರಾಮದೇವತೆಯರಿಗೆ ಚಂಡಿ ತುಂಬುವುದು. ಹೋಮಮಾಡುವ ಕಾರ್ಯಕ್ರಮ, ಜೂ.22ರಂದು ಸೋಮವಾರ ಬೆಳಗ್ಗೆ 10ಗಂಟೆಗೆ ದೈವದ ಸಂತೆಮಾಡುವ ಕಾರ್ಯಕ್ರಮ, ಜೂ.23ರಂದು ಬೆಳಗ್ಗೆ 8 ಗಂಟೆಗೆ ಹೊಳಿಗೆ ಹೊಗುವುದು ಸಕಲವಾದ್ಯ, ಡೊಳ್ಳು, ಆರತಿಯವರೊಂದಿಗೆ ಪೂಜಾ ಕಾರ್ಯಕ್ರಮ ಜರುಗುವುದು. ನಂತರ ಮರಳಿ ಗುಡಿಗೆ ಆಗಮನ, ಸಾಯಂಕಾಲ 4-00 ಗಂಟೆಗೆ ಎಲ್ಲ ಮಹಿಳೆಯರಿಂದ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗುದ ಎಂದು ಜಾತ್ರಾ ಮಹೋತ್ಸದ ಸಂಘಟಕರು ತಿಳಿಸಿದ್ದಾರೆ.

ಶಾಸಕ ಜೆ.ಟಿ.ಪಾಟೀಲಗೆ ಸಚಿವ ಸ್ಥಾನ ನೀಡಲು ಒತ್ತಾಯ

ಗಲಗಲಿ: ಬೀಳಗಿ ಕ್ಷೇತ್ರ ಶಾಸಕ ಜೆ.ಟಿ.ಪಾಟೀಲ ಅವರಿಗೆ ನೂತನ ಸಂಪುಟದಲ್ಲಿ ಸಚಿವ ಸ್ಥಾನ ನೀಡುವಂತೆ ಸ್ಥಳೀಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಮನವಿ ಮಾಡಿದ್ದಾರೆ. ಪಕ್ಷದ ಅತ್ಯಂತ ನಿಷ್ಠಾವಂತ ಹಿರಿಯ ಶಾಸಕರಾದ್ದಾರೆ. ಬೀಳಗಿ ಕ್ಷೇತ್ರದಲ್ಲಿ ಉತ್ತಮ ಕಾರ್ಯ ಮಾಡಿ ಕ್ಷೇತ್ರವನ್ನು ಅಭಿವೃದ್ಧಿಯತ್ತ ಮುನ್ನಡೆಸಿದ್ದು, ಕ್ಷೇತ್ರದಲ್ಲಿ ಕ್ರಿಯಾಶೀಲ ಶಾಸಕರೆಂದು ಮನೆಮಾತಾಗಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಈರಣಗೌಡ ನ್ಯಾಮಗೌಡ, ಹುಸೇನ್‌ಸಾಬ್ ಹೊಸೂರ, ಈಶ್ವರಯ್ಯ ಪುರಾಣಿಕ, ಅಜಿಂಸಾಬ್ ಹೊಸೂರ, ರಾಮಣ್ಣ ಕಡಾ ಕಡಿ, ಪ್ರಸಾದ ಹಬ್ಬು, ಪರಶುರಾಮ ದೊಡಮನಿ, ಪಪ್ಪು ಹಿರೇಮಠ, ಮಂಜುನಾಥ ಕಣಬೂರು, ಇರ್ಫಾನ್ ಅಥಣಿ ಮನವಿ ಮಾಡಿದ್ದಾರೆ.

ಶಾಸಕ ಲಕ್ಷ್ಮಣ ಸವದಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಬೀಳಗಿ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸಚಿವ ಸಂಪುಟದಲ್ಲಿ ಅಥಣಿ ಶಾಸಕ ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡುವಂತೆ ನ್ಯಾಯವಾದಿ ಪ್ರಕಾಶ ಗಾಣಗೇರ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರ್ಕಾರದ ಇತಿಹಾಸದಲ್ಲಿಯೇ ಗಾಣಿಗ ಸಮಾಜದ ಯಾರೊಬ್ಬರಿಗೂ ಮಂತ್ರಿ, ಮಂಡಲದಲ್ಲಿ ಸಚಿವ ಸ್ಥಾನ ನೀಡದೆ ಇರುವುದು ಅತ್ಯಂತ ನೋವಿನ ಸಂಗತಿ. ಸಾಮಾಜಿಕ ನ್ಯಾಯದ ಪಾಠ ಹೇಳುವ ಕಾಂಗ್ರೆಸ್ ಪಕ್ಷದ ಮುಖಂಡರು ಗಾಣಿಗ ಸಮಾಜದ ಅಥಣಿ ಶಾಸಕ ಲಕ್ಷ್ಮಣ ಸವದಿ, ಭದ್ರಾವತಿ ಶಾಸಕ ಬಿ.ಕೆ.ಸಂಗಮೇಶ ಇವರಲ್ಲಿ ಒಬ್ಬರನ್ನಾದರೂ ಸಚಿವರನ್ನಾಗಿ ಮಾಡದಿದ್ದರೆ ಮುಂಬರುವ 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುದೊಡ್ಡ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಬೀಳಗಿ ತಾಲೂಕು ಗಾಣಿಗ ಸಮಾಜದ ಯುವ ಘಟಕದ ಉಪಾಧ್ಯಕ್ಷ ಹನುಮಂತ ಗಾಣಗೇರ ಮಾತನಾಡಿ, ರಾಜ್ಯದಲ್ಲಿ ಗಾಣಿಗ ಸಮಾಜ 40-50 ಲಕ್ಷ ಜನಸಂಖ್ಯೆ ಇದ್ದು, ಸಾಮಾಜಿಕ ನ್ಯಾಯದಡಿ ಸಚಿವ ಸ್ಥಾನ ನೀಡಬೇಕು. ಲಕ್ಷ್ಮಣ ಸವದಿ ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಸಂಘಟನಾ ಸಾಮರ್ಥ್ಯ ಹಾಗೂ ಜನಪ್ರಿಯತೆಯಿಂದ ಚಿಕ್ಕೋಡಿ ಲೋಕಸಭಾ ಕ್ಷೇತ್ರ ಗೆಲ್ಲಲು ಬಹುದೊಡ್ಡ ಕಾಣಿಕೆ ಸಲ್ಲಿಸಿದ್ದಾರೆಂದು ಹೇಳಿದರು. ಗಾಣಿಗ ಸಮಾಜದ ಮುಖಂಡರಾದ ಶಿವಾನಂದ ಕೆರಕಲಮಟ್ಟಿ, ಬಸವರಾಜ ಛಬ್ಬಿ, ನಿಂಗಪ್ಪ ಹುಗ್ಗಿ, ಬೊಮ್ಮಪ್ಪ ಸಾಹುಕಾರ, ಸಂತೋಷ ಸಜ್ಜನ, ಜಿ.ಜಿ.ಮೇಟಿ ಉಪಸ್ಥಿತರಿದ್ದರು.

ಭೀಮಶಿ ಮದರಖಂಡಿ ನಿಧನ

ಜಮಖಂಡಿ: ನಗರದ ಶಹರ ಪೋಲಿಸ್ ಠಾಣೆಯ ಕರ್ತವ್ಯನಿರತ ಸಹಾಯಕ ಠಾಣಾಧಿಕಾರಿ ಭೀಮಶಿ ಮದರಖಂಡಿ ಫಂಡರಪುರ ದೇವಸ್ಥಾನಕ್ಕೆ ಹೋದ ಸಮಯದಲ್ಲಿ ಹೃದಯಘಾತದಿಂದ ನಿಧನ ಹೊಂದಿದ್ದಾರೆ. ಮಾಜಿ ಶಾಸಕ ಆನಂದ ನ್ಯಾಮಗೌಡ ಅವರು



ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿದರು. ನಗರದ ಶಹರ ಪೊಲೀಸ್ ಠಾಣೆಯ ಆವರಣದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಯಿತು. ಪೊಲೀಸ್ ಇಲಾಖೆಯಿಂದ ಗಾಳಿಯಲ್ಲಿ ಐದು ಸುತ್ತು ಗುಂಡುಗಳನ್ನು ಹಾರಿಸಿ ಅಂತಿಮ ಗೌರವ ವಂದನೆ ಸಲ್ಲಿದರು. ಸರ್ಕಾರದ ಸಕಲ ಗೌರವದೊಂದಿಗೆ ಅಂತಿಮ ನಮನ ಸಲ್ಲಿಸಿದರು.



ಬಾಗಲಕೋಟೆ: ತಾಲೂಕಿನ ನಾಯನೇಗಲಿ ಗ್ರಾಮದಲ್ಲಿರುವ ಪಿಕೆಪಿಎಸ್ ಬ್ಯಾಂಕ್‌ನ ನೂತನ ಕಚೇರಿಯನ್ನು ಶಾಸಕ ಉಮೇಶ ಮೇಟಿ ಮಂಗಳವಾರ ಉದ್ಘಾಟಿಸಿದರು. ಸಿದ್ದಲಿಂಗಯ್ಯ ಹಿರೇಮಠ ಗುರುಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಜಿಪಂ ಮಾಜಿ ಅಧ್ಯಕ್ಷ ಬಸವಂತಪ್ಪ ಮೇಟಿ, ಪಿಕೆಪಿಎಸ್ ಅಧ್ಯಕ್ಷ ಸಂಗಪ್ಪ ಚಲವಾದಿ, ಉಪಾಧ್ಯಕ್ಷ ದುಂಡಪ್ಪ ವಾಲಿಕಾರ, ಸಿಇಓ ಮನೋಹರ ಕೋಟಿ, ನಿರ್ದೇಶಕ ಆರ್.ಎಚ್.ಕುಲಕರ್ಣಿ, ಡಾ.ಅಂಗಡಿ, ಹಿರೇಬಸಪ್ಪ ಗೌಡರ, ಪರಶುರಾಮ ಕಟಬರ್ ಹಾಗೂ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ವಿವಿಧೆಡೆ ರಸ್ತೆ ಕಾಮಗಾರಿಗೆ ಭೂಮಿಪೂಜೆ

ಜಮಖಂಡಿ: ನಗರದ ಎ.ಜಿ.ದೇಸಾಯಿ ವೃತ್ತದ ಹತ್ತಿರ ವಿಜಯಪುರ ರಾಜ್ಯ ಹೆದ್ದಾರಿಯ ಸೇರಿದಂತೆ ಇನ್ನಿತರ ಕಾಮಗಾರಿಗಳಿಗೆ ಶಾಸಕ ಜಗದೀಶ ಗುಡಗುಂಟಿ ಭೂಮಿಪುಜೆ ನಡೆಸಿ ಕಾಮಾಗಾರಿಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಜರುಗುತ್ತಿವೆ. ಇಂದು ನಗರದಲ್ಲಿ ವಾರ್ಡ್ ನಂ.3ರಲ್ಲಿ 10 ಲಕ್ಷ ರೂ.ಗಳ ಅನುದಾನದಲ್ಲಿ ಸಿಸಿ ರಸ್ತೆ ನಿರ್ಮಾಣ, ವಾರ್ಡ್ ನಂ.30ರಲ್ಲಿ 20 ಲಕ್ಷ ರೂ.ಗಳ ಅನುದಾನದಲ್ಲಿ ಸಿಸಿ ರಸ್ತೆ, ಆಲಗೂರ ಪುನರ್ವಸತಿ ಕೇಂದ್ರದಲ್ಲಿ 20 ಲಕ್ಷ ರೂ.ಗಳ ಅನುದಾನದಲಿ ಒಳ ಚರಂಡಿ ಕಾಮಾಗಾರಿ ದೇಸಾಯಿ ವೃತ್ತದಿಂದ ಮಾಳಿ ಪಂಪ ವರೆಗೆ ದ್ವಿಪಥ ರಸ್ತೆಗೆ 1.67 ಲಕ್ಷರೂ. ಅನುದಾನದಲ್ಲಿ ಕಾಮಗಾರಿಗೆ ಚಾಲನೆ ನೀಡಿದ್ದೇವೆ ಎಂದರು. ನಗರದ ರಸ್ತೆಗಳು ಮತ್ತು ಗ್ರಾಮೀಣ ಪ್ರದೇಶದಲ್ಲಿ ರಸ್ತೆಯ ಕಾಮಗಾರಿಗೆ ಶೀಘ್ರದಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು. ತಾಲೂಕಿನ ಮರೇಗುದ್ದಿ ಏತ ನೀರಾವರಿ ಯೋಜನೆಯ 218 ಕೋಟಿ ರೂ.ಅನುದಾನದಲ್ಲಿ 110 ಕೋಟಿ ರ.ೂಗಳ ಅನುದಾನವು ಬಂದಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿದೆ. ಇಷ್ಟರಲ್ಲಿ ಕಾಮಗಾರಿ ಸಹ ಪ್ರಾರಂಭಿಸಲಾಗುತ್ತದೆ ಎಂದು ಹೇಳಿದರು. ನಗರ ಮಡಳ ಅಧ್ಯಕ್ಷ ಅಜೀಯ ಕಡಪಟ್ಟಿ, ಗ್ರಾಮೀಣ ಮಂಡಳ ಅಧ್ಯಕ್ಷ ಮಲ್ಲು ದಾನಗೌಡ, ಸುರೇಶಗೌಡ ಪಾಟೀಲ, ಯೋಗಪ್ಪ ಸವದಿ, ದಿಲೀಪ ಜೋಗಂಡೆ, ಮಾಧ್ಯಮ ಸಂಚಾಲಕ ಶ್ರೀಧರ ಕಂಬಿ, ಶ್ರೀಶೈಲ ಗಡಾದ, ರಮೇಶ ಆಲಬಾಳ ರಾಜಾಸಾಬ ಕಡಕೋಳ, ಈಶ್ವರ ಆದೆಪ್ಪನವರ, ಕುಶಾಲ ವಾಗಮಾರೆ, ಎಇಇ ಎಸ್.ಆರ್. ಬಂಡಿವಡ್ಡರ, ಗುತ್ತಿಗೆದಾರ ಕಂಕಾಳೆ, ಯನಮೂರ ಮೂಲಂಗಿ ಇದ್ದರು.



ಜಮಖಂಡಿ: ನಗರದ ಎ.ಜಿ.ದೇಸಾಯಿ ವೃತ್ತದ ಹತ್ತಿರ ವಿಜಯಪುರ ರಾಜ್ಯ ಹೆದ್ದಾರಿಯ ಸೇರಿದಂತೆ ಇನ್ನಿತರ ಕಾಮಗಾರಿಗಳಿಗೆ ಶಾಸಕ ಜಗದೀಶ ಗುಡಗುಂಟಿ ಭೂಮಿಪುಜೆ ನಡೆಸಿ ಕಾಮಾಗಾರಿಗೆ ಚಾಲನೆ ನೀಡಿದರು.

ಪ್ರಧಾನಿ ಮೋದಿಯಿಂದ ದೇಶದಲ್ಲಿ ಉತ್ತಮ ಆಡಳಿತ | ಗದ್ದಿಗೌಡರ ಹೇಳಿಕೆ

ಜಗತ್ತಿನಲ್ಲಿ ಭಾರತಕ್ಕೆ ಉತ್ತುಂಗದ ಸ್ಥಾನ

ಬಾಗಲಕೋಟೆ: ದೇಶದ ಜನರ ಕಲ್ಯಾಣ, ದೇಶದ ಸುರಕ್ಷತೆ, ಎಲ್ಲ ವರ್ಗದವರ ಅಭಿವೃದ್ಧಿ, ಜಗತ್ತಿನಲ್ಲಿ ಭಾರತ ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡಲು ಇಚ್ಛಾಶಕ್ತಿಯಿಂದ ಕಳೆದ 12 ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿಯವರು ದೇಶದಲ್ಲಿ ಉತ್ತಮ ಆಡಳಿತವನ್ನು ನೀಡುವ ಮೂಲಕ ಭಾರತವನ್ನು ಉತ್ತುಂಗದ ಸ್ಥಾನಕ್ಕೆ ತೆಗೆದುಕೊಂಡು ಹೋಗಿದ್ದಾರೆ ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೀರ್ಘಕಾಲದ ಅವಧಿಗೆ ಮೋದಿ ದೇಶದಲ್ಲಿ ಪ್ರಧಾನಿಯಾಗಿದ್ದು ಅವರ ದೂರದೃಷ್ಟಿಯ ಪರಿಣಾಮ ಜನರ ಕಲ್ಯಾಣವಾಗುತ್ತಿದೆ.

ದೇಶದ ಸುರಕ್ಷತೆಗೆ ಬದ್ಧತೆಯಿಂದ ಕಾರ್ಯಕ್ರಮ ತಂದಿದಾರೆ. ದೇಶದ ಮೇಲೆ ಯುದ್ಧ ನಡೆದರೆ ಅದನ್ನು ಎದುರಿಸುವ ಶಕ್ತಿಯನ್ನು ಭಾರತಕ್ಕೆ ತಂದುಕೊಟ್ಟಿದ್ದು ನಮ್ಮ ಪ್ರಧಾನಿಯವರು ಎಂದರು.

ದೇಶದ 11 ಕೋಟಿ ರೈತರಿಗೆ ಪಿಎಂಕಿಸಾನ್ ಸಮ್ಮಾನ್ ನಿಧಿ ಅಡಿ 4.3 ಲಕ್ಷ ಕೋಟಿ ಹಣವನ್ನು ನೇರವಾಗಿ ರೈತರ ಖಾತೆಗೆ ಜಮೆ ಮಾಡಲಾಗಿದೆ. 7 ಕೋಟಿಗೂ ಹೆಚ್ಚು ರೈತರಿಗೆ ಕಡಿಮೆ ಬಡ್ಡಿಯಲ್ಲಿ 10 ಲಕ್ಷ ಕೋಟಿ ರೂ. ಸಾಲವನ್ನು ನೀಡಲಾಗಿದೆ. ಪಿಎಂ ವಿಶ್ವಕರ್ಮ ಯೋಜನೆಯಡಿ 30 ಲಕ್ಷ ಜನ ಪ್ರಯೋಜನ ಪಡೆದಿದ್ದಾರೆ. ಜನರ ಆರೋಗ್ಯಕ್ಕಾಗಿ ಆಯುಷ್ಮಾನ್ ಯೋಜನೆ, ಜನಧನ್‌ದಂತಹ ಜನಪರ ಕಾರ್ಯಕ್ರಮ ಜಾರಿಗೆ ತಂದಿದೆ ಎಂದು ಹೇಳಿದರು.



ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರಗೇಶ ನಿರಾಣಿ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಆರ್ ಎಸ್‌ಎಸ್ ಬಗ್ಗೆ ಏನೂ ಸಂಬಂಧ ಇಲ್ಲದ ವಿಷಯಕ್ಕೆ ಪ್ರಿಯಾಂಕ್ ಖರ್ಗೆ ಮಾತನಾಡುತ್ತಿದ್ದಾರೆ ಆದರೆ ಅವರ ಕ್ಷೇತ್ರ, ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡುತ್ತಿಲ್ಲ. ಇವತ್ತು ಶಿಕ್ಷಣದಲ್ಲಿ ಕಲಬುರ್ಗಿ ಜಿಲ್ಲೆ ಕೊನೆಯ ಸ್ಥಾನ ತಲುಪಿದೆ. ಇದರ ಬಗ್ಗೆ ಸಚಿವರು ಗಮನ ಕೊಡಲಿ ಎಂದರು.

ಮಾಜಿಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ದೇಶದ ಸಾಲ ಎಷ್ಟು ಇದೆ ಎಂಬುದು ಮುಖ್ಯವಲ್ಲ. ಸಾಲ ಮರಳಿ ತೀರಿಸುವ ಶಕ್ತಿ ಇರುವವರಿಗೆ ಸಾಲ ನೀಡಲಾಗುತ್ತದೆ. ದೇಶದಲ್ಲಿ ಪ್ರಧಾನಿ ಮೋದಿಯವರು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ.

ಇಸ್ರೇಲ್,ಇರಾನ್, ಅಮೆರಿಕಾ ಕಡೆ ಯುದ್ಧಗಳು ನಡೆಯುತ್ತಿದ್ದರೂ ದೇಶದಲ್ಲಿ ಮಾತ್ರ ಜನರಿಗೆ ಪೆಟ್ರೋಲ್, ಡಿಸೇಲ್, ಗ್ಯಾಸ ಪೂರೈಕೆಯಲ್ಲಿ ತೊಂದರೆಯಾಗದಂತೆ ಆಡಳಿತ ನೀಡುತ್ತಿದ್ದಾರೆಂದರು.

> ಸಾಲ ಮಾಡಿ ತುಪ್ಪ ತಿನ್ನುವ ಕೆಲಸವನ್ನು ಬಿಜೆಪಿ ಎಂದೂ ಮಾಡಿಲ್ಲ. ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿಯವರು ಜಗತ್ತೆ ಭಾರತದತ್ತ ತಿರುಗಿ ನೋಡುವಂತೆ ಮಾಡಿದ್ದಾರೆ. 14ನೇ ಸ್ಥಾನದಲ್ಲಿದ್ದ ಭಾರತ ಆರ್ಥಿಕ ಅಭಿವೃದ್ಧಿಯಲ್ಲಿ 3ನೇ ಸ್ಥಾನಕ್ಕೆ ಬಂದಿದೆ. ಕೇಂದ್ರದಲ್ಲಿ ಭ್ರಷ್ಟಾಚಾರ ರಹಿತ ಆಡಳಿತದ ಫಲದಿಂದ ಸಣ್ಣ ಸಣ್ಣ ದೇಶಕ್ಕೂ ಭಾರತ ಸಾಲ ಕೊಡುವಂತಹ ಶಕ್ತಿ ಇದೆ.
> ■ ಮುರಗೇಶ ನಿರಾಣಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ

ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಯ್ಯ ಮೂಗನೂರಮಠ, ಬೆಳಗಾವಿ ಸಹ ಪ್ರಭಾರಿ ಬಸವರಾಜ ಯಂಕಂಚಿ,ಹೂವಪ್ಪ ರಾಠೋಡ ಪತ್ರಿಕಾಗೋಷ್ಠಿಯಲ್ಲಿದ್ದರು.

ಎಸ್‌ಐಆರ್ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಯಶಸ್ವಿಗೊಳಿಸಿ: ಚರಂತಿಮಠ

ಬಾಗಲಕೋಟೆ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯವನ್ನು ಕೇವಲ ಚುನಾವಣಾ ಆಯೋಗದ ಕೆಲಸ ಎಂದು ಭಾವಿಸದೆ, ಅದು ನಮ್ಮ ಹಕ್ಕು ಎಂದು ಪರಿಗಣಿಸಿ ಕಾರ್ಯಕರ್ತರು ಸಕ್ರಿಯವಾಗಿ ತೊಡಗಿಸಿಕೊಂಡು ಯಶಸ್ವಿಗೊಳಿಸಬೇಕೆಂದು ಹೇಳಿದರು.

ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಬಾಗಲಕೋಟೆ ವತಿಯಿಂದ ಮಂಗಳವಾರ ಬಿವಿವಿ ಸಂಘದ ನೂತನ ಸಭಾಭವನದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಹಾಗೂ ಬಿಎಲ್ ಎ-2 ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಬೂತ್ ಮಟ್ಟದಿಂದ ಶಕ್ತಿ ಕೇಂದ್ರ, ಹಾಗೂ ಮಹಾಶಕ್ತಿ ಮಂಡಲಗಳವರೆಗೆ ಎಸ್‌ಐಆರ್ ಕುರಿತು ವ್ಯಾಪಕ ಜಾಗೃತಿ ಮೂಡಿಸಬೇಕು. ಮತದಾರರ ಪಟ್ಟಿಯ ಪರಿಷ್ಕರಣೆ ಕುರಿತು ಜನರಲ್ಲಿ ಅರಿವು ಮೂಡಿಸುವುದರ ಜೊತೆಗೆ, ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷ ಮಾಡುತ್ತಿರುವ ಅಪಪ್ರಚಾರದ ಬಗ್ಗೆಯೂ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಮತದಾರರ ಪಟ್ಟಿಯನ್ನು ನಿಖರ ಮತ್ತು ದೋಷ ರಹಿತವಾಗಿಸಲು ಕಾರ್ಯಕರ್ತರು ಶ್ರಮಿಸಬೇಕು. ಪ್ರತಿ ಅರ್ಹ ಮತದಾರರ ಹೆಸರು ಪಟ್ಟಿಯಲ್ಲಿ ಸೇರ್ಪಡೆಯಾಗುವಂತೆ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಬಸವರಾಜ ಯಂಕಂಚಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣೂರ, ರಾಜು ಮುದೆನೂರ, ಶಶಿಕುಮಾರ ಗಟ್ಟೆನ್ನವರ, ಮಲ್ಲು ಮುತ್ತಪ್ಪನ್ನವರ ಉಪಸ್ಥಿತರಿದ್ದರು. ತರಬೇತಿ ಕಾರ್ಯಕ್ರಮದಲ್ಲಿ ಬಿಜೆಪಿ ಪದಾಧಿಕಾರಿಗಳು, ಬಿಎಲ್‌ಎಗಳು, ಕಾರ್ಯಕರ್ತರು, ವಿವಿಧ ಮಂಡಲಗಳ ಮುಖಂಡರು ಭಾಗವಹಿಸಿದ್ದರು.



ಸತತ ಪರಿಶ್ರಮದಿಂದ ಸಾಧನೆ ಸಾಧ್ಯ


ಗುಳೇದಗುಡ್ಡ: ಬಡತನ ಮನಷ್ಯನ ಜೀವನದಲ್ಲಿ ಸಾಧಿಸುವ ಛಲ ಬೆಳೆಸುತ್ತದೆ ಎನ್ನುವುದಕ್ಕೆ ಸರಕಾರಿ ಕಾಲೇಜಿನಲ್ಲಿ ಓದಿದ ಕರಿಯಪ್ಪ ಮಾದರ ಸಾಕ್ಷಿಯಾಗಿದ್ದಾನೆ. ಸತತ ಅಧ್ಯಯನ ಪರಿಶ್ರಮದಿಂದ ಅಧ್ಯಯನ ಮಾಡಿ, ಇಂದು ಐಐಟಿಗೆ ಆಯ್ಕೆಯಾಗಿ ಇಡೀ ಜಿಲ್ಲೆಗೆ ಕರಿಯಪ್ಪ ಕೀರ್ತಿ ತಂದಿದ್ದಾನೆ. ಆತನ ಸಾಧನೆ ಇತರ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲಿದೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಪಟ್ಟಣದ ಬಾಲಕರ ಸರ್ಕಾರಿ ಪಪೂ ಕಾಲೇಜಿನಲ್ಲಿ 2024-25ನೇ ಸಾಲಿನಲ್ಲಿ ವಿಜ್ಞಾನ ವಿಭಾಗದಲ್ಲಿ ಪಿಯುಸಿ ಕಲಿತ ವಿದ್ಯಾರ್ಥಿ ಕರಿಯಪ್ಪ ಮಾದರ ಐಐಟಿ ಮದ್ರಾಸ್ ಇನ್ಸಿಟ್ಯೂಟ್‌ಗೆ ಆಯ್ಕೆಯಾದ ಪ್ರಯುಕ್ತ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿ, ಎಷ್ಟೋ ಮಕ್ಕಳಿಗೆ ಮನೆಯಲ್ಲಿ ಸಿರಿವಂತಿಕೆ ಇರುತ್ತದೆ. ಆದರೆ ಅವರೆಲ್ಲರೂ ಇಂತಹ ಸಾಧನೆ ಮಾಡುವುದು ವಿರಳ. ಕರಿಯಪ್ಪ ನನ್ನ ಮತಕ್ಷೇತ್ರದ ಹಾನಾಪೂರ ಎಸ್.ಪಿ. ಗ್ರಾಮದವನೆಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಐಐಟಿ ಅಂದರೇನೇ ಗೊತ್ತಿಲ್ಲದ ತಾಯಿ ತನ್ನ ಮಗ ಐಐಟಿ ಸೇರುವಂತೆ ಮಾಡಿದ್ದಾಳೆ. ಮಗನ ಪರಿಶ್ರಮಕ್ಕೆ ಬೆನ್ನೆಲುಬಾಗಿ ತಾಯಿ ನಿಂತಿದ್ದರಿಂದ ಮಗ ಐಐಟಿಗೆ ಆಯ್ಕೆಯಾಗಿದ್ದಾನೆ ಎಂದರು.

ಬಾಗಲಕೋಟೆ ಜಿಲ್ಲಾ ಪಪೂ(ಶಾಲಾ ಶಿಕ್ಷಣ) ಇಲಾಖೆಯ ಉಪನಿರ್ದೇಶಕ ಮಂಡಲೀಕ ಕಾಂಬಳೆ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ವಿಠ್ಠಲ ಕಳಸಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕರಿಯಪ್ಪ ಮತ್ತು ಅವನ ತಾಯಿಯನ್ನು ಶಾಸಕರು ಸನ್ಮಾನಿಸಿದರು.

ಇಲಾಖೆ ವತಿಯಿಂದ ಉಪನಿರ್ದೇಶಕ ಮಂಡಲೀಕ ಕಾಂಬಳೆ ಸನ್ಮಾನಿಸಿದರು. ಗುತ್ತಿಗೆದಾರ ವೈ.ಬಿ.ಹಿರೇಗೌಡರ ಕರಿಯಪ್ಪನ ಶೈಕ್ಷಣಿಕ ಅನುಕೂಲಕ್ಕೆ ರೂ.50 ಸಾವಿರ ಸಹಾಯಧನ ನೀಡುವುದಾಗಿ ವಾಗ್ದಾನ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಜಯ ಬರಗುಂಡಿ, ಫಕೀರಪ್ಪ ತಳವಾರ, ರಮೇಶ ಹಿರೇಗೌಡರ, ರಾಜು ಸಂಗಮ, ಮೂಕಪ್ಪ ಹುನ್ನೂರ, ಬಿ.ವೈ.ಗೌಡರ, ನಿರೂಪಿಸಿದರು.



ಜಾನಪದ ನಮ್ಮ ನೆಲದ ಸಂಸ್ಕೃತಿ, ಬದುಕಿನ ಕನ್ನಡಿ: ರೊಡ್ಡಪ್ಪನವರ

ಹುಲ್ಯಾಳ: ಸಮೀಪದ ಸಿದ್ದಾಪುರ ಗ್ರಾಮದಲ್ಲಿ ಸಿದ್ದಸಿರಿ ಸಾಂಸ್ಕೃತಿಕ ಕಲಾ ಅಭಿವೃದ್ಧಿ ಸಂಘದ ಸಹಯೋಗದಲ್ಲಿ ಸಂಗೀತ ಉತ್ಸವ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಜಾನಪದ ರಾಜ್ಯ ಪ್ರಶಸ್ತಿ ವಿಜೇತೆ ಯಲ್ಲವ್ವ ರೊಡ್ಡಪ್ಪನವರ ಅವರು, ಜಾನಪದವು ನಮ್ಮ ನೆಲದ ಸಂಸ್ಕೃತಿ, ಸಂಪ್ರದಾಯ ಮತ್ತು ಬದುಕಿನ ಕನ್ನಡಿಯಾಗಿದೆ. ನಮ್ಮ ಹಿರಿಯರು ಹಾಗೂ ಸಂಗೀತ ಕಲಾವಿದರು ಉಳಿಸಿ ಬೆಳೆಸಿದ ಈ ಕಲಾ ಸಂಪತ್ತು ನಮ್ಮ ಪೀಳಿಗೆಗೆ ಅಮೂಲ್ಯ ಕೊಡುಗೆಯಾಗಿದೆ ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಈರಯ್ಯ ಸ್ವಾಮಿಗಳು ಆಶೀರ್ವಚನ ನೀಡಿ, ಇಂತಹ ಉತ್ಸವಗಳು ಗ್ರಾಮೀಣ ಕಲಾವಿದರಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಉತ್ತಮ ವೇದಿಕೆಯಾಗಿವೆ ಎಂದರು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳನ್ನು, ಯೋಧರನ್ನು ಸನ್ಮಾನಿಸಲಾಯಿತು.



ತಾಪಂ ಮಾಜಿ ಅಧ್ಯಕ್ಷ ಗೋವಿಂದ ಗಸ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಿವಪ್ಪ ಶಿಕರೆಪ್ಪ ಗೋಳ, ಬಸಪ್ಪ ಜಕನೂರ, ಗುರುಪಾದ ಮ್ಯಾಗಿನಮನಿ, ಮರೆಪ್ಪ, ಚಿದಾನಂದದನಗರ, ರಾಮಪ್ಪ ಪೂಜೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ದೂರದರ್ಶನ ಹಾಗೂ ಆಕಾಶವಾಣಿ ಕಲಾವಿದರಿಂದ ಸಂಗೀತ ಕಾರ್ಯಕ್ರಮಗಳು ಜರುಗಿದವು. ಕಲಾಸಂಘದ ಅಧ್ಯಕ್ಷ ಸತ್ಯಪ್ಪ ಮ್ಯಾಗಿನಮನಿ ಹಾಗೂ ಸದಸ್ಯ ಪುಂಡಲೀಕ ಮ್ಯಾಗಿನಮನಿ ನಿರೂಪಿಸಿದರು.

ಸಾಹಿತ್ಯದಿಂದ ಜೀವನ ಪರಿವರ್ತನೆ: ಬಸವರಾಜ ಹಡಗಲಿ

ಗುಳೇದಗುಡ್ಡ: ಸಾಹಿತ್ಯಾವಲೋಕನ ಕಾರ್ಯಕ್ರಮಗಳು ನಮ್ಮ ಸುತ್ತಮುತ್ತಲಿನ ಪ್ರಪಂಚವನ್ನು ಅರಿಯಲಿಕ್ಕೆ ಸಹಾಯ ಮಾಡುತ್ತವೆ. ಡಾ.ವಿ.ಎ.ಬೆನಕನಾಳ ಅವರು ತಮ್ಮ ವಿಶ್ರಾಂತ ಬದುಕಿನಲ್ಲಿಯೂ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಅಭಿನಂದನೀಯ ಎಂದು ಗುರೂಜಿ ಬಸವರಾಜ ಹಡಗಲಿ ಹೇಳಿದರು.

ಡಾ.ಫ.ಗು.ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್ ಗುಳೇದಗುಡ್ಡ ತಾಲೂಕು ಘಟಕದ ವತಿಯಿಂದ ಡಾ.ವಿ.ಎ.ಬೆನಕನಾಳ ಅವರ ಓದುಮನೆಯಲ್ಲಿ ಹಮ್ಮಿಕೊಂಡಿದ್ದ ನೋವುಂಡು ನಲಿದವರು ಮತ್ತು ಅಟಲ್ ಬಿಹಾರಿ ವಾಜಪೇಯಿ ಜೀವನ ಚರಿತ್ರೆ ಕೃತಿಗಳ ಅವಲೋಕನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಹಿತ್ಯ ನಮ್ಮ ಜೀವನದ ಪರಿವರ್ತನೆಗೆ ಮಾರ್ಗದರ್ಶನ ನೀಡುತ್ತದೆ. ಕೃತಿಯ ತತ್ವಗಳನ್ನು ಕೇಳಿ ಮರೆಯುವುದಕ್ಕಿಂತ ಅವುಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಡಾ.ಫ.ಗು.ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್‌ನ ತಾಲೂಕಾ ಘಟಕದ ಅಧ್ಯಕ್ಷ ಡಾ.ವಿ.ಎ.ಬೆನಕನಾಳ ಮಾತನಾಡಿ, ಅಧ್ಯಯನ, ಬರಹಗಳು ನನ್ನ ವಿಶ್ರಾಂತ ಬದುಕಿನ ಚೈತನ್ಯಶೀಲತೆಗೆ ಕಾರಣವಾಗಿವೆ. ಟ್ರಸ್ಟ್ ವತಿಯಿಂದ ನಾವು ವಿಭಿನ್ನವಾದ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಗುಳೇದಗುಡ್ಡದ ಸಾಂಸ್ಕೃತಿಕ ಲೋಕಕ್ಕೆ ಹೊಸ ಕಳೆಯನ್ನು ತರಬೇಕೆನ್ನುವ ಉದ್ದೇಶ ಹೊಂದಿದ್ದೇವೆ ಎಂದು ಹೇಳಿದರು. ನೋವುಂಡು ನಲಿದವರು ಕೃ ಅವಲೋಕನ ಮಾಡಿದ ಪ್ರಾಧ್ಯಾಪಕ ಡಾ.ರಮೇಶ ಯಾನಮಶೆಟ್ಟಿ ಅವರು, ರಂಗಪ್ಪ ಶೇಬಿನಕಟ್ಟಿಯವರು ಆದರ್ಶಮಯವಾದ ಪರಿಶ್ರಮದ ಜೀವನವನ್ನು ಸಾಗಿಸಿ ಸಂಘಟನೆ, ಸಮಾಜಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಂಡವರು. ಈ ಗ್ರಂಥ ಗುಳೇದಗುಡ್ಡದ ಸಾಂಸ್ಕೃತಿಕ ಚರಿತ್ರೆ ಒಳಗೊಂಡ ಮಹತ್ವಪೂರ್ಣ ಕೃತಿಯಾಗಿದೆ ಎಂದು ವಿಶ್ಲೇಷಿಸಿದರು. ರಂಗಪ್ಪ ಶೇಬಿನಕಟ್ಟಿ, ಅಧ್ಯಕ್ಷತೆ ವಹಿಸಿದ್ದ ಡಾ.ರಾಜಶೇಖರ ಬಸುಪಟ್ಟದ ಮಾತನಾಡಿದರು. ಪ್ರೊ.ಸಿದ್ದಲಿಂಗಪ್ಪ ಬರಗುಂಡಿ, ಸುರೇಶ ಪರ್ವತೀಕರ, ವಿನೋದ ಅಂಬೇಕರ, ರಾಜಶೇಖರ ಪಾಗಿ, ಮುರುಗೇಶ ಶೇಖಾ, ಶಾಂತಾ ಕರಡಿಗುಡ್ಡ, ಶಂಕರ ರೂಡಗಿ, ಪುತ್ರಪ್ಪ ಬೀಳಗಿ ಸಂಗಮೇಶ ಚಿಕ್ಕಾಡಿ, ಬಸವರಾಜ ಚವಡಿ, ಮಹಾದೇವ ಜಗತಾಪ, ಶೈಲಶ್ರೀ ಬೆನಕನಾಳ ಭಾಗವಹಿಸಿದ್ದರು.



ಆರೋಗ್ಯ, ಸ್ವಾಸ್ಥ್ಯ ಕೇಂದ್ರ ಕಾಮಗಾರಿಗೆ ಭೂಮಿಪೂಜೆ

ಸಾವಳಗಿ/ಅಥಣಿ: ರಸ್ತೆ, ಒಳಚರಂಡಿ, ಸಮುದಾಯ ಭವನ, ಆರೋಗ್ಯ, ನೀರಾವರಿ, ಶಿಕ್ಷಣ ಮತ್ತು ವಿದ್ಯುತ್ತ ಸೇರಿದಂತೆ ಹಲವು ಕಾಮಗಾರಿ ಕೈಗೊಂಡು ಅಥಣಿ ಕ್ಷೇತ್ರದ ಅಭಿವೃದ್ಧಿಗೆ ನಾನು ಬದ್ಧನಾಗಿದ್ದೇನೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಸಮೀಪದ ಅಥಣಿ ತಾಲೂಕಿನ ಹಾಲಳ್ಳಿ ಗ್ರಾಮದಲ್ಲಿ 65 ಲಕ್ಷ ರೂ. ಮೊತ್ತದಲ್ಲಿ ನೂತನವಾಗಿ ನಿರ್ಮಿಸ ಲಾಗುವ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರದ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ಸಲ್ಲಿಸಿ ಮಾತನಾಡಿ, ಅಥಣಿ ಕ್ಷೇತ್ರ ಕ್ಕೆ ಸರ್ಕಾರದಿಂದ 2500 ಕೋಟಿ ರೂ ಗಿಂತಲೂ ಹೆಚ್ಚಿನ ನೀರಾವರಿ, ಶಾಲಾ ಕೊಠಡಿ, ಸಮುದಾಯ ಭವನ, ರಸ್ತೆ, ವಿದ್ಯುತ್ ಘಟಕಗಳು, ಕುಡಿಯುವ ನೀರು, ಶಾಲಾ, ಕಾಲೇಜಗಳ ಕಟ್ಟಡ ಸೇರಿದಂತೆ ಹಲವು ಕಾಮಗಾರಿ ಕೈಗೊಂಡು ರೈತರ, ಕೂಲಿ ಕಾರ್ಮಿಕರ ಏಳಿಗಾಗಿ ಶ್ರಮಿಸುತ್ತಿದೆ ಎಂದರು.



ಪಿಕೆಪಿಎಸ್ ಅಧ್ಯಕ್ಷ ಕಳಸಪ್ಪ ಹೊನ ಗೌಡ ಮಾತನಾಡಿದರು. ನೌಕರರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ, ಸಮುದಾ ಯ ಆರೋಗ್ಯ ಅಧಿಕಾರಿ ಖಂಡುಬಾ ಶಿಂಧೆ, ಮುಖಂಡರಾದ ರಾವಸಾಬ ಹೊನಗೌಡ, ಗುಳಪ್ಪ ಗೌಡಪ್ಪನವರ, ಶಂಕರ ಕೆಂಚಗೊಂಡ, ಸದಾಶಿವ ಹೊನಗೌಡ, ಶಿವಾನಂದ ಪಾಟೀಲ, ಸಾನಿಂಗಗೌಡ ಹೊನಗೌಡ,ನೌಕರರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ, ಸಮುಧಾಯ ಆರೋಗ್ಯ ಅಧಿಕಾರಿ ಖಂಡುಬಾ ಶಿಂಧೆ, ಮುಖಂಡರಾದ ರಾವಸಾಬ ಹೊನಗೌಡ, ಗುಳಪ್ಪ ಗೌಡಪ್ಪನವರ, ಶಂಕರ ಕೆಂಚಗೊಂಡ, ಸದಾಶಿವ ಹೊನಗೌಡ, ಶಿವಾನಂದ ಪಾಟೀಲ, ಸಾನಿಂಗಗೌಡ ಹೊನಗೌಡ, ಶಿವ ಲಿಂಗ ಹೋನಗೌಡ, ಧರೆಪ್ಪ ಬ್ಯಾಡರಟ್ಟಿ, ಸಿದರಾಯ ಜಮಖಂಡಿ, ಬಸವರಾಜ ಕೆಂಚಗೊಂಡ,ಅನಿಲಶಿಂದೆ,ರಾವಸಾಬ ಹೊನಗೌಡ, ಗುಳಪ್ಪ ಗೌಡಪ್ಪನವರ, ಸುರೇಶ ಗುಳಪ್ಪನವರ, ಗುತ್ತಿಗೆದಾರ ಅನಿಲ ಶಿಂದೆ, ಸಂತೋಷ ಗಾಲಿ, ವಿನೋದ ಪಾಟೀಲ, ವಿಜಯಶ್ರೀ ದುಮಕನಾಳ, ಗೀತಾ ಹಟ್ಟಿ ಹಾಗೂ ಆಶಾ ಕಾರ್ಯಕರ್ತೆಯರು ಇದ್ದರು.

ರೋಟರಿ ಸಂಸ್ಥೆ ಕಾರ್ಯ ಶ್ಲಾಘನೀಯ

ಜಮಖಂಡಿ: ರೋಟರಿ ಭವನ ನಿರ್ಮಿಸಲು ಪ್ರಮುಖ ಸ್ಥಳದಲ್ಲಿ 20 ಗುಂಟೆ ಜಾಗವನ್ನು ದಾನಿಯೊಬ್ಬರಿಂದ ದೇಣಿಗೆ ಪಡೆದು ಸುಂದರವಾದ ಕಟ್ಟಡ ನಿರ್ಮಿಸಿರುವ ಜಮಖಂಡಿ ರೋಟರಿ ಸಂಸ್ಥೆ ಸಾಮಾಜಿಕ ಸೇವಾ ವಲಯದಲ್ಲಿ ಬೆರಗು ಮೂಡಿಸಿದೆ ಎಂದು ರೋಟರಿ ಜಿಲ್ಲಾ ಗವರ್ನರ್ ಪ್ರತಿನಿಧಿ ಕಿರಣ ಟಂಕಸಾಲಿ ಹೇಳಿದರು. ವಿಜಯಪುರ ರಸ್ತೆ ಪಕ್ಕದ ರೋಟರಿ ಭವನದಲ್ಲಿ ಜಮಖಂಡಿ ರೋಟರಿ ಸಂಸ್ಥೆ ಆಯೋಜಿಸಿದ್ದ 66ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ರೋಟರಿ ಭವನದ ಆವರಣದಲ್ಲಿ ದಾನಿಗಳ ಸಹಾಯದಿಂದಲೇ ಕೇವಲ 8 ತಿಂಗಳ ದಾಖಲೆ ಅವಧಿಯಲ್ಲಿ ಅಡುಗೆ ಕೋಣೆ ನಿರ್ಮಿಸಿ ಮತ್ತೊಂದು ಬೆರಗು ಮೂಡಿಸಿದೆ. ಎಲ್ಲ ತರಹದ ಉದ್ಯೋಗಸ್ಥರು ಜಮಖಂಡಿ ರೋಟರಿ ಸಂಸ್ಥೆಯ ಭಾಗವಾಗಿರುವುದು ಸಂಸ್ಥೆಗೆ ಶಕ್ತಿ ತುಂಬಿದೆ ಎಂದರು.ರೋಟರಿ ಸಹಾಯಕ ಗವರ್ನರ್ ನಾರಾಯಣ ಹೆರಕಲ್, ರೋಟರಿ ಸೇವಾಸಂಸ್ಥೆಯ ಅಧ್ಯಕ್ಷ ಬಸವರಾಜ ಬಳಗಾರ ಮಾತನಾಡಿದರು. ಬಸವರಾಜ ಆಲಗೂರ, ರಾಜು ವಾರದ, ಗೋಪಾಲಕೃಷ್ಣ ಪ್ರಭು, ಸಿದ್ದನಗೌಡ ಪಾಟೀಲ, ಸಂಸ್ಥೆಯ ಅಧ್ಯಕ್ಷ ರಾಜಶೇಖರ ಕೋವಳ್ಳಿ, ಮಹಾದೇವ ಕಂಕಾಳೆ ಫೋರ್ ವೇ ಟೆಸ್ಟ್, ಡಾ.ಮಾಳೇಶ ಪೂಜಾರಿ, ಎಸ್.ವೈ.ಬಿರಾದಾರ, ಪಿ.ಡಿ.ಗೌಡರ, ಕಾರ್ಯದರ್ಶಿ ಎಂ.ಎಚ್.ಕಡ್ಲಿಮಟ್ಟಿ ಇದ್ದರು.



ಕಾರ್ಖಾನೆಯಿಂದ ವಿಷಕಾರಿ ಧೂಳು: ಧರಣಿ

ಮುಧೋಳ: ತಾಲೂಕಿನ ಮುದ್ದಾಪುರದಲ್ಲಿರುವ ಜೆಕೆ ಸಿಮೆಂಟ್ ಕಾರ್ಖಾನೆಯ ಪರಿಸರ ಮಾಲಿನ್ಯ ಖಂಡಿಸಿ, ಉತ್ತರ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಮಿತಿಯು ಕಾರ್ಖಾನೆಯ ಎದುರು ಸೋಮವಾರದಿಂದ ಉತ್ತರ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಅಧ್ಯಕ್ಷ ಶಂಕರಗೌಡ ಹಿರೇಗೌಡ ಅವರ ನೇತೃತ್ವದಲ್ಲಿ

ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಆರಂಭಿಸಿದೆ.

ಈ ವೇಳೆ ಮಾತನಾಡಿದ ಬೆಳಗಾವಿ ಜಿಲ್ಲಾಧ್ಯಕ್ಷ ಪರಶುರಾಮ ಚಿನಗುಂಡಿ, ಕಾರ್ಖಾನೆಯ ಗಣಿವಲಯದಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಬ್ಲಾಸ್ಟಿಂಗ್‌ನಿಂದಾಗಿ ಸುತ್ತಮುತ್ತಲಿನ ಗ್ರಾಮಸ್ಥರು ನೆಮ್ಮದಿ ಕಳೆದುಕೊಂಡಿದ್ದಾರೆ. ಸ್ಫೋಟದ ಕಂಪನಕ್ಕೆ ಮನೆಗಳ ಗೋಡೆಗಳಲ್ಲಿ ದೊಡ್ಡ ದೊಡ್ಡ ಬಿರುಕುಗಳು ಕಾಣಿಸಿಕೊಂಡಿದ್ದು, ಮನೆಗಳು ಯಾವಾಗ ಕುಸಿದು ಬೀಳುತ್ತವೆಯೋ ಎಂಬ ಭೀತಿಯಲ್ಲಿ ಜನರು ಬದುಕುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಹೋರಾಟಗಾರ ಸುರೇಶ ಕಿವಡಿ ಮಾತನಾಡಿ, ಕಾರ್ಖಾನೆಯಿಂದ ಹೊರಬರುವ ವಿಷಕಾರಿ ಧೂಳು ರೈತರ ಹೊಲಗಳಿಗೆ ಆವರಿಸು ತ್ತಿದ್ದು, ಎಕರೆಗಟ್ಟಲೆ ಬೆಳೆಗಳು ನಾಶವಾ ಗುತ್ತಿವೆ. ಮಾಲಿನ್ಯ ನಿಯಂತ್ರಣ ಮಂಡಳಿ ಯ ನಿಯಮಗಳನ್ನು ಗಾಳಿಗೆ ತೂರಿ ಕಾರ್ಖಾನೆ ಆಡಳಿತ ಮಂಡಳಿ ವಿಸ್ತರಣಾ ಯೋಜನೆಗೆ ಮುಂದಾಗಿರುವುದು ರೈತರ ಕೆಂಗಣ್ಣಿಗೆ ಗುರಿಯಾಗಿದೆ ಎಂದರು.

ರೈತ ಹೋರಾಟಗಾರ ಹನುಮಂತ ಕಿವಡಿ ಮಾತನಾಡಿ,



ಕಾರ್ಖಾನೆ ಹತ್ತಿರದ ರೈತರ ಹೊಲದಲ್ಲಿ ಬ್ಲಾಸ್ಟಿಂಗ್ ನಿಂದಾಗಿ 10 ಅಡಿ ಅಗಲ ಹಾಗೂ 20 ಅಡಿ ಆಳದ ಭೂಕುಸಿತ ಸಂಭವಿಸಿದೆ. ತೊಂದರೆಗೊಳಗಾದ ಗ್ರಾಮಸ್ಥರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ವಿಷಯ ತಿಳಿಯುತ್ತಿದ್ದಂತೆ ಕಂದಾಯ, ಕೃಷಿ, ಪರಿಸರ, ಸಾರಿಗೆ, ಗಣಿ ಮತ್ತು ನಿರ್ಮೂಲನೆ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮುಖಂಡರಾದ ಡಾ.ಬಸವಾನಂದ ಶ್ರೀಗಳು, ಸುರೇಶ ಕಿವಡಿ, ಹನುಮಂತ ಕಿವಡಿ, ರಂಗಪ್ಪ ಪುಲಸಿಗೇರಿ, ಶೈಲೂ ಪಂಪಿಹೊಳಿ, ತಹಶೀಲ್ದಾರ್ ಡಾ.ಚಿಕ್ಕಪ್ಪ ನಾಯಕ, ಶಿವಕುಮಾರ, ಮಂಜುಳಾ, ಲೋಕೇಶ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಹೆಮ್ಮೆಯ ಕನ್ನಡಿಗ ಪ್ರಶಸ್ತಿಗೆ ಪ್ರೊ.ಕೊಳಮಲಿ ಆಯ್ಕೆ



ವಿಜಯಪುರ: ಜಿಲ್ಲೆಯ ಸಾಹಿತಿ, ಕವಿ ಪ್ರೊ.ಎ.ಎಚ್. ಕೊಳಮಲಿ ಅವರು ಹೆಮ್ಮೆಯ ಕನ್ನಡಿಗ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಇಲ್ಲಿನ ಚೇತನಾ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯ, ಪ್ರೊ.ಎ.ಎಚ್.ಕೊಳಮಲಿ ಅವರನ್ನು ಬೆಂಗಳೂರಿನ ಚಿತ್ರಸಂತೆ ಫೌಂಡೇಶನ ಕರ್ನಾಟಕ ಅಚೀವರ್ಸ್ ಹೆಮ್ಮೆಯ ಕನ್ನಡಿಗ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಜೂ.18ರಂದು ಬೆಂಗಳೂರಿನ ಸದಾಶಿವ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಿನಿಮಾ ನಟರು, ಖ್ಯಾತ ಸಾಹಿತಿಗಳ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು. ಕೊಳಮಲಿಯವರ ಸಾಹಿತ್ಯ ಕ್ಷೇತ್ರದ ಸಾಧನೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಚಿತ್ರಸಂತೆ ಫೌಂಡೇಶನದ ಮುಖ್ಯಸ್ಥ ಗಿರೀಶ ಗೌಡರ ತಿಳಿಸಿದ್ದಾರೆ.

ನಿಂಬೆ ನಾಡಿಗೆ ಸಚಿವ ಸ್ಥಾನ ನೀಡಲು ಆಗ್ರಹ



ಝಳಕಿ: ಬರದ ನಾಡು ಹಾಗೂ ನಿಂಬೆ ನಾಡಿಗೆ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲಗೆ ಸಚಿವ ಸಂಪುಟ ರಚನೆಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ತಾಪಂ ಮಾಜಿ ಸದಸ್ಯ ಅಣಪ್ಪ ತಳವಾರ ಆಗ್ರಹಿಸಿದರು. ಸ್ಥಳೀಯ ಪ್ರವಾಸ ಮಂದಿರ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಡಿ ಮತಕ್ಷೇತ್ರದಲ್ಲಿ ಸತತ ವಾಗಿ ಮೂರು ಬಾರಿ ಜಿಪಂ ಸದಸ್ಯರು ಹಾಗೂ ಮೂರು ಬಾರಿ ಶಾಸಕರಯಾಗಿ ಜನಪರ ಕಾರ್ಯನಿರ್ವಹಿಸಿ ಅಪಾರ ಅನುಭವ ಹೊಂದಿದ್ದಾರೆ. ಅತಿ ಹಿಂದುಳಿದ ಗಡಿ ಭಾಗವಾದ ಇಂಡಿ ತಾಲೂಕು ಮತ್ತಷ್ಟು ಅಭಿವೃದ್ಧಿ ಹೊಂದಬೇಕಾದರೆ ಯಶವಂತರಾಯಗೌಡ ಪಾಟೀಲ ಅವರು ಕಾಂಗ್ರೆಸ್ ಸರ್ಕಾರದ ಸಂಪುಟ ರಚನೆಯಲ್ಲಿ ಸಚಿವರಾಗಬೇಕು ಎಂದು ಆಗ್ರಹಿಸಿದರು.

ಭೋವಿ ಸಮುದಾಯಕ್ಕೆ ಪ್ರಾತಿನಿಧ್ಯ ಕಲ್ಪಿಸಲು ಆಗ್ರಹ



ಸಿಂದಗಿ: ಪ್ರಸ್ತುತ ಸಮುದಾಯದಿಂದ ಕನಕಗಿರಿ ಶಾಸಕ ಶಿವರಾಜ್ ತಂಗಡಗಿ, ಪುಲಕೇಶಿ ಕ್ಷೇತ್ರದ ಶಾಸಕ ಎ.ಸಿ.ಶ್ರೀನಿವಾಸ, ಪಾವಗಡದ ವೆಂಕಟೇಶ ಅವರು ಸಂಘಟನೆ ಹಾಗೂ ಸಾರ್ವಜನಿಕ ಜೀವನದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಇವರಲ್ಲಿ ಯಾರಿಗಾದರೂ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯದ ಸಂದೇಶ ಸಾರಬೇಕು ಎಂದು ಭೋವಿ ವಡ್ಡರ ಸಮಾಜದ ಅಧ್ಯಕ್ಷ ಪಂಡಿತ ಯಂಪೂರೆ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಹೊಸ ಸಚಿವ ಸಂಪುಟದಲ್ಲಿ ಸಾಮಾಜಿಕ ನ್ಯಾಯದ ತತ್ವದಡಿ ಭೋವಿ ಸಮುದಾಯಕ್ಕೆ ಅವಕಾಶ ದೊರೆಯಬೇಕು. ಜತೆಗೆ ಸಮುದಾಯಕ್ಕೆ ಪ್ರಾತಿನಿಧ್ಯ ಕಲ್ಪಿಸಬೇಕಾದರೆ ಕನಕಗಿರಿ ಶಾಸಕ ಶಿವರಾಜ್ ತಂಗಡಗಿ, ಪುಲಕೇಶಿ ಕ್ಷೇತ್ರದ ಶಾಸಕ ಎ.ಸಿ.ಶ್ರೀನಿವಾಸ್, ಪಾವಗಡದ ವೆಂಕಟೇಶ್ ಈ ಮೂವರಲ್ಲಿ ಯಾರಿಗಾದರು ಸಚಿವ ಸ್ಥಾನ ಕಲ್ಪಿಸಬೇಕು ಎಂದು ಭೋವಿ ಸಮಾಜದ ಮುಖಂಡರಾದ ಮುತ್ತಪ್ಪ ಪಾತ್ರೋಟ, ಸುನಂದಾ ಯಂಪೂರೆ, ಭೀಮಾಶಂಕರ ಯಂಪೂರೆ, ದಿಲೀಪ ಆಲಕುಂಟೆ, ಸಚೀನ ಮಂಜಾಳಕರ, ದಯಾನಂದ ಗೊಳಸಾರ ಒತ್ತಾಯಿಸಿದ್ದಾರೆ.

ಶಾಂತಿಯುತವಾಗಿ ಮೊಹರಂ ಆಚರಿಸಲು ಸೂಚನೆ

ಸಿಂದಗಿ: ತ್ಯಾಗ, ಬಲಿದಾನದ ಸಂಕೇತವಾಗಿ ಹಿಂದೂ, ಮುಸ್ಲಿಮರು ಸೇರಿ ಆಚರಿಸುವಂತಹ ಮೊಹರಂ ಹಬ್ಬವನ್ನು ತುಂಬಾ ಶ್ರದ್ಧಾ, ಭಕ್ತಿಯಿಂದ ಆಚರಿಸುತ್ತಾರೆ. ಪಾಲಕರು ತಮ್ಮ ಮಕ್ಕಳಿಗೆ ಬುದ್ಧಿ ಹೇಳಿ, ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಶಾಂತಿಯುತವಾಗಿ ಆಚರಿಸಬೇಕು ಎಂದು ಪಿಎಸ್ಐ ಶ್ರೀಕಾಂತ ಕಾಂಬಳೆ ಹೇಳಿದರು.

ನಗರದ ಪೊಲೀಸ್ ಠಾಣೆಯಲ್ಲಿ ಮೊಹರಂ ಹಬ್ಬದ ನಿಮಿತ್ತ ಹಮ್ಮಿಕೊಂಡ ಶಾಂತಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸಿಂದಗಿ ಠಾಣಾ ವ್ಯಾಪ್ತಿಯಲ್ಲಿ ಒಟ್ಟು 8 ದೇವರು ಕೂರಿಸುತ್ತಾರೆ. ದೇವರು ಕೂರಿಸುವಂತಹ ಪ್ರದೇಶದಲ್ಲಿ ಹಿರಿಯರು, ತಂಟೆ, ತಕಾರರುಗಳಿಗೆ ಅವಕಾಶ ನೀಡಬಾರದು. ಹಬ್ಬದ ಅಂಗವಾಗಿ ಮದ್ಯಪಾನದ ಅಂಗಡಿಗಳ ಮೇಲೆ ನಿಗಾ ಇಡಲಾಗುವುದು. ಹಬ್ಬದಲ್ಲಿ ಅಶಾಂತಿಗೆ ಅವಕಾಶವಿಲ್ಲ. ಸೌಹಾರ್ದದಿಂದ ಹಬ್ಬದ ಆಚರಣೆ ಮಾಡಬೇಕು ಎಂದ ಅವರು ಹಬ್ಬದ ನಡಾವಳಿಗಳನ್ನು ತಿಳಿಸಿದರು.

ಪಿಎಸ್ಐ ವಿರೂಪಾಕ್ಷ ಪಾಟೀಲ, ಮುಖಂಡ ಅಶೋಕ ಅಲ್ಲಾಪೂರ, ರಾಜಣ್ಣ ನಾರಾಯಣಕರ, ಮೈಬೂಬ ಸಿಂದಗಿಕರ, ಶಿವಾನಂದ ಆಲಮೇಲ, ರಜಾಕ ಮುಜಾವರ, ಶಬ್ಬೀರ ಪಟೇಲ, ಸಾಯಬಣ್ಣಾ ದೇವರಮನಿ ಇದ್ದರು.



ಮುದ್ದೇಬಿಹಾಳ: ತಾಲೂಕಿನ ಸುಕ್ಷೇತ್ರ ಕುಂಟೋಜಿ ಗ್ರಾಮದ ಬಸವೇಶ್ವರ ದೇವಸ್ಥಾನದ ದಾಸೋಹ ಭವನದ ಭೂಮಿಪೂಜಾ ಸಮಾರಂಭವನ್ನು ಊರಿನ ಗುರು ಹಿರಿಯರ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಸಿಗಲಿ

ದೇವರಹಿಪ್ಪರಗಿ: ಗುಣಾತ್ಮಕ ಶಿಕ್ಷಣ ನಮ್ಮ ಕೆಲಸವಾಗಬೇಕು. ಪ್ರತಿಯೊಂದು ಮಗು ಶಾಲೆಗೆ ದಾಖಲಾಗಬೇಕು. ದಾಖಲಾದ ಮಗು ಗುಣಾತ್ಮಕ ಶಿಕ್ಷಣ ಪಡೆಯಬೇಕು. ಈ ನಿಟ್ಟಿನಲ್ಲಿ ಸತತ ಪ್ರಯತ್ನ ಸಾಗಬೇಕೆಂದು ವಿಜಯಪುರ ನಗರ ವಲಯದ ಕ್ಷೇತ್ರಶಿಕ್ಷಣಾಧಿಕಾರಿ ರಾಘವೇಂದ್ರ ಹೊಸೂರ ಹೇಳಿದರು. ಮಂಗಳವಾರ ಇಲ್ಲಿನ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಣ ಇಲಾಖೆಯ ಮಿಂಚಿನ ಸಂಚಾರ ಜಿಲ್ಲಾ ತಂಡದ ಮುಖ್ಯಸ್ಥರಾಗಿ ಆಗಮಿಸಿ ಶಾಲಾ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೀಲಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಬೇಕು. ಉತ್ತಮ ಯೋಜನೆಗಳು ನಮ್ಮ ಶಾಲೆಗಳಲ್ಲಿ ಇದ್ದು, ಈ ವರ್ಷದಿಂದ ಇಂಗ್ಲೀಷ ಮಾಧ್ಯಮ ಪ್ರಾರಂಭವಾಗಿದ್ದು, ಸ್ಪರ್ಧಾತ್ಮಕ ಜಗತ್ತಿಗೆ ಅನುಕೂಲವಾಗಲಿದೆ. ದಿನನಿತ್ಯ ಮಕ್ಕಳು ಚಟುವಟಿಕೆಯುಕ್ತ ಕಲಿಕೆಯಲ್ಲಿ ತೊಡಗಿಸಿಕೊಳ್ಳ ಬೇಕು. ಶಿಕ್ಷಕರು ನಿರಂತರ ಕ್ರೀಯಾಶೀಲತೆಯಿಂದ ಉತ್ತಮ ಶಿಕ್ಷಣ ಕಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದರು. ಶಾಲಾ ದಾಖಲಾತಿಗಳು, ಶಿಕ್ಷಕರು ಸಿದ್ದಪಡಿಸಿದ ದಾಖಲೆ ಪರಿಶೀಲಿಸಿ ಮಾರ್ಗದರ್ಶನ ಮಾಡಿದರು. ಮಿಂಚಿನ ಸಂಚಾರ ಜಿಲ್ಲಾ ತಂಡದಲ್ಲಿ ಶಿಕ್ಷಣ ಸಂಯೋಜಕ ಪ್ರಕಾಶ ನಾಲತವಾಡ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎಂ.ಎಂ.ಗುರಾಡಿ, ಸಮೂಹ ಸಂಪನ್ಮೂಲ ವ್ಯಕ್ತಿ ವಿಜಯಲಕ್ಷ್ಮೀ ನವಲಿ, ಮುಖ್ಯಗುರು ಪಿ.ಸಿ.ತಳಕೇರಿ, ಪ್ರಕಾಶ ಪೂಜಾರಿ, ಸೇರಿದಂತೆ ಶಿಕ್ಷಕರು ಇದ್ದರು.



ದೇವರಹಿಪ್ಪರಗಿ: ಮಂಗಳವಾರ ಇಲ್ಲಿನ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಣ ಇಲಾಖೆಯ ಮಿಂಚಿನ ಸಂಚಾರ ಜಿಲ್ಲಾ ತಂಡದ ಮುಖ್ಯಸ್ಥರಾಗಿ ವಿಜಯಪುರ ನಗರ ವಲಯದ ಕ್ಷೇತ್ರಶಿಕ್ಷಣಾಧಿಕಾರಿ ರಾಘವೇಂದ್ರ ಹೊಸೂರ ಆಗಮಿಸಿ ಶಾಲಾ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೀಲಿಸಿದರು.

ಬಾರದ ಕಸ ವಿಲೇವಾರಿ ವಾಹನ | ಸಾಂಕ್ರಾಮಿಕ ರೋಗದ ಭೀತಿ

ಕಸದ ಗುಂಡಿಯಂತಾದ ರಸ್ತೆಗಳು

ಪರಶುರಾಮ ಶಿವಶರಣ

ವಿಜಯಪುರ: ಗಾಡಿವಾಲಾ ಆಯಾದೇಕೋ ಕಚರಾ ನಿಕಾಲ್... ಎಂದು ಅಬ್ಬರದ ಧ್ವನಿ ವರ್ಧಕದೊಂದಿಗೆ ನಗರದ ಮನೆ ಮನೆಗಳಿಗೆ ಸಂಚರಿಸಿ, ಕಸ ವಿಲೇವಾರಿ ಮಾಡುತ್ತಿದ್ದ ಕಸದ ವಾಹನ ಕೆಲ ದಿನಗಳಿಂದ ಸ್ತಬ್ಧಗೊಂಡಿದ್ದು, ನಗರದ ಹಲವು ರಸ್ತೆಗಳೇ ಕಸದ ತಿಪ್ಪೆಗುಂಡಿಯಾಗಿ ಮಾರ್ಪಟ್ಟಿವೆ.

ಸದ್ಯ ಹೇಳಿ ಕೇಳಿ ಮಳೆಗಾಲ, ನಗರದ ಬಡಾವಣೆಗಳ ಹಲವು ರಸ್ತೆಗಳಲ್ಲಿ ಕಸ, ಗಲೀಜುಗಳು ಬಿದ್ದು ಗಬ್ಬು ನಾರುತ್ತಿದ್ದು, ಡೆಂಗ್ಯೂ, ಮಲೇರಿಯಾ ಸೇರಿದಂತೆ ಸಾಂಕ್ರಾಮಿಕ ರೋಗಗಳು ಉಲ್ಬಣಗೊಳ್ಳುವ ಭೀತಿಯಿಂದ ಸಾರ್ವಜನಿಕರು ತಲ್ಲಣಗೊಳ್ಳುವಂತಾಗಿದೆ. ಇಲ್ಲಿನ ಉಪ್ಪಲಿ ಬುರ್ಜ್ ರಸ್ತೆ, ವಜ್ರ ಹನುಮಾನ ನಗರ ಬಳಿಯ ರಸ್ತೆ, ಸ್ಟೇಶನ್ ಬ್ಯಾಕ್ ರೋಡ್ ಶಿಕಾರಖಾನೆ ಬಳಿಯ ರಸ್ತೆ ಸೇರಿದಂತೆ ನಗರದ ಹಲವೆಡೆ ಕಸದ ರಾಶಿಗಳು ಕಣ್ಣಿಗೆ ಕಾಣುವಂತಾಗಿದೆ.

ಕಸ ವಿಲೇವಾರಿ ಹಾಗೂ ಕಸ ಸಂಗ್ರಹಣೆಗೆ ಪೌರ ಕಾರ್ಮಿಕರು ಬರುತ್ತಿಲ್ಲ, ಪಾಲಿಕೆ ಅಧಿಕಾರಿಗಳಿಗೆ ಈ ಬಗ್ಗೆ ಕೇಳಿದರೆ, ಅವರು ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಸಮಸ್ಯೆಗಳ ಸರಮಾಲೆಯನ್ನು ತಿಳಿಸುತ್ತಾರೆ. ಸಾರ್ವಜನಿಕರು ಹಸಿ ಕಸ, ಒಣ ಕಸ ಹಾಗೂ ಇತರೆ ತ್ಯಾಜ್ಯಗಳನ್ನು ವಿಂಗಡಿಸದೆ, ನೇರವಾಗಿ ಹತ್ತಿರದ ರಸ್ತೆ, ಚರಂಡಿಗಳಲ್ಲಿ ಎಸೆಯುತ್ತಿದ್ದಾರೆ. ಈ ಕಸವನ್ನು ದನ- ಕರ, ನಾಯಿ, ಹಂದಿಗಳು ಮತ್ತಷ್ಟು ಚೆಲ್ಲಾಪಿಲ್ಲಿ ಮಾಡಿ,



> ಈ ಸಮಸ್ಯೆಗೆ ಗುತ್ತಿಗೆದಾರ, ಪಾಲಿಕೆ ಅಧಿಕಾರಿ, ಚುನಾಯಿತ ಜನಪ್ರತಿನಿಧಿಗಳು ಕಾರಣರಾಗಿದ್ದಾರೆ. ಇವರೆಲ್ಲ ಹಲವು ವರ್ಷಗಳಿಂದ ಪೌರಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದಾರೆ. ಅವರಿಗೆ ಸಿಗಬೇಕಾದ ಸೌಲಭ್ಯ ನುಂಗಿ ಹಾಕುತ್ತಿದ್ದಾರೆ. ಇದರಲ್ಲಿ ಭ್ರಷ್ಟಾಚಾರದ ದಟ್ಟ ಹೊಗೆ ಹರಡಿದೆ. ಜನಪ್ರತಿನಿಧಿಗಳು ಇತ್ತ ಗಮನಹರಿಸಿ, ಸಮಸ್ಯೆ ನಿವಾರಿಸಬೇಕು.
> ■ ಲಕ್ಷ್ಮಣ ಹಂದ್ರಾಳ, ಮುಖಂಡ

ಗಬ್ಬು ನಾರುವಂತೆ ಮಾಡುತ್ತಿದ್ದು, ಇದರಿಂದ ಪರಿಸರ ಮಾಲಿನ್ಯ ಮಿತಿಮೀರಿದೆ. ಸಾಂಕ್ರಾಮಿಕ ರೋಗ- ರುಜಿನ ಹರಡುವ ಕ್ರಿಮಿ, ಕೀಟಗಳಾದ ನೊಣ, ಸೊಳ್ಳೆ, ನೊರಜು, ಜಿರಲೆ, ಇಲ್ಲಿ, ಹೆಗ್ಗಣ, ಹಾವು, ಚೇಳು ಹೀಗೆ ಹಲವು ಅಪಾಯಕಾರಿ ಜೀವಿಗಳು ಉತ್ಪತ್ತಿಯಾಗಿ, ಸಾರ್ವಜನಿಕರ ಬದುಕಿಗೆ ಕಂಟಕವಾಗಿವೆ. ಮಹಾನಗರ ಪಾಲಿಕೆಯ ಅಧಿಕಾರಿ, ಸಿಬ್ಬಂದಿ ಹಾಗೂ ಮೇಯರ್, ಉಪ ಮೇಯರ್ ಹಾಗೂ ಸದಸ್ಯರು ಕಣ್ಣು ಮುಚ್ಚಿ ಕುಳಿತಿದ್ದಾರೆಯೇ ? ಎಂದು ಜನರು ಪ್ರಶ್ನಿಸುತ್ತಿದ್ದಾರೆ.

> ಕಸ ಸಂಗ್ರಹಿಸುವ ಗುತ್ತಿಗೆದಾರ ಪೌರ ಕಾರ್ಮಿಕರಿಗೆ ಸರಿಯಾಗಿ ವೇತನ ನೀಡದಿರುವ ಆರೋಪದ ಹಿನ್ನೆಲೆ ಆತನನ್ನು ಬ್ಲ್ಯಾಕ್ ಲಿಸ್ಟ್‌ಗೆ ಹಾಕಲಾಗಿದ್ದು, ಆತ ಹೈಕೋರ್ಟ್‌ನಲ್ಲಿ ಸ್ಟೇ ತಂದಿದ್ದರಿಂದ, ತಾಂತ್ರಿಕ ಸಮಸ್ಯೆಯಾಗಿದೆ. ಆದರೂ ಕಸ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
> ■ ವಿಜಯಕುಮಾರ ಮೆಕಳಕಿ ಆಯುಕ್ತ, ಮಹಾನಗರ ಪಾಲಿಕೆ

ದಿಗಂತ ವಿಶೇಷ

ನಗರದ ರಸ್ತೆಗಳಲ್ಲಿ ಕಸ ಬೀಳುತ್ತಿರುವುದಕ್ಕೆ ಕಸ ಸಂಗ್ರಹಿಸುವ ಗುತ್ತಿಗೆದಾರ, ಪೌರ ಕಾರ್ಮಿಕರು ಹಾಗೂ ಪಾಲಿಕೆ ಅಧಿಕಾರಿಗಳ ನಡುವೆ ಶೀತಲ ಸಮರವೇ ಕಾರಣವಾಗಿದೆ. ಇದರಲ್ಲಿ ಭ್ರಷ್ಟಾಚಾರದ ಕೊಳಕು ವಾಸನೆ ಹರಡುತ್ತಿದೆ. ಸಮಸ್ಯೆ ನೂರೆಂಟು ದಿಕ್ಕುಗಳಲ್ಲಿ ಹರಿದು ಅದು ಮತ್ತಷ್ಟು ಜಟಿಲವಾಗಿದೆ. ಈ ಸಮಸ್ಯೆಗಳ ನಡುವೆ ಸಾರ್ವಜನಿಕರ ಅಳಲನ್ನು ಕೇಳುವವರು ಯಾರು?, ಈಗ ಮಳೆಗಾಲ ಆರಂಭವಾಗಿದೆ. ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವ ಲಕ್ಷಣಗಳು ಕಾಣುತ್ತಿವೆ. ಮಳೆಗಾಲ ಆರಂಭವಾದರೆ ಮಹಾನಗರ ವಿಜಯಪುರ ಕಸದ ಪುರವಾಗಿ ಬದಲಾಗಲಿದೆ. ಕೂಡಲೇ ಸಂಬಂಧಪಟ್ಟವರು ಎಚ್ಚೆತ್ತುಕೊಂಡು ಸಮಸ್ಯೆಗೆ ತಿಲಾಂಜಲಿ ನೀಡಬೇಕು. ಇಲ್ಲದಿದ್ದರೆ ಪರಿಸರ ವಾದಿಗಳು, ಪೌರಕಾರ್ಮಿಕ ಸಂಘಟನೆಯ ಮುಖಂಡರು ಹೋರಾಟ ಮಾಡುವುದಾಗಿ ಎಚ್ಚರಿಸಿದ್ದಾರೆ.

ರಾಜ್ಯ ಉಗ್ರಾಣಕ್ಕಿಲ್ಲ ಸ್ವಚ್ಛತೆ, ಸುರಕ್ಷತಾ ಗೋಡೆ

ರವೀಂದ್ರ, ನಂದಪ್ಪನವರ

ಮುದ್ದೇಬಿಹಾಳ: ತಾಲೂಕು ಕೇಂದ್ರದ ಪಕ್ಕದಲ್ಲಿರುವ ಬಿದರಕುಂದಿ ಗ್ರಾಮದ 5 ಸಾವಿರ ಮೆಟ್ರಿಕ್ ಟನ್ ಸಂಗ್ರಹ ಸಾಮರ್ಥ್ಯದ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಆಹಾರ ಸಂಗ್ರಹಗಾರದ ಸುತ್ತಮುತ್ತ ಸುರಕ್ಷತಾ ಗೋಡೆ ಇಲ್ಲದೆ ಇರುವುದರಿಂದ ಸಾರ್ವಜನಿಕರು ಕಟ್ಟಿಗೆ ಸಂಗ್ರಹಿಸುವ, ಹಂದಿ, ಜಾನುವಾರುಗಳು ವಾಸಿಸುವ ಸ್ಥಳವಾಗಿ ಮಾರ್ಪಟ್ಟಿದೆ. ಇದರಿಂದ ಆಹಾರ ಸುರಕ್ಷತೆಯ ಬಗ್ಗೆ ಹಲವು ಪ್ರಶ್ನೆಗಳು ಹುಟ್ಟಿಕೊಂಡಿವೆ.

ರಾಜ್ಯ ಸರ್ಕಾರ ಕೃಷಿ ಉತ್ಪನ್ನ ಮಾರುಕಟ್ಟೆ ಮೂಲಕ ಮತ್ತು ಬೆಂಬಲ ಬೆಲೆ ನೀತಿ ಅನ್ವಯ ರೈತರಿಂದ ಅಗತ್ಯ ಆಹಾರ ಪದಾರ್ಥಗಳನ್ನು ಖರೀದಿ ಮಾಡುತ್ತದೆ. ಆದರೆ, ದೊಡ್ಡದಾದ ಒಂದು ಗೌಡೌನ್ ಬಿಟ್ಟರೆ ಹೊರಗಡೆ ಸುರಕ್ಷತಾ ಗೋಡೆ ಇಲ್ಲಿ ನಿರ್ಮಾಣವಾಗಿಲ್ಲ. ಚರಂಡಿಯ ಕೊಳಚೆ ನೀರು ಈ ಪ್ರದೇಶದಲ್ಲಿ ಹರಿಯುವುದು ಅಲ್ಲದೆ ಜನ ಜಾನುವಾರುಗಳು ಮುಕ್ತವಾಗಿ ಇಲ್ಲಿ ತಿರುಗಾಡುವ ಸನ್ನಿವೇಶ ನಿರ್ಮಾಣವಾಗಿದೆ. ಸುತ್ತಮುತ್ತಲು ಯಾವುದೇ ಸುರಕ್ಷತೆ ಇಲ್ಲ.

ಆಹಾರ ಸಂಗ್ರಹ ಮತ್ತು ಪೂರೈಕೆ ಬಹಳ ಸೂಕ್ಷ್ಮವಾದ ವಿಷಯವಾಗಿದ್ದು, ಸ್ಥಳದಲ್ಲಿ ಸುತ್ತಮುತ್ತಲಿರುವ ಗ್ರಾಮಸ್ಥರು ದಿನನಿತ್ಯ ಬಳಸುವ ಸೌದೆ ಇಲ್ಲಿ ತಂದು ಸಂಗ್ರಹಿಸಿ ಇಡುತ್ತಾರೆ. ಇದರಿಂದ ಹುಳ-ಹುಪ್ಪಡಿ, ಕೀಟಗಳು ಸಂಗ್ರಹವಾದ ದವಸ ಧಾನ್ಯಗಳನ್ನು ತಿನ್ನುವ ಪರಿಸ್ಥಿತಿ ಇಲ್ಲಿ ಇದೆ. ಹಲವು ಬಾರಿ ಸಂಗ್ರಹಿಸಿದ ದವಸ ಧಾನ್ಯಗಳಲ್ಲಿ ಹುಳುವಿನ ಕಾಟ ಹೆಚ್ಚಾಗಿದ್ದು ಇದೇ ಆಹಾರವನ್ನು ಸರ್ಕಾರ ಪಡಿತರದ ಮೂಲಕ ಸರ್ಕಾರ ವಿತರಣೆ ಮಾಡುತ್ತದೆ. ವ್ಯಾಪಾರಸ್ಥರು ಸಂಗ್ರಹಿಸಿದ್ದ ಧವಸಧಾನ್ಯ ಸಹ ಬೇಗನೆ ಕೆಟ್ಟು ಹೋಗುತ್ತವೆ. ಅಧಿಕಾರಿಗಳು ಸ್ಪಂದಿಸುವುದಿಲ್ಲ ಎಂಬ ದೂರು ಇದೆ.



> ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಸ್ಥಳದಲ್ಲಿ ಸುರಕ್ಷತೆ ಕೊರತೆ ಇದೆ. ಸುತ್ತಮುತ್ತಲು ಸಾರ್ವಜನಿಕ ಬಳಕೆ ಸ್ಥಳ ಇರುವುದರಿಂದ ಹುಳ ಹುಪ್ಪಡಿಗಳ ಕಾಟ ಇದೆ. ವ್ಯಾಪಾರಸ್ಥರು ನಷ್ಟ ಅನುಭವಿಸಬೇಕಾಗಿದೆ. ಸುರಕ್ಷತೆಗಾಗಿ ಗೋಡೆ ನಿರ್ಮಿಸುವ ಅವಶ್ಯಕತೆ ಇದೆ.
> ■ ಬಿ.ಎಸ್.ಮೇಟಿ, ಎಪಿಎಂಸಿ ವ್ಯಾಪಾರಸ್ಥರು

> ಸುತ್ತು ಗೋಡೆ ನಿರ್ಮಿಸಲು ನ್ಯಾಯಾಲಯದಲ್ಲಿ ತಕರಾರು ಇದೆ. ಈ ಕುರಿತು ಸ್ಥಳ ಅಳತೆ ಮಾಡಲು ತಹಶೀಲ್ದಾರ್ ಕಚೇರಿಗೆ ಮನವಿ ಕೊಡಲಾಗಿದೆ. ಅಳತೆ ಮಾಡಿದ ತಕ್ಷಣ ಗೋಡೆ ನಿರ್ಮಾಣ ಪ್ರಾರಂಭವಾಗುತ್ತದೆ.
> ■ ಆನಂದ ಭರವಿ. ವ್ಯವಸ್ಥಾಪಕರು, ಕರ್ನಾಟಕ ಉಗ್ರಾಣ ನಿಗಮ

ಅನುಭವ ಹಂಚಿಕೊಳ್ಳಲು ನಿವೃತ್ತರ ಕೂಟ ಅವಶ್ಯ

ವಿಜಯಪುರ: ಬ್ಯಾಂಕಿನ ಸೇವಾ ಅವಧಿಯಲ್ಲಿ ಮಾಡಿದಂತಹ ಮಹತ್ವಪೂರ್ಣವಾದ ಹಾಗೂ ಆಡಳಿತಕ್ಕೆ ಅನುಕೂಲವಾದಂತಹ ಕಾರ್ಯಗಳು ಮೆಲಕು ಹಾಕಲು ಇಂತಹ ಎಸ್‌ಬಿಐ ನಿವೃತ್ತ ಸ್ನೇಹಿತರ ಸಂತೋಷ ಕೂಟ ಮೇಲಿಂದ ಮೇಲೆ ನಡೆಯಬೇಕೆಂದು ಬ್ಯಾಂಕಿನ ನಿವೃತ್ತ ಹಿರಿಯ ಅಧಿಕಾರಿ ರಮೇಶ ಕನ್ನೂರ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಗುರುದತ್ತ ಮಂಗಲ ಕಾರ್ಯಾಲಯದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಉದ್ಯೋಗಿಗಳ ಸಂತೋಷ ಕೂಟ ಉದ್ಘಾಟಿಸಿ ಹಾಗೂ ಸಮಾರಂಭದ ಅಧ್ಯಕ್ಷತೆ ವಹಿಸಿಮಾತನಾಡಿದರು. ಸಹೋದ್ಯೋಗಿಗಳ ಭೇಟಿಯಾಗಲು ಮತ್ತು ತಮ್ಮ ನಿವೃತ್ತಿ ಜೀವನದ ಅನುಭವಗಳನ್ನು ಹಂಚಿಕೊಳ್ಳಲು ಇಂತಹ ವೇದಿಕೆ ಸೂಕ್ತವೆಂದರು.

ವಿಜಯಪುರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿ ಬ್ಯಾಂಕಿನ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ ನಿವೃತ್ತಿ ಹೊಂದಿದ ರಾಮಲಿಂಗ ಅವರು ಸನ್ಮಾನ ಸ್ವೀಕರಿಸಿ, ನಿವೃತ್ತಿ ನಂತರ ಇಂತಹ ಕಾರ್ಯಕ್ರಮಗಳು ಜರುಗುವದು ಬಹಳ ವಿರಳ, ಬ್ಯಾಂಕಿನ ಸ್ನೇಹಿತರ ಭೇಟಿಗೆ ಅವಕಾಶ ಕಲ್ಪಿಸಿಕೊಟ್ಟ ಬ್ಯಾಂಕಿನ ನಿವೃತ್ತ ಸಂಘಟಕರಿಗೆ ಅಭಿನಂದಿಸಿದರು.

ನಿವೃತ್ತ ವಸುಂಧರಾ ಐನಾಪೂರ ಅವರು ಇದೊಂದು ಸುಂದರ ಸಮಾರಂಭ, ಜೀವನದಲ್ಲಿ ಸಂತೋಷಮಯ ಹಾಗೂ ಕೃತಜ್ಞತೆ ಹೇಳುವ ಸಮಯದಲ್ಲಿ ತಾವೆಲ್ಲರೂ ಭಾಗವಹಿಸಿದ್ದಕ್ಕೆ ಧನ್ಯವಾದಗಳನ್ನು ಹೇಳಿದ ಅವರು, ನನಗೆ ನಾನೇ ಸಾಥಿಯಾಗಿ ಆತ್ಮ ನಿರ್ಭರತೆಯನ್ನು ಹೆಚ್ಚಿಸಿಕೊಂಡು ಧ್ಯಾನ ಸಂತೃಪ್ತಿಯಲ್ಲಿ ತಲ್ಲೀನರಾಗಿ ಆರೋಗ್ಯ ಸಂಪತ್ತು ಹೆಚ್ಚಿಸಿಕೊಳ್ಳಬೇಕೆಂದರು.

ನಿವೃತ್ತರಾದ ವಿಶ್ವನಾಥ ಹೊಳ್ಳ, ಆರ್.ಡಿ.ಜಂತ್ಲಿ, ಆರ್ ಗಿರೀಧರ, ಅರುಣ ಧಾರವಾಡಕರ, ಎಸ್.ಎನ್.ಭೀಡಕರ, ಎಂ.ಆರ್.ದೇಶಪಾಂಡೆ, ಆನಂದ ಪದಕಿ, ಶಂಕರ ಜಲವಾದಿ ಸೇರಿದಂತೆ ಹಲವರು ತಮ್ಮ ಸೇವಾ ಅವಧಿಯ ಅನುಭವ ಹಂಚಿಕೊಂಡರು. ಸುಮಾರು 110 ಕ್ಕಿಂತಲೂ ಹೆಚ್ಚು ನಿವೃತ್ತ ಅಧಿಕಾರಿಗಳು ಭಾಗವಹಿಸಿದ್ದರು. ಭಾವನಾ ಸಿಂದಗಿ, ಶಶಿ ಕನಮಡಿ, ಜಗನ್ನಾಥ ಕುಲಕರ್ಣಿ, ಜೆ.ಜೋಶೆಫ್, ಮೋಹನ ನರಸಾಪುರ, ರಮೇಶ ಜೋಶಿ ಇದ್ದರು.



ಆಹೇರಿ ಗ್ರಾಮದಲ್ಲಿ ವಿದ್ಯುತ್ ಸಮಸ್ಯೆ ಖಂಡಿಸಿ ಗ್ರಾಮಸ್ಥರ ಆಕ್ರೋಶ

ಸಿಂದಗಿ: ತಾಲೂಕಿನ ಆಹೇರಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಿಗೆ ಯಾವುದೇ ರೀತಿಯ ವಿದ್ಯುತ್ ಸಮಸ್ಯೆ ಇಲ್ಲ. ಆದರೆ, ಆಹೇರಿ ಗ್ರಾಮದಲ್ಲಿ ಮಾತ್ರ ಮೇಲಿಂದ ಮೇಲೆ ವಿದ್ಯುತ್ ಸಮಸ್ಯೆಯಾಗುತ್ತಿದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ವಿಚಾರಿಸಿದಾಗ ಲೈನ್ ಟ್ರಿಪ್ ಆಗುತ್ತಿದೆ ಎಂದು ಹೇಳುತ್ತಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಹೊಲಗಳಿಗೆ ದಿನಕ್ಕೆ 7ಗಂಟೆ ವಿದ್ಯುತ್ ನೀಡಬೇಕು ಎಂದು ಸರಕಾರ ಹೇಳುತ್ತದೆ. ಆದರೆ, ಇಲಾಖೆ ಮಾತ್ರ 7 ಗಂಟೆ ವಿದ್ಯುತ್ ನೀಡದೆ. ಕೇವಲ 4 ರಿಂದ 5 ಗಂಟೆ ನೀಡಲಾಗುತ್ತಿದೆ. ಇದರಿಂದಾಗಿ ರೈತರಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಹೆಸ್ಕಾಂ ಇಲಾಖೆಯ ಎಇಇ ಚಂದ್ರಕಾಂತ ನಾಯಕ ಅವರ ಮುಂದೆ ಗ್ರಾಮಸ್ಥರು ತಮ್ಮ ಸಮಸ್ಯೆ ಹೇಳಿಕೊಂಡರು. ಆಹೇರಿ ಗ್ರಾಮದಲ್ಲಿಯೇ ವಿದ್ಯುತ್ ಘಟಕವಿದ್ದರೂ ಸರಿಯಾಗಿ ವಿದ್ಯುತ್ ಸಿಗುತ್ತಿಲ್ಲ ಎಂದು ತಮ್ಮ ಅಳಲು ತೋಡಿಕೊಂಡರು.

ಗ್ರಾಮಸ್ಥರ ಸಮಸ್ಯೆ ಆಲಿಸಿದ ಎಇಇ ಚಂದ್ರಕಾಂತ ನಾಯಕ ಅವರು ಸಮಸ್ಯೆಯನ್ನು ಪರಿಹರಿಸುವ ಕುರಿತು ಭರವಸೆ ನೀಡಿದರು. ಆದರೆ, ಆಹೇರಿ ಗ್ರಾಮಕ್ಕೆ ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಅನ್ನೋ ಬೇಡಿಕೆಯನ್ನು ಗ್ರಾಮಸ್ಥರು ಇಟ್ಟಿದ್ದಾರೆ.

ಗ್ರಾಮಸ್ಥರಾದ ಗಂಗಣ್ಣಗೌಡ ಕಡಗಂಚಿ, ಭಾಗಣ್ಣಗೌಡ ಬಿರಾದಾರ, ಬಸನಗೌಡ ಬಿರಾದಾರ, ದೇವುಗೌಡ ಬಿರಾದಾರ, ಶಂಕರ ಬಡಗೇರ, ರವಿ ಪೀರಶೆಟ್ಟಿ, ಗಂಗಾಧರ ಗೊಬ್ಬುರ, ಹಣಮಂತ ಪೀರಶೆಟ್ಟಿ, ಪ್ರವೀಣ ಜವಳಗಿ, ಶ್ರೀಶೈಲ ಹಡಪದ, ಭಾಗಣ್ಣ ಬಿರಾದಾರ, ಭಾಗಣ್ಣ ಗೊಬ್ಬುರ, ಕಲ್ಲನಗೌಡ ಬಿರಾದಾರ, ಸದ್ದಾಂ ದುಮ್ಮಾದ್ರಿ, ರಾಜು ಭಾವಿಮನಿ, ಭಾಗಣ್ಣಗೌಡ ಹೂನಳ್ಳಿ ಸೇರಿದಂತೆ ಇತರರು ಭಾಗವಹಿಸಿದ್ದರು.



> ವಿದ್ಯುತ್ ನೀಡುವ ಸಂದರ್ಭದಲ್ಲಿ ಎಲ್‌ಸಿ ತಗೋತಾರೆ ಕರೆಂಟ್ ಹೋದ ಸಮಯದಲ್ಲಿ ಕೆಲಸ ಮಾಡಿಕೊಳ್ಳುವುದಿಲ್ಲ ಎಂಬ ವಿಚಾರವಾಗಿ ಪ್ರತಿಭಟನೆ ಮಾಡಿದ್ದರು. ಇನ್ನು ಮುಂದೆ ಈ ರೀತಿ ಆಗದೇ ಇರುವ ಹಾಗೆ ನೋಡಿಕೊಳ್ಳಲಾಗುವುದು ಎಂದು ಗ್ರಾಮಸ್ಥರಿಗೆ ತಿಳಿಸಿದ್ದೇನೆ.
> ■ ಚಂದ್ರಕಾಂತ ನಾಯಕ, ಎಇಇ

ಜಿಲ್ಲಾ, ತಾಲೂಕು, ಗ್ರಾಪಂ ಗಳಿಗೆ ಶೀಘ್ರ ಚುನಾವಣೆ ನಡೆಸಿ

ಕೊಲ್ಹಾರ: ಸ್ಥಳೀಯ ಜಿಲ್ಲಾ, ತಾಲೂಕು, ಗ್ರಾಮ ಪಂಚಾಯತಿ ಚುನಾವಣೆಗಳನ್ನು ಶೀಘ್ರವಾಗಿ ನಡೆಸುವ ಕುರಿತು ಶಿವಾನಂದ ಪಾಟೀಲ್ ಶಾಸಕರು ಬಸವನಬಾಗೇವಾಡಿ ಇವರ ಮುಖಾಂತರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಗ್ರಾಮ ಸ್ವರಾಜ್ ಕರ್ನಾಟಕ ವೇದಿಕೆಯಿಂದ ಮನವಿ ಸಲ್ಲಿಸಲಾಯಿತು.

ವಿಶ್ವಕ್ಕೆ ಪ್ರಥಮ ಸಂಸತ್ತು ಪರಿಚಯಿಸಿದ ಬಸವಣ್ಣನವರ ಮತಕ್ಷೇತ್ರದ ಶಾಸಕರಾದ ತಮ್ಮ ಮೂಲಕ ಗಾಂಧೀಜಿಯ ಗ್ರಾಮ ಸ್ವರಾಜ್ಯ, ಅಂಬೇಡ್ಕರ್ ಸಮ ಸಮಾಜ, ಅಬ್ದುಲ್ ನಜೀರ್ ಸಾಬ್ ರವರ ಜನರ ಕೈಗೆ ಅಧಿಕಾರ ಕೊಡುವ ನಿಟ್ಟಿನಲ್ಲಿ ಮೂರು ಹಂತದ ಪಂಚಾಯತ್ ಚುನಾವಣೆಗಳನ್ನು ಶೀಘ್ರದಲ್ಲಿ ನಡೆಸಬೇಕೆಂದು ಒತ್ತಾಯಿಸುತ್ತೇವೆ.

ಗ್ರಾಮ ಪಂಚಾಯತಿಗಳಿಗೆ ರಾಜ್ಯ ಸರ್ಕಾರದ ಆದೇಶದ ಮೇರೆಗೆ ನೇಮಕವಾಗಿರುವ ಆಡಳಿತ ಅಧಿಕಾರಿಗಳು ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ನಡೆಸಬೇಕೆಂದು ಆಗ್ರಹ ಪಡಿಸುತ್ತೇನೆ. ಗ್ರಾಮ ಸಭೆಯ ನಿರ್ಣಯದಂತೆ ಅಭಿವೃದ್ಧಿ ಕ್ರಿಯಾಯೋಜನ ರೂಪಿಸಿ ಅನುಷ್ಠಾನಗೊಳಿಸಬೇಕೆಂದು ಕೇಳಿಕೊಳ್ಳುತ್ತೇವೆ ಎಂದು ಪ್ರದೀಪ್ ಚ ಪಾಟೀಲ್ ನಾಗರದಿನ್ನಿ ಉಪಾಧ್ಯಕ್ಷ ಗ್ರಾಮ ಸ್ವರಾಜ್ ಕರ್ನಾಟಕ ಹೇಳಿದರು.

ಜಿಪಂ ಮಾಜಿ ಸದಸ್ಯರಾದ ಕಲ್ಲು ದೇಸಾಯಿ, ತಾನಾಜಿ ನಾಗರಾಳ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಸಂತೋಷ ಗನಾಚಾರಿ, ಶ್ರೀಕಾಂತ ಗಣಿ ಹಾಜರಿದ್ದರು.



ಶಿಕ್ಷಕ ವೃತ್ತಿ ಪವಿತ್ರವಾದದ್ದು: ಪೂಜಾರಿ

ಝಳಕಿ: ಶಿಕ್ಷಕ ವೃತ್ತಿ ಪವಿತ್ರವಾದ ವೃತ್ತಿಯಾಗಿದೆ. ಪಾವಲೆ ಗುರುಗಳು 32 ವರ್ಷ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಸರಳ ಶಾಂತಿ ಸ್ವಾಭವುಳ್ಳವರು ಶಿಕ್ಷಣ ವೃತ್ತಿ ಜೊತೆ ಕೃಷಿಯಲ್ಲಿ ತೊಡಗಿಸಿಕೊಂಡಿದರು ಎಂದು ನಿವೃತ್ತಿ ಶಿಕ್ಷಕ ಬಿ.ಬಿ.ಪೂಜಾರಿ ಎಂದು ಹೇಳಿದರು.



ಸಮಿಪದ ಅರ್ಜನಾಳ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆದ ಎ.ಬಿ.ಪಾವಲೆ ಗುರುಗಳ ಸೇವಾ ನಿವೃತ್ತಿ ಪ್ರಯುಕ್ತ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಕರ ಜೊತೆ ಒಳ್ಳೆಯ ಒಡನಾಟ ಇಟ್ಟುಕೊಂಡಿದರು ಭೇದ ಭಾವವಿಲ್ಲದರು ಅವರ ಒಳ್ಳೆಯ ಸಂಜಿನಿಕೆ ಸರಳ ಜೀವಿ ಅವರ ನಿವೃತ್ತಿ ಜೀವನ ಸುಗುಮವಾಗಿ ಸಾಗಲಿ ಎಂದು ಹಾರೈಸಿದರು.

ಶಿಕ್ಷಣ ಸಂಸ್ಥೆ ಮಾಜಿ ಅಧ್ಯಕ್ಷರು ಮಾತನಾಡಿದರು.

ಎ.ಬಿ.ಪಾವಲೆ ಮಾತನಾಡಿ, ಶಾಲೆಯ ಜೀವಂತ ದೇವರ ಗುಡಿ ಈ ಶಾಲೆಯ ನನ್ನದ್ದು ಎಂಬ ಭಾವ ಇರಬೇಕು. ಅಂದರೆ ಮಾತ್ರ ಶಾಲೆಗೆ ಸರ್ಕಾರ ಸೌಲಭ್ಯ ಪಡೆಯಲು ಸಾಧ್ಯವಾಗುವುದು. ಗ್ರಾಮದ ಜೊತೆ ಅಧಿಕಾರಿಗಳ ಜೋತೆ ಒಳ್ಳೆಯ ಸಂಬಂಧ ಬೆಳೆಸಿರಿ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣ ಜೊತೆ ಒಳ್ಳೆಯ ಸಂಸ್ಕಾರ ನೀಡಿ ನನ್ನ ಶಿಕ್ಷಣ ಕ್ಷೇತ್ರದಲ್ಲಿ 32 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿಮ್ಮ ಜೊತೆ 6 ಸೇವೆ ಸಲ್ಲಿಸಿದಲ್ಲಿ ಕಷ್ಟ ಸುಖ ಹಂಚಿಕೂಂಡಂರು.

ಶಾಲಾ ಮುಖ್ಯಗುರು ಪ್ರಭು ಬಿರಾದಾರ, ಎಸ್ಡಿಎಂಸಿ ಅಧ್ಯಕ್ಷ ಶರಣಪ್ಪ ಬೂದಿಹಾಳ, ಸಿಆರ್‌ಪಿ ಬಾಲಗಾಂವ, ಪ್ರಕಾಶ ಖೇಡಗಿ, ಎನ್.ಎಸ್.ಸಿನಖೇಡ, ಚನ್ನಪ್ಪ ಮೇತ್ರಿ, ಬಸವಂತ ಮೇತ್ರಿ, ಶಿವಮುತ್ರ ತಳವಾರ, ಆರ್.ಎಸ್.ಗೋಡೇಕಾರ, ಎನ್.ಟಿ.ಬಿರಾದಾರ, ತುಕಾರಾಮ ಅರಳಗುಂಡಗಿ, ಡಿ.ಕೆ.ರಗಟೆ, ಪಿ.ಬಿ.ಹಿರೋಡಗಿ, ಎಂ.ಎಸ್. ರಾಮಪೂರ, ಯು.ಬಿ.ಪಾಟೀಲ, ಎಸ್.ಎಂ.ಕಾಗರ, ಆಸಿಫ್ ಚಟ್ಟರಕಿ, ಪ್ರಕಾಶ ನಾವಿ,

ಚಡಚಣ ವಲಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಜಿಲ್ಲಾಭಿವೃದ್ಧಿಗೆ 4800 ಲಕ್ಷ ರೂ.ಮಂಜೂರು: ಸಂಸದ



ವಿಜಯಪುರ: ಜಿಲ್ಲೆಯಲ್ಲಿ ಮಳೆಯಿಂದ ಹಾಗೂ ಕಬ್ಬಿನ ವಾಹನಗಳ ಸಂಚಾರದಿಂದ ಹಾಳದ ರಸ್ತೆ ದುರಸ್ತಿ ಹಾಗೂ ರಸ್ತೆಗಳ ಅಗಲೀಕರಣ, ಮರು ನಿರ್ಮಾಣಕ್ಕಾಗಿ ಸನ್ 2026-27ನೇ ಸಾಲಿನ ಕೇಂದ್ರ ಸರ್ಕಾರದಿಂದ 4800 ಲಕ್ಷ ರೂ.ಸಿಆರ್ ಐಎಫ್ ಕಾಮಗಾರಿಗೆ ಮಂಜೂರು ಮಾಡಲಾಗಿದೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಈ ಬಗ್ಗೆ ಶೀಘ್ರದಲ್ಲಿ ಕಾಮಗಾರಿ ಚಾಲನೆಯ ಪೂಜೆಯನ್ನು ನೆರವೇರಿಸಲಾಗುವುದು. ಜಿಲ್ಲೆಯ ಇಂಡಿ ತಾಲೂಕಿನ ಇಂಡಿ- ಲಚ್ಯಾಣ- ಪಡನೂರ- ಶಿರಗೂರ- ಗುಬ್ಬೇವಾಡ ರಸ್ತೆ ಕಿಮಿ. 3.00 ರಿಂದ 8.5 ಕಿ.ಮಿ ವರೆಗೆ (ಆಯ್ದ ಭಾಗಗಳಲ್ಲಿ) ಅಂದಾಜು 600 ಲಕ್ಷಗಳಲ್ಲಿ ರಸ್ತೆ ಅಗಲೀಕರಣ ಕಾಮಗಾರಿ. (ರಸ್ತೆಯ ಉದ್ದ 10.00 ಕಿಮಿ), ವಿಜಯಪುರ ಜಿಲ್ಲೆಯ ತಾಳಿಕೋಟಿ ತಾಲೂಕಿನ ಡಂಬಳ- ಕಲಕೇರಿ ಜಿಲ್ಲೆಯ ರಸ್ತೆ ಕಿಮಿ 8.38 ರಿಂದ 12.65 ಮತ್ತು 17.50 (ಆಯ್ದ ಭಾಗಗಳಲ್ಲಿ) ಮರು ಡಾಂಬರೀಕರಣ 6 ಲಕ್ಷಗಳ ಕಾಮಗಾರಿ (ರಸ್ತೆಯ ಉದ್ದ- 10.00 ಕಿ.ಮಿ) ಕಾಮಗಾರಿ, ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ರಾಜ್ಯ ಹೆದ್ದಾರಿ-34 ಔರಾದ- ಸದಾಶಿವಗಢ ರಸ್ತೆ 357 ರಿಂದ 367.80 ಕಿ.ಮಿ (ಹಲಗಣಿ ಕೂಡರಸ್ತೆಯಿಂದ ಅರ್ಜುಣಗಿ) (ರಸ್ತೆ ಉದ್ದ-10.8 ಕಿ.ಮಿ) 500 ಲಕ್ಷ ರೂ.ಗಳ ರಸ್ತೆ ಕಾಮಗಾರಿ ಸುಧಾರಣೆ. ರಸ್ತೆ ಉದ್ದ 10.8 ಕಿಮಿ), ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಚತುಷ್ಪಥ ರಸ್ತೆ (4ಲೇನ್) ಗಲ್ಲಿಯ ದೀಪದಿಂದ ಎನ್.ಎಚ್-561ಎ ಹತ್ತಿರ ಭೂತನಾಳ ಕೆರೆಯಿಂದ ಗೋಶಾಲೆ ವರೆಗೆ, ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ರಾಜ್ಯ ಹೆದ್ದಾರಿ -124 ಭರಖೇಡ- ಬೀಳಗಿ (ಆಯ್ದ ಭಾಗಗಳಲ್ಲಿ) ರಸ್ತೆ ಸುಧಾರಣೆ ರೂ. 600.00 ಲಕ್ಷಗಳು -19.45 ಕಿ.ಮಿ ಉದ್ದ, ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ರಸ್ತೆ ಮುಳವಾಡ-ಮನಗೂಳಿ-ಉಕ್ಕಲಿ ಕಿ.ಮಿ 2ರಿಂದ21.70ಕಿ.ಮಿ ವರೆಗೆಸೇರಿದಂತೆಹಲವು ಕಾಮಗಾರಿಗಳು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಗೆ ಸಹಕರಿಸಿ



ಬಸವನಬಾಗೇವಾಡಿ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಕಾರ್ಯವು ಜೂ.30ರಿಂದ ಜು.29ರ ವರೆಗೆ ನಡೆಯಲಿದ್ದು, ರಾಜಕೀಯ ಪಕ್ಷ, ಸಂಘಟನೆಗಳ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ತಹಶೀಲ್ದಾರ್ ವೈ.ಎಸ್.ಸೋಮನಕಟ್ಟಿ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಎಸ್‌ಐಆರ್ ಕಾರ್ಯಗಳ ಕುರಿತು ಮಾಹಿತಿ ನೀಡಿದ ಅವರು, ಬಸವನಬಾಗೇವಾಡಿ ವಿಧಾನಸಭಾ ಮತಕ್ಷೇತ್ರದಲ್ಲಿ ಒಟ್ಟು 231 ಮತಗಟ್ಟೆಗಳಿದ್ದು, ಎಲ್ಲಾ ಮತಗಟ್ಟೆಗಳಿಗೆ ಬಿಎಲ್‌ಓ ಅಧಿಕಾರಿಗಳನ್ನು ನೇಮಿಸಿ ಪ್ರತಿ 10 ರಿಂದ 12 ಬಿಎಲ್‌ಓಗಳಿಗೆ ಓರ್ವ ಮೇಲ್ವಿಚಾರಣೆ ಅಧಿಕಾರಿಯನ್ನು ನೇಮಿಸಲಾಗಿದೆ. ಈಗಾಗಲೇ ಎಲ್ಲ ಬೂತ್ ಮಟ್ಟದ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದ್ದು, ಆ್ಯಪ್ ಬಿಡುಗಡೆಯಾದ ಬಳಿಕ ಮತ್ತೊಂದು ಸುತ್ತಿನ ತರಬೇತಿ ಹಮ್ಮಿಕೊಳ್ಳಲಾಗುವುದು ಎಂದರು.

ಕ್ಷೇತ್ರದಲ್ಲಿ ಒಟ್ಟು 2,21,518 ಮತದಾರರಿದ್ದು, ಅವರ ಪೈಕಿ 2,06,450 ಮತದಾರರ (93.20 ಶೇಕಡಾ) ಮಾಹಿತಿಯನ್ನು ಯಶಸ್ವಿಯಾಗಿ ಮ್ಯಾಪಿಂಗ್ ಮಾಡಲಾಗಿದೆ. ಉಳಿದ 15,068 ಮತದಾರರ ಮ್ಯಾಪಿಂಗ್ ಕಾರ್ಯ ಪ್ರಗತಿಯಲ್ಲಿದೆ. ಕ್ಷೇತ್ರದ ಎಲ್ಲಾ 231 ಮತಗಟ್ಟೆಗಳಿಗೆ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳಿಂದ ಬೂತ್ ಮಟ್ಟದ ಏಜೆಂಟರನ್ನು ನೇಮಕಮಾಡಲಾಗಿದೆ. ಆದರೆ ಜೆಡಿಎಸ್ ಪಕ್ಷದಿಂದ ಬೂತ್ ಮಟ್ಟದ ಏಜೆಂಟರ ನೇಮಕ ಬಾಕಿ ಇದ್ದು, ನೇಮಕಾತಿ ಮಾಡುವಂತೆ ಈಗಾಗಲೇ ಹಲವು ಬಾರಿ ಕೋರಲಾಗಿದೆ ಎಂದು ತಿಳಿಸಿದರು. ಪರಿಷ್ಕರಣೆ ಅವಧಿಯಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಗಣತಿ ನಮೂನೆಗಳ ವಿತರಣೆ ಮತ್ತು ಸಂಗ್ರಹಣೆಗಾಗಿ ಮನೆ-ಮನೆಗೆ ಭೇಟಿ ನೀಡಲಿದ್ದು, ಮತದಾರರು ನಮೂನೆ ಜೊತೆಯಲ್ಲಿ 2002ರ ಮತಪಟ್ಟಿಯಲ್ಲಿ ತಮ್ಮ ಹೆಸರು ನೋಂದಣಿ ಆಗಿರುವುದನ್ನು ದಾಖಲೆ ಒದಗಿಸಬೇಕಿದೆ. 2002ರ ಮತಪಟ್ಟಿಯಲ್ಲಿ ಹೆಸರು ಇಲ್ಲದವರು ಚುನಾವಣಾ ಆಯೋಗ ಕೇಳಿರುವ 11 ದಾಖಲಾತಿಗಳಲ್ಲಿ ಕನಿಷ್ಠ ಎರಡನ್ನಾದರೂ ಒದಗಿಸಬೇಕು. ಮತದಾರರು ಮತಪಟ್ಟಿಯಲ್ಲಿ ಸೇರ್ಪಡೆಗೊಳ್ಳುತ್ತಾರೆ ಎಂದರು.

ಕಿರುಸುದ್ದಿ

ನೂತನ ಪದಾಧಿಕಾರಿಗಳ ಪದಗ್ರಹಣ

ಕುಷ್ಟಗಿ: ಪಟ್ಟಣದ ಮಲ್ಲಿಕಾರ್ಜುನ ಭವನದಲ್ಲಿ ತಾಲೂಕು ಯುವ ಕಾಂಗ್ರೆಸ್ ಸಮಿತಿ ಕುಷ್ಟಗಿ, ಯುವ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಮಂಗಳವಾರ ನಡೆಯಿತು.

ಮಾಜಿ ಸಚಿವ ಹಾಗೂ ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಅಮರೇಗೌಡ ಪಾಟೀಲ್ ಬಯ್ಯಾಪೂರು ಮಾತನಾಡಿ, ಯುವಕರು ಮುಂದೆ ಬರಬೇಕು, ಇಂದಿನ ಯುವಕರು ಮುಂದಿನ ನಾಗರಿಕರು. ಯುವಕರಿಗೆ ದೂರ ದೃಷ್ಟಿ ಇರಬೇಕು. ಗ್ರಾಮದಲ್ಲಿ ಯುವಕರು ಒಳ್ಳೆಯ ಕೆಲಸ ಮಾಡಬೇಕು. ಮೊದಲು ಊರು ಸುಧಾರಣೆ ಮಾಡಿರಿ, ಜಾತ್ಯತೀತತವಾಗಿ ಯುವಕರು ಸಂಘಟಿತರಾಗಬೇಕು. ದುಶ್ಚಟದಿಂದ ದೂರ ಇರಬೇಕು. ಯುವ ಜನತೆಯಿಂದ ಈ ದೇಶ ಬೆಳೆಯಲು ಸಾಧ್ಯ.

ಯುವಕರಿಗೆ ಗುರಿ ಇರಬೇಕು. ಇಚ್ಛಾಶಕ್ತಿ ಇರಬೇಕು ಅಂದಾಗ ಮಾತ್ರ ರಾಜಕೀಯವಾಗಿ ಬೆಳೆಯಲು ಸಾಧ್ಯ. ಯುವಕರು ಪಕ್ಷದ ಇತಿಹಾಸ ತಿಳಿದು ಕೊಂಡಿರಬೇಕು. ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದ ನಂತರ ಈ ದೇಶದ ಸಾಲದಲ್ಲಿದೆ ಎಂದರು.ಯುವ ಕಾಂಗ್ರೆಸ್ ಸಮಿತಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ರಾಠೋಡ್ ಉದ್ಘಾಟಿಸಿ ಮಾತನಾಡಿ, ಯುವ ಜನತೆ ಭೂತಮಟ್ಟದಿಂದ ಸಂಘಟಿತರಾಗಬೇಕು. ಅಂದಾಗ ಮಾತ್ರ ಪಕ್ಷ ಸಂಘಟನೆಯಾಗಲು ಸಾಧ್ಯ ಎಂದರು.

ಮಾಜಿ ಶಾಸಕ ಹಾಗೂ ತುಂಗಭದ್ರ ಅಚ್ಚುಕಟ್ಟ ಪ್ರದೇಶಾಭಿವೃದ್ಧಿ (ಕಾಡಾ) ಅಧ್ಯಕ್ಷ ಹಸನಸಾಬ ದೋಟಿಹಾಳ, ಯೂಥ್ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಲಿಂಗರಾಜ ಕಲ್ಲಗುಡಿ ಮಾತನಾಡಿದರು.

ಬ್ಲಾಕ್ ಕಾಂಗ್ರೆಸ್ ಈರಣ್ಣ ಬದಾಮಿ ಅಧ್ಯಕ್ಷತೆ ವಹಿಸಿದ್ದರು. ದೊಡ್ಡಬಸನಗೌಡ ಪಾಟೀಲ, ಲಾಡ್ಲೆ ಮಷಾಕ್, ಶಕುಂತಲಾ ಹಿರೇಮಠ, ಅಯ್ಯಪ್ಪ ಹವಾಲ್ದಾರ್, ಫಾರೂಕ್ ಡಲಾಯತ್ ಇಮಾಮಸಾಬ ಗರಡಿಮನಿ ಸೇರಿದಂತೆ ಯುವ ಯುವ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು, ಕಾರ್ಯಕರ್ತರು ಇದ್ದರು.

ರೈತರ ಮೇಲೆ ಅಧಿಕಾರಿಗಳ ದೌರ್ಜನ್ಯ: ಆರೋಪ



ಸಿಂಧನೂರು: ತಾಲೂಕಿನ ಹೊಗರನಾಳ ಸೀಮಾದಲ್ಲಿ ಸಾಗುವಳಿ ಮಾಡುವ ಭೂಹೀನ ಪರಿಶಿಷ್ಟ ಪಂಗಡ ಸಮುದಾಯದ ಬಡ ರೈತರ ಮೇಲೆ ಅರಣ್ಯ ಇಲಾಖೆ ಅಧಿಕಾರಿಗಳು ಇತ್ತೀಚಿಗೆ ದೌರ್ಜನ್ಯ ನಡೆಸಿದ್ದಾರೆಂದು ಆರೋಪಿಸಿರುವ ಕರ್ನಾಟಕ ರೈತ ಸಂಘ (ಕೆಆರ್‌ಎಸ್) ಈ ಘಟನೆಯನ್ನು ಖಂಡಿಸಿದೆ.

ಈ ಕುರಿತು ಭಾನುವಾರ ಪತ್ರಿಕಾ ಹೇಳಿಕೆ ನೀಡಿರುವ ತಾಲ್ಲೂಕು ಘಟಕದ ಅಧ್ಯಕ್ಷ ರಮೇಶ ಪಾಟೀಲ್ ಬೇರಿಗಿ ಅವರು,ಹೊರಗನಾಳದ ಸರ್ವೆ ನಂ.103ರಲ್ಲಿ ಕಳೆದ ಐದಾರು ದಶಕಗಳಿಂದ ಭೂಹೀನ ಬಡ ರೈತರು ಹೊಟ್ಟೆಪಾಡಿಗೆ ಸಾಗುವಳಿ ಮಾಡುತ್ತ ಬಂದಿರುತ್ತಾರೆ. ಆದರೆ ಅರಣ್ಯ ಇಲಾಖೆಯ ಅಧಿಕಾರಿಗಳು ವಿನಾಃ ಕಾರಣ ಕೃಷಿ ಚಟುವಟಿಕೆಗೆ ಅಡ್ಡಿಪಡಿಸಿ,ಕೃಷಿಯಲ್ಲಿ ತೊಡಗಿರುವ ಮಹಿಳೆಯರೂ ಸೇರಿದಂತೆ ಸಾಗುವಳಿದಾರನ್ನು ನಿಂದಿಸಿ,ದಬ್ಬಾಳಿಕೆ ಮಾಡಿ ಬೆದರಿಕೆ ಹಾಕಿರುತ್ತಾರೆ.ಭೂಹೀನ ಬಡ ಕುಟುಂಬ ಕಳೆದ ಐದಾರು ದಶಕಗಳಿಂದ ಉಳುಮೆ ಮಾಡುತ್ತ ಜೀವನ ನಿರ್ವಹಣೆ ಮಾಡುತ್ತಿದೆ.

ಆದರೆ, ಅರಣ್ಯ ಇಲಾಖೆಯ ಅಧಿಕಾರಿಗಳು ಪರಿಶಿಷ್ಟ ಪಂಗಡದ ಶರಣಪ್ಪ ನಾಯಕ,ನಾಗಪ್ಪ ನಾಯಕ,ದುರುಗಪ್ಪ ನಾಯಕ,ಮಂಜಮ್ಮ,ರಾಮಪ್ಪ ನಾಯಕ, ಹನುಮಮ್ಮ ನಾಗಪ್ಪ ನಾಯಕ, ಸಣ್ಣ ಹನುಮಂತ ನಾಯಕ ಇವರ ಮೇಲೆ ದರ್ಪತೋರಿಸಿ ಕಾನೂನು ಬಾಹಿರವಾಗಿ ವರ್ತಿಸಿರುತ್ತಾರೆ. ಕೃಷಿ ಚಟುವಟಿಕೆಗೆ ಅಡ್ಡಿಪಡಿಸುವುದು ಕಾನೂನು ವಿರೋಧಿ ಕ್ರಮವಾಗಿದೆ.

ಈ ಕೂಡಲೇ ತಾಲ್ಲೂಕು ಆಡಳಿತ ಹಾಗೂ ಅರಣ್ಯ ಇಲಾಖೆ ಮೇಲಧಿಕಾರಿಗಳು ಮಧ್ಯಪ್ರವೇಶಿಸಿ ರೈತ ಕುಟುಂಬದ ಮೇಲಾಗುತ್ತಿರುವ ನಿರಂತರ ಕಿರುಕುಳವನ್ನು ತಪ್ಪಿಸಬೇಕು ಹಾಗೂ ಕೃಷಿ ಚಟುವಟಿಕೆ ಕೈಗೊಳ್ಳಲು ಅನುಕೂಲ ಕಲ್ಪಿಸಬೇಕು.ಇಲ್ಲದೇ ಹೋದರೆ ಕರ್ನಾಟಕ ರೈತ ಸಂಘಟನೆಯ ವತಿಯಿಂದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ರಮೇಶ ಪಾಟೀಲ್ ಬೇರಿಗಿ ಎಚ್ಚರಿಸಿದ್ದಾರೆ.



ಕುಷ್ಟಗಿ: ಪಟ್ಟಣದ ಮಲ್ಲಿಕಾರ್ಜುನ ಭವನದಲ್ಲಿ ತಾಲೂಕು ಯುವ ಕಾಂಗ್ರೆಸ್ ಸಮಿತಿ ಕುಷ್ಟಗಿ, ಯುವ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಮಂಗಳವಾರ ನಡೆಯಿತು.

ಪರಿಸರ ಸ್ನೇಹಿ ಜೀವನಶೈಲಿ ಜಾಗೃತಿ ಅಭಿಯಾನ

ಮಸ್ಕಿ: ಪಟ್ಟಣದ ಶ್ರೀವೆಂಕಟೇಶ್ವರ ದೇವಸ್ಥಾನದ ಆವರಣದಲ್ಲಿ ಮಂಗಳವಾರ ನಾರಿ ಶಕ್ತಿ ಫೋರಂ ಅಡಿಯಲ್ಲಿ 'ಆರೋಗ್ಯಕರ ಭಾರತ, ಆತ್ಮನಿರ್ಭರ ಭಾರತ' ಹಾಗೂ ಪರಿಸರ ಸ್ನೇಹಿ ಜೀವನಶೈಲಿ ಅಳವಡಿಸಿಕೊಳ್ಳುವ ಕುರಿತು ಜಾಗೃತಿ ಕಾರ್ಯಕ್ರಮ ಜರುಗಿತು.

ಬಿಜೆಪಿ ಮಹಿಳಾ ಮೋರ್ಚಾ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಖಾದ್ಯ ತೈಲದ (ಎಣ್ಣೆ) ಬಳಕೆಯನ್ನು ಕಡಿಮೆ ಮಾಡಿ ಆರೋಗ್ಯ ರಕ್ಷಿಸಿಕೊಳ್ಳುವಂತೆ ಕರೆ ನೀಡಲಾಯಿತು.

ಕಾರ್ಯಕ್ರಮವನ್ನು ಮಾಜಿ ಶಾಸಕರಾದ ಪ್ರತಾಪಗೌಡ ಪಾಟೀಲ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಅತ್ಯಂತ ಅರ್ಥಪೂರ್ಣವಾಗಿ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ಆತ್ಮನಿರ್ಭರ ಭಾರತದ ಕನಸನ್ನು ನನಸು ಮಾಡಲು ಪ್ರತಿಯೊಂದು ಕುಟುಂಬವೂ ಆರೋಗ್ಯಕರ ಮತ್ತು ಪರಿಸರ ಸ್ನೇಹಿ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು ಎಂದರು. ಅಡುಗೆಯಲ್ಲಿ ಎಣ್ಣೆಯ ಬಳಕೆಯನ್ನು ಮಿತಿಗೊಳಿಸುವುದರಿಂದ ದೈಹಿಕ ಆರೋಗ್ಯ ಸುಧಾರಿಸುತ್ತದೆ ಎಂದು ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಕುಟುಂಬದ ಸ್ವಾಸ್ಥ್ಯವನ್ನು ಕಾಯುವಲ್ಲಿ ಮಹಿಳೆಯರ ಪಾತ್ರ ದೊಡ್ಡದಾಗಿದ್ದು, ಬಿಜೆಪಿ ಮಹಿಳಾ ಮೋರ್ಚಾ ಹಮ್ಮಿಕೊಂಡಿರುವ ಈ ಸಮಾಜಮುಖಿ ಜಾಗೃತಿ ಅಭಿಯಾನ ಶ್ಲಾಘನೀಯ ಎಂದು ಪ್ರಶಂಸಿಸಿದರು. ಬಿಜೆಪಿ ಪಕ್ಷದ ಪ್ರಮುಖ ಮುಖಂಡರು ಹಾಗೂ ಮಹಿಳಾ ಮೋರ್ಚಾದ ಪ್ರಮುಖ ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಹಾಗೂ ನಾರಿ ಶಕ್ತಿ ಫೋರಂನ ಸದಸ್ಯರು ಉಪಸ್ಥಿತರಿದ್ದರು.



ಮಸ್ಕಿ: ಪಟ್ಟಣದ ಶ್ರೀವೆಂಕಟೇಶ್ವರ ದೇವಸ್ಥಾನದ ಆವರಣದಲ್ಲಿ ಮಂಗಳವಾರ ನಾರಿ ಶಕ್ತಿ ಫೋರಂ ಅಡಿಯಲ್ಲಿ 'ಆರೋಗ್ಯಕರ ಭಾರತ, ಆತ್ಮನಿರ್ಭರ ಭಾರತ' ಹಾಗೂ ಪರಿಸರ ಸ್ನೇಹಿ ಜೀವನಶೈಲಿ ಅಳವಡಿಸಿಕೊಳ್ಳುವ ಕುರಿತು ಜಾಗೃತಿ ಕಾರ್ಯಕ್ರಮ ಜರುಗಿತು.

ಹದಗೆಟ್ಟ ರಸ್ತೆ: ಪ್ರಯಾಣಿಕರ ಪರದಾಟ

ಶಿವಮೂರ್ತಿ ಇಟಗಿ

ಯಲಬುರ್ಗಾ: ತಾಲೂಕಿನ ಬಳೂಟಗಿ ಗ್ರಾಮಕ್ಕೆ ಹೋಗುವ ಮುಖ್ಯ ರಸ್ತೆ ಹಾಗೂ ಚಿಕ್ಕಮ್ಯಾಗೇರಿ ಗ್ರಾಮದಿಂದ ಬೂದಗುಂಪಾ ಮಾರ್ಗದ ರಸ್ತೆಯು ಕಳೆದ ಹಲವಾರು ವರ್ಷಗಳಿಂದಲೂ ಹದಗೆಟ್ಟಿದ್ದರೂ ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಸೇರಿದಂತೆ ಅಧಿಕಾರಿಗಳು ಕಂಡು ಕಾಣದಂತೆ ಮೌನಕ್ಕೆ ಶರಣಾಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ರಸ್ತೆ ತುಂಬ ಗುಂಡಿಗಳು: ತಾಲೂಕಿನ ಕುಡಗುಂಟಿ ಕ್ರಾಸ್ ಮಾರ್ಗದಿಂದ ಕುಡಗುಂಟಿ, ಚಿಕ್ಕಮ್ಯಾಗೇರಿ, ಬೂದಗುಂಪಾ ಹಾಗೂ ಮಂಗಳೂರು ಗ್ರಾಮಗಳಿಗೆ ತೆರಳುವ ಪ್ರಮುಖ ರಸ್ತೆಯು ಹಲವು ಸಮಸ್ಯೆಗಳಿಂದ ಬಳಲುತ್ತಿದ್ದರೂ ಯಾವೊಬ್ಬ ಅಧಿಕಾರಿಯು ಇತ್ತ ತಲೆ ಹಾಕದೆ ನಿರ್ಲಕ್ಷ್ಯ ವಹಿಸಿದ್ದಾರೆ. ಅನೇಕ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಆಳೆತ್ತರದ ಗುಂಡಿಗಳಿಂದ ಆವೃತವಾಗಿದ್ದು, ಮಳೆ ಬಂದರೆ ಸಾಕು ಕೆಸರುಗದ್ದೆಯಾಗಿ ಮಾರ್ಪಡುವ ರಸ್ತೆಯನ್ನು ದುರಸ್ತಿಗೊಳಿಸುವಂತೆ ಸ್ಥಳೀಯ ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ. ಜನಪ್ರತಿನಿಧಿಗಳು ಜಾಣ ಕುರುಡರಂತೆ ವರ್ತಿಸುತ್ತಿದ್ದಾರೆ.

ಪ್ರಯಾಣಕ್ಕೆ ಹರಸಾಹಸ: ವ್ಯಾಪಾರ ವಹಿವಾಟು ಹಾಗೂ ತಮ್ಮ ದಿನನಿತ್ಯದ ಕೆಲಸಕ್ಕಾಗಿ ನಿತ್ಯ ರೈತರು, ವ್ಯಾಪಾರಸ್ಥರು ಮಂಗಳೂರು ಮಾರ್ಗವಾಗಿ ಕೊಪ್ಪಳಕ್ಕೆ ತೆರಳುವ ವೇಳೆ ಹರಸಾಹಸ ಪಡಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ದ್ವಿಚಕ್ರ ವಾಹನ ಸವಾರರ ಸ್ಥಿತಿ ಹೇಳತೀರದಾಗಿದೆ. ರಸ್ತೆಯಲ್ಲಿರುವ ಆಳೆತ್ತರದ ಗುಂಡಿಗಳಿಗೆ ಬಿದ್ದು ಗಾಯಗೊಂಡ ಘಟನೆಗಳು ನಡೆದಿವೆ. ಈ ಮಾರ್ಗದ ರಸ್ತೆಯಲ್ಲಿ ನಿತ್ಯ ನೂರಾರು ಸಾರ್ವಜನಿಕರು, ಸೇರಿದಂತೆ ಲಾರಿ, ಟ್ರ್ಯಾಕ್ಟರ್‌ಗಳು ಸಂಚರಿಸುತ್ತದೆ. ಇಂಥ ಸಂದರ್ಭದಲ್ಲಿ ತಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಹೋಗಬೇಕಾಗಿದೆ. ಇದಕ್ಕಿಂತ ಹೆಚ್ಚಾಗಿ ಬಸ್‌ಗಳು ಪ್ರಯಾಣಿಕರನ್ನು ತುಂಬಿಕೊಂಡು ಭಯದಿಂದಲೇ ವಾಹನ ಚಲಾಯಿಸುವ ಸ್ಥಿತಿ ನಿರ್ಮಾಣಗೊಂಡಿದೆ.

ಜನರ ಗೋಳು: ಸ್ಥಳೀಯ ರೈತರು ಎತ್ತಿನಗಾಡಿ ಮೂಲಕ ಹೊಲಗಳಿಗೆ ತೆರಳಬೇಕಾದರೆ ಹರಸಾಹಸ ಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಹಲವಾರು ವರ್ಷಗಳಿಂದಲೂ ರಸ್ತೆ ಅದ್ವಾನಗೊಂಡಿದ್ದರೂ ಯಾವೊಬ್ಬ ಅಧಿಕಾರಿಯು ಇದನ್ನು ದುರಸ್ತಿಗೊಳಿಸದೆ ನಿರ್ಲಕ್ಷ್ಯ ವಹಿಸಿದ್ದಾರೆ.



ತಾಲೂಕಿನ ಚಿಕ್ಕಮ್ಯಾಗೇರಿ-ಬೂದಗುಂಪಾ ಮಧ್ಯೆ ರಸ್ತೆ 1 ನೇ ಹಂತದಲ್ಲಿ ಅರ್ಧದಷ್ಟು ಡಾಂಬರೀಕರಣ ರಸ್ತೆಯನ್ನಾಗಿ ನಿರ್ಮಿಸಲಾಗಿದೆ. ಇನ್ನೂಳಿದ ಕಾಮಗಾರಿಗಾಗಿ 2ನೇ ಹಂತದಲ್ಲಿ 10ಕೋಟಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರದಲ್ಲೇ ಅನುದಾನ ಬಂದ್ರೆ ಚಿಕ್ಕಮ್ಯಾಗೇರಿ ಗ್ರಾಮದ ರಸ್ತೆ ಕಾಮಗಾರಿ ಪೂರ್ಣಗೊಳಿಸಲಾಗುವುದು.

■ ಮಲ್ಲಿಕಾರ್ಜುನ, ಲೋಕೋಪಯೋಗಿ ಇಲಾಖೆ ಅಧಿಕಾರಿ

ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಿ

ತಾಲೂಕಿನ ಬಳೂಟಗಿ ರಸ್ತೆ ಡಾಂಬರೀಕರಣ ಗೊಳಿಸಬೇಕು. ಇನ್ನಾದರೂ ಜನಪ್ರತಿನಿಧಿಗಳು, ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಅಪೂರ್ಣಗೊಂಡ ರಸ್ತೆ ಡಾಂಬಾರೀಕರಣ ಪೂರ್ಣಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ವಿವಿಧ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಚುನಾವಣೆ ಸಂದರ್ಭಗಳಲ್ಲಷ್ಟೇ ಇಲ್ಲಸಲ್ಲದ ಆಶ್ವಾಸನೆ ನೀಡಿ ಗ್ರಾಮಕ್ಕೆ ಭೇಟಿ ನೀಡುವ ರಾಜಕಾರಣಿಗಳು ಚುನಾವಣೆ ಮುಗಿದ ಬಳಿಕ ಜನರ ಆಶೋತ್ತರಗಳನ್ನು ಈಡೇರಿಸದೆ ಕೇವಲ ತಾಲೂಕು ಕೇಂದ್ರಗಳಿಗಷ್ಟೇ ಸೀಮಿತವಾಗಿದ್ದಾರೆ. ಮಾರ್ಗದುದ್ದಕ್ಕೂ ಕಿತ್ತು ನಿಂತಿರುವ ರಸ್ತೆಯಿಂದಾಗಿ ರಾತ್ರಿ ವೇಳೆ ಸಂಚರಿಸುವ ಪ್ರಯಾಣಿಕರು ಭಯದ ವಾತಾವರಣದಲ್ಲೇ ಸಂಚರಿಸಬೇಕಾದ ಅನಿವಾರ್ಯತೆ ಬಂದೊದಗಿದೆ. ಡಾಂಬರ್ ಕಾಣದೆ ಬರಿ ಮರಂನಲ್ಲೆ ರಸ್ತೆಯನ್ನು ಗುರುತು ಹಚ್ಚಿ ಸಾಗುವ ಅನಿವಾರ್ಯತೆ ಇದೆ.

ಅಧಿಕಾರಿಗಳ ನಿರ್ಲಕ್ಷ್ಯ: ಈಗಾಗಲೇ ಚಿಕ್ಕಮ್ಯಾಗೇರಿ ಗ್ರಾಮದಿಂದ ಬೂದಗುಂಪಾ ಗ್ರಾಮದವರೆಗೆ ರಸ್ತೆ ಡಾಂಬಾರಿಕರಣ ಕಾಮಗಾರಿ ಪೂರ್ಣಗೊಳ್ಳದೆ ಅಪೂರ್ಣಗೊಂಡಿದೆ. ಕೇವಲ ಅರ್ಧದಷ್ಟು ಡಾಂಬರೀಕರಣ ಮಾಡುವ ಮೂಲಕ ಇನ್ನೂ ಅರ್ಧದಷ್ಟು ಕಾಮಗಾರಿ ಅಪೂರ್ಣಗೊಂಡಿದೆ. ಹದಗೆಟ್ಟ ರಸ್ತೆಯಿಂದಾಗಿ ಸುತ್ತಮುತ್ತಲಿನ ಬೆಳೆಗಳು ಧೂಳಿನಿಂದ ಆವರಿಸುವುದರಿಂದ ಉತ್ತಮ ಇಳುವರಿ ಕೂಡ ಬರುತ್ತಿಲ್ಲ, ಯಲಬುರ್ಗಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ರಸ್ತೆಯಾಗಿರುವುದರಿಂದ ಅಧಿಕಾರಿಗಳು ದುರಸ್ತಿಗೊಳಿಸುವ ಗೋಜಿಗೆ ಹೋಗದೆ ಮೌನಕ್ಕೆ ಶರಣಾಗಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಕಲಬುರಗಿಯಲ್ಲೂ ನಡೆಯಲಿ ರಣಜಿ, ಐಪಿಎಲ್

ಕಲಬುರಗಿ: ರಾಜ್ಯ ರಾಜಧಾನಿ ಬೆಂಗಳೂರಿನಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿಯೂ ಅಂತರರಾಷ್ಟ್ರೀಯ ಮಟ್ಟದ ಸುಸಜ್ಜಿತ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣವಾಗಬೇಕು. ರಣಜಿ, ಐಪಿಎಲ್ ಹಾಗೂ ದೇಶಿಯ-ಅಂತರರಾಷ್ಟ್ರೀಯ ಪಂದ್ಯಗಳು ಕೇವಲ ಬೆಂಗಳೂರಿಗೆ ಸೀಮಿತ ವಾಗದೆ ಕಲಬುರಗಿಯಲ್ಲೂ ನಡೆಯಬೇಕು ಎಂದು ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ಮಾಲೀಕ ಡಾ.ಸೈಯದ್ ಮಹಮ್ಮದ್ ಅಲಿ ಅಲ್ ಹುಸೇನಿ ಹೇಳಿದರು.

ನಗರದ ಖಾಸಗಿ ಹೋಟೆಲ್ ನಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಹಾಗೂ ಗುಲ್ಬರ್ಗಾ ಮಿಸ್ಟಿಕ್ಸ್ ತಂಡದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಪ್ರೀಮಿಯರ್ ಲೀಗ್ ಸ್ಥಗಿತಗೊಂಡ ಕೆಲವು ವರ್ಷಗಳ ಬಳಿಕ ಇದೀಗ ಮಹಾರಾಜ ಟ್ರೋಫಿ ಪುನಾರಂಭಗೊಂಡಿದೆ. ಈ ವೇದಿಕೆಯನ್ನು ಬಳಸಿಕೊಂಡು ಕಲ್ಯಾಣ ಕರ್ನಾಟಕ ಭಾಗದಲ್ಲಿ ಕ್ರಿಕೆಟ್ ಅಭಿವೃದ್ಧಿಪಡಿಸಬೇಕು ಎಂದು ಒತ್ತಾಯಿಸಿದ ಅವರು, ಕ್ರಿಕೆಟ್ ಪ್ರೇಮಿಯಾಗಿದ್ದ ನಮ್ಮ ತಂದೆಯವರ ಆಸೆಯಂತೆ ನಾವು ಈ ಟೂರ್ನಿಯಲ್ಲಿ ಪಾಲ್ಗೊಂಡಿದ್ದೇವೆ. ನಮ್ಮ ತಂಡವು ಸಂಪೂರ್ಣ ರಾಯಚೂರು ಜೋನ್ ಪ್ರತಿನಿಧಿಸುತ್ತಿದ್ದು, ಉತ್ತರ ಕರ್ನಾಟಕದ ಯುವ ಪ್ರತಿಭೆಗಳಿಗೆ ಸೂಕ್ತ ಅವಕಾಶ ಕಲ್ಪಿಸುವುದೇ ನಮ್ಮ ಮುಖ್ಯ ಉದ್ದೇಶವಾಗಿದೆ ಎಂದರು.

ಈ ಭಾಗದಲ್ಲಿ ಕ್ರಿಕೆಟ್‌ಗೆ ಬೇಕಾದ ವಾತಾವರಣ, ಆಸಕ್ತಿ ಮತ್ತು ಪ್ರತಿಭೆಗಳ ಕೊರತೆಯಿಲ್ಲ, ಆದರೆ, ದೊಡ್ಡ ಮಟ್ಟದ ಪಂದ್ಯಾವಳಿಗಳ ಕೊರತೆಯಿಂದಾಗಿ ಅನೇಕ ಪ್ರತಿಭೆಗಳು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟಕ್ಕೆ ತಲುಪುವ ಮುನ್ನವೇ ಹಿಂದೆ ಸರಿಯುವ ಪರಿಸ್ಥಿತಿ ಇದೆ. ಇಲ್ಲಿ ಪಂದ್ಯಗಳನ್ನು ಆಯೋಜಿಸಿದರೆ ಈ ಭಾಗದ ಯುವಕರಿಗೆ ನೇರ ಪ್ರೇರಣೆ ದೊರೆಯಲಿದೆ ಜತೆಗೆ ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ಸಿಗಲಿದೆ ಎಂದು ಅಭಿಪ್ರಾಯಪಟ್ಟರು.

ರಾಯಚೂರು ವಲಯ ಸಂಯೋಜಕ ಕುಶಾಲ್ ಪಾಟೀಲ್, ತಂಡದ ಮೆಂಟರ್ ಬಾಲಚಂದ್ರ ಅಖಿಲ್ ಮಾತನಾಡಿದರು. ಸಹ ಮಾಲಿಕರಾದ ಸಯ್ಯದ್ ಮುಸ್ತಫ ಅಲ್ ಹುಸೇನಿ, ನಿಕ್ ಮೈಕಲ್ ಜೋಸೆಫ್, ಮಹೇಶ್ ಹರಿಹರನ್ ಹಾಗೂ ಡೈರೆಕ್ಟರ್ ಮೀರ್ ರಾಫುದ್ದಿನ್ ಅಲಿ ಖಾನ್ ಉಪಸ್ಥಿತರಿದ್ದರು.



ವಸತಿ ಗೃಹಗಳನ್ನು ಸ್ವಂತ ಮನೆಗಳಂತೆ ಪರಿಗಣಿಸಿ

ಹನುಮಸಾಗರ: ಪೊಲೀಸ್ ಇಲಾಖೆಯ ವಸತಿ ಗೃಹಗಳನ್ನು ತಮ್ಮ ಸ್ವಂತ ಮನೆಗಳಂತೆ ಪರಿಗಣಿಸಿ ಸ್ವಚ್ಛವಾಗಿ ಕಾಪಾಡಿಕೊಳ್ಳಬೇಕು ಎಂದು ಶಾಸಕ ದೊಡ್ಡನಗೌಡ ಪಾಟೀಲ ತಿಳಿಸಿದರು.

ಪಟ್ಟಣದಲ್ಲಿ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವತಿಯಿಂದ 3.66 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ 12 ನೂತನ ಪೊಲೀಸ್ ವಸತಿ ಗೃಹಗಳ ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ನಂತರ ಪೊಲೀಸ್ ಸಿಬ್ಬಂದಿ ಜನಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ ಉತ್ತಮ ಗುಣಮಟ್ಟದ ವಸತಿ ಸೌಲಭ್ಯ ಕಲ್ಪಿಸುವುದು ಅಗತ್ಯವಾಗಿದೆ. ಅಧಿಕಾರಿಗಳಾಗಲಿ ಅಥವಾ ಜನಪ್ರತಿನಿಧಿಗಳಾಗಲಿ ಜನರ ವಿಶ್ವಾಸಗಳಿಸುವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಮುಂದಿನ ದಿನಗಳಲ್ಲಿ ಕುಷ್ಟಗಿ ಪಟ್ಟಣದಲ್ಲಿ ಪೊಲೀಸ್ ಅತಿಥಿ ಗೃಹ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಎಲ್.ಅರಸಿದ್ದಿ ಮಾತನಾಡಿ, ಇಲಾಖೆಗೆ ಅಗತ್ಯವಿರುವ ಹಲವು ಸೌಲಭ್ಯಗಳು ಈಗಾಗಲೇ ದೊರೆತಿದ್ದು, ಕುಷ್ಟಗಿ ಹಾಗೂ ತಾವರಗೇರಾ ಭಾಗಗಳಲ್ಲಿ ಇನ್ನಷ್ಟು ಮೂಲಸೌಲಭ್ಯಗಳ ಅಗತ್ಯವಿದೆ ಎಂದು ಹೇಳಿದರು.

ಶೀಘ್ರದಲ್ಲೇ 112 ತುರ್ತು ಸೇವಾ ವಾಹನಗಳು ಹಾಗೂ ಸಿಸಿ ಕ್ಯಾಮೆರಾ ವ್ಯವಸ್ಥೆಗಳನ್ನು ಕಾರ್ಯಾರಂಭಗೊಳಿಸಲಾಗುವುದು. ಇದರಿಂದ ಸಾರ್ವಜನಿಕರ ಭದ್ರತೆ ಮತ್ತು ಕಾನೂನು ಸುವ್ಯವಸ್ಥೆ ನಿರ್ವಹಣೆಗೆ ಹೆಚ್ಚಿನ ನೆರವು ದೊರೆಯಲಿದೆ ಎಂದು ತಿಳಿಸಿದರು.

ಪೊಲೀಸ್ ಇಲಾಖೆಗೆ ಅಗತ್ಯ ವಾಹನಗಳು, ವಸತಿ ಗೃಹಗಳು ಹಾಗೂ ಇತರ ಮೂಲ ಸೌಲಭ್ಯಗಳನ್ನು ಇನ್ನಷ್ಟು ಹೆಚ್ಚಿಸುವ ಅಗತ್ಯವಿದ್ದು, ಈ ಕುರಿತು ಸರ್ಕಾರದ ಗಮನ ಸೆಳೆಯಲಾಗುವುದು ಎಂದು ಹೇಳಿದರು.

ಹೆಚ್ಚುವರಿಎಸ್‌ಪಿಆರ್.ಹೇಮಂತಕುಮಾರ, ಸಿಪಿಐ ವಿಶ್ವನಾಥ ಹಿರೇಗೌಡರ, ಪಿಎಸ್‌ಐಗಳಾದ ಧನಂಜಯ ಎ., ಬಸಪ್ಪ ಎಲ್.ಟಿ., ಪೊಲೀಸ್ ವಸತಿ ನಿಲಯದ ಎಂಜಿನಿಯರ್ ವೀರಭದ್ರಪ್ಪ, ಎಎಸ್‌ಐಗಳಾದ ಶಿವಕುಮಾರ ಹಿರೇಮಠ, ಬಸನಗೌಡ ಪಾಟೀಲ, ಶಂಕರ ಮೇಟಿ, ಮುಖಂಡರಾದ ಬಸವರಾಜ ಹಳ್ಳೂರು, ವಿಶ್ವನಾಥ ನಾಗೂರ, ರುದ್ರಗೌಡ ಗೌಡಪ್ಪನವರ, ಮಲ್ಲಣ್ಣ ಪಲ್ಲೇದ, ಚಂದ್ರಶೇಖರ ಬೆಳಗಲ್, ನಾಗರಾಜ ಹಕ್ಕಿ, ಬಸವರಾಜ ದ್ಯಾವಣ್ಣನವರ ಇತರರಿದ್ದರು. ಸಂಗೀತ ಶಿಕ್ಷಕ ಗ್ಯಾನಪ್ಪ ತಳವಾರ ನಿರೂಪಿಸಿದರು.



ನೈಜತೆ ವರದಿಗೆ ಆದ್ಯತೆ ನೀಡಿ: ಇಟಗಿ



ಯಲಬುರ್ಗಾ: ಯಾವುದೇ ಸಮಸ್ಯೆಗಳ ವರದಿಗಳು ನೈಜ ಮತ್ತು ಸ್ಪಷ್ಟತೆಯಿಂದ ಸಮಾಜಕ್ಕೆ ಒಳಿತಾಗುವಂತಹ ರೀತಿಯಲ್ಲಿದ್ದಾಗ ಪತ್ರಕರ್ತರ ಬರವಣಿಗೆಗೆ ಹೆಚ್ಚು ಮೌಲ್ಯ ತರುತ್ತೇವೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ತಾಲೂಕಾಧ್ಯಕ್ಷ ಶಿವಮೂರ್ತಿ ಇಟಗಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ತಾಲೂಕಾ ಘಟಕಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ ಮಾಡಿ ಮಾತನಾಡಿದ ಅವರು, ನಾವುಗಳು ಎಷ್ಟೇ ಹಿರಿಯರಿರಲಿ, ಕಿರಿಯರಿರಲಿ ಅದು ಮುಖ್ಯವಲ್ಲ, ಆದರೆ ನಮ್ಮ ಲೇಖನ, ವರದಿಗಳು ಸಮಾಜಮುಖಿಯಗಿ ನಮ್ಮನ್ನು ಗುರುತಿಸುವಂತಾಗಬೇಕು ಎಂದರು.

ಸರ್ಕಾರದಿಂದ ಪತ್ರಕರ್ತರರಿಗೆ ನ್ಯಾಯಯುತವಾಗಿ ಸಿಗಬೇಕಾದ ಅನೇಕ ಸೌಲಭ್ಯಗಳನ್ನು ದೊರಕಿಸಿ ಕೊಡುವಲ್ಲಿ ಕಕಾನಿಪ ಧ್ವನಿ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಂಗ್ಲೆ ಅವರು ಅವಿರತ ಹೋರಾಟದ ಪ್ರತಿಫಲವಾಗಿ ದೊರೆಯುತ್ತಿವೆ. ನಾವುಗಳು ಒಗ್ಗಟ್ಟಿನಿಂದ ಸಂಘದ ನಿಯಮಗಳಿಗೆ ಬದ್ಧರಾಗಿ ರಾಜ್ಯಾಧ್ಯಕ್ಷರ ಹೋರಾಟಕ್ಕೆ ಸದಾ ಬೆಂಬಲವಾಗಿ ಅವರೊಂದಿಗೆ ಇರುವ ಜತೆಗೆ ಸಂಘವನ್ನು ಮತ್ತಷ್ಟು ಗಟ್ಟಿಗೊಳಿಸುವ ಕಾರ್ಯಕ್ಕೆ ಮುಂದಗೋಣ ಎಂದು ಹೇಳಿದರು.

ಕಕಾನಿಪ ಧ್ವನಿ ಸಂಘದ ಅಧ್ಯಕ್ಷರ ಸಮ್ಮುಖದಲ್ಲಿ ಪತ್ರಕರ್ತೆ ಯಲ್ಲಮ್ಮ ರಾಠೋಡ ಅವರು ಸದಸ್ಯರಾಗಿ ಸೇರ್ಪಡೆಗೊಂಡರು.

ನೂತನ ಪದಾಧಿಕಾರಿಗಳ ನೇಮಕ: ಶಿವಮೂರ್ತಿ ಇಟಗಿ(ಅಧ್ಯಕ್ಷ), ಶರಣಬಸಪ್ಪ ದಾನಕೈ (ಗೌರವಾಧ್ಯಕ್ಷ), ವಿ.ಎಸ್.ಶಿವಪ್ಪಯ್ಯನಮಠ(ಪ್ರಧಾನ ಕಾರ್ಯದರ್ಶಿ), ಸಿ.ಎ.ಆದಿ ಹಾಗೂ ದೇವರಾಜ ದೊಡ್ಡಮನಿ (ಉಪಾಧ್ಯಕ್ಷರು), ಶಶಿಧರ ಹೊಸ್ಮನಿ (ಖಜಾಂಚಿ), ಮೌನೇಶ ಮದ್ಲೂರ (ಸಂಘಟನಾ ಕಾರ್ಯದರ್ಶಿ), ಕಳಕೇಶ ಬೇವಿನಗಿಡದ ಮತ್ತು ಶರಣಪ್ಪ ಆಡೀನ್(ಸಹ ಕಾರ್ಯದರ್ಶಿಗಳು), ಈರಣ್ಣ ತೋಟದ, ಯಲ್ಲಮ್ಮ ರಾಠೋಡ ಅವರನ್ನು ಕಾರ್ಯಕಾರಿಣಿ ಸಮಿತಿಯ ಸದಸ್ಯರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾಳಗಿ, ಚಿತ್ತಾಪುರಕ್ಕೆ ಜಿಲ್ಲಾಧಿಕಾರಿ ಭೇಟಿ

ಕಲಬುರಗಿ: ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರು ಮಂಗಳವಾರ ಜಿಲ್ಲೆಯ ಕಾಳಗಿ ಮತ್ತು ಚಿತ್ತಾಪುರ ತಾಲೂಕಿಗೆ ಭೇಟಿ ನೀಡಿ ಐತಿಹಾಸಿಕ ದೇವಸ್ಥಾನ, ಸ್ಮಾರಕಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಕಾರ್ಯಗಳ ಕುರಿತು ಖುದ್ದಾಗಿ ಪರಿಶೀಲಿಸಿದರು.

ಮೊದಲು ಕಾಳಗಿ ಪಟ್ಟಣದ ಕಾಳೇಶ್ವರ ದೇವಸ್ಥಾನ ಪಕ್ಕದಲ್ಲಿನ ಅನಂತ ಪದ್ಮನಾಭ ಪುಷ್ಕರಣಿ ವೀಕ್ಷಿಸಿದ ಅವರು ನಂತರ ಸುಮಾರು 4.17 ಕೋಟಿ ರೂ. ಕೆಕೆಆರ್‌ಡಿಬಿ ಅನುದಾನದಡಿ ಪುನರ್ ನಿರ್ಮಾಣ ಕಾರ್ಯ ನಡೆಯುತ್ತಿರುವ ಸೂರ್ಯನಾರಾಯಣ ದೇವಸ್ಥಾನಕ್ಕೆ ಭೇಟಿ ನೀಡಿ ಅಲ್ಲಿ ಡಿಸ್ಮೆಂಟಲ್ ಕಾರ್ಯ ಪರಿಶೀಲಿಸಿದರು.

ಸ್ಥಳೀಯ ಮುಖಂಡರಾದ ರಾಜೇಶ ಗುತ್ತೇದಾರ ಮತ್ತು ಸಂತೋಷ ಪತಂಗೆ ಅವರು ಡಿಸಿ ಅವರಿಗೆ ಸ್ಥಳೀಯ ಐತಿಹಾಸಿಕ ದೇವಸ್ಥಾನಗಳ ಅಭಿವೃದ್ಧಿ ಗೊಳಿಸುವಂತೆ ಮನವಿ ಮಾಡಿದರು. ಕಾಳಗಿ ಪ್ರವಾಸದ ನಂತರ ಐತಿಹಾಸಿಕ ನಾಗಾವಿ ನಾಡು ಚಿತ್ತಾಪುರಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಪಟ್ಟಣದ ನಾಗಾವಿ ಯಲ್ಲಮ್ಮ ದೇವಸ್ಥಾನಕ್ಕೆ ತೆರಳಿ ಪೂಜೆ ಮಾಡಿ ತಾಯಿಯ ದರ್ಶನ ಪಡೆದರು. ಕೆಕೆಆರ್‌ಡಿಬಿ ಅನುದಾನದಲ್ಲಿ ಸುಮಾರು 6.25 ಕೋಟಿ ರೂ. ವೆಚ್ಚದಲ್ಲಿ ನಾಗಾವಿ ದೇವಸ್ಥಾನ, ನಂದೇಶ್ವರ ದೇವಸ್ಥಾನ, ಸಂಜೀವಿನಿ ಆಂಜನೇಯ ದೇವಸ್ಥಾನ, ಕಾಲಿ ಮಸೀದಿ ಸೇರಿದಂತೆ ಒಟ್ಟು 13 ಸ್ಮಾರಕಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಕಾರ್ಯದ ಬ್ಲೂಪ್ರಿಂಟ್ ವೀಕ್ಷಿಸಿ ವಾಸ್ತುಶಿಲ್ಪಿಗಳಿಂದ ಸಂರಕ್ಷಣಾ ಕಾರ್ಯದ ಕುರಿತು ಸಮಗ್ರ ಮಾಹಿತಿ ಪಡೆದುಕೊಂಡರು. ಕಲಬುರಗಿ ಉಪ ವಿಭಾಗದ ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ, ಸೇಡಂ ಉಪ ವಿಭಾಗದ ಸಹಾಯಕ ಆಯುಕ್ತ ಪ್ರಭುರೆಡ್ಡಿ, ಕರ್ನಾಟಕ ಪುರಾತತ್ವ ಸಂಗ್ರಹಾಲಯಗಳ ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕಿ ಮಂಜುಳಾ, ಸಹಾಯಕ ನಿರ್ದೇಶಕ ರಾಜಾರಾಮ್, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕಿ ಬೇಬಿ ಮೊಗೇರ್, ಕಾಳಗಿ ತಹಶೀಲ್ದಾರ್ ಪೃಥ್ವಿರಾಜ, ಚಿತ್ತಾಪುರ ತಹಶೀಲ್ದಾರ್ ನಾಗಯ್ಯ ಹಿರೇಮಠ ಇತರರಿದ್ದರು.



ನೀರಿನ ಮೂಲಗಳ ಸ್ವಚ್ಛತೆಗೆ ಕ್ರಮ ಕೈಗೊಳ್ಳಿ: ಜಿಪಂ ಸಿಇಒ

ಕೊಪ್ಪಳ: ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿನ ನೀರು ಸಂಗ್ರಹ ಮತ್ತು ನೀರಿನ ಮೂಲಗಳ ಸ್ವಚ್ಛತೆಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಜಿಪಂ ಸಿಇಒ ವರ್ಣಿತ್ ನೇಗಿ ಅವರು ಸಂಬಧಿಂಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕೊಪ್ಪಳ ವಿಭಾಗದ ಕಾರ್ಯಪಾಲಕ ಅಭಿಯಂತರರ ಕಛೇರಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ (ಡಿಡಬ್ಲ್ಯೂಎಸ್‌ಎಂ) ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ ಮಳೆಗಾಲ ಆರಂಭವಾಗಿದ್ದು, ಈ ಅವಧಿಯಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸಂಭವ ಹೆಚ್ಚಿರುತ್ತದೆ. ಹಾಗಾಗಿ ನೀರಿನ ಮೂಲಗಳ ಸ್ವಚ್ಛ ಮತ್ತು ಶುಚಿತ್ವ ಕಾಪಾಡಿಕೊಳ್ಳಬೇಕು. ಜಿಲ್ಲಾದ್ಯಂತ ಎಲ್ಲ ಹಳ್ಳಿಗಳಲ್ಲಿನ ಕುಡಿಯುವ ನೀರಿನ ಸಂಗ್ರಹಣೆ ಮೂಲಗಳಾದ ಓಎಚ್‌ಟಿ ಟ್ಯಾಂಕ್, ಸಣ್ಣ ನೀರಿನ ಟ್ಯಾಂಕ್ ಸೇರಿದಂತೆ ಇತರ ಕುಡಿಯುವ ನೀರು ಸಂಗ್ರಹಗಳ ಸ್ವಚ್ಛತೆಗೆ ಒತ್ತು ಕೊಡಬೇಕು. ಯಾವುದೇ ಪೈಪ್ ಲೈನ್ ಹೊಡೆದು ಹೋಗಿದ್ದಲ್ಲಿ ಅದನ್ನು ಸರಿಪಡಿಸಲು ಕೂಡಲೇ ಕ್ರಮಕೈಗೊಳ್ಳಬೇಕು. ಬೋರ್‌ವೆಲ್‌ಗಳಲ್ಲಿ ಅಥವಾ ನೀರು ಪೂರೈಕೆ ಪೈಪ್‌ಗಳಲ್ಲಿ ಕಲುಷಿತ ನೀರು ಸೇರಿದಂತೆ ನೋಡಿಕೊಳ್ಳಬೇಕು. ಕುಡಿಯುವ ನೀರನ್ನು ಕಡ್ಡಾಯವಾಗಿ ಪರೀಕ್ಷಿಸಿದ ಬಳಿಕವೇ ಪೂರೈಸಲು ಕ್ರಮ ವಹಿಸಬೇಕು. ಪರೀಕ್ಷೆಯಲ್ಲಿ ನೀರು ಕುಡಿಯಲು ಯೋಗ್ಯವಿಲ್ಲವೆಂದು ಕಂಡುಬಂದಲ್ಲಿ ತಕ್ಷಣ ಅಂತಹ ನೀರು ಪೂರೈಕೆಯನ್ನು ತಡೆಯಲು ತ್ವರಿತ ಕ್ರಮವಹಿಸಬೇಕು ಎಂದರು.

ಜಿಲ್ಲೆಯಲ್ಲಿ ಯಾವುದೇ ರೀತಿಯ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ನೋಡಿಕೊಂಡು, ಸಮರ್ಪಕವಾಗಿ ನೀರು ಸರಬರಾಜು ಮಾಡಬೇಕು ಎಂದು ಸೂಚಿಸಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕೊಪ್ಪಳ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಮಹೇಶ ಶಾಸ್ತ್ರೀ ಸೇರಿದಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವಿವಿಧ ವಿಭಾಗಗಳ ಎಇಇಗಳು, ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ (ಡಿಡಬ್ಲ್ಯೂಎಸ್‌ಎಂ) ಸಮಿತಿಯ ಸದಸ್ಯರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ಜಲ ಜೀವನ್ ಮಿಷನ್ ಯೋಜನೆಯಡಿ ಪ್ರತಿ ಮನೆಗೆ ನಳದ ಸಂಪರ್ಕ ಕಲ್ಪಿಸುವ ನೀರು ಪೂರೈಕೆ ಮಾಡಲಾಗುತ್ತದೆ. ವಿವಿಧ ತಾಂತ್ರಿಕ ಕಾರಣಗಳಿಂದ ಕಾಮಗಾರಿ ಅಪೂರ್ಣಗೊಂಡಿದ್ದಲ್ಲಿ ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ವಹಿಸಿ.

■ ವರ್ಣಿತ್ ನೇಗಿ, ಜಿಪಂ ಸಿಇಒ

ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿಗೆ ಸೂಚನೆ

ಕುಷ್ಟಗಿ: ತಾಲೂಕಿನಲ್ಲಿ 167 ಶುದ್ಧ ಕುಡಿಯುವ ನೀರಿನ ಘಟಕಗಳು ಇದ್ದು, ಅದರಲ್ಲಿ 97 ಮಾತ್ರ ಕಾರ್ಯನಿರ್ವಹಿಸುತ್ತವೆ. ಇನ್ನು 57 ದುರಸ್ತಿಗೆ ಬಂದಿದ್ದು ಇದರಲ್ಲಿ ಈಗಾಗಲೇ 21 ಶುದ್ಧ ಕುಡಿಯುವ ನೀರಿನ ಘಟಕಗಳ ರಿಪೇರಿ ಮತ್ತು ದುರಸ್ತಿಗೆ ಮೂರು ತಿಂಗಳುಗಳ ಹಿಂದೆಯೇ ಅನುಮತಿ ನೀಡಲಾಗಿದೆ. ಆದರೂ ಸಹ ಇಲ್ಲಿವರೆಗೂ ದುರಸ್ತಿ ಕೈಗೊಳ್ಳದ ಹಿನ್ನೆಲೆಯಲ್ಲಿ ಕಾರಣ ಕೇಳಿ ನೋಟಿಸ್ ಜಾರಿ ಮಾಡುತ್ತೇವೆ ಎಂದು ಜಿಪಂ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಮಂಗಳವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡವಂತೆ ತಾಪಂ ಸಿಬ್ಬಂದಿಗೆ ಸೂಚಿಸಿದರು.

ತಾಲೂಕಿನ ವಿವಿಧ ಗ್ರಾಪಂ ವ್ಯಾಪ್ತಿಯಲ್ಲಿ 21 ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ದುರಸ್ತಿಗೆ ಕೈಗೊಳ್ಳಬೇಕಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ಇಲ್ಲಿಯವರೆಗೂ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ದುರಸ್ತಿ ಮಾಡುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ, ದುರಸ್ತಿಯ ಬಗ್ಗೆ ಪಿಡಿಓಗಳಿಗೆ ಮಾಹಿತಿ ಇಲ್ಲ, ಸುಳ್ಳು ಹೇಳಬಾರದು. 167 ಆರ್‌ಒ ಘಟಕಗಳಿದ್ದು, 96 ಕಾರ್ಯನಿರ್ವಹಿಸುತ್ತಿವೆ. 21 ಘಟಕಗಳ ದುರಸ್ತಿ ಕಾಮಗಾರಿ ನಡೆಯುತ್ತಿದ್ದು, ಸುಮಾರು 75.5 ಲಕ್ಷ ವೆಚ್ಚದಲ್ಲಿ ದುರಸ್ತಿ ಕಾರ್ಯಗಳು ನೀಡಲಾಗಿದೆ. ಸಮರ್ಪಕವಾಗಿ ಕಾರ್ಯನಿರ್ವಹಿಸದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಸಭೆಯಲ್ಲಿ ತಾಪಂ ಇಒ ಅಮರೇಶ ಯಾದವ್ ಅವರಿಗೆ ಸೂಚಿಸಿದರು.

ಜೆಜೆಎಂ ಜೆಇ ಯಾಸೀನ್ ಮಾತನಾಡಿ, ಜಲ ಜೀವನ ಮಿಷನ್ (ಜೆಜೆಎಂ) ಯೋಜನೆಯ ತಾಲೂಕಿನ 161 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಪ್ರತಿಕ್ರಿಯಿಸಿದ ಪಿಡಿಓಗಳು ಗೊಣ್ಣಾಗರ, ಸೇಬಿನಕಟ್ಟಿ ಸೇರಿದಂತೆ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಾಗಿ ಹೇಳಿದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ನಾಗರಾಜ ಕಾತರಕಿ ಮಾತನಾಡಿ, ತಾಲೂಕಿನಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ತೊಗರಿ ಹಾಗೂ ಮೆಕ್ಕೆಜೋಳ ಬೆಳೆಗಳ ಬಿತ್ತನೆ ಹೆಚ್ಚಾಗಿದ್ದು, ರೈತರಿಗೆ ಬೀಜ ಹಾಗೂ ಗೊಬ್ಬರದ ಕೊರತೆ ಇಲ್ಲ ಎಂದರು.

ತಾಲೂಕು ಆರೋಗ್ಯ ಅಧಿಕಾರಿ ಡಾ.ಆನಂದ ಗೋಟೂರು, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಬಸಾಪುರ, ಜಿಪಂ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ ಮಾತನಾಡಿದರು.

ತಾಲೂಕಾ ಸಮಾಜ ಕಲ್ಯಾಣ ಅಧಿಕಾರಿ ತುಗ್ಗಲಪ್ಪ ದೇಸಾಯಿ, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಬಸವರಾಜ ನೆಲಗಣಿ, ಕೆಇಬಿ ಎಇಇ ಕೆಂಚಪ್ಪ ಭಾವಿಮನಿ, ಸಿಡಿಪಿಓ ಯಲ್ಲಮ್ಮ ಹಂಡಿ, ಪಂಚಾಯತ ರಾಜ್ಯ ಇಲಾಖೆಯ ಧರಣೇಂದ್ರಕುಮಾರ, ರಾಜಶೇಖರಗೌಡ, ಭೂಸೇನಾ ನಿಗಮದ ಜೆಇ ಇರ್ಫಾನ್ ಇತರರಿದ್ದರು.



ಕಿರುಸುದ್ದಿ

ಡಾ.ಅಂಬೇಡ್ಕರ್ ವಸತಿ ಶಾಲೆ ಪ್ರಾರಂಭ: ಸಂತಸ



ಬಳ್ಳಾರಿ: ನಗರದ ಮಯೂರ ಹೋಟೆಲ್ ಹಿಂಭಾಗದ ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ನಡೆಸಲಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಮಂಗಳವಾರ ಪ್ರಾರಂಭಿಸಿದ್ದು, ಮಕ್ಕಳು, ಪಾಲಕರು ಸಂತಸ ವ್ಯಕ್ತಪಡಿಸಿದರು. ಶಾಲಾ ಕಾಲೇಜುಗಳು ಪ್ರಾರಂಭಗೊಂಡು 17 ದಿನ ಕಳೆದಿದ್ದರೂ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯನ್ನು ಪ್ರಾರಂಭಿಸಿರಲಿಲ್ಲ. ಈ ಕುರಿತು ಸಾಮಾಜಿಕ ಕಾರ್ಯಕರ್ತ, ಸಿದ್ದೇಶ್ ಉಳುರ್ ಅವರ ನೇತೃತ್ವದಲ್ಲಿ ಸೋಮವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿತ್ತು. ಎಚ್ಚೆತ್ತ ಇಲಾಖೆ ಶಾಲೆಯನ್ನು ಪ್ರಾರಂಭಿಸಿ, ಮಕ್ಕಳಿಗೆ ಶುಚಿಯಾದ ಊಟ ಬಡಿಸಿದರು. ವಸತಿ ಶಾಲೆ ವಾರ್ಡನ್ ಅರುಣ್ ಅವರನ್ನು ಬದಲಿಸಿ, ಶಿಕ್ಷಕಿ ಕವಿತಾ ಅವರಿಗೆ ಪ್ರಭಾರ ವಹಿಸಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಜಿಲ್ಲಾಡಳಿತದ ಕ್ರಮದ ಬಗ್ಗೆ ಸಾಮಾಜಿಕ ಹೋರಾಟಗಾರರು ಸಂತಸ ವ್ಯಕ್ತಪಡಿಸಿದ್ದಾರೆ.

ಕಾಮಗಾರಿ ಸ್ಥಳಕ್ಕೆ ಮೇಯರ್ ಪಿ.ಗಾದೆಪ್ಪ ಭೇಟಿ



ಬಳ್ಳಾರಿ: ಮಹಾನಗರ ಪಾಲಿಕೆಯ 23ನೇ ವಾರ್ಡ್ ವ್ಯಾಪ್ತಿಯ ಕನ್ನಡ ನಗರ, ಅಂಬೇಡ್ಕರ್ ನಗರ, ಬೀಚಿನಗರ ಹಾಗೂ ಕಪಗಲ್ ರಸ್ತೆ ಸೇರಿದಂತೆ ವಿವಿಧ ಕಡೆ ಕೈಗೆತ್ತಿಕೊಂಡ ರಸ್ತೆ ಮತ್ತು ಒಳಚರಂಡಿ ಕಾಮಗಾರಿ ಸ್ಥಳಕ್ಕೆ ಮೇಯರ್ ಪಿ.ಗಾದೆಪ್ಪ ಅವರು ಭೇಟಿ ನೀಡಿ, ಪರಿಶೀಲಿಸಿದರು.ಎಲ್ಲ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ನಿಗದಿತ ಅವಧಿಯಲ್ಲೇ ಎಲ್ಲ ಕಾಮಗಾರಿಗಳು ಪೂರ್ಣಗೊಳ್ಳಬೇಕು, ಕಳಪೆಯಾಗಿರುವುದು ಸಾರ್ವಜನಿಕರಿಂದ ದೂರುಗಳು ಬಂದರೆ ಮುಲಾಜಿಲ್ಲದೇ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಥಳದಲ್ಲಿದ್ದ ಪಾಲಿಕೆ ಅಧಿಕಾರಿಗಳು, ಗುತ್ತಿಗೆದಾರರಿಗೆ ಮೇಯರ್ ಪಿ.ಗಾದೆಪ್ಪ ಅವರು ಖಡಕ್ ಸೂಚನೆ ನೀಡಿದರು.ನಮ್ಮ ಉದ್ದೇಶ ನಗರ ಸುಂದರವಾಗಿರಬೇಕು, ಸ್ವಚ್ಛವಾಗಿರಬೇಕು, ಅಭಿವೃದ್ಧಿ ವಿಚಾರದಲ್ಲಿ ಯಾವುದೇ ಮೂಲಜಿಯೇ ಇಲ್ಲ, ನಮ್ಮ ಬಳ್ಳಾರಿಯ ಜನರು ನಮ್ಮ ಮೇಲೆ ವಿಶ್ವಾಸವಿಟ್ಟು, ಈ ಸ್ಥಾನಕ್ಕೆ ಕೂಡಿಸಿದ್ದಾರೆ, ನನ್ನ ಬಳ್ಳಾರಿ ಜನರ ನಿರೀಕ್ಷೆಯಂತೆ, ಅವರ ಕನಸಿನಂತೆ ನಮ್ಮ ನಗರ ಅಭಿವೃದ್ಧಿ ಯಾಗಬೇಕು. ಸ್ವಚ್ಛ, ಸುಂದರ ನಗರವಾಗಬೇಕು ಎನ್ನುವ ಕನಸು ನನ್ನದು ಎಂದರು. ಪಾಲಿಕೆ ಅಧಿಕಾರಿಗಳು, ವಿವಿಧ ಮುಖಂಡರು ಇದ್ದರು.

ಅರ್ಜಿ ಆಹ್ವಾನ

ವಿಜಯನಗರ: ಪ್ರಸಕ್ತ ಶೈಕ್ಷಣಿಕ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಬಾಲಕ ಬಾಕಿಯರ ವಿದ್ಯಾರ್ಥಿ ನಿಲಯಗಳಲ್ಲಿ 6 ರಿಂದ 10ನೇ ತರಗತಿಗೆ ಹಾಗೂ ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪಿಯುಸಿ, ಡಿಪ್ಲೊಮ, ಐಟಿಐ ಕೋರ್ಸ್ ಖಾಲಿ ಇರುವ ಸ್ಥಾನಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಜೂನ್ 15 ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಜೂನ್ 30 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಖಾಲಿ ಇರುವ ಸ್ಥಾನಗಳಿಗೆ ಅರ್ಜಿ ಸಲ್ಲಿಸಲು ಇಲಾಖೆಯ ಜಾಲತಾಣ http://shp.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ http://dom.karnataka.gov.inನ್ನು ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ಅಮರೇಶ್ ಗೌಡ

ಕುರುಗೋಡು: ಸಮೀಪದ ಶಿರಿಗೇರಿ ಗ್ರಾಮದ ನಿವಾಸಿಯಾದ ವಲ್ಲೂರು ಅಮರೇಶ್ ಗೌಡ (70) ನಿಧನರಾಗಿದ್ದಾರೆ. ಇಬ್ಬರು ಪುತ್ರಿಯರು, ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.





ಬಳ್ಳಾರಿ: ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಎಸ್. ಆಂಜನೇಯಲೂ ಅವರು, ಸಿಎಂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ನೂತನ ಸರ್ಕಾರದ, ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಸಚಿವ ಎಂ.ಬಿ.ಪಾಟೀಲ ಅವರನ್ನು ಭೇಟಿ ಮಾಡಿ ಹೂ ಗುಚ್ಛ ನೀಡಿ ಅಭಿನಂದಿಸಿದರು.

ಯುವ ತಲೆಮಾರು ಸದೃಢರಾಗಲಿ: ಅಶುತೋಷ್

ಕೂಡ್ಲಿಗಿ: ಯುವ ಶಕ್ತಿ ದುಶ್ಚಟಗಳ ದಾಸರಾಗದೇ ಸದೃಢ ದೇಹ ಹೊಂದಬೇಕು. ಆರೋಗ್ಯಪೂರ್ಣ ಜೀವನ ಹಾಗೆ ದೇಶದ ಅಭಿವೃದ್ಧಿಗೆ ದೇಹ ಮತ್ತು ಮನಸ್ಸಿನ ಸದೃಢತೆ ಅನಿವಾರ್ಯ ಎಂದು ಸೈಕಲಿಸ್ಟ್ ಬಿಹಾರಿ ಮೂಲದ ಅಶುತೋಷ್ ಹೇಳಿದರು.

ಪಟ್ಟಣದ ದೇಶ ಪ್ರೇಮಿಗಳಿಂದ ಸ್ವಾಗತ ಮತ್ತು ಆತಿಥ್ಯವನ್ನು ಸ್ವೀಕರಿಸಿ ಹೊರಡುವ ಮುನ್ನ ಸಮಾನ ಮನಸ್ಕರನ್ನು ಉದ್ದೇಶಿಸಿ ಮಾತನಾಡಿದರು.

ದೇಶ ಸಧೃಢವಾಗಬೇಕಾದರೆ ಮೊದಲು ನಮ್ಮ ದೇಹ ಸಧೃಡವಾಗಬೇಕು. ಎಲ್ಲರೂ ಉತ್ತಮ ಹವ್ಯಾಸಗಳನ್ನು, ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳಬೇಕು. ಇದು ನಮ್ಮ ಆರೋಗ್ಯಕ್ಕೆ ಪೂರಕವಾಗಿರುತ್ತದೆ. ಸ್ವಸ್ಥ ಶರೀರ ಸ್ವಸ್ಥ ದೇಶ. ಇದನ್ನು ಎಲ್ಲರಿಗೂ ಮನವರಿಕೆ ಮಾಡಬೇಕು ಎಂಬ ಉದ್ದೇಶದಿಂದ ದೇಶವನ್ನು ಸುತ್ತುತ್ತಿದ್ದೇನೆ. ಈ ವರ್ಷಪೂರ್ತಿ ಇದನ್ನೇ ಜಾಗೃತಿ ಮೂಡಿಸಲಿರುವೆ ಎಂದರು.

ಹೊಸಹಳ್ಳಿಯ ಎಎಸ್ಐ ಗುರುಬಸವರಾಜ್ ಎಚ್.ಎಂ. ಮಾತನಾಡಿ, ಇವರ ಉದ್ದೇಶ ಅತ್ಯಮೂಲ್ಯ. ಅದನ್ನರಿತು ವಿಶೇಷವಾಗಿ ನಮ್ಮ ಯುವ ಶಕ್ತಿ ಉತ್ತಮ ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ಆಗಷ್ಟೇ ನಮ್ಮ ದೇಹ ಹಾಗೂ ದೇಶ ಸದೃಢವಾಗುತ್ತದೆ ಎಂದರು. ಐಸ್ ಫ್ಯಾಕ್ಟರಿ ಬಾಬಣ್ಣ, ಸ್ವರೂಪ್ ಕೊಟ್ಟೂರು, ವೆಂಕಟೇಶ್, ಆಕಾಶ್ ಜಿ, ಉಮೇಶ್, ಮಂಜುನಾಥ, ಇಡ್ಲಿ ಬಾಲು, ಹೋಟೆಲ್ ಶಂಕರ್, ಶಶಿಧರ ತರರಿದ್ದರು. ಕಳೆದ ಐದು ತಿಂಗಳಿಂದ ಫಿಟ್ ಇಂಡಿಯಾ ಆಶಯ ಹೊತ್ತು ದೇಶದ ಉದ್ದಗಲಕ್ಕೂ ಸೈಕಲ್‌ನಲ್ಲೇ ಸಂಚರಿಸುತ್ತಾ ಇವರು ಕೂಡ್ಲಿಗಿಗೂ ಆಗಮಿಸಿದ್ದರು.



ಕೂಡ್ಲಿಗಿ: ಪಟ್ಟಣದ ದೇಶ ಪ್ರೇಮಿಗಳಿಂದ ಸ್ವಾಗತ ಮತ್ತು ಆತಿಥ್ಯವನ್ನು ಸ್ವೀಕರಿಸಿ ಹೊರಡುವ ಮುನ್ನ ಸಮಾನ ಮನಸ್ಕರನ್ನು ಉದ್ದೇಶಿಸಿ ಸೈಕಲಿಸ್ಟ್ ಬಿಹಾರಿ ಮೂಲದ ಅಶುತೋಷ್ ಮಾತನಾಡಿದರು.

ಸಾಧಕ ಮಕ್ಕಳಿಗೆ ಸನ್ಮಾನ | ಶಾಸಕ ಚನ್ನಾರೆಡ್ಡಿ ಪಾಟೀಲ ಬಣ್ಣನೆ

ಮಹಾರಾಣಾ ಪ್ರತಾಪ್ ಸಿಂಹ ಅಪ್ಪಟ್ಟ ದೇಶಭಕ್ತ

ಯಾದಗಿರಿ: ಮಹಾರಾಣಾ ಪ್ರತಾಪ್ ಸಿಂಹ ಅವರು ದೇಶ ಕಂಡ ಅತ್ಯಂತ ಬಲಿಷ್ಠ ಮತ್ತು ಶೂರ ರಾಜನಾಗಿದ್ದರೆಂದು ಬಣ್ಣಿಸಿರುವ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರ, ಅವರ ಜೀವನಾದರ್ಶಗಳನ್ನು ಪ್ರತಿಯೊಬ್ಬರು ಅನುಸರಿಸಬೇಕೆಂದರು.

ನಗರದ ಸಹ್ಯಾದ್ರಿ ಶಾಲೆಯಲ್ಲಿ ಜಿಲ್ಲಾ ರಜಪೂತ ಸಮಾಜ ಹಾಗೂ ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರ ಸಂಘಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶ್ರೀವೀರ ಶಿರೋಮಣಿ ಮಹಾರಾಣಾ ಪ್ರತಾಪ್ ಸಿಂಹ ರವರ 486ನೇ ಜಯಂತ್ಯುತ್ಸವ ಹಾಗೂ 2025-26ನೇ ಸಾಲಿನ ಎಸ್ ಎಸ್‌ಎಲ್‌ಸಿ, ಪಿಯುಸಿ ಹಾಗೂ ಉನ್ನತ ಶಿಕ್ಷಣದಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಪ್ಪಟ್ಟ ದೇಶಭಕ್ತರಾಗಿದ್ದ ಅವರು, ಸಮರ ಕಲೆಗಳು, ಕುದುರೆ ಸವಾರಿ ಮತ್ತು ಬಿಲ್ಲುಗಾರಿಕೆಯಲ್ಲಿ ತರಬೇತಿ ಪಡೆದಿದ್ದರು. 1572ರಲ್ಲಿ ತನ್ನ ತಂದೆಯ ಮರಣದ ನಂತರ, ಮಹಾರಾಣಾ ಪ್ರತಾಪ್ ಮೇವಾರ್ ರಾಜವಂಶದ 13 ನೇ ರಾಜರಾದರು. ಅವರು ತಮ್ಮ ಅವಧಿಯಲ್ಲಿ ಎದುರಾದ ಯುದ್ಧಗಳನ್ನು ಅತ್ಯಂತ ಧೈರ್ಯದಿಂದ ಎದುರಿಸಿದ ಕ್ರಾಂತಿಕಾರಿ ವ್ಯಕ್ತಿಯಾಗಿದ್ದರೆಂದು ಬಣ್ಣಿಸಿದರು.

ಗಂಗಾವತಿ ರಜಪೂತ ಸಮಾಜದ ಮಹಿಳಾ ಮುಖಮಡರಾದ ಅನ್ನಪೂರ್ಣಸಿಂಗ್ ಮಾತನಾಡಿ, ರಜಪುತಸಮಾಜ ವಿಶ್ವಾಸ, ನಂಬಿಕೆಗೆ ಮತ್ತು ಧೈರ್ಯಕ್ಕೆ ಹೆಸರುವಾಸಿಯಾಗಿರುವ ಸಮಾಜವಾಗಿದೆ. ಅಪ್ಪಟ್ಟ ದೇಶಭಕ್ತರ ಸಮಾಜಗಳಲ್ಲಿ ರಜಪೂತ ಸಮಾಜವೂ ಒಂದಾಗಿದೆ. ಅಖಂಡ ಭಾರತದ ಉಳುವಿಗೆ ತ್ಯಾಗ, ಬಲಿದಾನ ನೀಡಿದ ಸಮಾಜ ಯಾವುದಾದರೂ



> ರಜಪೂತ ಸಮಾಜ ಅತ್ಯಂತ ಶೂರ, ಧೀರರನ್ನು ಹೊಂದಿದೆ. ತಮ್ಮ ಕಾಯಕದಡಿಯಲ್ಲಿಯೇ ಬದುಕು ಕಟ್ಟಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ. ಈ ಸಮಾಜ ಇಷ್ಟು ವಿದ್ಯಾರ್ಥಿಗಳು ಓದಿನಲ್ಲಿಸಾಧನೆ ಮಾಡಿದ್ದು ನೋಡಿ ಸಂತಸವಾಗಿದೆ.
>
> ■ ಚನ್ನಾರೆಡ್ಡಿ ಪಾಟೀಲ ತುನ್ನೂರ, ಶಾಸಕ

ಇದ್ದರೇ ಅದು ರಜಪೂತ ಸಮಾಜವೆಂದು ಅವರು ವಿವರಿಸಿದರು. ಸಮಾಜದ ಮಕ್ಕಳು ಶಿಕ್ಷಣದಲ್ಲಿ ಸಾಧನೆ ಮಾಡಿ ಇಂದು ಸನ್ಮಾನಿಸಿಕೊಂಡಿದ್ದು ಗಮನಿಸಿದರೇ ರಜಪೂತ ಸಮಾಜದಲ್ಲಿ ಮುಂದೇ ಸಾವಿರಾರು ಪ್ರತಿಭೆಗಳು ಹೊರಬರುತ್ತವೆ ಎಂಬ ವಿಶ್ವಾಸ ಮೂಡಿದೆ ಎಂದು ಶ್ಲಾಘಿಸಿದರು.

ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ವೆಂಕಟ ಸಿಂಗ್ ರಾಯಚೂರ್ ಮಾತನಾಡಿ, ಎಲ್ಲ ಸಮಾಜಗಳ ಜನರೊಂದಿಗೆ ಪ್ರೀತಿ,ವಿಶ್ವಾಸದಿಂದ ನಡೆದುಕೊಳ್ಳುವ ಸಮಾಜ ಇದಾಗಿದೆ.ಈ ಸಮಾಜಕ್ಕೆ ಬೇಕಾಗುವ ಸೌಲಭ್ಯಗಳನ್ನು ಸರ್ಕಾರ ನೀಡಬೇಕೆಂದರು.

ಬಿಜೆಪಿ ರಾಜ್ಯ ಕಾರ್ಯಕಾರಿ ಸದಸ್ಯ ಮಹೇಶರೆಡ್ಡಿ ಮುದ್ನಾಳ, ಕಲಬುರಗಿ ಸರ್ಕಾರಿ, ಅರೆ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವರಾಜ್ ತಿವಾರಿ, ಯಾದಗಿರಿ ಜಿಲ್ಲಾ ಉಪಾಧ್ಯಕ್ಷ ಸತ್ಯನಾರಾಯಣ ಪ್ರಸಾದ್ ತಿವಾರಿ, ವಿಕ್ರಮ್ ಸಿಂಗ್ ಗೌತಮ್, ಸಂದೀಪ್ ಹಜಾರೆ, ಆಶೀಷ ಹಜಾರೆ, ರಾಹುಲ್ ಹಾಜರೆ, ಸೋಹನ್ ಪ್ರಸಾದ್, ಗಣೇಶ ಬಾಷ್ಕರ್, ರಾಜಾಸಿಂಗ್, ಅಮರ್ ಸಿಂಗ್, ವಿಠ್ಠಲಗ ಸಿಂಗ್, ಉದಯ ಸಿಂಗ್, ಭೀಮಸಿಂಗ್, ದಶರಥ ಸಿಂಗ್, ಮುನಿರಾಜ ಸಿಂಗ್, ಶಶಿಕಾಂತ ದಿಕ್ಷೀತ್ ,ಸತ್ಯಾರಾಯಾಣಸಿಂಗ್ ತಿವಾರಿ, ನಾಗೇಂದ್ರ ಸಿಂಗ್, ಅಮರಸಿಂಗ್ ಅಪಜಲ್ ಪೂರ್, ಹರಿಸಿಂಗ್, ಹರಿಸಿಂಗ್,ಲಕ್ಷ್ಮಣಸಿಂಗ್ ಸೇರಿದಂತೆ ಮತ್ತಿತರರು ಇದ್ದರು.

ಬಿಜೆಪಿ ಮಂಡಲದಿಂದ ಕಾರ್ಯಕರ್ತರಿಗೆ ತರಬೇತಿ

ವಿಜಯನಗರ: ಭಾರತ ಚುನಾವಣಾ ಆಯೋಗದಿಂದ ನಡೆಸುತ್ತಿರುವ ಎಸ್ಐಆರ್ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಹೊಸಪೇಟೆ ನಗರದ ಬಿಜೆಪಿ ಕಚೇರಿಯಲ್ಲಿ ಮಂಡಲದಿಂದ ಕಾರ್ಯಕರ್ತರಿಗೆ ತರಬೇತಿ ನೀಡಲಾಯತು.

ಕಾರ್ಯಾಗಾರದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಸಂಜೀವರೆಡ್ಡಿ, ಜಿಲ್ಲಾ ವಕ್ತಾರ ಅಶೋಕ್ ಜೀರೆ, ಜಿಲಾ ಉಪಾಧ್ಯಕ್ಷ ಸಂದೀಪ್ ಸಿಂಗ್, ಒಬಿಸಿ ರಾಜ್ಯ ಉಪಾಧ್ಯಕ್ಷ ಅಯ್ಯಾಳಿ ತಿಮ್ಮಪ್ಪ, ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್ ಮಾತನಾಡಿದರು.

ಸಭೆಯಲ್ಲಿ ಮಾಜಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಆರ್. ಕೊಟ್ರೇಶಪ್ಪ, ಪಕ್ಷದ ಪ್ರಮುಖ ಕಿಚಿಡಿ ಶ್ರೀನಿವಾಸ್, ಎಸ್.ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಗದೀಶ್ ಕಮಟಗಿ, ಗುತ್ತಿ ಕೈಲಾಸ್, ಮಹಿಳಾ ಮೋರ್ಚಾ ಪದಾಧಿಕಾರಿಗಳಾದ ಹೇಮಲತಾ, ಮಂಡಲ ಪ್ರಧಾನ ಕಾರ್ಯದರ್ಶಿ ಮಧುರಚನ್ನ ಶಾಸ್ತ್ರಿ ಹಿರೇಮಠ್, ನಟರಾಜ್ ಎಚ್. ಹಾಗೂ ಹೊಸಪೇಟೆ ಬಿಜೆಪಿ ಮಂಡಲದ 259 ಬೂತ್ ಗಳ ಬಿಎಲ್‌ಎ -2 ಪದಾಧಿಕಾರಿಗಳು ಹಾಗೂ ಪ್ರಮುಖರು ಪಾಲ್ಗೊಂಡಿದ್ದರು.





ವಿಜಯನಗರ: ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಆರೋಗ್ಯ ಇಲಾಖೆಯಿಂದ ನಗರದ ಪೂಲ್ ಬನ್ ಶಾಲೆಯಲ್ಲಿ 14 ರಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಉದ್ದೇಶದಿಂದ ನೀಡಲಾಗುವ ಎಚ್‌ಪಿವಿ ಲಸಿಕೆ ಕುರಿತು ಶಿಕ್ಷಕರು ಹಾಗೂ ಪಾಲಕರಿಗೆ ಜಾಗೃತಿ ಹಮ್ಮಿಕೊಳ್ಳಲಾಯಿತು.

ನಂದಿಪುರ ಹಾಸ್ಟೇಲ್ ವಿದ್ಯಾರ್ಥಿಗಳಿಗೆ ವಸ್ತ್ರ ಕೊಡುಗೆ



ಹಗರಿಬೊಮ್ಮನಹಳ್ಳಿ: ತಾಲೂಕಿನ ನಂದಿಪುರ ಪುಣ್ಯಕ್ಷೇತ್ರದಲ್ಲಿರುವ ಶ್ರೀಗುರು ಚರಂತೇಶ್ವರ ಶಾಲೆಯ ಶ್ರೀಮಠದ ಹಾಸ್ಟೇಲ್ ವಿದ್ಯಾರ್ಥಿಗಳಿಗೆ ಜ್ಯೋತಿಷ್ಯ ವಿದ್ವಾಂಸರು ಹಾಗೂ ಕನ್ನಡ ಉಪನ್ಯಾಸಕರಾದ ಶ್ರೀಗುರು ಪ್ರಸಾದ ಹಿರೇಮಠ ಅವರು ಬಟ್ಟೆ-ವಸ್ತ್ರಗಳನ್ನು ಕೊಡುಗೆಯಾಗಿ ನೀಡಿದರು.

ಕಾರ್ಯಕ್ರಮದಲ್ಲಿಮಾತನಾಡಿದ ನಂದಿಪುರ ಪುಣ್ಯಕ್ಷೇತ್ರದ ಡಾ.ಮಹೇಶ್ವರ ಸ್ವಾಮೀಜಿ, ಗುರುಪ್ರಸಾದಹಿರೇಮಠ ಅವರುವೈದಿಕಹಾಗೂ ಧಾರ್ಮಿಕ ಸೇವೆಯೊಂದಿಗೆ ಸಮಾಜಮುಖಿ ಕಾರ್ಯಗಳಲ್ಲಿಯೂ ತೊಡಗಿಸಿಕೊಂಡಿದ್ದು, ವಿದ್ಯಾರ್ಥಿಗಳ ಅಗತ್ಯಗಳನ್ನು ಮನಗಂಡು ಇಂತಹ ದಾನ-ಧರ್ಮ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿರುವುದು ಶ್ಲಾಘನೀಯ ವಿದ್ಯಾರ್ಥಿಗಳಿಗೆ ನೀಡಲಾದ ಬಟ್ಟೆ-ವಸ್ತ್ರಗಳು ಅವರಲ್ಲಿ ಸಂತಸ ಮೂಡಿಸಿದ್ದು, ಸಮಾಜದಲ್ಲಿ ಸೇವಾ ಮನೋಭಾವ ಬೆಳೆಸುವ ಇಂತಹ ಕಾರ್ಯಕ್ರಮಗಳು ಇತರರಿಗೂ ಪ್ರೇರಣೆಯಾಗಿವೆ ಅವರ ಕುಟುಂಬಕ್ಕೆ ಭಗವಂತನ ಕೃಪೆ ಸದಾ ಇರಲೆಂದು ಆಶೀರ್ವದಿಸಿದರು. ಮಧು ಗುರುಪ್ರಸಾದ, ಎಚ್.ಎಂ.ಪ್ರೇಮಕ್ಕ, ಗ್ರಾಪಂ ಮಾಜಿ ಅಧ್ಯಕ್ಷ ಚಿಲುಗೋಡು ಉದಯಕುಮಾರ, ಕಲಾವಿದ ಬ್ಯಾಲಾಳ ಮಂಜುನಾಥ, ಬಡಿಗೇರ ಕೊಟ್ರೇಶ್ ಇತರರಿದ್ದರು.

ಜಡೇತಾತ ದೇವಸ್ಥಾನ ದತ್ತಿ ಇಲಾಖೆ ಸುಪರ್ದಿಗೆ ವಹಿಸಲು ಮನವಿ

ಬಳ್ಳಾರಿ: ಜಿಲ್ಲೆಯ ಕಂಪ್ಲಿ ತಾಲೂಕಿನ ಎಮ್ಮಿಗನೂರು ಶ್ರೀಜಡೇತಾತ ದೇಗುಲವನ್ನು ಧಾರ್ಮಿಕ ಮತ್ತು ದತ್ತಿ ಇಲಾಖೆ ಸುಪರ್ದಿಗೆ ವಹಿಸಬೇಕು ಎಂದು ಒತ್ತಾಯಿಸಿ ಗ್ರಾಮಸ್ಥರು ಮಂಗಳವಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈಗಾಗಲೇ ಜಡೇತಾತ ದೇಗುಲವನ್ನು ಸರ್ಕಾರ ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ಒಳಪಟ್ಟಿದೆ ಎಂದು ಘೋಷಣೆ ಮಾಡಿದ್ದರೂ, ಇಲ್ಲಿವರೆಗೆ ಸಂಬಂಧಿಸಿದ ಇಲಾಖೆ ಮೇಲಧಿಕಾರಿಗಳು ಜಡೇತಾತ ದೇಗುಲವನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡಿಲ್ಲ, ಕೂಡಲೇ ಜಿಲ್ಲಾಡಳಿತ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ಜಡೆಸಿದ್ದೇಶ್ವರ ಶಿವಯೋಗಿಗಳು ಜನಿಸಿದ್ದು, ಬಳ್ಳಾರಿ ತಾಲೂಕಿನ ಹಂದಿ ಹಾಳ್ ಗ್ರಾಮದಲ್ಲಿ ಎನ್ನುವ ಪ್ರತೀತಿಯಿದೆ, ಇತಿಹಾಸವಿದೆ. ಕೂಡಲೇ ದೇಗುಲವನ್ನು ಇಲಾಖೆ ಸುಪರ್ದಿಗೆ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.



ಎಚ್.ಎಂ.ಮಲ್ಲಿಕಾರ್ಜುನ ಸ್ವಾಮಿ, ಷಡಕ್ಷರ ಸ್ವಾಮಿ, ವಿದ್ಯಾಧರ ಸ್ವಾಮಿ, ಕಾಶಿನಾಥ್ ಶಾಸ್ತ್ರಿ, ಪ್ರಭಾಕರ್ ಸ್ವಾಮಿ, ರೇಣುಕಾ ಸ್ವಾಮಿ, ತಾಳೂರು ರಾಘವೇಂದ್ರ ರೆಡ್ಡಿ ಸೇರಿದಂತೆ ಇತರರಿದ್ದರು.

ಕಾನೂನು ತರಬೇತಿಗೆ ಅರ್ಜಿ ಆಹ್ವಾನ

ವಿಜಯನಗರ: ಪ್ರಸಕ್ತ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಿಂದುಳಿದ ವರ್ಗಗಳ ಪ್ರವರ್ಗ-1, ಪ್ರವರ್ಗ-2, 3ಎ ಹಾಗೂ 3ಬಿ ಅಭ್ಯರ್ಥಿಗಳಿಂದ ಕಾನೂನು ತರಬೇತಿಗೆ ಅರ್ಜಿ ಆಹ್ವಾನಿಲಾಗಿದೆ.

ಅರ್ಜಿ ಸಲ್ಲಿಸಲು ಜು.10 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಎಸ್ ಪಿ ಕಚೇರಿ ಹಿಂಭಾಗದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿಗೆ ಬೇಟಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿವಿಧ ಕೃಷಿ ಕ್ಷೇತ್ರಗಳಿಗೆ ಕೃಷಿ ಇಲಾಖೆಯ ಉನ್ನತಾಧಿಕಾರಿಗಳ ತಂಡ ಭೇಟಿ

ಕುರುಗೋಡು: ರೈತರು ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಳ್ಳಲು ಮತ್ತು ಕೃಷಿ ವೆಚ್ಚವನ್ನು ಕಡಿಮೆ ಮಾಡಲು ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಆದಷ್ಟು ಕಡಿಮೆ ಮಾಡಬೇಕು. ಬದಲಿಗೆ ಹಸಿರೆಲೆ ಗೊಬ್ಬರದ ಬೆಳೆಗಳನ್ನು ಹೆಚ್ಚಾಗಿ ಬೆಳೆಯುವತ್ತ ಗಮನಹರಿಸಬೇಕು ಎಂದು ಉಪ ಕೃಷಿ ನಿರ್ದೇಶಕ ಮಂಜುನಾಥ ರೈತರಿಗೆ ಸಲಹೆ ನೀಡಿದರು.

ಹೋಬಳಿಯ ವಿವಿಧ ಕೃಷಿ ಕ್ಷೇತ್ರಗಳಿಗೆ ಕೃಷಿ ಇಲಾಖೆಯ ಉನ್ನತಾಧಿಕಾರಿಗಳ ತಂಡ ಭೇಟಿ ನೀಡಿ, ಬೆಳೆಗಳ ಪರಿಶೀಲನೆ ನಡೆಸಿತು. ಈ ವೇಳೆ



ರೈತರೊಂದಿಗೆ ಸಂವಾದ ನಡೆಸಿ ಕೃಷಿ ಜಾಗೃತಿ ಮೂಡಿಸಲಾಯಿತು.

ನಿರಂತರ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಜೈವಿಕ ಗುಣಮಟ್ಟ ಕ್ಷೀಣಿಸುತ್ತಿದೆ. ಹಸಿರೆಲೆ ಗೊಬ್ಬರಗಳಾದ ಸೆಣಬು, ಡಯಾಂಚ ಮುಂತಾದ ಬೆಳೆಗಳನ್ನು ಬೆಳೆದು, ಅವು ಹೂವು ಬಿಡುವ ಹಂತದಲ್ಲಿ ಮಣ್ಣಿನಲ್ಲಿ ಮಗುಚಿ ಉಳುಮೆ ಮಾಡುವುದರಿಂದ ಸಾರಜನಕ ಮತ್ತು ಸಾವಯವ ಇಂಗಾಲದ ಪ್ರಮಾಣ ಹೆಚ್ಚುತ್ತದೆ. ಹಸಿರೆಲೆ ಗೊಬ್ಬರ ಬಳಕೆಯಿಂದ ಮುಂದಿನ ಪ್ರಮುಖ ಬೆಳೆಗೆ ರಾಸಾಯನಿಕ ಗೊಬ್ಬರದ ಅಗತ್ಯತೆ ಶೇ.25ರಿಂದ 30ರಷ್ಟು ಕಡಿಮೆಯಾಗುತ್ತದೆ. ಇದರಿಂದ ರೈತರಿಗೆ ಆರ್ಥಿಕ ಲಾಭವಾಗಲಿದೆ ಎಂದು ತಿಳಿಸಿದರು.

ರೈತರು ತಮ್ಮ ಜಮೀನುಗಳಲ್ಲಿ ಕಡ್ಡಾಯವಾಗಿ ಹಸಿರೆಲೆ ಗೊಬ್ಬರ ಬೆಳೆಗಳನ್ನ ಅಳವಡಿಸಿಕೊಂಡು, ಮಣ್ಣಿನ ಆರೋಗ್ಯ ಹಾಗೂ ಸುಸ್ಥಿರ ಕೃಷಿಗೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಕ್ಷೇತ್ರ ಭೇಟಿ ಸಂದರ್ಭದಲ್ಲಿ ಸಹಾಯಕಕೃಷಿನಿರ್ದೇಶಕಗರ್ಜಪ್ಪ, ಕುರುಗೋಡು ಹೋಬಳಿಯ ಕೃಷಿ ಅಧಿಕಾರಿ ದೇವರಾಜ್ ಹಾಗೂ ಇಲಾಖೆಯ ಸಿಬ್ಬಂದಿಗಳು ಮತ್ತು ಸ್ಥಳೀಯ ಪ್ರಗತಿಪರ ರೈತರು ಉಪಸ್ಥಿತರಿದ್ದರು.

ಹಂಪಿಯ ಗತವೈಭವ ಜಾಗತಿಕ ಮಟ್ಟದಲ್ಲಿ ಪರಿಚಯಿಸಿ: ಜಿಲ್ಲಾಧಿಕಾರಿ

ವಿಜಯನಗರ: ಪ್ರವಾಸೋದ್ಯಮ ಇಲಾಖೆಯು ಮಾರ್ಗದರ್ಶಿಗಳ ಕಲ್ಯಾಣಕ್ಕೆ ಸದಾ ಬದ್ಧವಾಗಿದ್ದು, ವಿದೇಶ ಭಾಷಾ ತರಬೇತಿ ಕಾರ್ಯಾಗಾರ ಸದುಪಯೋಗ ಪಡಿಸಿಕೊಂಡು ವಿಜಯನಗರ ಸಾಮ್ರಾಜ್ಯದ ಗತವೈಭವ, ಹಂಪಿಯ ಕೀರ್ತಿಯನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಿರಿ ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಕರೆ ನೀಡಿದರು.

ಪ್ರವಾಸೋದ್ಯಮ ಇಲಾಖೆ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯ ಸಹಯೋಗದಲ್ಲಿ ಮಂಗಳವಾರ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಭುವನವಿಜಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪ್ರವಾಸಿ ಮಾರ್ಗದರ್ಶಿಗಳಿಗೆ ವಿದೇಶ ಭಾಷಾ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದೇಶಿ ಪ್ರವಾಸಿಗರು ಜಿಲ್ಲೆಗೆ ಬಂದಾಗ ಸ್ಥಳೀಯವಾಗಿ



ಅವರಿಗೆ ಮೊದಲು ಸಿಗುವುದೇ ಮಾರ್ಗದರ್ಶಿಗಳು. ನಿಮ್ಮ ನಡವಳಿಕೆ, ಪ್ರಾಮಾಣಿಕತೆ ಮತ್ತು ಆತ್ಮೀಯತೆ ಈ ನೆಲ, ಜಲ, ಭಾಷೆ ಮತ್ತು ದೇಶದ ಮೇಲಿನ ಗೌರವವನ್ನು ನಿರ್ಧರಿಸುತ್ತದೆ. ಪ್ರವಾಸಿಗರ ಸುರಕ್ಷತೆ ಮತ್ತು ನಂಬಿಕೆಗೆ ದ್ರೋಹವಾಗದಂತೆ ವೃತ್ತಿಪರತೆ ಕಾಯ್ದುಕೊಳ್ಳಬೇಕು. ಹಂಪಿಗೆ ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ರಷ್ಯನ್ ಸೇರಿದಂತೆ ವಿವಿಧ ದೇಶಗಳ ಪ್ರವಾಸಿಗರು ಆಗಮಿಸುತ್ತಾರೆ.

ಜಗತ್ತಿನ ಮೂಲೆ ಮೂಲೆಗಳಿಂದ ಬರುವ ಪ್ರವಾಸಿಗರಿಗೆ ನಮ್ಮ ಶ್ರೀಮಂತ ಪರಂಪರೆಯನ್ನು ಪರಿಚಯಿಸುವ ಪ್ರವಾಸಿ ಮಾರ್ಗದರ್ಶಿಗಳು ಕೇವಲ ಮಾಹಿತಿ ನೀಡುವವರಲ್ಲ, ಬದಲಿಗೆ ಅವರು ನಮ್ಮ ದೇಶದ ಸಾಂಸ್ಕೃತಿಕ ರಾಯಭಾರಿಗಳು. ಇದರಿಂದ ಸ್ಥಳೀಯ ಮಾರ್ಗದರ್ಶಿಗಳ ಆರ್ಥಿಕ ಮಟ್ಟ ಸುಧಾರಿಸುವುದರ ಜೊತೆಗೆ ಜಾಗತಿಕ ಪ್ರವಾಸೋದ್ಯಮ ಭೂಪಟದಲ್ಲಿ ಜಿಲ್ಲೆಯ ಖ್ಯಾತಿ ಮತ್ತಷ್ಟು ಹೆಚ್ಚಲಿದೆ. ಬದಲಾಗುತ್ತಿರುವ ಡಿಜಿಟಲ್ ಯುಗಕ್ಕೆ ತಕ್ಕಂತೆ ಮಾರ್ಗದರ್ಶಿಗಳು ಕೇವಲ ಭಾಷೆಯನ್ನಷ್ಟೇ ಅಲ್ಲದೆ, ಡಿಜಿಟಲ್ ಪೇಮೆಂಟ್, ಆನ್‌ಲೈನ್ ಬುಕಿಂಗ್ ಮತ್ತು ಪ್ರವಾಸಿ ಆಪ್‌ಗಳ ಬಳಕೆಯ ಬಗ್ಗೆಯೂ ಮಾಹಿತಿ ಹೊಂದಿರಬೇಕು. ಪ್ರವಾಸೋದ್ಯಮ ಇಲಾಖೆಯು ಮಾರ್ಗದರ್ಶಿಗಳ ಕಲ್ಯಾಣಕ್ಕೆ ಸದಾ ಬದ್ಧವಾಗಿದ್ದು, ಈ ತರಬೇತಿಯ ಸದುಪಯೋಗ ಪಡಿಸಿಕೊಂಡು ಹಂಪಿಯ ಕೀರ್ತಿಯನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವಂತೆ ಕರೆ ನೀಡಿದರು.

ಕಲಬುರ್ಗಿ ವಿಭಾಗದ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕ ಡಾ.ಎಸ್.ತಿಪ್ಪೇಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕನ್ನಡ ಹಂಪಿ ವಿವಿಯ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಹೈದ್ರಾಬಾದ್ ಇಂಗ್ಲೀಷ್ ಮತ್ತು ವಿದೇಶಿ ಭಾಷೆಗಳ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ತಾರಕೇಶ್ವರ್, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ, ಹಂಪಿ ಕನ್ನಡ ವಿವಿಯ ಕುಲಸಚಿವ ವಿರೂಪಾಕ್ಷ ಪೂಜಾರಹಳ್ಳಿ, ವಿದೇಶಿ ಭಾಷಾ ಸಂಚಾಲಕ ಎಸ್.ವೈ.ಸೋಮಶೇಖರ್ ಸೇರಿದಂತೆ ವಿವಿಧ ಜಿಲ್ಲೆಯ ಪ್ರವಾಸಿ ಮಾರ್ಗದರ್ಶಿಗಳು ಇದ್ದರು.

ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಕೊಟ್ಟೂರು: ತಾಪಂ ಸಭಾಂಗಣದಲ್ಲಿ ಗುರುವಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೊಸಮನಿ ಅನಿಲ್ ಅವರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನೆ ಸಭೆ ನಡೆಯಿತು.



ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಗೃಹ ಜ್ಯೋತಿ, ಶಕ್ತಿ, ಯುವ ನಿಧಿ, ಅನ್ನ ಭಾಗ್ಯ ಯೋಜನೆಗಳ ಕುರಿತು ಚರ್ಚಿಸಿದರು.

ಶಕ್ತಿ ಯೋಜನೆ: ಜಿಲ್ಲಾ ಕೇಂದ್ರಕ್ಕೆ ಹೋಗಿ ಬರಲು ಅನುಕೂಲವಾಗುವುದಕ್ಕೆ ಹೆಚ್ಚಿನ ಬಸ್ ವ್ಯವಸ್ಥೆ ಮಾಡುವಂತೆ ಹಿಂದಿನ ಸಭೆಯಲ್ಲಿ ತಿಳಿಸಲಾಗಿತ್ತು. ಅದರಂತೆ ಜಿಲ್ಲಾ ಕೇಂದ್ರದಿಂದ ಕೊಟ್ಟೂರು, ಹರಪನಹಳ್ಳಿ ಮಾರ್ಗವಾಗಿ ಬಸ್ ವ್ಯವಸ್ಥೆ ಕಲ್ಪಿಸಿರುವುದಾಗಿ ಸಾರಿಗೆ ಅಧಿಕಾರಿ ಎಚ್.ಕೆ.ವಿಶ್ವನಾಥ್ ಸಭೆಗೆ ಮಾಹಿತಿ ನೀಡದರು.

ರಾತ್ರಿ 8ಗಂಟೆಯ ನಂತರ ಜಿಲ್ಲಾ ಕೇಂದ್ರಕ್ಕೆ ಸಂಪರ್ಕಿಸುವ ಕೊಟ್ಟೂರು-ಹೊಸಪೇಟೆಗೆ ರಾತ್ರಿ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸದಸ್ಯರು ಒತ್ತಾಯಿಸಿದರು.

ಇದಕ್ಕೆ ಉತ್ತರಿಸಿದ ಸಾರಿಗೆ ಘಟಕದ ಸಿಬ್ಬಂದಿ ಮೇಲ್ವಿಚಾಕ ಎಚ್. ಕೆ.ವಿಶ್ವನಾಥ್ ಅವರು ಮೇಲಧಿಕಾರಿಗಳ ಗಮನಕ್ಕೆ ತರುವುದಾಗಿ ಉತ್ತರಿಸಿದರು.

ಅನ್ನ ಭಾಗ್ಯ: ಆಹಾರ ನಿರೀಕ್ಷಕರಾದ ಕಮಲಮ್ಮ ಅವರು ಮಾತನಾಡಿ, ಪಡಿತರ ಚೀಟಿ ಗಳಲ್ಲಿ ಸದ್ಯಕ್ಕೆ ಸೇರ್ಪಡೆ, ತಿದ್ದುಪಡೆಹೆ ಅವಕಾಶವಿದೆ, ಹೊಸ ಕಾರ್ಡ್ ಗಳ ಅರ್ಜಿಗೆ ಇನ್ನೂ ಅವಕಾಶ ನೀಡಿಲ್ಲ. ಅದೇರೀತಿಯಾಗಿ ಇ-ಕೈವೈಸಿಯನ್ನು ಪ್ರತಿಯೊಬ್ಬರೂ ಮಾಡಿಸಬೇಕು ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಯ ಅಧ್ಯಕ್ಷ ಮಾತನಾಡಿ, ಸೊಸೈಟಿಗಳ ಎದುರು ಪಂಚಗ್ಯಾರಂಟಿ ಯೋಜನೆಗಳ ಪ್ರಚಾರಕ್ಕಾಗಿ ಬ್ಯಾನರ್ ಅಳವಡಿಕೆಗೆ ಕ್ರಮವಹಿಸುವಂತೆ ತಿಳಿಸಿದರು.

ಪಡಿತರ ವಿತರಣೆ ಸಂದರ್ಭದಲ್ಲಿ ಒಬ್ಬೊಬ್ಬರಿಂದ ಒಂದುಕೆಜಿ ಅಕ್ಕಿಯನ್ನು ಪಡೆಯುವುದು ಕಂಡು ಬರುತ್ತಿದೆ ಇದರ ವಿರುದ್ಧ ಕ್ರಮವಹಿಸುವಂತೆ ಸದಸ್ಯರೊಬ್ಬರು ಸಭೆಯ ಗಮನಕ್ಕೆ ತಂದರು.

ಇದಕ್ಕೆ ಪೂರಕವಾಗಿ ಕಾರ್ಯನಿರ್ವಾಹಕ ಅಧಿಕಾರಿ ಡಾ.ಬಿ. ಆನಂದಕುಮಾರ ಅವರು ಪ್ರತಿಕ್ರಿಯಿಸಿ, ಪಡಿತರ ವಿತರಣೆ ಸಂದರ್ಭದಲ್ಲಿ ಅಕ್ಕಿ ಪಡೆಯುವವರ ವಿರುದ್ಧ ನೋಟಿಸ್ ನೀಡುವಂತೆ ತಿಳಿಸಿದರು.

ಗೃಹಜ್ಯೋತಿ: ಜೆಸ್ಕಾಂನ ಸಹಾಯಕ ಎಂಜಿನಿಯರ್ ತಿಪ್ಪೇಶ್ ಮಾತನಾಡಿ, ಮಳೆಯ ಸಂದರ್ಭದಲ್ಲಿ ಬಿದ್ದಿರುವ 83 ಕಂಬಗಳನ್ನು ಬದಲಾಯಿಸಲಾಗಿದೆ ಎಂದರು.

ಪೂರಕವಾಗಿ ಅಧ್ಯಕ್ಷರು ಮಾತನಾಡಿ, ಹಳ್ಳಿಗಳಲ್ಲಿ ಕೊಂಡಿ ಹಾಕುವುದನ್ನು ತಪ್ಪಿಸಲು ಕ್ರಮವಹಿಸಬೇಕು ಎಂದರು.

ಗೃಹಲಕ್ಷ್ಮೀ: ಗೃಹ ಲಕ್ಷ್ಮೀ ಹಣ ಫಲಾನುಭವಿಗಳ ಖಾತೆಗೆ ಫೆಬ್ರವರಿ ವರೆಗೆ ಜಮಾ ಆಗಿದೆ, ಇನ್ನೂ ಮೂರು ತಿಂಗಳು ಬಾಕಿ ಇದೆ ಎಂದು ಸಿಡಿಪಿಒ ಮಾಲುಂಬಿ ಅವರು ಸಭೆಗೆ ತಿಳಿಸಿದರು.

ಸಮಿತಿಯ ಸದಸ್ಯ ಕಾರ್ಯದರ್ಶಿಗಳೂ ಆದ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಡಾ.ಬಿ.ಆನಂದಕುಮಾರ, ಸಮಿತಿ ಸದಸ್ಯರಾದ ಪ್ರಭುದೇವ, ಸುಶೀಲಮ್ಮ, ಎನ್.ಚಂದ್ರಪ್ಪ, ಮಾರಪ್ಪ, ಗಾಯತ್ರಿ ಎ.ಎಸ್., ಶಿವರಾಜ್ ಟಿ., ಪಿ.ಕೆ.ಇಂದ್ರಜಿತ್, ತಿರುಕಪ್ಪ ಕರಡಿ, ಆನಂದ, ಮಾಲ್ವಿ ಜಮೀರ್‌ಖಾನ್, ಉಮಾಪತಿ ಸ್ವಾಮಿ ಎಂ.ಎಂ, ವಿಷಯ ನಿರ್ವಾ ಹಕರು, ತಾಪಂ ಸಿಬ್ಬಂದಿ ಇದ್ದರು.